ಗುರುವಾರ, ಸೆಪ್ಟೆಂಬರ್ 15, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 256 | ಪುಟ 16

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಭಾರತೀಯ ಸ್ಟೇಟ್ ಬ್ಯಾಂಕ್ ಜೂನಿಯರ್ ಅಸೋಸಿಯೇಟ್ಸ್ ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಕೆ ಮತ್ತು ಆಯ್ಕೆ ಪ್ರಕ್ರಿಯೆ ಕುರಿತ ವಿವರ ಇಲ್ಲಿದೆ.



ಸಂಖ್ಯೆ-ಸುದ್ದಿ: ದಿನಕ್ಕೆ 90 ಮಕ್ಕಳು ಅತ್ಯಾಚಾರಕ್ಕೆ ಬಲಿ

ಗಂಗಾ ಕಲ್ಯಾಣ: ಅಕ್ರಮಗಳ ತನಿಖೆ 4

ಎಸ್ಸಿ,ಎಸ್ಟಿ ವಿದ್ಯಾರ್ಥಿಗಳಿಗೂ 'ವೇದಗಣಿತ' ಕಲಿಕೆ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,347	18,004	₹51,960 (ಬೆಂಗಳೂರು)	₹58,100 (ಬೆಂಗಳೂರು)	79.52

ಅರಣ್ಯ ದುರ್ಬಳಕೆ–ಅಧಿಕಾರಿಗಳ ಶಾಮೀಲು ● ತನಿಖೆಗೆ ಮುಂದಾಗಿದ್ದ ಉಮೇಶ ಕತ್ತಿ

ಪವನ ವಿದ್ಯುತ್ ಅಕ್ರಮ ಪತ್ತೆ

● ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯದ 10 ಜಿಲ್ಲೆಗಳಲ್ಲಿ 22 ಖಾಸಗಿ ಕಂಪನಿಗಳು ಅರಣ್ಯ ಭೂಮಿ ಭೋಗ್ಯಕ್ಕೆ ಪಡೆದು ಅನುಷ್ಠಾನಗೊಳಿಸಿರುವ 45 ಪವನ ವಿದ್ಯುತ್ ಯೋಜನೆಗಳಲ್ಲಿ ಅಕ್ರಮ ನಡೆಸಿರುವುದು ಪತ್ತೆಯಾಗಿದೆ.

ಈ ಅಕ್ರಮಕ್ಕೆ ಇಲಾಖೆ ಹಿರಿಯ ಅಧಿಕಾರಿಗಳೂ ಕೈ ಜೋಡಿಸಿರುವುದು ಬಹಿರಂಗವಾಗಿದೆ.

ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಅಡಿಯಲ್ಲಿ ಪವನ ವಿದ್ಯುತ್ ಯೋಜನೆಗಳಿಗೆ ನಿರ್ದಿಷ್ಟ ಅವಧಿಗೆ ಲೀಸ್ ನೀಡಿದ್ದ ಅರಣ್ಯ ಭೂಮಿಯನ್ನು ಕಂಪನಿಗಳು ದುರ್ಬಳಕೆ ಮಾಡಿರುವ ಬಗ್ಗೆ ಇಲಾಖೆಗೆ ದೂರುಗಳು ಬಂದಿದ್ದವು. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದ ಅರಣ್ಯ ಸಚಿವರಾಗಿದ್ದ ಉಮೇಶ ಕತ್ತಿ, ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಎಸಿಎಸ್) ಜಾವೇದ್ ಅಖ್ತರ್ ಮತ್ತು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪಿಸಿಸಿಎಫ್- ಅರಣ್ಯ ಪಡೆ ಮುಖ್ಯಸ್ಥರು) ರಾಜ್ ಕಿಶೋರ್ ಸಿಂಗ್ ಅವರಿಂದ ವರದಿ ಪಡೆದಿದ್ದರು.

ಪ್ರಕರಣ ಗಂಭೀರವಾಗಿರುವ ಕಾರಣಕ್ಕೆ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥ ಕಂಪನಿಗಳ ಮೇಲೆ ಕಾನೂನು ಕ್ರಮ ಹಾಗೂ ಅಧಿಕಾರಿಗಳ ವಿರುದ್ಧ ಶಿಸ್ತು ಜರುಗಿಸಲು ಲೋಕಾಯುಕ್ತ ಅಥವಾ ಸಿಐಡಿಗೆ ವಹಿಸಲು ಉಮೇಶ ಕತ್ತಿ ಮುಂದಾಗಿದ್ದರು. ಅಲ್ಲದೆ, ಇದಕ್ಕೆ ಅನುಮೋದನೆ ನೀಡುವಂತೆ ಮುಖ್ಯಮಂತ್ರಿಗೆ ಕಡತ ಮಂಡಿಸಲು ನಿರ್ಧರಿಸಿದ್ದರು.

ಅದಕ್ಕೂ ಮೊದಲು ಮತ್ತೊಮ್ಮೆ ಸ್ಪಷ್ಟ ಅಭಿಪ್ರಾಯದೊಂದಿಗೆ ಕಡತ ಮಂಡಿಸುವಂತೆ ಎಸಿಎಸ್‌ಗೆ ಸೂಚಿಸಿದ್ದರು. ಆಗಸ್ಟ್ 30ರಂದು ಅವರು ಅಭಿಪ್ರಾಯ ನೀಡಿದ್ದಾರೆ. ಈ ಪ್ರಕ್ರಿಯೆ ಪೂರ್ಣಗೊಳಿಸುವ ಮುನ್ನವೇ ಕತ್ತಿ (ಸೆ.6ಕ್ಕೆ) ನಿಧನರಾಗಿದ್ದಾರೆ. ಸಚಿವರು ನೀಡಿದ್ದ ಟಿಪ್ಪಣಿ ಮತ್ತು ಎಸಿಎಸ್ ಅಭಿಪ್ರಾಯದ ದಾಖಲೆಗಳು 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಚಿತ್ರದುರ್ಗ ಜಿಲ್ಲೆಯ ಮಾರಿಕಣಿವೆ ಮತ್ತು ಜೋಗಿಮಟ್ಟಿ ಅರಣ್ಯ ಪ್ರದೇಶಗಳಲ್ಲಿ ಮೆ.ಎನಾರ್‌ಕಾನ್ (ಇಂಡಿಯಾ) ಸಂಸ್ಥೆಗೆ 221.80 ಹೆಕ್ಟೇರ್ ಅರಣ್ಯವನ್ನು 2003ರ ಜೂನ್ 20ರಿಂದ 15 ವರ್ಷಗಳಿಗೆ ಭೋಗ್ಯಕ್ಕೆ ನೀಡಲಾಗಿತ್ತು. ಈ ಅವಧಿ 2018ರ ಜೂನ್ 19ಕ್ಕೆ ಮುಗಿದಿದ್ದರೂ ನವೀಕರಿಸಿರಲಿಲ್ಲ. ಎರಡು ವರ್ಷಗಳ ಬಳಿಕ 2020ರ ಮಾರ್ಚ್ 7 ಮತ್ತು ಮೇ 20ರಂದು ನವೀಕರಣಕ್ಕೆ ಆನ್‌ಲೈನ್ ಅರ್ಜಿ ಸಲ್ಲಿಸಿರುವ ಮಾಹಿತಿ ಪಿಸಿಸಿಎಫ್ ಪತ್ರಗಳಲ್ಲಿವೆ. ಆದರೆ, ಅವಧಿ ಮುಗಿದ ದಿನದಿಂದ ಅರ್ಜಿ ಸಲ್ಲಿಸಿರುವವರೆಗೆ ಪವನ ವಿದ್ಯುತ್ ಉತ್ಪಾದಿಸಿದ ಬಗ್ಗೆ ಉಲ್ಲೇಖಿಸಿಲ್ಲ. ಗಮನಾರ್ಹ ಎಂದರೆ ಅರ್ಜಿಯನ್ನು ಇಲಾಖೆ ಇನ್ನೂ ನವೀಕರಿಸಿಲ್ಲ! ಈ ಮಧ್ಯೆ, ಎನಾರ್‌ಕಾನ್ ಹೆಸರು ಮೆ.ವಿಂಡ್ ವರ್ಲ್ಡ್ (ಇಂಡಿಯಾ) ಎಂದು ಬದಲಾಗಿರುವುದು ದಾಖಲೆಗಳಿಂದ ಗೊತ್ತಾಗಿದೆ. ಈ ಕಂಪನಿಯು ಅರಣ್ಯ ಭೂಮಿಯನ್ನು ದುರ್ಬಳಕೆ ಮಾಡಿದೆ ಮತ್ತು ವಿಧಿಸಿದ್ದ ಷರತ್ತು ಉಲ್ಲಂಘಿಸಿದೆ. ಅಲ್ಲದೆ, ಕಂಪನಿಯು 107 ಪವನ ವಿದ್ಯುತ್ ಟರ್ಬೈನ್‌ಗಳನ್ನು ಸ್ಥಾಪಿಸಿ ಹೂಡಿಕೆದಾರರಿಗೆ ಮಾರಾಟ ಮಾಡಿದೆ. ಕಂಪನಿಯು ದಿವಾಳಿ ಎಂದು ಘೋಷಿಸಿಕೊಂಡಿದ್ದರೂ ರಾಜ್ಯದ ಇತರ ಜಿಲ್ಲೆಗಳಲ್ಲಿ ಪವನ ವಿದ್ಯುತ್ ಉತ್ಪಾದಿಸುತ್ತಿದೆ. ಒಪ್ಪಂದದ ಅವಧಿಯ ಬಳಿಕ ಅಕ್ರಮವಾಗಿ ವಿದ್ಯುತ್ ಉತ್ಪಾದಿಸಲು ಅಂದಿನ ಪಿಸಿಸಿಎಫ್ ಮತ್ತು ಚಿತ್ರದುರ್ಗ ಡಿಎಫ್‌ಒ ಅವಕಾಶ ನೀಡಿ ಕರ್ತವ್ಯಲೋಪ ಎಸಗಿರುವುದನ್ನು ಗುರುತಿಸಲಾಗಿದೆ.

ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ಗುಹೇಶ್ವರಗುಡ್ಡದಲ್ಲಿ 19.94 ಹೆಕ್ಟೇರ್ ಮತ್ತು 37 ಹೆಕ್ಟೇರ್ ಅರಣ್ಯ ಭೂಮಿಯನ್ನು ಭೋಗ್ಯಕ್ಕೆ ಪಡೆದು ಪವನ ವಿದ್ಯುತ್ ಉತ್ಪಾದಿಸುತ್ತಿರುವ ಹೈದರಾಬಾದಿನ ಮೆ. ನುಜಿವೀಡು ಸೀಡ್ಸ್ ಕಂಪನಿ ಕೂಡಾ ಷರತ್ತುಗಳನ್ನು ಉಲ್ಲಂಘಿಸಿದೆ. ಅಲ್ಲದೆ, ಅರಣ್ಯ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳೂ ಕಾನೂನು ಉಲ್ಲಂಘಿಸಿರುವುದು ಪತ್ತೆಯಾಗಿದೆ. 43 ಇತರ ಪವನ ವಿದ್ಯುತ್ ಯೋಜನೆಗಳ ಅನುಷ್ಠಾನದಲ್ಲೂ ಪತ್ತೆಯಾಗಿರುವ ಕಾನೂನು ಉಲ್ಲಂಘನೆಗಳ ಬಗ್ಗೆ ತನಿಖೆ ನಡೆಸಲು ಉಮೇಶ ಕತ್ತಿ ನಿರ್ಧರಿಸಿದ್ದರು.

ಯೋಜನೆಗಳ ಮಾಹಿತಿಯೇ ಇಲ್ಲ!

ಸಚಿವರಿಗೆ ಜೂನ್ 14ರಂದು ಪಿಸಿಸಿಎಫ್ ನೀಡಿರುವ ಅಪೂರ್ಣ ವರದಿಯಲ್ಲಿ ಎಲ್ಲ ಕಂಪನಿಗಳು ಷರತ್ತುಗಳನ್ನು ಉಲ್ಲಂಘಿಸಿರುವುದು ಬಹಿರಂಗವಾಗಿದೆ.

ಯೋಜನೆಗಳು ಆರಂಭವಾಗಿ ಅನೇಕ ವರ್ಷಗಳಾದರೂ ಯಾವುದೇ ಮಾಹಿತಿ ಕ್ರೋಢೀಕರಿಸಿಲ್ಲ. 23 ಯೋಜನೆಗಳಲ್ಲಿ ಷರತ್ತು ಪಾಲಿಸಿರುವ ಸ್ಥಿತಿಗತಿ ವರದಿಯೇ ಇಲ್ಲ. ನಾಲ್ಕು ಯೋಜನೆಗಳಲ್ಲಿ ಪರಿಹಾರಾತ್ಮಕ ಅರಣ್ಯ ಬೆಳೆದಿರುವುದು, 2 ಯೋಜನೆಗಳಲ್ಲಿ ಹದಗೆಟ್ಟ ಅರಣ್ಯಪ್ರದೇಶಗಳಿರುವ ಮಾಹಿತಿ ನೀಡಲಾಗಿದೆ. 39 ಯೋಜನೆಗಳ ಪರಿಹಾರಾತ್ಮಕ ಅರಣ್ಯಗಳ ಮಾಹಿತಿಯೇ ಇಲ್ಲ.

ಎಲ್ಲ 45 ಯೋಜನೆಗಳಲ್ಲಿ ಕಂಪನಿಗಳು ಸರ್ಕಾರಕ್ಕೆ ಪಾವತಿಸಬೇಕಾದ ಭೋಗ್ಯದ ಮೊತ್ತ ಮತ್ತು ನಿವ್ವಳ ಪ್ರಸ್ತುತ ಮೌಲ್ಯ (ಎನ್‌ಪಿವಿ) ಮತ್ತು ಇತರ ಪಾವತಿಗಳ ವಿವರಗಳು, ಈ ಹಣ ಸಂದಾಯವಾದ ದಾಖಲೆಗಳು ಮತ್ತು ಹಣ ಬಳಕೆ ಮಾಹಿತಿ ಲಭ್ಯವಿಲ್ಲ. ಕಂಪನಿಗಳು ಸೃಜಿಸಬೇಕಾದ ಕುಬ್ಜ ಮತ್ತು ಔಷಧೀಯ ಅರಣ್ಯ ಮತ್ತು ರಸ್ತೆ ಬದುಗಳು, ರಸ್ತೆಗಳ ಮಾಹಿತಿಯೂ ಇಲ್ಲ. ಯೋಜನೆಗಳ ಜಾರಿ, ನಿರ್ವಹಣೆಯಲ್ಲಿ ಅಧಿಕಾರಿಗಳು ವಿಫಲರಾಗಿರುವುದು ವರದಿಯಲ್ಲಿ ನಮೂದಾಗಿದೆ.

ಸಾಂದರ್ಭಿಕ ಚಿತ್ರ

ಬಿಎಸ್‌ವೈ ವಿರುದ್ಧ ಎಫ್‌ಐಆರ್ ದಾಖಲಿಸಲು ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಡಿಎ ವಸತಿ ಯೋಜನೆ ಅನುಷ್ಠಾನದಲ್ಲಿ ಲಂಚ ಪಡೆದಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಅವರ ಕುಟುಂಬದ ಸದಸ್ಯರು ಸೇರಿದಂತೆ ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಲೋಕಾಯುಕ್ತ ಪೊಲೀಸರಿಗೆ ಆದೇಶಿಸಿದೆ.

ಈ ಸಂಬಂಧ ಸಾಮಾಜಿಕ ಕಾರ್ಯಕರ್ತ ಟಿ.ಜೆ.ಅಬ್ರಹಾಂ ಸಲ್ಲಿಸಿರುವ ಖಾಸಗಿ ದೂರನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಶೇಷ ನ್ಯಾಯಾಲಯ'ದ ನ್ಯಾಯಾಧೀಶ ಬಿ.ಜಯಂತ ಕುಮಾರ್ ಬುಧವಾರ ವಿಚಾರಣೆ ನಡೆಸಿ, 'ಆರೋಪಿಗಳ ವಿರುದ್ಧ ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಬೇಕು' ಎಂದು ಆದೇಶಿಸಿ ವಿಚಾರಣೆ ಮುಂದೂಡಿದರು.

ಪ್ರಕರಣವೇನು?: ಬಿಡಿಎ ಗುತ್ತಿಗೆದಾರ ಸೇರಿದಂತೆ ಯಡಿಯೂರಪ್ಪ ಮತ್ತು ಅವರ ಕುಟುಂಬದ ಸದಸ್ಯರ ವಿರುದ್ಧದ ಭ್ರಷ್ಟಾಚಾರ ತಡೆ ಕಾಯ್ದೆ-1988ರ ಕಲಂ 7,8,9,10 ಮತ್ತು 13, ಭಾರತೀಯ ದಂಡ ಸಂಹಿತೆ-1860ರ ಕಲಂ 383, 384, 415, 418, 420 ಹಾಗೂ ಹಣ ಅಕ್ರಮ ವರ್ಗಾವಣೆ ಕಾಯ್ದೆ-2002ರ ಕಲಂ 3 ಮತ್ತು 4ರ ಅನ್ವಯ ಈ ಖಾಸಗಿ ದೂರು ದಾಖಲಿಸಲಾಗಿದೆ.

ವಿಚಾರಣೆ ನಡೆಸಲು ರಾಜ್ಯಪಾಲರು ಪೂರ್ವಾನುಮತಿ ನೀಡಲು ನಿರಾಕರಿಸಿದ್ದ ಕಾರಣಕ್ಕಾಗಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಖಾಸಗಿ ದೂರನ್ನು 2021ರ ಜೂನ್ 8ರಂದು ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿದ್ದ ಅಬ್ರಹಾಂ, ಹೈಕೋರ್ಟ್‌ಗೆ ಕ್ರಿಮಿನಲ್ ಅರ್ಜಿ ಸಲ್ಲಿಸಿದ್ದರು. ಇದೇ 7ರಂದು ಹೈಕೋರ್ಟ್ ಏಕಸದಸ್ಯ ನ್ಯಾಯಪೀಠವು, ಜನಪ್ರತಿನಿಧಿಗಳ ನ್ಯಾಯಾಲಯ ಪ್ರಕರಣದ ವಿಚಾರಣೆ ನಡೆಸುವಂತೆ ಹಸಿರು ನಿಶಾನೆ ತೋರಿತ್ತು.

ಸಚಿವ ಸೋಮಶೇಖರ್ ಆರೋಪಿ ನಂ. 6

ಈ ಪ್ರಕರಣದಲ್ಲಿ ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಮಾಜಿ ಅಧ್ಯಕ್ಷ ಹಾಗೂ ಹಾಲಿ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಆರನೇ ಆರೋಪಿಯಾಗಿದ್ದಾರೆ.

ಉಳಿದಂತೆ ಮೊದಲ ಆರೋಪಿ ಬಿ.ಎಸ್.ಯಡಿಯೂರಪ್ಪ, ಅವರ ಪುತ್ರ ಬಿ.ವೈ.ವಿಜಯೇಂದ್ರ, ಮೊಮ್ಮಗ ಶಶಿಧರ ಮರಡಿ, ಅಳಿಯ ಸಂಜಯಶ್ರೀ, ಬಿಡಿಎ ಗುತ್ತಿಗೆದಾರ ಚಂದ್ರಕಾಂತ ರಾಮಲಿಂಗಂ, ಕ್ರೆಸೆಂಟ್ ಹೋಟೆಲ್ ಮಾಲೀಕ ಕೆ.ರವಿ ಮತ್ತು ಯಡಿಯೂರಪ್ಪನವರ ಅಳಿಯ ವಿರೂಪಾಕ್ಷಪ್ಪ ಯಮಕನಮರಡಿ ಸೇರಿದ್ದಾರೆ.

ಬಿಜೆಪಿಯೊಂದಿಗೆ ವಿಲೀನಕ್ಕೆ ಕಾಂಗ್ರೆಸ್ ಶಾಸಕಾಂಗ ಸಭೆ ನಿರ್ಧಾರ

ಗೋವಾ: 8 ಶಾಸಕರು ಬಿಜೆಪಿಗೆ

ಪಣಜಿ (ಪಿಟಿಐ): ಗೋವಾದಲ್ಲಿ ಕಾಂಗ್ರೆಸ್‌ನ ಎಂಟು ಶಾಸಕರು ಬುಧವಾರ ಬಿಜೆಪಿ ಸೇರಿದ್ದಾರೆ. ಕಾಂಗ್ರೆಸ್‌ನಲ್ಲಿ ಮೂವರು ಶಾಸಕರಷ್ಟೇ ಉಳಿದಿದ್ದು, ವಿರೋಧ ಪಕ್ಷದ ಸ್ಥಾನವನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ. ಬಿಜೆಪಿ ಸೇರುವಾಗ ಕಾಂಗ್ರೆಸ್ ಶಾಸಕರು, 'ಕಾಂಗ್ರೆಸ್ ಬಿಡಿ, ಬಿಜೆಪಿ ಸೇರಿ' ಎಂದು ಘೋಷಣೆ ಕೂಗಿದ್ದಾರೆ. ಕಾಂಗ್ರೆಸ್‌ನ 'ಭಾರತವನ್ನು ಒಗ್ಗೂಡಿಸಿ ಯಾತ್ರೆ'ಯ ಮಧ್ಯೆಯೇ ನಡೆದಿರುವ ಈ ಬೆಳವಣಿಗೆಯಿಂದ ಪಕ್ಷಕ್ಕೆ ಭಾರಿ ಮುಜುಗರವಾಗಿದೆ.

ಕಾಂಗ್ರೆಸ್ ನಾಯಕ, ಮಾಜಿ ಮುಖ್ಯಮಂತ್ರಿ ದಿಗಂಬರ ಕಾಮತ್ ಮತ್ತು ಶಾಸಕ ಮೈಕೆಲ್ ಲೋಬೊ ನೇತೃತ್ವದಲ್ಲಿ ಕಾಂಗ್ರೆಸ್ ವಿಭಜನೆ ನಡೆದಿದೆ. ಬುಧವಾರ ಇಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ, ಪಕ್ಷವನ್ನು ಬಿಜೆಪಿ ಜತೆ ವಿಲೀನ ಮಾಡುವ ನಿರ್ಣಯವನ್ನು ಅಂಗೀಕರಿಸಲಾಯಿತು. ದೇವರ ಇಚ್ಛೆಯಂತೆ ಹೀಗೆ ಮಾಡಿದ್ದೇನೆ ಎಂದು ಕಾಮತ್ ಹೇಳಿದ್ದಾರೆ.

ಬಿಜೆಪಿ ಸೇರಿದ ನಂತರ ಮಾತನಾಡಿದ ದಿಗಂಬರ ಕಾಮತ್ ಅವರು, 'ಜನವರಿಯಲ್ಲಿ ದೇವಾಲಯಕ್ಕೆ ಹೋಗಿದ್ದೆ. ಆಗ ದೇವರು ಕಾಂಗ್ರೆಸ್‌ನಲ್ಲಿಯೇ ಉಳಿ ಎಂದು ಆಜ್ಞೆ ನೀಡಿದ್ದರು. ಹಾಗಾಗಿ ಕಾಂಗ್ರೆಸ್‌ನಲ್ಲಿಯೇ ಉಳಿದಿದ್ದೆ. ಈಚೆಗೆ ಮತ್ತೆ ದೇವಾಲಯಕ್ಕೆ ಹೋಗಿದ್ದೆ. ನಿನಗೆ ಯಾವುದು ಒಳಿತೋ ಅದನ್ನು ಮಾಡು ಎಂದು ದೇವರು ಹೇಳಿದರು. ಹಾಗಾಗಿ ಬಿಜೆಪಿ ಸೇರುತ್ತಿದ್ದೇನೆ' ಎಂದು ಹೇಳಿದರು. ಪ್ರಧಾನಿ ನರೇಂದ್ರ ಮೋದಿ ಅವರ ಕೈ ಬಲಪಡಿಸಲು ನಾವು ಬಿಜೆಪಿ ಸೇರುತ್ತಿದ್ದೇವೆ ಎಂದು ಲೋಬೊ ಹೇಳಿದರು.

ಬಿಜೆಪಿ ಬಲ ಹೆಚ್ಚಳ: ಈ ಬೆಳವಣಿಗೆಯಿಂದಾಗಿ ಗೋವಾ ವಿಧಾನಸಭೆಯಲ್ಲಿ ಬಿಜೆಪಿಯ ಬಲ ಹೆಚ್ಚಿದೆ. ವಿಧಾನಸಭೆಯಲ್ಲಿ 40 ಸ್ಥಾನಗಳಿದ್ದು, ಬಿಜೆಪಿ 20 ಶಾಸಕರನ್ನು ಹೊಂದಿದೆ. ಮಿತ್ರಪಕ್ಷಗಳು ಮತ್ತು ಸ್ವತಂತ್ರ ಅಭ್ಯರ್ಥಿಗಳನ್ನು ಒಳಗೊಂಡು ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವು 25 ಶಾಸಕರ ಬಲವನ್ನು ಹೊಂದಿತ್ತು. ಈಗ ಕಾಂಗ್ರೆಸ್‌ನ 8 ಶಾಸಕರು ಸೇರಿದ್ದರಿಂದ ಬಿಜೆಪಿ ಬಲ 28ಕ್ಕೆ ಏರಿಕೆಯಾಗಿದ್ದು, ಎನ್‌ಡಿಎ ಶಾಸಕರ ಸಂಖ್ಯೆ 33ಕ್ಕೆ ಏರಿಕೆಯಾಗಿದೆ.

ನಿಯಮಗಳ ಪ್ರಕಾರ ಯಾವುದೇ ಪಕ್ಷವು ವಿರೋಧ ಪಕ್ಷದ ಸ್ಥಾನ ಪಡೆಯಲು, ವಿಧಾನಸಭೆಯಲ್ಲಿನ ಒಟ್ಟು ಶಾಸಕರಲ್ಲಿ ಶೇ 10ರಷ್ಟು ಪ್ರಾತಿನಿಧ್ಯ ಹೊಂದಿರಬೇಕು. 40 ಸ್ಥಾನಗಳ ಗೋವಾ ವಿಧಾನಸಭೆಯಲ್ಲಿ ವಿರೋಧ ಪಕ್ಷ ಎನಿಸಿಕೊಳ್ಳಲು ಯಾವುದೇ ಪಕ್ಷಕ್ಕೆ ನಾಲ್ವರು ಶಾಸಕರ ಅಗತ್ಯವಿದೆ. ಆದರೆ ಈಗ ಕಾಂಗ್ರೆಸ್ ಬಳಿ ಮೂವರು ಶಾಸಕರಷ್ಟೇ ಉಳಿದಿದ್ದಾರೆ.

ಇನ್ನೊಂದು ಸುದ್ದಿ 10

ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್, ರಾಜ್ಯ ಬಿಜೆಪಿ ಅಧ್ಯಕ್ಷ ಸದಾನಂದ ಶೇಟ್ ತಾನಾವಡೆ ಅವರು ಕಾಂಗ್ರೆಸ್‌ನ ಎಂಟು ಶಾಸಕರನ್ನು ಪಣಜಿಯಲ್ಲಿ ಬುಧವಾರ ಬಿಜೆಪಿಗೆ ಬರಮಾಡಿಕೊಂಡರು–ಪಿಟಿಐ ಚಿತ್ರ

ಮುರುಘಾಶ್ರೀ ನ್ಯಾಯಾಂಗ ಬಂಧನ ವಿಸ್ತರಣೆ

ಚಿತ್ರದುರ್ಗ: ಪ್ರೌಢಶಾಲೆ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿರುವ ಆರೋಪದಲ್ಲಿ ಬಂಧಿತರಾಗಿರುವ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು ಹಾಗೂ ಹಾಸ್ಟೆಲ್‌ನ ಮಹಿಳಾ ವಾರ್ಡನ್ ಅವರ ನ್ಯಾಯಾಂಗ ಬಂಧನವನ್ನು ಇದೇ 27ರವರೆಗೆ ವಿಸ್ತರಿಸಿ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಬಿ.ಕೆ. ಕೋಮಲಾ ಆದೇಶಿಸಿದ್ದಾರೆ.

ನ್ಯಾಯಾಂಗ ಬಂಧನ ಅವಧಿ ಇದೇ 14ಕ್ಕೆ ಪೂರ್ಣಗೊಂಡಿದ್ದರಿಂದ ಪೊಲೀಸರು ಆರೋಪಿಗಳನ್ನು ಬುಧವಾರ ಮಧ್ಯಾಹ್ನ 12.30ಕ್ಕೆ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ವಿಚಾರಣೆ ನಡೆಸಿದ ನ್ಯಾಯಾಧೀಶರು 14 ದಿನಗಳವರೆಗೆ ನ್ಯಾಯಾಂಗ ಬಂಧನ ವಿಸ್ತರಿಸಿದರು.

ಸೆ. 16ಕ್ಕೆ ಸರ್ಕಾರಿ ವಕೀಲರು ಪ್ರತಿವಾದ ಮಂಡಿಸಲಿದ್ದಾರೆ.

ಸದ್ಯವೇ ಮಸೂದೆ ಮಂಡನೆ; ವಿಧಾನಸಭೆಯಲ್ಲಿ ಬೊಮ್ಮಾಯಿ ಹೇಳಿಕೆ

ಕನ್ನಡ ಕಡ್ಡಾಯಕ್ಕೆ ಕಾನೂನಿನ ಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡವನ್ನು ಕಡ್ಡಾಯವಾಗಿ ಬಳಕೆ ಮಾಡುವುದಕ್ಕಾಗಿ ಕಾನೂನು ರೂಪಿಸಲು ಇದೇ ಅಧಿವೇಶನದಲ್ಲಿ ಮಸೂದೆಯೊಂದನ್ನು ಮಂಡಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ಹಿಂದಿ ದಿವಸ್' ಆಚರಣೆ ವಿರೋಧಿಸಿ ವಿಧಾನಸೌಧದ ಗಾಂಧಿಪ್ರತಿಮೆ ಬಳಿ ಬುಧವಾರ ಪ್ರತಿಭಟನೆ ನಡೆಸಿದ ಜೆಡಿಎಸ್ ಸದಸ್ಯರು ಬಳಿಕ ವಿಧಾನಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿದರು.

ಇದಕ್ಕೆ ಭಾವನಾತ್ಮಕವಾಗಿಯೇ ಪ್ರತಿಕ್ರಿಯೆ ನೀಡಿದ ಬೊಮ್ಮಾಯಿ, 'ಇದೇ ಮೊದಲ ಬಾರಿಗೆ ಕಾನೂನಿನ ಮೂಲಕ ಕನ್ನಡ ಭಾಷೆ ಮತ್ತು ಕನ್ನಡದ ಜನರಿಗೆ ರಕ್ಷಣೆ ನೀಡುವ ಕೆಲಸ ಮಾಡು ತ್ತಿದ್ದೇವೆ. ಕನ್ನಡವನ್ನು ಬೆಳೆಸುವ ಉದ್ದೇಶದಿಂದ ರಾಜ್ಯದಲ್ಲಿ ನೆಲೆಸಿರುವ ಅನ್ಯಭಾಷಿಕರು ಕನ್ನಡ ಕಲಿತುಕೊಳ್ಳಲು ವ್ಯವಸ್ಥೆ ಮಾಡಲಾಗುವುದು' ಎಂದರು.

'ಭಾರತ ಒಂದು ಒಕ್ಕೂಟ ರಾಷ್ಟ್ರ. ಅನೇಕ ಭಾಷೆಗಳು ಮತ್ತು ಸಂಸ್ಕೃತಿಗಳನ್ನು ಒಳಗೊಂಡ ದೇಶ. ಎಲ್ಲ ಮಾತೃಭಾಷೆಗಳೂ ರಾಷ್ಟ್ರೀಯ ಭಾಷೆಗಳೇ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಹೇಳಿದ್ದಾರೆ. ಕನ್ನಡದ ರಕ್ಷಣೆ ಮತ್ತು ಬೆಳವಣಿಗೆಗೆ ವಿಚಾರದಲ್ಲಿ ನಾವು ರಾಜಿ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ. ನೆಲ, ಜಲ, ಭಾಷೆಯ ವಿಚಾರದಲ್ಲಿ ರಾಜಕೀಯವನ್ನು ಮೀರಿ ತೀರ್ಮಾನ ತೆಗೆದುಕೊಳ್ಳುತ್ತೇವೆ. ರಾಜ್ಯದಲ್ಲಿ ಕನ್ನಡ ಅಗ್ರಮಾನ್ಯ ಭಾಷೆ ಯಾಗಿ ಬಳಕೆಯಾಗುತ್ತದೆ' ಎಂದೂ ಹೇಳಿದರು.

'ಹೊಸ ಶಿಕ್ಷಣ ನೀತಿಯಲ್ಲಿ ಆಯಾ ರಾಜ್ಯ ಭಾಷೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ನಮ್ಮ ರಾಜ್ಯದಲ್ಲಿ ಮೊದಲ ಬಾರಿಗೆ ಕನ್ನಡದಲ್ಲಿ ಎಂಜಿನಿಯರಿಂಗ್ ಕೋರ್ಸ್ ನಡೆಸಲಾಗುತ್ತದೆ. ಮೊದಲ ಬ್ಯಾಚ್‌ನ ಮೊದಲ ಸೆಮಿಸ್ಟರ್ ಪರೀಕ್ಷೆ ಕನ್ನಡದಲ್ಲಿಯೇ ನಡೆದಿದೆ' ಎಂದು ಅವರು ತಿಳಿಸಿದರು.

4ನೇ ಪುಟ ನೋಡಿ

ಮಸೂದೆಯಲ್ಲಿ ಏನಿದೆ?

ಆಡಳಿತದ ಎಲ್ಲ ಹಂತಗಳಲ್ಲೂ ಕನ್ನಡ ಕಡ್ಡಾಯ ಮಾಡುವು ದರ ಜತೆಗೆ ರಾಜ್ಯದಲ್ಲಿ ಸ್ಥಾಪನೆಯಾಗುವ ಉದ್ಯಮಗಳಲ್ಲಿ ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡದೇ ಇದ್ದರೆ, ಅಂತಹ ಉದ್ಯಮಗಳಿಗೆ ಭೂ–ರಿಯಾಯಿತಿ, ತೆರಿಗೆ ವಿನಾಯಿತಿ, ಸಹಾಯಧನ ಮತ್ತು ಇತರ ಸೌಲಭ್ಯಗಳಿಗೆ ಕತ್ತರಿ ಹಾಕುವ ಅಂಶ ಮಸೂದೆಯಲ್ಲಿ ಸೇರಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮನವಿಯ ಮೇರೆಗೆ ಕಾನೂನು ಆಯೋಗವು ಈ ಮಸೂದೆಯ ಕರಡನ್ನು ರೂಪಿಸಿದೆ. ಇದನ್ನೇ ಅಧಿವೇಶನದಲ್ಲಿ ಮಂಡಿಸಲಾಗುವುದು ಎಂದು ಸರ್ಕಾರದ ಮೂಲಗಳು ಹೇಳಿವೆ.

ಪ್ರಮುಖ ಅಂಶಗಳು

- 1ರಿಂದ 10 ನೇ ತರಗತಿಯವರೆಗೆ ಕರ್ನಾಟಕ ಮತ್ತು ಹೊರ ರಾಜ್ಯಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿದ ಎಲ್ಲರಿಗೂ ಉನ್ನತ, ತಾಂತ್ರಿಕ ಮತ್ತು ವೃತ್ತಿ ಶಿಕ್ಷಣದಲ್ಲಿ ಮೀಸಲಾತಿ ನೀಡಬೇಕು
- ರಾಜ್ಯ ಸರ್ಕಾರ, ಸ್ಥಳೀಯ ಪ್ರಾಧಿಕಾರಗಳು, ಶಾಸನಬದ್ಧ ಮತ್ತು ಶಾಸನಬದ್ಧವಲ್ಲದ ನಿಕಾಯಗಳು, ಸಹಕಾರಿ ಸಂಘಗಳು, ರಾಜ್ಯದಲ್ಲಿ ಇತರ ಸಂಘಗಳಲ್ಲಿ ನೇಮಕಾತಿ ಪಡೆಯಲು ಕನ್ನಡ ಭಾಷಾ ಜ್ಞಾನ ಕಡ್ಡಾಯ.
- ಅಧೀನ ನ್ಯಾಯಾಲಯಗಳಲ್ಲಿ ಮತ್ತು ನ್ಯಾಯಮಂಡಳಿಗಳಲ್ಲಿ ಕನ್ನಡ ಭಾಷೆಯನ್ನು ಬಳಸಬೇಕು.
- ಕನ್ನಡಿಗರಿಗೆ ಉದ್ಯೋಗ ಸೃಜಿಸಲು ಪ್ರತ್ಯೇಕ ಪೋರ್ಟಲ್ ಅನ್ನು ಸ್ಥಾಪಿಸುವುದು.
- ಸರ್ಕಾರಿ ಅಧಿಕಾರಿಗಳು, ಸಾರ್ವಜನಿಕರು, ವ್ಯಾಪಾರಸ್ಥರು ಕಾಯ್ದೆ ಉಲ್ಲಂಘಿಸಿದರೆ ದಂಡವನ್ನೂ ವಿಧಿಸುವುದು.

ಬಳ್ಳಾರಿಯ 'ವಿಮ್ಸ್'ನ ಐಸಿಯುನಲ್ಲಿ ನಡೆದ ಅವಘಡ

ಕೈಕೊಟ್ಟ ವಿದ್ಯುತ್, ಜನರೇಟರ್: ಮೂವರ ಸಾವು?

ಪ್ರಜಾವಾಣಿ ವಾರ್ತೆ

ಬಳ್ಳಾರಿ: ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ (ವಿಮ್ಸ್) ವಿದ್ಯುತ್ ಕೈಕೊಟ್ಟು, ಜನರೇಟರ್ ಕೆಲಸ ಮಾಡದ ಪರಿಣಾಮ, ಇಲ್ಲಿನ ತೀವ್ರ ನಿಗಾ ಘಟಕದಲ್ಲಿದ್ದ ಮೂವರು ರೋಗಿಗಳು ಬುಧವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ.

ಮೃತರನ್ನು ಮೌಲಾ ಹುಸೇನ್ (35),ಚಿಟ್ಟೆಮ್ಮ (30) ಹಾಗೂ ಚಂದ್ರಮ್ಮ (65) ಎಂದು ಗುರುತಿಸಲಾಗಿದೆ. 'ಮೌಲಾ ಅವರಿಗೆ ಮೂತ್ರ ಪಿಂಡ ಸೇರಿದಂತೆ ಗಂಭೀರ ಸಮಸ್ಯೆಗಳಿದ್ದವು. ಚಿಟ್ಟೆಮ್ಮ ಅವರಿಗೆ ಹಾವು ಕಡಿದಿತ್ತು. ಸೆಪ್ಟಿಕ್‌ನಿಂದ ಬಳಲುತ್ತಿದ್ದ ಚಂದ್ರಮ್ಮ ವೆಂಟಿಲೇಟರ್‌ನಲ್ಲಿ ಇರಲಿಲ್ಲ. ಕರೆಂಟ್ ಕೈಕೊಟ್ಟಿದ್ದಕ್ಕೂ ಸಾವಿಗೂ ಸಂಬಂಧವಿಲ್ಲ' ಎಂದು ವಿಮ್ಸ್ ಮೂಲಗಳು ತಿಳಿಸಿವೆ.

'ವಿಮ್ಸ್‌ನಲ್ಲಿ ಬೆಳಿಗ್ಗೆ 6ರಿಂದ 10ಗಂಟೆವರೆಗೆ ಕರೆಂಟ್ ಇರಲಿಲ್ಲ. ಜನರೇಟರ್ ಇದ್ದರೂ ಕೆಲಸ ಮಾಡಲಿಲ್ಲ. ಪರಿಣಾಮ ಐಸಿಯುನಲ್ಲಿದ್ದ ವೆಂಟಿಲೇಟರ್‌ಗಳು ಸ್ಥಗಿತಗೊಂಡು ರೋಗಿಗಳು ಮೃತಪಟ್ಟಿದ್ದಾರೆ' ಎಂದು ಅವರ ಸಂಬಂಧಿಕರು ಆರೋಪಿಸಿದ್ದಾರೆ.

ಇದಕ್ಕೆ ಸಂಬಂಧಿಸಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಘಟನೆ ಕುರಿತು ಮಾಹಿತಿ ಪಡೆಯಲು ವಿಮ್ಸ್ ನಿರ್ದೇಶಕ ಡಾ.ಗಂಗಾಧರಗೌಡ ಅವರಿಗೆ ಕರೆ ಮಾಡಲಾಯಿತು. ಅವರು ಕರೆ ಸ್ವೀಕರಿಸಲಿಲ್ಲ. 'ಬುಧವಾರ ಬೆಳಿಗ್ಗೆ 8.20ರಿಂದ 10 ಗಂಟೆವರೆಗೆ ಕರೆಂಟ್ ಹೋಗಿತ್ತು. ಇದಕ್ಕೆ ಪರ್ಯಾಯವಾಗಿ ಜನರೇಟರ್ ವ್ಯವಸ್ಥೆ ಮಾಡಲಾಗಿತ್ತು. 9.30ರಲ್ಲಿ ಒಬ್ಬರು, 9.35ರಲ್ಲಿ ಮತ್ತೊಬ್ಬರು ರೋಗಿ ಮೃತಪಟ್ಟರು' ಎಂದು ವಿಮ್ಸ್ ಮೂಲಗಳು ಹೇಳಿವೆ.

ವಿಮ್ಸ್ ಕಟ್ಟಡ 60 ವರ್ಷ ಹಳೆ ಯದು. ವಿದ್ಯುತ್ ಪೂರೈಸುವ ವಾಹಕಗಳು (ತಂತಿ) ಅಷ್ಟೇ ಹಳೆಯದಾಗಿವೆ. ಅಗತ್ಯವಿರುವ ಎಲ್ಲ ವಿಭಾಗಗಳಿಗೂ ಜನರೇಟರ್ ಸೌಲಭ್ಯ ಒದಗಿಸಲಾಗಿದೆ. ಐಸಿಯುಗೂ ಹೊಸ ಜನರೇಟರ್ ವ್ಯವಸ್ಥೆ ಮಾಡಲಾಗುತ್ತಿದೆ ಎನ್ನಲಾ ಗಿದೆ.

'ಕೆಲವು ದಿನಗಳ ಹಿಂದೆ ಮಕ್ಕಳ ಐಸಿಯು ವಿಭಾಗದಲ್ಲೂ ಜನರೇಟರ್ ಕೈಕೊಟ್ಟ ಪರಿಣಾಮ ಮಗುವೊಂದು ಮೃತಪಟ್ಟಿತು' ಎಂಬ ಆರೋಪವೂ ಕೇಳಿಬಂದಿದೆ.

ಪರಿಶೀಲನೆ: ಡಿ.ಸಿ ಭರವಸೆ

'ವಿಮ್ಸ್ ತೀವ್ರ ನಿಗಾ ಘಟಕದಲ್ಲಿ ಇಬ್ಬರು ಮೃತಪಟ್ಟ ವಿಷಯ ಗಮನಕ್ಕೆ ಬಂದಿದೆ. ಇದು ಕರೆಂಟ್ ಇಲ್ಲವೆ ಜನರೇಟರ್ ಸಮಸ್ಯೆಯಿಂದ ಸಂಭವಿಸಿದ್ದಲ್ಲ ಎಂದು ನಿರ್ದೇಶಕರು ತಿಳಿಸಿದ್ದಾರೆ. ಆದರೂ ಈ ಬಗ್ಗೆ ಪರಿಶೀಲಿಸುವೆ' ಎಂದು ಜಿಲ್ಲಾಧಿಕಾರಿ ಪವನ ಕುಮಾರ್ ಮಾಲಪಾಟಿ ತಿಳಿಸಿದರು.

'ವಿಮ್ಸ್ ಐಸಿಯುನಲ್ಲಿ ಜನರೇಟರ್ ಸಮಸ್ಯೆ ಇದೆ. ಮಂಗಳವಾರ ಕೆಎಂಇಆರ್‌ಸಿ ಸಭೆಯಲ್ಲೂ ಈ ಬಗ್ಗೆ ಚರ್ಚಿಸಲಾಗಿದೆ. 500 ಕೆ.ವಿ. ಸಾಮರ್ಥ್ಯದ ಜನರೇಟರ್ ಖರೀದಿ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ' ಎಂದು ಹೇಳಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ

'ಕೊರಗರಿಗೆ ಆರೋಗ್ಯ ನಿಧಿ ಮುಂದುವರಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರಗ ಸಮುದಾಯದವರಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಉಚಿತವಾಗಿ ವೈದ್ಯಕೀಯ ಚಿಕಿತ್ಸಾ ಸೌಲಭ್ಯ ಒದಗಿಸಲು ಜಾರಿಗೊಳಿಸಿದ್ದ 'ಆರೋಗ್ಯ ನಿಧಿ' ಯೋಜನೆಯನ್ನು ಮುಂದುವರಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದರು.

ವಿಧಾನಸಭೆಯಲ್ಲಿ ಬುಧವಾರ ಗಮನ ಸೆಳೆಯುವ ಸೂಚನೆ ಮಂಡಿಸಿದ ಬಿಜೆಪಿಯ ಕೆ.ರಘುಪತಿ ಭಟ್, 'ಕೊರಗ ಸಮುದಾಯದ ಜನಸಂಖ್ಯೆ ಕ್ಷೀಣಿಸುತ್ತಿದೆ. ಅವರಿಗೆ ಅತ್ಯುತ್ತಮ ವೈದ್ಯಕೀಯ ಸೌಲಭ್ಯ ಒದಗಿಸಲು ಆರೋಗ್ಯ ನಿಧಿ ಯೋಜನೆ ಜಾರಿ ಯಲ್ಲಿತ್ತು. ಆದರೆ, ಪರಿಶಿಷ್ಟ ಪಂಗಡಗಳ ನಿರ್ದೇಶನಾಲಯವು ಈ ಯೋಜನೆಯನ್ನು ಸ್ಥಗಿತಗೊಳಿಸಿದೆ. ಇದರಿಂದ ಕೊರಗರಿಗೆ ಚಿಕಿತ್ಸೆ ಪಡೆಯುವುದು ಕಷ್ಟವಾಗುತ್ತಿದೆ' ಎಂದು ವಿವರಿಸಿದರು.

ಮತಾಂತರ ನಿಷೇಧ ಮಸೂದೆ ಮಂಡನೆಗೆ ಸರ್ಕಾರ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ (ಮತಾಂತರ ನಿಷೇಧ) ಮಸೂದೆಯನ್ನು ವಿಧಾನ ಮಂಡಲದ ಎರಡೂ ಸದನಗಳಲ್ಲಿ ಇದೇ ಅಧಿವೇಶನದಲ್ಲಿ ಮಂಡಿಸಿ ಅಂಗೀಕಾರ ಪಡೆಯಲು ರಾಜ್ಯ ಸರ್ಕಾರ ನಿರ್ಧರಿಸಿದೆ.

2021ರ ಡಿಸೆಂಬರ್‌ನಲ್ಲಿ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ಈ ಮಸೂದೆಯನ್ನು ಮಂಡಿಸಲಾಗಿತ್ತು. ವಿಧಾನಸಭೆಯ ಅಂಗೀಕಾರವೂ ದೊರಕಿತ್ತು. ಆದರೆ, ವಿಧಾನ ಪರಿಷತ್‌ನಲ್ಲಿ ಸದಸ್ಯಬಲದ ಕೊರತೆಯಿಂದ ಮಸೂದೆ ಮಂಡಿಸಿರಲಿಲ್ಲ. ಕಳೆದ ಮೇ ತಿಂಗಳಲ್ಲಿ ಸುಗ್ರೀವಾಜ್ಞೆ ಮೂಲಕ ಮಸೂದೆಯನ್ನು ಜಾರಿಗೊಳಿಸಲಾಗಿತ್ತು.

ಮಸೂದೆಯನ್ನು ಮತ್ತೆ ಮಂಡಿಸಿ ಒಪ್ಪಿಗೆ ಪಡೆಯುವ ಕುರಿತು ಬುಧವಾರ ನಡೆದ ಸಂಪುಟ ಸಭೆಯಲ್ಲಿ ಚರ್ಚೆ ನಡೆದಿದೆ. ಒಮ್ಮೆ ವಿಧಾನಸಭೆಯ ಅಂಗೀಕಾರ ದೊರಕಿರುವುದರಿಂದ ಈಗ ಪರಿಷತ್‌ನಲ್ಲಿ ಮಂಡಿಸಿ ಅಂಗೀಕಾರ ಪಡೆಯಲಾಗುತ್ತದೆ. ಬಳಿಕ ಪುನಃ ವಿಧಾನಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆಯಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಈವರೆಗೂ ವಿಧಾನ ಪರಿಷತ್‌ನಲ್ಲಿ ಬಿಜೆಪಿಗೆ ಬಹುಮತ ಇರಲಿಲ್ಲ. ಈ ಕಾರಣದಿಂದ ವಿರೋಧ ಪಕ್ಷಗಳ ಸಹಕಾರ ಇಲ್ಲದೆ ಅಲ್ಲಿ ಮಸೂದೆಗಳಿಗೆ ಒಪ್ಪಿಗೆ ಪಡೆಯುವುದು ಕಷ್ಟವಾಗಿತ್ತು. ಈಗ ಬಹುಮತ ದೊರಕಿರುವುದರಿಂದ ಮಸೂದೆಗಳಿಗೆ ಸುಲಭವಾಗಿ ಅಂಗೀಕಾರ ಪಡೆಯಲು ಅವಕಾಶ ದೊರಕಿದೆ. ಈ ಕಾರಣದಿಂದ ಇದೇ ಅಧಿವೇಶನದಲ್ಲಿ ಮತಾಂತರ ನಿಷೇಧ ಮಸೂದೆಗೆ ಒಪ್ಪಿಗೆ ಪಡೆಯುವ ತೀರ್ಮಾನ ಮಾಡಲಾಗಿದೆ.

ಪರಿಶಿಷ್ಟ ಪಂಗಡಕ್ಕೆ ಬೆಟ್ಟ ಕುರುಬರು

ನವದೆಹಲಿ: ಕರ್ನಾಟಕದ ಬೆಟ್ಟ ಕುರುಬ ಜನಾಂಗ ಸೇರಿದಂತೆ ಒಟ್ಟು 12 ಜಾತಿಗಳನ್ನು ಪರಿಶಿಷ್ಟ ಪಂಗಡಕ್ಕೆ (ಎಸ್.ಟಿ) ಸೇರಿಸಲು ಕೇಂದ್ರ ಸಚಿವ ಸಂಪುಟ ಬುಧವಾರ ಒಪ್ಪಿಗೆ ನೀಡಿದೆ.

ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡುವಂತೆ ಬೆಟ್ಟ ಕುರುಬರು 30 ವರ್ಷಗಳಿಂದ ಹೋರಾಟ ಮಾಡುತ್ತಿದ್ದಾರೆ. ಈ ಸಂಬಂಧ ಕರ್ನಾಟಕ ಸರ್ಕಾರವು ಕೇಂದ್ರಕ್ಕೆ ಶಿಫಾರಸು ಮಾಡಿತ್ತು.

'ಚಾಮರಾಜನಗರ, ಕೊಡಗು, ಮೈಸೂರು ಜಿಲ್ಲೆಗಳ ಅಂಚಿನಲ್ಲಿ ಬೆಟ್ಟ ಕುರುಬ ಜನಾಂಗ ನೆಲೆಸಿತ್ತು. ಕಾರಣಾಂತರಗಳಿಂದ ಇವರನ್ನು ಒಕ್ಕಲೆಬ್ಬಿಸಲಾಗಿತ್ತು. ಅವರ ಹೋರಾಟಕ್ಕೆ ಕೇಂದ್ರ ಸ್ಪಂದಿಸಿದೆ' ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಟ್ವೀಟ್ ಮಾಡಿದ್ದಾರೆ.

ನಗರದಲ್ಲಿ ಇಂದು

ಭಾರತ ಉತ್ಪಾದನಾ ಪ್ರದರ್ಶನ–2022: ಉದ್ಘಾಟನೆ: ರಾಜನಾಥ್ ಸಿಂಗ್, ಅತಿಥಿಗಳು: ಪ್ರಲ್ಹಾದ್ ಜೋಶಿ, ಬಸವರಾಜ ಬೊಮ್ಮಾಯಿ, ಮುರುಗೇಶ್ ನಿರಾಣಿ, ಎಸ್. ಆರ್. ವಿಶ್ವನಾಥ್, ಬಲದೇವ್ ಭಾಯ್ ಪ್ರಜಾಪತಿ, ಆಯೋಜನೆ: ಐಎಂಎಸ್ ಫೌಂಡೇಷನ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರ, ಬೆಳಿಗ್ಗೆ 11

ಗೋಲ್ಡ್ ಅಧಾರಿತ ಕೃತಿ: ಉದ್ಘಾಟನೆ: ಅರವಿಂದ ಜತ್ತಿ, ಅಧ್ಯಕ್ಷತೆ: ವೂಡೇ. ಪಿ. ಕೃಷ್ಣ, ದತ್ತಿ ಉಪನ್ಯಾಸ: ಬಸಯ್ಯ ಹಿರೇಮಠ್, ನವೀನ್ ಕುಮಾರ್, ಅತಿಥಿಗಳು: ಎಂ.ಎಸ್. ಶೀಲವಂತರ್, ಆಯೋಜನೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸ್ಥಳ: ಬಾಪು ಸಭಾಂಗಣ, ಗಾಂಧಿ ಭವನ, ಬೆಳಿಗ್ಗೆ 11

ಬ್ರಹ್ಮಶ್ರೀ ನಾರಾಯಣ ಗುರುಗಳ 168ನೇ ಜಯಂತ್ಯುತ್ಸವ: ಸಾನ್ನಿಧ್ಯ: ವಿಖ್ಯಾತಾನಂದ ಸ್ವಾಮೀಜಿ, ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ವಿ. ಸುನಿಲ್‌ಕುಮಾರ್, ಕೋಟ ಶ್ರೀನಿವಾಸ ಪೂಜಾರಿ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಬಿ.ಕೆ. ಹರಿಪ್ರಸಾದ್, ಎಚ್. ಹಾಲಪ್ಪ, ಕುಮಾರ್ ಬಂಗಾರಪ್ಪ, ಅಧ್ಯಕ್ಷತೆ: ಎಂ. ತಿಮ್ಮೇಗೌಡ, ಆಯೋಜನೆ: ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ, ಸ್ಥಳ: ಚೌಡಯ್ಯ ಮೆಮೋರಿಯಲ್ ಹಾಲ್, ವೈಯಾಲಿ ಕಾವಲ್, ಸಂಜೆ 4

ರಂಗಶತಃ: ಉದ್ಘಾಟನೆ: ಎಸ್.

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ನಾಟ್ಯ ಸಂಕಲನ ನೃತ್ಯ ಶಾಲೆಯ ವಿದ್ಯಾರ್ಥಿಗಳು, ನಿರ್ದೇಶನ: ನಾಗಶ್ರೀ ಶ್ರೀನಿವಾಸನ್, ಆಯೋಜನೆ: ರಾಘವೇಂದ್ರ ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ, ಸಂಜೆ 7.30

ರಾಜೇಂದ್ರಕುಮಾರ್, ಅತಿಥಿಗಳು: ಬಿ.ಎಸ್. ರಾಜಶೇಖರಯ್ಯ, ಬಿ.ಎಸ್. ನಾಗರಾಜ್, ಎಸ್. ಆರ್. ಹೆಗ್ಡೆ, ಅಧ್ಯಕ್ಷತೆ: ಕೋಟ್ಯಾ ಶ್ರೀನಿವಾಸ್ ಆಯೋಜನೆ: ಲಯನ್ಸ್ ಇಂಟರ್‌ನ್ಯಾಷನಲ್, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 4

ಸರ್ ಎಂ. ವಿಶ್ವೇಶ್ವರಯ್ಯ ಜನ್ಮ ದಿನಾಚರಣೆ: ಅಧ್ಯಕ್ಷತೆ: ಮಹೇಶ ಜೋಶಿ, ಉಪನ್ಯಾಸ: ತಿಮ್ಮಪ್ಪ ಭಟ್, ಉಪಸ್ಥಿತಿ: ನೇ.ಭ. ರಾಮಲಿಂಗ ಶೆಟ್ಟಿ, ಕೆ. ಮಹಾಲಿಂಗಯ್ಯ, ಬಿ.ಎಂ. ಪಟೇಲ್ ಪಾಂಡು, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ ಉದ್ಘಾಟನೆ, ಅಭಿಯಂತರರ ದಿನಾಚರಣೆ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಸ್ಥಳ: ಯುವಿಸಿಇ, ಕೆ.ಆರ್. ವೃತ್ತ, ಸಂಜೆ 5

ಎಂಜಿನಿಯರ್ ದಿನ: ಅತಿಥಿಗಳು: ವಿ. ಸೋಮಣ್ಣ, ಮುರುಗೇಶ್ ನಿರಾಣಿ, ರಿಜ್ವಾನ್ ಅರ್ಷದ್, ಅಧ್ಯಕ್ಷತೆ: ಎಂ. ಲಕ್ಷ್ಮಣ, ಆಯೋಜನೆ ಮತ್ತು ಸ್ಥಳ: ದಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ (ಇಂಡಿಯಾ), ಡಾ. ಬಿ.ಆರ್. ಅಂಬೇಡ್ಕರ್ ವೀದಿ, ಸಂಜೆ 5

ಸಂಸ್ಥಾಪಕರ ದಿನಾಚರಣೆ, ಸರ್. ಎಂ.ವಿ. ಸ್ಮಾರಕ ಪ್ರಶಸ್ತಿ ಸಮಾರಂಭ: ಅತಿಥಿಗಳು: ಬಸವರಾಜ ಬೊಮ್ಮಾಯಿ, ಮುರುಗೇಶ್ ನಿರಾಣಿ, ಎಂ.ಆರ್. ಜೈಶಂಕರ್, ಅಧ್ಯಕ್ಷತೆ: ಐ.ಎಸ್.ಎನ್.ಪ್ರಸಾದ್, ಆಯೋಜನೆ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕ ಮಹಾಸಂಸ್ಥೆ (ಎಫ್‌ಕೆಸಿಸಿಐ), ಸ್ಥಳ: ಹೋಟೆಲ್ ತಾಜ್ ವೆಸ್ಟ್ ಎಂಡ್, ರೇಸ್ ಕೋರ್ಸ್ ರಸ್ತೆ, ಸಂಜೆ 6

'ಕಲಿಸು ಗುರುವೇ ಕಲಿಸು' ಉಪನ್ಯಾಸ: ಉಪನ್ಯಾಸಕರು: ಡಿ. ಯಶೋದಾ, ಅತಿಥಿಗಳು: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಮಹಾಂತೇಶ ದೇಗಾವಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ ಹೊಂಬೇಗೌಡ ನಗರ, ಸಂಜೆ 6.30

'12 ಕೋಟಿ ಡಿಜಿಟಲ್ ಲಾಕರ್ ಬಳಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿಜಿಟಲ್ ಮೂಲ ಸೌಕರ್ಯ ಅಭಿವೃದ್ಧಿಪಡಿಸಲು ಎರಡು ದಶಕಗಳ ಅವಧಿ ಯಲ್ಲಿ ಕೈಗೊಂಡ ಕ್ರಮಗಳಿಂದ ಈಗ 40 ರಷ್ಟು ಜನರ ಸುಗಮ ಜೀವನಕ್ಕೆ ಸಹಕಾರಿ ಯಾಗಿದೆ. 12 ಕೋಟಿ ಜನರು ಡಿಜಿಟಲ್ ಲಾಕರ್ ಗಳನ್ನು ಬಳಸುತ್ತಿದ್ದಾರೆ ಎಂದು 'ಇನ್ಫೋಸಿಸ್' ಸಹ ಸಂಸ್ಥಾಪಕ ನಂದನ್ ನಿಲೇಕಣಿ ಹೇಳಿದರು.

ನಂದನ್ ನಿಲೇಕಣಿ

ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ 6ನೇ ಟಿಐಎ ಶೃಂಗ ಸಭೆಯಲ್ಲಿ 'ಸುಸ್ಥಿರ ಅಭಿವೃದ್ಧಿ, ಸ್ಮಾರ್ಟ್‌ಸಿಟಿ, ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳು, ನಗರ ತಂತ್ರಜ್ಞಾನ, ನವೋದ್ಯಮ ಬೆಳವಣಿಗೆ' ಕುರಿತು ಅವರು ಮಾತನಾಡಿದರು.

ತಂತ್ರಜ್ಞಾನದ ಫಲವಾಗಿ ಇಂದು 50 ಲಕ್ಷ ದಾಖಲೆಗಳು ಡಿಜಿಟಲ್ ಲಾಕರ್ ಗಳಲ್ಲಿ ಲಭ್ಯವಿವೆ. ಯುಪಿಐ ಜತೆ ಹಣ ವರ್ಗಾವಣೆ ತಂತ್ರಜ್ಞಾನ, ದತ್ತಾಂಶ ಸಬಲೀಕರಣದಲ್ಲಿ ದತ್ತಾಂಶ ವಲಯ ಪ್ರಬಲವಾಗಿದೆ. ಉತ್ಪಾದನೆ, ಶಿಕ್ಷಣ ಮತ್ತಿತರ ವಲಯದ ಬೆಳವಣಿಗೆಗೂ ಪೂರಕವಾಗಿದೆ ಎಂದರು.

'ಜಿಪಿಎಸ್ ತಂತ್ರಜ್ಞಾನ ಮೊದಲು ಅಭಿವೃದ್ಧಿಪಡಿಸಿದ್ದು ಅಮೆರಿಕ ರಕ್ಷಣಾ ಸಚಿವಾಲಯ. ಜಿಪಿಎಸ್ ಈಗ ಎಪಿಐ ಜತೆ ಸಹಭಾಗಿತ್ವ ಹೊಂದಿದೆ. ಓಲಾ, ಉಬರ್ ಕ್ಯಾಬ್‌ಗಳ ಚಾಲಕರು ಒಳಗೊಂಡಂತೆ ಬಹುತೇಕ ಜನರ ಬದುಕಿಗೆ ಸಹಕಾರಿ ಯಾಗಿದೆ. ಪ್ರಸ್ತುತ 50 ಲಕ್ಷ ದಾಖಲೆ ಗಳು ಡಿಜಿಟಲ್ ಲಾಕರ್‌ಗಳಲ್ಲಿ ಭದ್ರವಾಗಿ ಇವೆ. ಆಸ್ತಿ ಅಡವಿಟ್ಟು ಸಾಲ ಪಡೆಯುವ ವ್ಯವಸ್ಥೆಯಿಂದ ಮಾಹಿತಿ ದಾಖಲೆ ನೀಡಿ ಸಾಲ ಪಡೆಯುವ ವ್ಯವಸ್ಥೆಗೆ ಬದಲಾಗಿದ್ದೇವೆ' ಎಂದು ವಿಶ್ಲೇಷಿಸಿದರು.

ಕರ್ನಾಟಕ ಡಿಜಿಟಲ್ ಆರ್ಥಿಕ ಅಭಿಯಾನದ ಅಧ್ಯಕ್ಷ ಬಿ.ವಿ.ನಾಯ್ಡು, ಬೆಂಗಳೂರು ಹೊರತುಪಡಿಸಿ ಇತರೆ ನಗರಗಳ ಆರ್ಥಿಕ ಬೆಳವಣಿಗೆಗೆ ಕ್ರಮ ಕೈಗೊಳ್ಳಬೇಕು ಎಂದರು.

ದಕ್ಷಿಣ ಭಾರತದ ಇಸ್ರೇಲ್ ರಾಯಭಾರಿ ಟಮ್ಮಿ ಬೆನ್-ಹೈಮ್, ಜರ್ಮನ್ ರಾಯಭಾರಿ ಅಚಿಮ್ ಬುರ್ಕಾರ್ಟ್, ಟಿಐಎ ಶೃಂಗಸಭೆಯ ಕ್ಯುರೇಟರ್ ಜೋಸ್ ಜಾಕೋಬ್, ಯುಎಸ್‌ಎ–ಭಾರತೀಯ ಆರ್ಥಿಕ ಅಭಿವೃದ್ಧಿ ನಿಗಮದ ಮುಖ್ಯಸ್ಥ ರಾಜು ಚಿಂತಲಾ ಉಪಸ್ಥಿತರಿದ್ದರು.

ಮೂರನೇ ಹಂತದ ಮೆಟ್ರೊ ಆರಂಭ

ಬೆಂಗಳೂರು ನಗರದ ಮೂರನೇ ಹಂತದ ಮೆಟ್ರೊ ಯೋಜನೆಗೆ ಡಿಪಿಆರ್ ಸಲ್ಲಿಸಲಾಗಿದ್ದು, 45 ಕಿ.ಮೀ. ಕಾಮಗಾರಿ ಆರಂಭಿಸಲಾಗುತ್ತಿದೆ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ಹೇಳಿದರು.

ಹೊರ ವರ್ತುಲ ರೈಲು ಯೋಜನೆ ಕೂಡ ಆರಂಭವಾಗುತ್ತಿದೆ. ಮೆಟ್ರೊ ರೈಲು ಬೆಂಗಳೂರು ನಗರದ ಜೀವನಾಡಿಯಾಗಿದೆ. ನಮ್ಮ ಮೆಟ್ರೊ ರೈಲು ಯೋಜನೆ ಪೂರ್ಣಗೊಂಡರೆ ಸಮೂಹ ಸಾರಿಗೆ ವ್ಯವಸ್ಥೆ ಸಶಕ್ತವಾಗಲಿದೆ. ಅನುಕೂಲವಾಗಲಿದೆ. 18 ನಗರಗಳು ಮೆಟ್ರೊ ಯೋಜನೆ ನೆರವಿಗೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿವೆ ಎಂದು ವಿವರ ನೀಡಿದರು.

ವನವಾಸಿ ಕಲ್ಯಾಣ: ರಾಷ್ಟ್ರೀಯ ಬೈಠಕ್ ನಾಳೆಯಿಂದ

ಬೆಂಗಳೂರು: ಅಖಿಲ ಭಾರತೀಯ ವನವಾಸಿ ಕಲ್ಯಾಣ ಆಶ್ರಮವು ಇದೇ 16ರಿಂದ 18ರವರೆಗೆ ಮಾಗಡಿ ರಸ್ತೆಯ ಚೆನ್ನೇನಹಳ್ಳಿಯ ಜನಸೇವಾ ವಿದ್ಯಾ ಕೇಂದ್ರದಲ್ಲಿ ರಾಷ್ಟ್ರೀಯ ಬೈಠಕ್ ಹಮ್ಮಿಕೊಂಡಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಶ್ರಮದ ಅಧ್ಯಕ್ಷ ರಾಮಚಂದ್ರ ಖರಾಡಿ, 'ಸಂಸ್ಥೆಯು ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ. ಮೂರು ದಿನಗಳ ಬೈಠಕ್‌ನಲ್ಲಿ ವಿವಿಧ ರಾಜ್ಯಗಳಿಂದ 900 ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ. ಬುಡಕಟ್ಟು ಸಮುದಾಯದ ಜನರ ಆರೋಗ್ಯ, ಶಿಕ್ಷಣ ಸೇರಿ ಅವರ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ಚರ್ಚಿಸಲಾಗುತ್ತದೆ. ಹೊಸ ಯೋಜನೆಗಳ ಬಗ್ಗೆಯೂ ಬೈಠಕ್‌ನಲ್ಲಿ ಸಮಾಲೋಚನೆ ನಡೆಸಲಾಗುತ್ತದೆ' ಎಂದು ಹೇಳಿದರು.

ವನವಾಸಿ ಕಲ್ಯಾಣ ಆಶ್ರಮದ ದಕ್ಷಿಣ ಮಧ್ಯ ಕ್ಷೇತ್ರೀಯ ಸಂಘಟನಾ ಕಾರ್ಯದರ್ಶಿ ಶ್ರೀಪಾದ ಹಾಗೂ ಅಖಿಲ ಭಾರತೀಯ ಸಹ ಸಂಘಟನಾ ಕಾರ್ಯದರ್ಶಿ ರಮೇಶ್ ಬಾಬು ಇದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗೆ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Wanted

RESIDENT MANAGER and F&B Manager required for a well-established, service-oriented boutique property in Chikmagalur. Candidates should have at least 7+ years of experience in a similar role in any of the 4* category hill station resorts.Will be responsible to run the property and outlet as a fully profitable entity. Interested candidates can send their applications to skrecruit2022@gmail.com

REAL ESTATE SELLING

Sites

Rajajinagar

COMMERCIAL SITE for Sale at Ramachandrapuram 1st main road, Kalappa Block, Area 3000 sq feet for 5 Crores with good title. Contact Manohar Pai: 9620777194.

BUSINESS

Business Offers

Finance

WANTED BUSINESS Partner Veg Hotel 10 Lakhs Investment Monthly Income 1 Lakhs Contact: 8892501007/ 9606701007

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

OPPORTUNITY FOR Retired Officials, Bankers, Professionals, Teachers, Homemakers, CAs. Work part time/ full time. Earn unlimited income. Please call: 9008403686/ 9945114828.

PUBLIC NOTICE

PUBLIC NOTICE

This is to inform the general public that my client has lost the original Amalamation Deed dated 16-12-2021 registered as document No. BNS-1-12691-2021-22 stored in CD No. BNSD1408 in the office of the Sub-Registrar, Banaswadi entered into between Mr. Sreenivasamurthy.K, Mrs. Bharathi S.Y,

My client had also lodged a complaint dated 14-09-2022 in this regard before the Police concerned vide Sl.no.103128, lost report no. 0321682/2022 Inspite of the best efforts same could not be traced.

Therefore it is requested that the general public who ever may find the said original sale deed or person in possession of the said original document to hand over the same to the undersigned within one week from the date of this publication.

P. Mahalinga Bhat & Srividya P.M
Advocates,
TF-2, 3rd Floor, Keerthi Kuteeram Apartment, #2386, Pipeline Road, 2nd Stage, Kumaraswamy Layout, Bangalroe-560078,
Mob:9341215791
Bangalore
Dated:15-09-2022

PERSONAL

Change of Name

CHANGE OF NAME

I, **V. Pradeep,** residing at No.302, Primrose Block, Esteem Gardenia Apartments, Sahakar Nagar, Bangalore- 560092 have changed my name to **PRADEEP VARADARAJAN** vide affidavit dated 14/09/2022, before notary Shivakumara.M.N. Bangalore. Henceforth I shall be called **PRADEEP VARADARAJAN** only

I, HARIOM KUMAR SAH, R/o Malmal South Ward 08 Malmal, Kaluahi, Madhubani, Bihar 847229, presently R/at Bangalore, have changed my name to HARI OM SAH, My D.O.B is wrongly recorded as 13.05.2003 instead of 13.05.2001, affidavit 14.09.2022 Notary S.I. Balaguru, Bangalore.

NOTICE OF NAME CHANGE

I, Machaia Muddappa Son of Muddappa, holder of Indian Passport No. Z2697592, issued at Dubai, on 19.04.2014, permanent resident of No.813, 10th Cross, 10th Main, Indiranagar II Stage, Bengaluru, Karnataka and presently working at FireLink General Maintenance LLC, P.O. Box 32469, Dubai, UAE, do hereby change my name from Machaia Muddappa, to Kallichanda Nachaiah Muddappa, with immediate effect.

I, NAVEEN KUMAR, S/o JC310706F Ex-SUB/HONEY/LT Kamathamsreenivasulu R/o #27/5, 15th main, 9th cross, Kurubarahalli, JCNagar, Bangalore-86 have changed my name to S. NAVEEN KUMAR, affidavit 30.08.2022 Notary C.K.Anupama, Bangalore.

I, LATHA NARAYANASWAMY resident of No. 12, OLD 113 MIG KHB 2nd Stage, Next to Punya. Hospital Basaveshvvara Nagar. Bengaluru 560097 have changed my name to LATHA RAGHAVENDRA UDUPA vide affidavit dated 12-09-2022 sworn before notary K.V. Mani Bangalore

I, K. JAYASUDHA, Spouse of JC310706F Ex-SUB/HONEY/LT Kamathamsreenivasulu R/o #27/5, 15th main, 9th cross, Kurubarahalli, JCNagar, Bangalore-86 have changed my name to JAYASUDHA, affidavit 30.08.2022 Notary C.K.Anupama, Bangalore.

Book Your Classifieds Ads Online Log in to dhclassifieds.com

DH DECCAN HERALD ಪ್ರಜಾವಾಣಿ

Contact :
Jerry Louis : 9731810277
Vishal GM : 9845114560
Ravichandra : 9901641752
Tanveer : 9886213331

EDUCATION CORNER

2nd PU Failed?

Don't be left behind!

A golden opportunity to study degree under Bangalore University this academic year and save one precious year of your life.

BBA B.Com BCA BA

Limited seats. For admissions call:

2ನೇ ಪಿಯುಸಿ ಅನುತ್ತೀರ್ಣವಾದ ವಿದ್ಯಾರ್ಥಿಗಳಿಗೆ ಒಂದು ಸುವರ್ಣ ಅವಕಾಶ. ಸಂಪರ್ಕಿಸಿ:

7846000222

CONNECT

GRAVITY EVENTS AND EXPERIENCES

Presents

EDITION 7

desikala

an exhibition of artisanal Indian fashion & decor

Venue: WHITE HOUSE, HSR LAYOUT, BENGALURU

Date: 9th TO 18th September 2022

Timings: 11AM to 8PM

Free Parking & Entry

FOR DETAILS CONTACT:
Khalandar - 84969 43614 | Umar - 76768 63625

14835651M HAV/MT Radheshyam Roy 2ATC Mother's name Records ARTHI ROY instead of ARATI ROY, Notary BM Chandrashekar.

I, PRAMOD KUMAR SAVARALA R/a #84, Bharath Nagar, M.S.Palya, Vidyaranyapura, Bangalore-560097 have changed my name to PRAMOD KUMAR affidavit dated 04.09.2022 notary V.Anjanappa, Bangalore.

I, RAJEEV Madagouda Wadeyar R/o Plot No:16, Balaji Nagar, Old Jewargi Road, Kalaburagi-585103(karnataka)state have changed my minor daughter's name from Mishti to Mishti Wadeyar for all purposes.

TS VANI, W/o JC671590L SUB/MT Kalisetti VVS Narayana R/a Agrahara, Yelahanka, Bangalore North, Karnataka, my name TS VANI to K SATYAVANI, Notary BM Chandrashekar.

CHANGE OF NAME

I, Thilakam Spouse of No. 1346713Y Ex-Sapper, Late. Gangan Narayanaswamy, Residing at old. No. 301, New No. 32, 2nd cross, Subhanna Playa, Bangalore North, Bangalore-33 have changed my name From **THILAKAM** to **THILAGAM N.** D.O.B Mentioned in the service record as 18/9/1956 Correct D.O.B in 01/01/1960 vide affidavit dated 14/9/2022, before notary Uday Kumar. K. Bangalore

I, GOPINATH. S, S/o, Selvam R/o.334, 14th Cross, Janakiraman Layout, Kamanahalli Main Road, Bengaluru-33 have changed my name as SHAIJITH ABHINAV. S Vide affidavit dated 1/04/2021 before Notary, B.S. Padma Prasad Bangalore

I, BHARATH, S/o JC310706F Ex-SUB/HONEY/LT Kamathamsreenivasulu R/o #27/5, 15th main, 9th cross, Kurubarahalli, JCNagar, Bangalore-86 have changed my name to S. BHARATH, affidavit 30.08.2022 Notary C.K.Anupama, Bangalore.

I, PARASHURAMAPPA RADDER, residing at Haver-581145, have changed my name as PARASHURAM RADDER, vide affidavit dated 14/9/2022 before Notary P.C.Ramaiah, Bangalore

JC671590L SUB/MT Kalisetti VVS Narayana 5004 ASC BN Daughter's name Records K BHAVYA SHREE instead of K BHAVYASHREE VARMA, Notary BM Chandrashekar.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ
ಬೆಂಗಳೂರು ನಗರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ(ರಿ)
NATIONAL URBAN HEALTH MISSION

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆರೋಗ್ಯಾಧಿಕಾರಿ(ಸಾ.ಆ) ರವರ ಕಛೇರಿ, ಆನೆಕ್ಸ್–3, ಕಟ್ಟಡ, 3ನೇ ಮಹಡಿ, ಬಿಬಿಎಂಪಿ ಕೇಂದ್ರ ಕಛೇರಿ, ಎನ್.ಆರ್. ಚೌಕ, ಬೆಂಗಳೂರು – 560 002

ಸಂಖ್ಯೆ : ಸಿ.ಪಿ.ಎಂ.ಓ./ಎನ್‌ಯು.ಹೆಚ್.ಎಂ./ಪಿ.ಆರ್./23/2022–23 ದಿನಾಂಕ:14.09.2022

ಪ್ರಕಟಣೆ

ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಯಡಿಯ ಎನ್.ಯು.ಹೆಚ್.ಎಂ, ಎನ್.ಟಿ.ಇ.ಪಿ, ಆರ್.ಸಿ.ಹೆಚ್ ಕಾರ್ಯಕ್ರಮದಡಿಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳಿಗೆ ದಿನಾಂಕ : 31.08.2021, 30.10.2021, 2.11.2021ರಂದು ಪತ್ರಿಕಾ ಪ್ರಕಟಣೆ ನೀಡಿ ಅರ್ಹ ಅಭ್ಯರ್ಥಿಗಳಿಗೆ ಮೆರಿಟ್ ಕಂ ರೋಸ್ಟರ್ ಆಧಾರದ ಮೇಲೆ ವಾಕ್–ಇನ್ ಪ್ರಕ್ರಿಯೆ ಕೈಗೊಳ್ಳಲಾಗಿರುತ್ತದೆ. ಸದರಿ ಪ್ರಕಟಣೆಯನ್ವಯ ಆಯ್ಕೆಯಾದ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್‌ನಲ್ಲಿ ಪ್ರಚುರಗೊಳಿಸಿದ್ದು **(https://bbmp.gov.in)** ಸದರಿ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿರುವ ಯಾವುದೇ ಹುದ್ದೆಗಳಿಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಬಂದು 07 ಸರ್ಕಾರಿ ಕೆಲಸದ ದಿನಗಳೊಳಗೆ ನಗರ ಯೋಜನಾ ನಿರ್ವಹಣಾಧಿಕಾರಿಗಳ ಕಛೇರಿ, #304, ಆನೆಕ್ಸ್–3 ಕಟ್ಟಡ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಎನ್.ಆರ್. ಚೌಕ, ಬೆಂಗಳೂರು – 560 002, ಇಲ್ಲಿ ಲಿಖಿತವಾಗಿ ಅಂಚೆ (ರಿಜಿಸ್ಟರ್ ಪೋಸ್ಟ್) ಅಥವಾ **cpmobbmp@gmail.com** ಇ–ಮೇಲ್ ವಿಳಾಸಕ್ಕೆ ಸಲ್ಲಿಸಲು ಕೋರಲಾಗಿದೆ.

ಮುಖ್ಯ ಆರೋಗ್ಯಾಧಿಕಾರಿಗಳು (ಸಾ.ಆ)

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನಾವು ಬಕ್ಸ್–ರಂಕಾ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ (ಕಂಪನಿಗಳ ಕಾಯ್ದೆ 1956ರ ಅಡಿಯಲ್ಲಿ ಸಂಯೋಜಿಸಲಾದ ಒಂದು ಕಂಪನಿ) ಇದರ ಕಛೇರಿ ವಿಳಾಸ: ರಂಕಾ ಚೇಂಬರ್ಸ್, 3ನೇ ಮಹಡಿ, ನಂ.31, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು–560055. **(ಮಾಲೀಕರು)** ಸ್ವತ್ತಿನ ವಿಳಾಸ: ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನದ ರಸ್ತೆ, ಬೆಂಗಳೂರು, ಸ್ವತ್ತಿನ ಮುನಿಸಿಪಲ್ ಸಂಖ್ಯೆ. 1107, (ಪಿ.ಐ.ಡಿ ಸಂಖ್ಯೆ. 47–5–1107) (ಹಳೇ ಮುನಿಸಿಪಲ್ ನಂ.114), ವಾರ್ಡ್ ನಂ. 119, (ಹಿಂದಿನ ಚಾಲ್ತಾ ನಂ. 63, ಸಿ.ಟಿ.ಎಸ್. ನಂ. 17, ಮನೆ ನಂ. 1107 ರಿಂದ 1123/1 ರವರೆಗೆ, ಎನ್.ಆರ್. ಚೌಕ ಅಲಸೂರುಪೇಟ್, ಬೆಂಗಳೂರು ನಗರ ಪಾಲಿಕೆಯ 42ನೇ ವಿಭಾಗ) ಒಟ್ಟು ವಿಸ್ತೀರ್ಣ 77,850 ಚದರ ಅಡಿಗಳು, ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರವಾಗಿ ತಿಳಿಸಲಾಗಿದೆ. ಇನ್ನು ಮುಂದೆ **'ಷೆಡ್ಯೂಲ್ ಸ್ವತ್ತು'** ಎಂದು ಉಲ್ಲೇಖಿಸಲಾಗಿರುವ ಸ್ವತ್ತಿನ ಶೀರ್ಷಿಕೆಯನ್ನು ಪರಿಶೀಲಿಸುತ್ತಿದ್ದೇವೆ.

ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂದಿಸಿದಂತೆ ಯಾವುದೇ ವ್ಯಕ್ತಿಗಳಿಗೆ, ಯಾವುದೇ ಹಕ್ಕು ಬಾಧ್ಯತೆಗಳು, ಕ್ಲೇಮು ಅಥವಾ ಹಿತಾಸಕ್ತಿ ಅಥವಾ ಅದರ ಯಾವುದೇ ಭಾಗದಲ್ಲಿ ಮಾರಾಟ, ಭೋಗ್ಯ ಅಧಿಕಾರ, ಅಡಮಾನ, ಪಿತ್ರಾರ್ಜಿತ, ಉಡುಗೊರೆ, ನಿರ್ವಹಣೆ, ಹಿಡುವಳಿ, ನಿಯೋಜನೆ, ದಾವೆ, ಒಪ್ಪಂದ, ಕರಾರು, ಇತ್ಯರ್ಥ ಅಥವಾ ಇನ್ನಾವುದೇ ತಂಟೆ ತಕರಾರುಗಳಿದ್ದಲ್ಲಿ ಈ ಪ್ರಕಟಣೆ ಪ್ರಕಟವಾದ **10 ದಿನಗಳ ಒಳಗಾಗಿ** ಸೂಕ್ತ ಪೂರಕ ದಾಖಲಾತಿಗಳೊಂದಿಗೆ ಲಿಖಿತ ರೂಪದಲ್ಲಿ ಕೆಳ ಸಹಿದಾರರಿಗೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸತಕ್ಕದ್ದು, 10 ದಿನಗಳ ಒಳಗಾಗಿ ಯಾರದೇ ತಂಟೆ ತಕರಾರುಗಳು ಬಾರದಿದ್ದಲ್ಲಿ ಸದರಿ ಸ್ವತ್ತಿಗೆ ಯಾವುದೇ ಋಣಭಾರವಿಲ್ಲವೆಂದು ಹಾಗೂ ಯಾರದೇ ಆಕ್ಷೇಪಣೆ/ಹಕ್ಕು ಬಾಧ್ಯತೆಗಳು ಅಥವಾ ಹಿತಾಸಕ್ತಿಗಳಿಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರು ಸ್ವತ್ತಿನ ಖರೀದಿಗೆ ಮುಂದುವರೆಯುವರು.

ಷೆಡ್ಯೂಲ್

ಬೆಂಗಳೂರು, ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನದ ರಸ್ತೆಯಲ್ಲಿರುವ ಮನೆ ನಂ. 1107 ರಿಂದ 1123/1 ರವರೆಗೆ, ಬೆಂಗಳೂರು ನಗರ ಪಾಲಿಕೆ 42ನೇ ವಿಭಾಗ, ಮುನಿಸಿಪಲ್ ಸಂಖ್ಯೆ. 1107, (ಹಳೇ ಮುನಿಸಿಪಾಲ್ ಸಂಖ್ಯೆ. 114) ಪಿ.ಐ.ಡಿ ಸಂಖ್ಯೆ. 47–5–1107, (ಚಾಲ್ತಾ ನಂ.63, ಸಿ.ಟಿ.ಎಸ್. ನಂ. 17, ಎನ್.ಆರ್. ಚೌಕ, ಅಲಸೂರುಪೇಟ್) ವಾರ್ಡ್ ನಂ. 119, **ವಿಸ್ತೀರ್ಣ 77,850 ಚದರ ಅಡಿಗಳ** ಸ್ವತ್ತಿಗೆ ಚಕ್ಕುಬಂದಿ:

ಪೂರ್ವಕ್ಕೆ : ಹಲಸೂರು ಗೇಟ್ ಪೋಲೀಸ್ ಸ್ಟೇಷನ್
ಪಶ್ಚಿಮಕ್ಕೆ : ಪೈ ವಿಹಾರ್ ಹೋಟೆಲ್
ಉತ್ತರಕ್ಕೆ : ಮೊಹಮೆಡನ್ ಗುಮ್ಮ / ಐಎಫ್‌ಸಿಐ
ದಕ್ಷಿಣಕ್ಕೆ : ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನ ರಸ್ತೆ

ಸಹಿ/–

ಮಾಲಿನಿ ರಾಜು
ಜೆಎಸ್‌ಎ, ಅಡ್ವೋಕೇಟ್ಸ್ ಅಂಡ್ ಸಾಲಿಸಿಟರ್ಸ್,
ಲೆವೆಲ್–3, ಪ್ರೆಸ್ಟೀಜ್ ಒಬೆಲಿಸ್ಕ್, ನಂ. 3, ಕಸ್ತೂರಬಾ ರಸ್ತೆ, ಬೆಂಗಳೂರು–560001.
ಫೋ: +91 80 43503600
ಸ್ಥಳ: ಬೆಂಗಳೂರು ದಿನಾಂಕ: 14.09.2022

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ
K.S.R.T.C Employees Co-Operative Housing Society Ltd.
ಕೆಂಗಲ್ ಹನುಮಂತಯ್ಯ ರಸ್ತೆ, ಶಾಂತಿನಗರ, ಬೆಂಗಳೂರು–560 027
ಉ/ಸಂ./ಕೆ.ಎಸ್.ಆರ್.ಟಿ.ಸಿ.ನೌ.ಗೃ.ಸ.ಸಂ/34/2022–23

ಸರ್ವಸದಸ್ಯರ ಸಭೆಯ ನೋಟೀಸ್

ಆತ್ಮೀಯ ಸದಸ್ಯರೇ,

ಕ.ರಾ.ರ.ಸಾ. ನಿಗಮಗಳ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ 2021–22 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಭೆಯನ್ನು ದಿನಾಂಕ: 23–09–2022 ನೇ ಶುಕ್ರವಾರ ಬೆಳಿಗ್ಗೆ 10:00 ಘಂಟೆಗೆ ಸಂಘದ ಅಧ್ಯಕ್ಷರಾದ **ಶ್ರೀ ಟಿ. ಹನುಮಂತಪ್ಪ** ನವರ ಅಧ್ಯಕ್ಷತೆಯಲ್ಲಿ ನೆಲಮಂಗಲದ ಸಾರಿಗೆ ನಗರ ಬಡಾವಣೆಯಲ್ಲಿ ನಡೆಸಲು ತೀರ್ಮಾನಿಸಲಾಗಿದ್ದು ಈ ಕುರಿತು ಸಭೆಯ ನೋಟಿಸ್ಸನ್ನು ಅಂಚೆ ಮೂಲಕ ದಿನಾಂಕ 07–09–2022 ರಂದು ಕಳುಹಿಸಲಾಗಿದೆ. ಹಾಗೂ ದಿನಾಂಕ 15–09–2022 ರಂದು ಪ್ರಜಾವಾಣಿ ದಿನ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ. ಈ ಸರ್ವ ಸದಸ್ಯರ ಸಭೆಯಲ್ಲಿ ಭಾಗವಹಿಸಲು ಇಚ್ಛಿಸುವ ಸಂಘದ ಸದಸ್ಯರು 07 ದಿನಗಳ ಮುಂಚಿತವಾಗಿ ತಮ್ಮ ಅಹವಾಲುಗಳನ್ನು ಖುದ್ದು ಸಂಘದ ಕಛೇರಿಗೆ ಬಂದು ಸಲ್ಲಿಸಬಹುದು. ಮಾನ್ಯ ಸದಸ್ಯರು ಇದನ್ನು ನೋಟಿಸ್ಸು ಎಂದು ಪರಿಗಣಿಸಿ ವಾರ್ಷಿಕ ಸಭೆಯಲ್ಲಿ ಭಾಗವಹಿಸಬೇಕೆಂದು ಆಡಳಿತ ಮಂಡಳಿ ಪರವಾಗಿ ಕೋರುತ್ತೇವೆ.

ಸ್ಥಳ: ಬೆಂಗಳೂರು | ಸಹಿ/– ಸಿ. ರಾಮಯ್ಯ | ಸಹಿ/– ರಫಾಯಲ್‌ರಾಜ್
ದಿನಾಂಕ: 14–09–2022 | ಉಪಾಧ್ಯಕ್ಷರು | ಗೌ. ಕಾರ್ಯದರ್ಶಿ

ಕರ್ನಾಟಕ ಸರ್ಕಾರ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಇ-ಕನ್ನಡ ಯೋಜನೆ, ಇ-ಆಡಳಿತ ಕೇಂದ್ರ)
ಕೊಠಡಿ ಸಂಖ್ಯೆ 133, 2ನೇ ದ್ವಾರ, ಬಹು ಮಹಡಿಗಳ ಕಟ್ಟಡ, ಬೆಂಗಳೂರು–01,
ದೂರವಾಣಿ 080–22032505 ಮಿಂಚಂಚೆ ವಿಳಾಸ pd.kannada@karnataka.gov.in

ಇ–ಕನ್ನಡ ಯೋಜನೆಯ ಯಂತ್ರಾನುವಾದ ತಂತ್ರಾಂಶಕ್ಕಾಗಿ ಅನುವಾದಕರ Empanelment (ಎಂಪ್ಯಾನಲ್‌ಮೆಂಟ್) ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ

ಕರ್ನಾಟಕ ಸರ್ಕಾರವು ಇ–ಕನ್ನಡ ಯೋಜನೆಯನ್ನು ಇ–ಆಡಳಿತ ಕೇಂದ್ರದಡಿಯಲ್ಲಿ ಪ್ರಾರಂಭಿಸಿದೆ. ಇ–ಕನ್ನಡ ಯೋಜನೆಯು ಕನ್ನಡ ಭಾಷೆಗೆ ಸಂಬಂಧಿಸಿದಂತೆ, ಭಾಷಾ ತಂತ್ರಜ್ಞಾನದ ಬಳಕೆಯಿಂದ ತಂತ್ರಾಂಶಾಧಾರಿತ ಸೇವೆಗಳಲ್ಲಿ, ಕನ್ನಡದ ಪರಿಣಾಮಕಾರಿ ಅನುಷ್ಠಾನದ ಧ್ಯೇಯದೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಇ–ಕನ್ನಡ ಯೋಜನೆಯು ಅಭಿವೃದ್ಧಿಪಡಿಸುತ್ತಿರುವ ಯಂತ್ರಾನುವಾದ ತಂತ್ರಾಂಶಕ್ಕಾಗಿ ನುರಿತ ಅನುವಾದಕರು / ಅನುವಾದ ಕಾರ್ಯ (ಇಂಗ್ಲೀಷ್–ಕನ್ನಡ / ಕನ್ನಡ– ಇಂಗ್ಲೀಷ್) ದಲ್ಲಿ ಅನುಭವ ಇರುವ ಸಂಪನ್ಮೂಲ ವ್ಯಕ್ತಿಗಳ ಎಂಪ್ಯಾನಲ್‌ಮೆಂಟ್‌ಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಎಂಪ್ಯಾನಲ್‌ಮೆಂಟ್‌ನಲ್ಲಿ ಆಸಕ್ತಿ ಇರುವವರು ಇ–ಕನ್ನಡ ಯೋಜನೆಯ ವೆಬ್‌ಸೈಟ್: **https://ekannada.karnataka.gov.in/** ನಿಂದ ಡೌನ್‌ಲೋಡ್ ಮಾಡಿದ ನಿಗದಿತ ಅರ್ಜಿಯನ್ನು ಭರ್ತಿ ಮಾಡಿ ದಿನಾಂಕ 29/09/2022ರ ಒಳಗಾಗಿ ಮಿಂಚಂಚೆ ವಿಳಾಸ **pd.kannada@karnataka.gov.in** ಗೆ ಸಲ್ಲಿಸುವುದು. ಹೆಚ್ಚಿನ ವಿವರಗಳು ಅಗತ್ಯವಿದ್ದಲ್ಲಿ ಇ–ಕನ್ನಡ ಯೋಜನೆಯ ವೆಬ್‌ಸೈಟ್ ಮೂಲಕ ಪಡೆಯಬಹುದಾಗಿದೆ.

ಸಹಿ/– ಯೋಜನಾ ನಿರ್ದೇಶಕರು, ಇ–ಕನ್ನಡ ಯೋಜನೆ

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123. ಇ–ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/34/2022–23 ದಿನಾಂಕ: 13–09–2022

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು "ವ್ಯವಸಾಯ" ವಲಯದಿಂದ "ವಸತಿ" ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸದೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ರವರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗುಂ)	ಅನುಮೋದಿತ ಮಹಾಯೋಜನೆಯ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
01	ಶ್ರೀ ಬಿ.ಜಿ. ಮಾಯಣಗೌಡ ಬಿನ್ ಗಂಗಬೈರಪ್ಪ	ನೆಲಮಂಗಲ	ಕಸಬಾ	ಬೈರನಹಳ್ಳಿ	76/2	02-03 ಪೈಕಿ 01-03	ವ್ಯವಸಾಯ	ವಸತಿ
02	ಶ್ರೀಮತಿ ಅನುರಾಧ ಶಂಕರ್ ಬಿನ್ ಲೇಟ್ ಆರ್ ರಾಮಪ್ಪ ಮತ್ತು ತಿಮ್ಮಮ್ಮ ಮತ್ತು ಶ್ರೀಮತಿ ಶಾರದ ಶಿವಶಂಕರ್ ಬಿನ್ ಲೇಟ್ ಆರ್.ರಾಮಪ್ಪ ಮತ್ತು ತಿಮ್ಮಮ್ಮ				76/4	00-37½ ಪೈಕಿ 00–20		
					ಒಟ್ಟು	01–23		

ಷರಾ:– ಪ್ರಶ್ನಿತ ಸರ್ವೆ ನಂಬರ್ ಜಮೀನಿನಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯನ್ನು ಪಡೆದು, ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಂತೆ ಸುಸಜ್ಜಿತವಾದ ವಸತಿ ಬಡಾವಣೆಯನ್ನು ನಿರ್ಮಿಸಿ, ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿ ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಪಡಿಸಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/2208/ಅಡ್ವರ್ಟೋ/2022–23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನೈಋತ್ಯ ರೈಲ್ವೆ

Azadi Ka Amrit Mahotsav

ಅಖಿಲ ಭಾರತ ಪಿಂಚಣಿ ಅದಾಲತ್ – 2022

ನೈಋತ್ಯ ರೈಲ್ವೆಯು, ನಿವೃತ್ತ ನೌಕರರ / ಮೃತಪಟ್ಟ ನೌಕರರ ಅವಲಂಬಿತರಿಗೆ ಸಂಬಂಧಿಸಿದಂತೆ ಪಿಂಚಣಿ, ಬಾಕಿ ಪಾವತಿಗಳು ಮತ್ತು ವೈದ್ಯಕೀಯ ಭತ್ಯೆಗಳ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ **15 ಡಿಸೆಂಬರ್ 2022, ಗುರುವಾರದಂದು** ಕೇಂದ್ರ ಕಛೇರಿಗಳು, ವಿಭಾಗಗಳು, ಕಾರ್ಯಾಗಾರಗಳು ಮತ್ತು ಬೆಂಗಳೂರು ನಿರ್ಮಾಣ ಕಛೇರಿಗಳಲ್ಲಿ ಏಕಕಾಲಕ್ಕೆ ಅಖಿಲ ಭಾರತ ಪಿಂಚಣಿ ಅದಾಲತ್–2022ನ್ನು ನಡೆಸುತ್ತದೆ.

ಅದಾಲತ್‌ಗಾಗಿ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : **02–11–2022.** ಮುಕ್ತಾಯದ ದಿನಾಂಕ ಅಂದರೆ 02–11–2022ರ ನಂತರ ಸ್ವೀಕರಿಸಲಾದ ಕುಂದುಕೊರತೆಗಳನ್ನು ಅಖಿಲ ಭಾರತ ಪಿಂಚಣಿ ಅದಾಲತ್ – 2022ರಲ್ಲಿ ಬಗೆಹರಿಸಲು ಸಾಧ್ಯವಿರುವುದಿಲ್ಲ ಎನ್ನುವುದನ್ನು ಗಮನಿಸಬೇಕು.

ಹೆಚ್ಚಿನ ವಿವರಗಳಿಗಾಗಿ www.swr.indianrailways.gov.in ಗೆ ಲಾಗ್‌ಆನ್ ಮಾಡಿ.

ಮುಖ್ಯ ಸಿಬ್ಬಂದಿ ಅಧಿಕಾರಿ / ಆಡಳಿತ, ಹುಬ್ಬಳ್ಳಿ

ಪಿಯುಬಿ/357/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23

S.W.Railways | SWRRLY | SWRRLY

ಸಾರ್ವಜನಿಕ ಸೂಚನೆ

ನಮ್ಮ ಸಂಸ್ಥೆ ಎಂ/ಎಸ್. ಸತ್ವ ರಿಯಲ್ ಎಸ್ಟೇಟ್ ಪ್ರೈವೇಟ್ ಲಿಮಿಟೆಡ್, ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಲು ಬಯಸುವುದೇನಂದರೆ, ರಾಜ್ಯ ಮಟ್ಟದ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರ, ಕರ್ನಾಟಕ (ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ರಚಿಸಲ್ಪಟ್ಟಿದೆ) ಖಾತಾ ಸಂಖ್ಯೆ. 643 / ಬೈರತಿ / ಸರ್ವೆ ಸಂಖ್ಯೆ. 143, (ಹಳೆಯ ಸರ್ವೆ ಸಂಖ್ಯೆ. 28 ಬ್ಲಾಕ್ III), ವಾರ್ಡ್ ಸಂಖ್ಯೆ. 54 – ಹೂಡಿ, ಬೈರತಿ ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲೂಕು, ಬೆಂಗಳೂರು ಇಲ್ಲಿ ಉದ್ದೇಶಿತ ವಸತಿ ಸಾಲು ಮನೆಗಳ ನಿರ್ಮಾಣಕ್ಕಾಗಿ ಪರಿಸರ ಅನುಮತಿ ನೀಡಿದೆ. ದಿನಾಂಕ 29.08.2022ರ ಕಡತ ಸಂಖ್ಯೆ SEIAA 96 CON 2022 ಮತ್ತು ಕ್ಲಿಯರೆನ್ಸ್ ಪತ್ರದ ಪ್ರತಿಯನ್ನು ಸಹ ಪರಿವೇಶ್ ಪೋರ್ಟಲ್– SEIAA ಕರ್ನಾಟಕ ವೆಬ್‌ಸೈಟ್ http://environmentclearance.nic.in ನಲ್ಲಿ ನೋಡಬಹುದು.

LOOKING FOR JOB OPPORTUNITY
Refer Classifieds on Wednesday

ಮೈಸೂರು, ಮಾಗಡಿ, ತುಮಕೂರು, ಕನಕಪುರ ರಸ್ತೆ ಜಲಾವೃತ; ಪೀಣ್ಯ ಕೈಗಾರಿಕೆ ಪ್ರದೇಶದಲ್ಲೂ ನೀರು

ಒತ್ತುವರಿ: ದಾಖಲೆಯಲ್ಲೇ 'ಕತ್ತರಿ'

ರಾಜರಾಜೇಶ್ವರಿನಗರ ವಲಯ

47	38	9
ಒತ್ತುವರಿ ಸ್ಥಳ	ತೆರವು	ಬಾಕಿ

11,630.87 ಚದರ ಮೀಟರ್

ಎಲ್ಲೆಲ್ಲಿ ? ಚನ್ನಸಂದ್ರ, ಹಲಗೆವಡೇರಹಳ್ಳಿ, ಹೆಮ್ಮಿಗೆಪುರ– ಹೊಸಹಳ್ಳಿ, ಗೊಲ್ಲರಪಾಳ್ಯ, ಲಿಂಗಧೀರನಹಳ್ಳಿ, ರಘುವಿನಹಳ್ಳಿ, ಪಟ್ಟಣಗೆರೆ– ಕಾನ್‌ಕಾರ್ಡ್ ಬಡಾವಣೆ, ನಾಗದೇವಹನಳ್ಳಿ, ಕೆಂಪೇಗೌಡನಗರ.

• ಆರ್. ಮಂಜುನಾಥ್

ಬೆಂಗಳೂರು: ಮೈಸೂರು ರಸ್ತೆ, ಮಾಗಡಿ ರಸ್ತೆ, ತುಮಕೂರು ರಸ್ತೆ, ಕನಕಪುರ ರಸ್ತೆಗಳ ಜಲಾವೃತಕ್ಕೆ ಕಾರಣವಾಗಿರುವ ರಾಜಕಾಲುವೆಗಳ ಒತ್ತುವರಿ ರಾಜರಾಜೇಶ್ವರಿ ನಗರ ವಲಯದಲ್ಲಿವೆ. ಪ್ರತಿಷ್ಠಿತ ಬಡಾವಣೆ, ಖ್ಯಾತನಾಮರೆಲ್ಲ ನೆಲೆಸಿರುವುದು ಈ ವಲಯದಲ್ಲೇ. ಪೀಣ್ಯ ಕೈಗಾರಿಕೆ ಪ್ರದೇಶದಲ್ಲಿ ಆಗಾಗ್ಗೆ ಮಳೆನೀರು ಆವರಿಸಲು ಕಾರಣವಾಗಿರುವುದೂ ಇಲ್ಲಿರುವ ರಾಜಕಾಲುವೆಗಳ ಒತ್ತುವರಿಯೇ. ಇಷ್ಟಾದರೂ ಬಿಬಿಎಂಪಿ ಅಧಿಕಾರಿಗಳ ಲೆಕ್ಕದಲ್ಲಿ ಈ ವಲಯದಲ್ಲಿ ಅತಿ ಕಡಿಮೆ ಒತ್ತುವರಿ ಇದೆ. ಆದರೆ, ನಕ್ಷೆ ಹೇಳುವುದೇ ಬೇರೆ.

ರಾಜರಾಜೇಶ್ವರಿನಗರ ವಲಯದಲ್ಲಿ ರಾಜರಾಜೇಶ್ವರಿನಗರ, ಯಶವಂತಪುರ ವಿಧಾನಸಭೆ ಕ್ಷೇತ್ರಗಳಿವೆ. ಈ ವಲಯದ ವ್ಯಾಪ್ತಿ ಕನಕಪುರ, ಮೈಸೂರು, ಮಾಗಡಿ, ತುಮಕೂರು ಕೊನೆಗೆ ಬಹುತೇಕ ಬಳ್ಳಾರಿ ರಸ್ತೆಯವರೆಗೂ ಇದೆ. ಇಷ್ಟೂ ರಸ್ತೆಗಳ ಸುತ್ತಮುತ್ತ ರಾಜಕಾಲುವೆ ಒತ್ತುವರಿಯಾಗಿ ನೀರು ಆವರಿಸಿಕೊಳ್ಳುತ್ತದೆ. ಆದರೆ, ಬಿಬಿಎಂಪಿ ಅಧಿಕಾರಿ ಈ ರಸ್ತೆಗಳಲ್ಲಿ ಸಮಸ್ಯೆಯಾದಾಗ ರಾಜಕಾಲುವೆಗಳ ಒತ್ತುವರಿ ಬಗ್ಗೆ ಮಾತನಾಡುವುದೇ ಇಲ್ಲ.

ರಾಜಕಾಲುವೆಯ ಅಭಿವೃದ್ಧಿಯಲ್ಲೂ ಒಂದು ಕಡೆ ಸಿಮೆಂಟ್ ಗೋಡೆ, ಮೇಲ್ಭಾಗದ ಫೆನ್ಸಿಂಗ್ ಇದ್ದರೆ, ಮತ್ತೊಂದೆಡೆ ಒತ್ತುವರಿಯಿಂದ ಕೂಡಿದ ಮಣ್ಣಿನ ಕಾಲುವೆಯೇ ಇದೆ. ಉದಾಹರಣೆಗೆ ಪದ್ಮಾವತಿ–ಮೀನಾಕ್ಷಿ ಕಲ್ಯಾಣ ಮಂಟಪದಿಂದ ಕೆಂಚೇನಹಳ್ಳಿ ಕೆರೆವರೆಗಿನ ರಾಜ ಕಾಲುವೆ. ಈ ವಲಯದಲ್ಲಿ ರಾಜ ಕಾಲುವೆಗಳ ಗಾತ್ರವನ್ನೂ ಅರ್ಧಕ್ಕಿಂತ ಕಡಿಮೆಗೆ ಇಳಿಸಲಾಗಿದೆ. ಪ್ರತಿಷ್ಠಿತರ ಒತ್ತುವರಿಗಳನ್ನು ಕೆರೆ ಸೇರಿ ರಾಜಕಾಲುವೆಯಲ್ಲಿ ತೆರವು ಮಾಡಿಲ್ಲ. ಒಂದೆರಡು ವರ್ಷಗಳ ಹಿಂದೆ ಸಾಕಷ್ಟು ಸುದ್ದಿ ಮಾಡಿದ್ದ ಈ ಭಾಗದ ಒತ್ತುವರಿ ತೆರವು, ಅದಾದ ನಂತರ ತಣ್ಣಗಾಗಿದೆ. ಮತ್ತಷ್ಟು ಒತ್ತುವರಿಯೂ ಆಗಿದೆ. ಆದರೆ, ಬಿಬಿಎಂಪಿ ದಾಖಲೆಯಲ್ಲಿ ಇದೆಲ್ಲ ಇಲ್ಲ.

ಮೈಸೂರು ರಸ್ತೆಯ ನಾಯಂಡಹಳ್ಳಿ ಕೆರೆ, ಆರ್.ಆರ್. ನಗರದ ಹಲಗೆವಡೇರ ಹಳ್ಳಿ ಕೆರೆ, ಅತ್ಯಂತ ಹೈಟೆಕ್ ಆಗಿ ಅಭಿವೃದ್ಧಿಯಾಗುತ್ತಿರುವ ಮಲ್ಲತ್ತಹಳ್ಳಿ ಕೆರೆ, ಜೆ.ಪಿ. ಪಾರ್ಕ್–ಮತ್ತಿಕೆರೆ, ದೊಡ್ಡ ಬಿದರಕಲ್ಲು, ಲಿಂಗಧೀರನಹಳ್ಳಿ, ನರಸಪ್ಪನಹಳ್ಳಿ, ದುಬಾಸಿಪಾಳ್ಯ, ಅಂದ್ರಹಳ್ಳಿ, ಉಲ್ಲಾಳು, ಕೆಂಗೇರಿ, ಕೋನ ಸಂದ್ರ ಕೆರೆಗಳ ಸುತ್ತಲಿನ ರಾಜಕಾಲುವೆಗಳು ಬಹುತೇಕ ಮಾಯವಾಗಿವೆ. ಇನ್ನು ಲಗ್ಗೆರೆಯಲ್ಲಿ ರಾಜಕಾಲುವೆಗಳ ಕುರುಹೂ ಕಾಣುವುದಿಲ್ಲ. ಮಳೆ ಬಂದಾಗ ನೀರು ರಸ್ತೆ, ಬಡಾವಣೆಗಳಲ್ಲೇ ಇರುತ್ತದೆ ಎಂಬುದು ಸಂಕಷ್ಟ ಅನುಭವಿಸಿದವರ ಮಾತು.

ಒತ್ತುವರಿ ಮುಚ್ಚಿಡುತ್ತಿದ್ದಾರೆ...

ದುಬಾಸಿಪಾಳ್ಯ ಕೆರೆ ಕೋಡಿ ಹರಿದು ಮೈಸೂರು ರಸ್ತೆಯ ಮೈಲಸಂದ್ರದ ಬಳಿ ವೃಷಭಾವತಿಗೆ ಸೇರುವ ರಾಜಕಾಲುವೆ ಸಂಪೂರ್ಣ ಒತ್ತುವರಿಯಾಗಿದೆ. ಹೀಗಾಗಿಯೇ ಮೆಟ್ರೊ ಪಿಲ್ಲರ್‌ಗೂ ಹಾನಿಯಾಗಿತ್ತು. ಮೈಸೂರು ರಸ್ತೆಯ ಮೈಲಸಂದ್ರ ಬಳಿ ಮಳೆ ಬಂದಾಗ ರಸ್ತೆ ಜಲಾವೃತ ಆಗುತ್ತಲೇ ಇರುತ್ತದೆ. ರಾಜಕಾಲುವೆಗಳು ಅತ್ಯಂತ ಹೆಚ್ಚು ಒತ್ತುವರಿಯಾಗಿದ್ದು, ಅಧಿಕಾರಿಗಳು ಎಲ್ಲವನ್ನೂ ಮುಚ್ಚಿಡುತ್ತಿದ್ದಾರೆ. ಇರುವ ಕಾಲುವೆಗಳು ಸಣ್ಣ ರಸ್ತೆಯ ಮೋರಿಗಳಂತಾಗಿವೆ.

ಟಿ.ಇ. ಶ್ರೀನಿವಾಸ್, ರಾಜರಾಜೇಶ್ವರಿನಗರ

ಯಾರ ಸ್ಪಂದನೆಯೂ ಇಲ್ಲ

ಜ್ಞಾನಭಾರತಿ ವಾರ್ಡ್‌ನಲ್ಲಿ ಐದಾರು ವರ್ಷಗಳಿಂದ ಅನೇಕ ಬಡಾವಣೆಗಳ ನೀರುಗಾಲುವೆ ಸ್ವಚ್ಛ ಮಾಡದೆ ತುಂಬಾ ಹೂಳು, ಕಸ ತುಂಬಿದೆ. ಅಧಿಕಾರಿಗಳು, ಜನಪ್ರತಿನಿಧಿಗಳು ಸಮಸ್ಯೆಗೆ ಸ್ಪಂದಿಸುತ್ತಿಲ್ಲ. ರಾಜಕಾಲುವೆ ಒತ್ತುವರಿಯಿಂದ ಮಳೆ ನೀರು ರಸ್ತೆಯಲ್ಲಿ ಹರಿಯುತ್ತಿದೆ. ಆರೋಗ್ಯ ಬಡಾವಣೆ, ಆರ್‌ಎಚ್‌ಸಿಎಸ್ ಬಡಾವಣೆ, ಎನ್.ಜಿ.ಎಫ್, ನಾಗರಬಾವಿ ಇನ್ನಿತರ ಪ್ರದೇಶಗಳ ಮನೆಗಳು ಮುಳುಗಿದ್ದು, ವಾಹನಗಳು ತೇಲಾಡಿದವು. ಶ್ರೀಗಂಧ ಕಾವಲು ಕೆರೆ, ಕಾಲುವೆ ಇಲ್ಲದಂತಾಗಿದ್ದು, ಶ್ರೀಗಂಧ ಕಾವಲು ರಸ್ತೆ ಮಳೆ ಬಂದಾಗ ಕೆರೆಯಂತಾಗುತ್ತದೆ.

ಶೋಭಾ ಭಟ್, ಸಂಸ್ಥಾಪನಾ ಕಾರ್ಯದರ್ಶಿ, ಉಸಿರು ಫೌಂಡೇಷನ್

ತೆರವು ಕಾರ್ಯಾಚರಣೆ ನಡೆದಿಲ್ಲ...

ರಾಜರಾಜೇಶ್ವರಿ ನಗರ ವಲಯದಲ್ಲಿ ರಾಜಕಾಲುವೆ ಒತ್ತುವರಿ ಹೆಚ್ಚಾಗಿ ಆಗಿದೆ. ಬೆಸ್ಟ್ ಕ್ಲಬ್ ಸೇರಿ ಕೆಲವು ಭಾಗಗಳಲ್ಲಿ ಕಾಲುವೆ ಸ್ಥಳಾಂತರಿಸುವ ಕೆಲಸವೂ ಅಕ್ರಮವಾಗಿ ನಡೆಯುತ್ತಿದೆ. ಭೀಮನಕಟ್ಟೆ ತುಂಬಿದ ನಂತರ ಮಳೆ ನೀರು ಹರಿಯಲು ಜಾಗವೇ ಇಲ್ಲ. ಹಲಗೆವಡೇರಹಳ್ಳಿ ಒಂದು ಕೆರೆ ಬಡಾವಣೆಯಾಗಿದೆ. ಇರುವ ಕೆರೆಯಲ್ಲೂ ಒತ್ತುವರಿಯಾಗಿದೆ. ಇಲ್ಲಿಗೆ ಬರುವ ಕಾಲುವೆ ಅಗಲ ಮೂರ್ನಾಲ್ಕು ಅಡಿಗೆ ಇಳಿದಿದೆ. ಎಸ್‌ಎಸ್ ಆಸ್ಪತ್ರೆ ಸೇರಿ ಹಲವು ಭಾಗಗಳಲ್ಲಿ ಕಾಲುವೆಗಳನ್ನು ಒತ್ತುವರಿ ಮಾಡಿಕೊಂಡಿರುವುದರಿಂದ ನೀರು ರಸ್ತೆಯಲ್ಲಿ ಹರಿಯುತ್ತಲೇ ಇರುತ್ತದೆ. ರಾಜಕಾಲುವೆ ಒತ್ತುವರಿ ಅಲ್ಲಲ್ಲಿ ಮಾತ್ರ ಇದೆ ಎಂದು ಬಿಬಿಎಂಪಿ ಅಧಿಕಾರಿಗಳು ಹೇಳುವುದು ಹಾಸ್ಯಾಸ್ಪದ.

ನಿವೇದಿತಾ, ಐಕೇರ್, ಆರ್‌.ಆರ್. ನಗರ

ಶಿವಮೊಗ್ಗ–ಯಶವಂತಪುರ–ಬಾಣಸವಾಡಿ ನಡುವೆ ಹೊಸ ರೈಲು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ನೈರುತ್ಯ ರೈಲ್ವೆಯು ಶಿವಮೊಗ್ಗ–ಯಶವಂತಪುರ–ಬಾಣಸವಾಡಿ ನಡುವೆ ಸೆ. 12ರಿಂದ ನೂತನ ರೈಲು (ಸಂಖ್ಯೆ: 06513/06514) ಸಂಚಾರ ಆರಂಭಿಸಿದೆ.

ಶಿವಮೊಗ್ಗ ನಗರವನ್ನು ಮಧ್ಯಾಹ್ನ 1.05ಕ್ಕೆ ಬಿಟ್ಟು ಸಂಜೆ 5.30ಕ್ಕೆ ಈ ರೈಲು ತುಮಕೂರು ತಲುಪಲಿದೆ. 5.40ಕ್ಕೆ ತುಮಕೂರು ಬಿಟ್ಟು ಸಂಜೆ 6.50ಕ್ಕೆ ಯಶವಂತಪುರ ತಲುಪಿ, ಸಂಜೆ 7.40ಕ್ಕೆ ಬಾಣಸವಾಡಿ ತಲುಪುತ್ತದೆ. ಅದೇ ರೀತಿ ನಸುಕಿನ 5.50ಕ್ಕೆ ಬಾಣಸವಾಡಿ ಬಿಟ್ಟು, ಬೆಳಿಗ್ಗೆ 6.40ಕ್ಕೆ ಯಶವಂತಪುರ, 7.55ಕ್ಕೆ ತುಮಕೂರು ತಲುಪಲಿದೆ. ಬೆಳಿಗ್ಗೆ 8.05ಕ್ಕೆ ತುಮಕೂರು ಬಿಟ್ಟು ಮಧ್ಯಾಹ್ನ 12.30ಕ್ಕೆ ಶಿವಮೊಗ್ಗಕ್ಕೆ ಬರಲಿದೆ.

'ಇತ್ತೀಚೆಗೆ ನೈರುತ್ಯ ರೈಲ್ವೆ ಜನರಲ್ ಮ್ಯಾನೇಜರ್ ಶಿವಮೊಗ್ಗ ಜಿಲ್ಲೆಗೆ ಬಂದಾಗ ಶಿವಮೊಗ್ಗದಿಂದ ಬೆಂಗಳೂರಿಗೆ ಮಧ್ಯಾಹ್ನದ ಸಮಯದಲ್ಲಿ ರೈಲು ಸೌಲಭ್ಯ ಕಲ್ಪಿಸಿಕೊಡಲು ಮನವಿ ಮಾಡಲಾಗಿತ್ತು. ಅದಕ್ಕೆ ಸ್ಪಂದಿಸಿರುವ ಜನರಲ್ ಮ್ಯಾನೇಜರ್ ಈ ವಿಶೇಷ ರೈಲನ್ನು ಆರಂಭಿಸಿದ್ದಾರೆ' ಎಂದು ಸಂಸದ ಬಿ.ವೈ. ರಾಘವೇಂದ್ರ ತಿಳಿಸಿದ್ದಾರೆ.

ಪ್ರಜಾವಾಣಿ ಮಳೆಯ ಸವಾಲು ನಿಮ್ಮದೇನು ಜವಾಬು?

ಮಹದೇವಪುರ ವ್ಯಾಪ್ತಿಯ ಕೆಲವು ಪ್ರದೇಶಗಳು ಜೋರು ಮಳೆಗೆ ನಲುಗಿದ್ದೇ ತಡ, ಐಟಿ ಕ್ಷೇತ್ರದಲ್ಲಿ ಕೆಲಸ ಮಾಡುವವರು ವ್ಯವಸ್ಥೆಯನ್ನು ಕಟುವಾಗಿ ದೂರಿದರು. ವ್ಯವಸ್ಥೆ ಹೀಗೆಯೇ ಇದ್ದರೆ ಪರ್ಯಾಯ ಮಾರ್ಗಗಳನ್ನು ಹುಡುಕಿ ಬೇರೆಡೆಗೆ ಹೊರಡಬೇಕಾದೀತು ಎಂದು ಉದ್ಯಮಿಗಳು ಎಚ್ಚರಿಸಿದ್ದಾರೆ. ಇದರ ಬೆನ್ನಲ್ಲೇ ಅಂಥವರಿಗೇ ಸವಾಲೊಡ್ಡುವಂಥ #Leavebengaluru ಎಂಬ ಟ್ವಿಟರ್ ಅಭಿಯಾನ ಶುರುವಾಗಿದೆ. ನಿಮ್ಮ ದೃಷ್ಟಿಯಲ್ಲಿ ಇಂತಹ ಸಮಸ್ಯೆಗೆ ಕ್ರಿಯಾತ್ಮಕ ಪರಿಹಾರ ಏನು? ನೀರು ನಿಲ್ಲುವ ಉಸಾಬರಿಯಿಂದ ಯಶಸ್ವಿಯಾಗಿ ಹೊರಬಂದ ಅನುಭವ ನಿಮ್ಮದೂ ಆಗಿದ್ದರೆ ಬರೆದು ಕಳುಹಿಸಿ. ಒತ್ತುವರಿ ತೆರವಿಗೆ ಪರಿಹಾರವನ್ನೂ ಸೂಚಿಸಬಹುದು. ಆಯ್ದ ಬರಹಗಳು ಪತ್ರಿಕೆಯಲ್ಲಿ ಪ್ರಕಟಗೊಳ್ಳಲಿವೆ. ಬರಹ 60 ಪದಗಳಿಗೆ ಸೀಮಿತವಾಗಿರಲಿ. ನಿಮ್ಮ ಪೂರ್ಣ ವಿಳಾಸ, ಫೋಟೊ ಕೂಡ ಕಳುಹಿಸಿ.

96060 38256

'ಅಧಿಕಾರಿಗಳಿಗೂ ಶಿಕ್ಷೆಯಾಗಲಿ'



ಮಳೆ ಬಂದು ಕೆರೆ ಕೋಡಿ ಒಡೆದು ಮನೆಗಳೆಲ್ಲ ಮುಳುಗಿದ ನಂತರ ಒತ್ತುವರಿ ಎಲ್ಲೆಲ್ಲಿ ಅಂತ ಹುಡುಕಿ ಬುಲ್ಡೋಜರ್ ಮೂಲಕ ತೆರವುಗೊಳಿಸಲಾಗುತ್ತದೆ. ಸ್ಥಳೀಯ ಆಡಳಿತ ಲಂಚ ಪಡೆದು ಅರ್ಧಕ್ಕೆ ಕೆಲಸ ಸ್ಥಗಿತಗೊಳಿಸುತ್ತದೆ. ಬಡವರ ಮನೆಗಳನ್ನು ಮಾತ್ರ ತೆರವುಗೊಳಿಸಿ ನಿರ್ಗತಿಕರನ್ನಾಗಿ ಮಾಡಿ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಮಾಧ್ಯಮಗಳ ಎದುರು ಹೇಳಿಕೆ ನೀಡುತ್ತಾರೆ. ಒತ್ತುವರಿ ಮಾಡಿದ ಶ್ರೀಮಂತರು, ರಾಜಕೀಯ ಮುಖಂಡರ ಮನೆ, ಕಟ್ಟಡ ಮುಟ್ಟಲು ಆಗಲ್ಲ. ಲಂಚ ಪಡೆದು ಯೋಜನೆ ರೂಪಿಸಿ ಕಟ್ಟಡ ನಿರ್ಮಿಸಲು ಅನುಮತಿ ನೀಡಿದ ಅಧಿಕಾರಿಗಳಿಗೂ ಶಿಕ್ಷೆ ಆಗಲಿ.

ದೀಪಕ್ ಶಿರಾಲಿ, ತ್ಯಾಗರಾಜ ನಗರ

ಕೆಂಪೇಗೌಡ ಬಡಾವಣೆಯಲ್ಲಿ ಅವೈಜ್ಞಾನಿಕ ಕಾಲುವೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೆಂಪೇಗೌಡ ಬಡಾವಣೆಯ ಕಾಮಗಾರಿ ಪ್ರಗತಿಯಲ್ಲಿದ್ದು, ಮಳೆ ಬಂದರೆ ಕೆಲವು ಭಾಗಗಳು ನೀರಿನಲ್ಲಿ ಮುಳುಗಿಹೋಗುತ್ತವೆ. ಇದಕ್ಕೆ ಕಾರಣ ರಾಜಕಾಲುವೆಗಳನ್ನು ಅವೈಜ್ಞಾನಿಕವಾಗಿ ನಿರ್ಮಾಣ ಮಾಡಿರುವುದು. ಆದ್ದರಿಂದ ಪ್ರಾಧಿಕಾರ ವೈಜ್ಞಾನಿಕವಾಗಿ ಬಡಾವಣೆಗಳನ್ನು ನಿರ್ಮಾಣ ಮಾಡಲು ಆದ್ಯತೆ ನೀಡಬೇಕು.

ಸೂರ್ಯಕಿರಣ್ ಎ.ಎಸ್., ವಕ್ತಾರ, ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ-ವೇದಿಕೆ

ಇತ್ತೀಚೆಗೆ ಸುರಿದ ಮಳೆಗೆ ಮುಳುಗಿದ ಕೆಂಪೇಗೌಡ ಬಡಾವಣೆ

ಹೊಯ್ಸಳ ಸಾಹಿತ್ಯ ಸಮ್ಮೇಳನ ಅಕ್ಟೋಬರ್ 22ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್ಲ ಸಂಪ್ರದಾಯ, ಸಾಹಿತ್ಯ ಪ್ರಕಾರಗಳಲ್ಲಿ ಸಮರ್ಥವಾಗಿ ಕೆಲಸ ಮಾಡುತ್ತಿರುವ ಲೇಖಕರು, ಬರಹಗಾರರನ್ನು ಒಂದೇ ವೇದಿಕೆಗೆ ತರಲು ಅಕ್ಟೋಬರ್ 22 ಮತ್ತು 23 ರಂದು ಹಾಸನದ ಹಾಸನಾಂಬ ಕಲಾ-ಕ್ಷೇತ್ರದಲ್ಲಿ ರಾಜ್ಯಮಟ್ಟದ ಹೊಯ್ಸಳ ಸಾಹಿತ್ಯೋತ್ಸವನ್ನು ಹಮ್ಮಿಕೊಳ್ಳಲಾಗಿದೆ' ಎಂದು ಹಿರಿಯ ಸಾಹಿತಿ, ಸಂಘಟನಾ ಸಮಿತಿಯ ಅಧ್ಯಕ್ಷ ಎಚ್. ಎಸ್. ವೆಂಕಟೇಶಮೂರ್ತಿ ತಿಳಿಸಿದರು.

'ಸಾಹಿತಿಗಳು ಯಾವುದೇ ಪ್ರಕಾರದಲ್ಲಿ ಬರೆದರೂ ಸಾಹಿತಿಗಳ ಮಧ್ಯೆ ಪರಸ್ಪರ ಒಡನಾಟ ಇರಬೇಕು. ನವ್ಯ, ನವ್ಯೋತ್ತರ, ಬಂಡಾಯ, ದಲಿತ ಸಾಹಿತ್ಯ ಮುಂತಾದ ವಿಭಜನೆ-ಗಳಿಲ್ಲದೆ ಸಾಹಿತಿಗಳೆಲ್ಲರನ್ನು ಒಂದೇ ವೇದಿಕೆಗೆ ತರುವ ಪ್ರಯತ್ನವಾಗಿದೆ' ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಕಾರ್ಯಕ್ರಮದ ಸಂಯೋಜಕ ಬಿ. ಆರ್. ಲಕ್ಷ್ಮಣರಾವ್ ಮಾತನಾಡಿ, 'ಹೊಸ ಮತ್ತು ಹಳೆಯ ತಲೆಮಾರಿನ ಬರಹಗಾರರು ಈ ಸಾಹಿತ್ಯೋತ್ಸವ-ದಲ್ಲಿ ಒಂದಡೆ ಸೇರಲಿದ್ದು, ಸಾಹಿತ್ಯದ ಗಂಭೀರ ಚರ್ಚೆಗಳು ನಡೆಯಲಿವೆ. ಸಾಹಿತ್ಯದ ಯಾವುದೇ ಚಳವಳಿಯಲ್ಲಿ ಇಲ್ಲದಿರುವ ಕಾಲದಲ್ಲಿ ಹೊಸ ತಲೆಮಾರಿನ ಬರಹಗಾರರಿಗೆ ಹಳೆ ತಲೆಮಾರಿನ ಲೇಖಕರು ಹೊಸ ಮಾರ್ಗ ತೋರಿಸಬಹುದು ಎಂಬ ನಿರೀಕ್ಷೆ ಇದೆ' ಎಂದರು.

ಸಾಹಿತಿ ಎಸ್. ಎಲ್ ಭೈರಪ್ಪ ಉದ್ಘಾಟಿಸಲಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಚಂದ್ರಶೇಖರ ಕಂಬಾರ ಅಧ್ಯಕ್ಷತೆ ವಹಿಸಲಿದ್ದಾರೆ. ಕಾದಂಬರಿ, ವಿಮರ್ಶೆ, ಕವಿಗೋಷ್ಠಿ, ನೆನಪಿನ ಚಿತ್ರಶಾಲೆ, ಸಾಹಿತ್ಯದ ಪೂರ್ವಾಪರ ಮುಂತಾದವುಗಳ ಬಗ್ಗೆ ಯಾವುದೇ ಇಸಂಗೆ ಒಳಪಡದೆ ಮುಕ್ತ ಚರ್ಚೆ ನಡೆಯಲಿದೆ' ಎಂದು ಅವರು ವಿವರಿಸಿದರು.

ಸಾಹಿತ್ಯೋತ್ಸವದಲ್ಲಿ 100 ಜನ ಆಹ್ವಾನಿತ ಬರಹಗಾರರು, 400 ಜನ ನೋಂದಾಯಿತ ಪ್ರತಿನಿಧಿಗಳಿಗೆ ಒಟ್ಟು 500ಜನಕ್ಕೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶವಿದೆ. ನೋಂದಣಿ ಶುಲ್ಕ ₹250 ಇದ್ದು, ಊಟ ಮತ್ತು ವಸತಿ ವ್ಯವಸ್ಥೆಯಿದೆ.

ಭಾಗವಹಿಸಲು ಆಸಕ್ತರು ಸಾಹಿತ್ಯೋತ್ಸವ ಸಮಿತಿಯ ಕಾರ್ಯದರ್ಶಿ ಡಾ. ಎಚ್. ಎಲ್. ಮಲ್ಲೇಶಗೌಡ 9448793177, ಹಾಸನ ಕಸಾಪದ ಜಿಲ್ಲಾ ಗೌರವ ಕಾರ್ಯದರ್ಶಿ ಬೊಮ್ಮೇ ಗೌಡ 9108847480 ಅನ್ನು ಸಂಪರ್ಕಿಸಬಹುದು.

ಸಂಕ್ಷಿಪ್ತ ಸುದ್ದಿ

ಚಿತ್ರಕಲಾ ಸ್ಪರ್ಧೆ

ಬೆಂಗಳೂರು: ಕಲಾದರ್ಪಣ ಆರ್ಟ್ ರಿಫ್ಲೆಕ್ಟ್ಸ್ ಸಂಸ್ಥೆಯು ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಿದೆ.

3ರಿಂದ 10ನೇ ತರಗತಿವರೆಗಿನ ಎಲ್ಲ ಮಕ್ಕಳು ಭಾಗವಹಿಸಬಹುದು. ಆಸಕ್ತ ಮಕ್ಕಳು ಚಿತ್ರ ಬರೆಯುವ 3 ನಿಮಿಷಗಳ ವಿಡಿಯೊ ಕಳಿಸಬೇಕು ಎಂದು ಸಂಸ್ಥೆಯ ಹೇಮಾ ವಿನಾಯಕ್ ಪಾಟೀಲ್ ತಿಳಿಸಿದ್ದಾರೆ.

ಐವರು ವಿಜೇತರಿಗೆ ಬಹುಮಾನ ನೀಡಲಾಗುವುದು. ಅಂತಿಮ ಸುತ್ತು ಬೆಂಗಳೂರಿನಲ್ಲಿ ನಡೆಯಲಿದೆ ಎಂದು ತಿಳಿಸಿದ್ದಾರೆ.

ಹೆಸರು ನೋಂದಾಯಿಸಲು ಸೆ.15 ಕೊನೆಯ ದಿನವಾಗಿದೆ. ಸೆ.25ರ ಒಳಗೆ ವಿಡಿಯೊ ಕಳಿಸಬೇಕು.

ಮಾಹಿತಿಗೆ: 93806 71947.

ವಧು-ವರರ ಸಮಾವೇಶ

ಬೆಂಗಳೂರು: ಚಿತ್ರದುರ್ಗದ ಬಸವೇಶ್ವರ ವಧು-ವರರ ಮಾಹಿತಿ ಕೇಂದ್ರದ ವತಿಯಿಂದ ಇದೇ 18ರಂದು (ಭಾನುವಾರ) ಬೆಳಿಗ್ಗೆ 11 ಗಂಟೆಗೆ ವಧು-ವರರ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಗಾಂಧಿನಗರದ ಕಾನಿಷ್ಕ ಹೋಟೆಲ್ ರಸ್ತೆಯ ಮಹಾರಾಷ್ಟ್ರ ಮಂಡಳದಲ್ಲಿ ಸಮಾವೇಶ ನಡೆಯಲಿದೆ. ಸಾಫ್ಟ್‌ವೇರ್ ಎಂಜಿನಿಯರ್, ವೈದ್ಯರು, ಕೈಗಾರಿಕಾ ಉದ್ಯಮಿಗಳು, ಎಂ.ಟೆಕ್, ಎಂ.ಬಿ.ಎ., ಎಂ.ಸಿ.ಎ, ಎಂ.ಎಸ್ಸಿ, ಎಂ.ಎ ಪದವೀಧರರು ಭಾಗವಹಿಸಲಿದ್ದಾರೆ. ಮರು ವಿವಾಹ, ಅಂತರ್ಜಾತಿ ವಿವಾಹವಾಗಲು ಇಚ್ಛಿಸುವವರೂ ಈ ಸಮಾವೇಶದಲ್ಲಿ ಭಾಗವಹಿಸಲು ಕೋರಲಾಗಿದೆ.

ಮಾಹಿತಿಗೆ: 99860-58625

ಭೂಕಬಳಿಕೆ ನಿಷೇಧ ಕಾಯ್ದೆಗೆ ತಿದ್ದುಪಡಿ

ಬೆಂಗಳೂರು: ಕರ್ನಾಟಕ ಭೂಕಬಳಿಕೆ ನಿಷೇಧ (ತಿದ್ದುಪಡಿ) ಮಸೂದೆ-2022 ಅನ್ನು ವಿಧಾನಸಭೆಯಲ್ಲಿ ಬುಧವಾರ ಮಂಡಿಸಲಾಯಿತು.

ಬಿಬಿಎಂಪಿ ಮತ್ತು ನಗರಪಾಲಿಕೆ ಪರಿಮಿತಿ ಒಳಗಿನ ಸರ್ಕಾರ, ವಕ್ಫ್ ಅಥವಾ ಹಿಂದು ಧಾರ್ಮಿಕ ಸಂಸ್ಥೆಗಳ ಮತ್ತು ಧರ್ಮಾದಾಯ ದತ್ತಿಗಳ, ಸ್ಥಳೀಯ ಪ್ರಾಧಿಕಾರಗಳ, ಸರ್ಕಾರದ ಒಡೆತನದ, ನಿಯಂತ್ರಣ, ವ್ಯವಸ್ಥಾಪನೆಗೆ ಒಳಪಟ್ಟ ಭೂಮಿಯ ವಿವಾದಗಳನ್ನು ತ್ವರಿತಗತಿಯಲ್ಲಿ ಕೊನೆಗೊಳಿಸಲು ಈ ಮಸೂದೆ ಮಂಡಿಸಲಾಗಿದೆ. ಕಂದಾಯ ಸಚಿವ ಆರ್.ಅಶೋಕ ಅವರ ಪರವಾಗಿ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಮಂಡಿಸಿದರು. ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರಿ ಭೂಮಿ ಅತಿಕ್ರಮಿಸಿದ ರೈತರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ತಪ್ಪಿಸಲು ಕರ್ನಾಟಕ ಭೂಕಬಳಿಕೆ ಅಧಿನಿಯಮಕ್ಕೆ ತಿದ್ದುಪಡಿ ಅಗತ್ಯ ಎಂದು ಪ್ರತಿಪಾದಿಸಲಾಗಿದೆ.

ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ

ಗಂಗಾ ಕಲ್ಯಾಣ: ಅಕ್ರಮಗಳ ತನಿಖೆ

ಪ್ರಜಾವಾಣಿ ವಾರ್ತೆ

ವಿಧಾನಸಭೆಯಲ್ಲಿ ಬಸವರಾಜ ಬೊಮ್ಮಾಯಿ ಮಾತನಾಡಿದರು. ಸಚಿವ ಗೋವಿಂದ ಕಾರಜೋಳ ಇದ್ದಾರೆ

ಬೆಂಗಳೂರು: ಗಂಗಾ ಕಲ್ಯಾಣ ಯೋಜನೆಯಲ್ಲಿ 2018 ರಿಂದ ಈಚೆಗೆ ನಡೆದ ಎಲ್ಲ ಅಕ್ರಮಗಳ ಬಗ್ಗೆಯೂ ತನಿಖೆ ನಡೆಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಯತೀಂದ್ರ ಸಿದ್ದರಾಮಯ್ಯ, ಪ್ರಿಯಾಂಕ್ ಖರ್ಗೆ, ಪ್ರಸಾದ್ ಅಬ್ಬಯ್ಯ, ಭೀಮಾ ನಾಯಕ್ ಮತ್ತು ಇತರರು 'ಗಂಗಾ ಕಲ್ಯಾಣ ಯೋಜನೆಯಲ್ಲಿ ಅಕ್ರಮ ನಡೆದಿದೆ. ತನಿಖೆ ನಡೆಸಬೇಕು' ಎಂದು ಆಗ್ರಹಿಸಿ, ಸಭಾಧ್ಯಕ್ಷರ ಪೀಠದ ಮುಂದೆ ಪ್ರತಿಭಟನೆಗೆ ಧಾವಿಸಿದರು.

'ಗಂಗಾ ಕಲ್ಯಾಣ ಯೋಜನೆಯಲ್ಲಿ ₹430 ಕೋಟಿ ಮೊತ್ತದಷ್ಟು ಅವ್ಯವಹಾರ ನಡೆದಿದೆ. ಆದರೆ, ಸರ್ಕಾರ ಸಮರ್ಪಕವಾಗಿ ಉತ್ತರ ನೀಡಿಲ್ಲ. ಅಕ್ರಮಗಳ ಬಗ್ಗೆ ಚರ್ಚೆ ಎತ್ತುತ್ತಿಲ್ಲ' ಎಂದು ಯತೀಂದ್ರ ಮತ್ತು ಪ್ರಿಯಾಂಕ್ ಖರ್ಗೆ ತರಾಟೆಗೆ ತೆಗೆದುಕೊಂಡರು.

'2018 ರಲ್ಲಿ ಅನುಮೋದನೆ ನೀಡಿದ ಕೊಳವೆ ಬಾವಿಗಳನ್ನೂ ತೋಡಿಸುವುದರ ಜತೆಗೆ ಹೊಸ ಬಾವಿಗಳನ್ನು ತೋಡಿಸಲಾಗುತ್ತಿದೆ. ಎಲ್ಲ ಪ್ರಕ್ರಿಯೆಗಳನ್ನೂ ಪಾರದರ್ಶಕವಾಗಿ ಮಾಡಲಾಗುತ್ತಿದ್ದೇವೆ. ಹಿಂದೆ ಕೆಲವು ಬೋರ್‌ವೆಲ್ ಕಂಪನಿಗಳಿಗೆ ಅನುಕೂಲವಾಗಲು ಕ್ರಮಗಳನ್ನು ಕೈಗೊಂಡಿದ್ದರು. ನಾವು ಒಟ್ಟಾರೆ ವ್ಯವಸ್ಥೆಯನ್ನು ಸರಿಪಡಿಸುವ ಕಾಯಕಕ್ಕೆ ಮುಂದಾಗಿದ್ದೇವೆ. ರಾಜ್ಯದ ವಿವಿಧ ಭೌಗೋಳಿಕ ಸ್ಥಿತಿಗೆ ಅನುಗುಣವಾಗಿ ದರ ನಿಗದಿಯಲ್ಲಿ ವ್ಯತ್ಯಾಸ ಮಾಡಲಾಗಿದೆ. ಆರೋಪಗಳ ಕುರಿತು ಶಾಸಕರ ಸಭೆ ನಡೆಸುತ್ತೇನೆ' ಎಂದು ಬೊಮ್ಮಾಯಿ ತಿಳಿಸಿದರು.

ಇದಕ್ಕೂ ಮುನ್ನ ಉತ್ತರ ನೀಡಿದ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರು, ಹಿಂದೆ ಕೊಳವೆ ಬಾವಿ ಕೊರೆಸುವವರು ಒಬ್ಬರು, ಪಂಪ್ ಅಳವಡಿಸುವವರು ಮತ್ತು ವಿದ್ಯುತ್ ಸಂಪರ್ಕ ನೀಡುವವರು ಬೇರೆಯವರು. ಮೂರು ಕೆಲಸಗಳು ಪ್ರತ್ಯೇಕವಾಗಿ ನಡೆಯುತ್ತಿದ್ದವು. ಈಗ ಕೊಳವೆ ಬಾವಿ ತೋಡಿಸುವವರೇ ಪಂಪ್ ಹಾಕಿಸಿ ವಿದ್ಯುತ್ ಸಂಪರ್ಕವನ್ನೂ ನೀಡಬೇಕು ಎಂದು ಮಾಡಲಾಗಿದೆ. ಫಲಾನುಭವಿಗಳಿಗೆ ಡಿಬಿಟಿ ಮೂಲಕ ಹಣ ಪಾವತಿ ಮಾಡಲಾಗುತ್ತದೆ ಎಂದು ಹೇಳಿದರು.

ಹಿಂದಿ ದಿವಸ್: ಜೆಡಿಎಸ್ ಗದ್ದಲ

ಪರಿಷತ್ ಕಲಾಪ ಆರಂಭಗೊಳ್ಳುತ್ತಿದ್ದಂತೆ ಹಿಂದಿ ಹೇರಿಕೆ ಖಂಡಿಸಿ ಜೆಡಿಎಸ್ ಸದಸ್ಯರು ಘೋಷಣೆ ಕೂಗಿದರು. ಟಿ.ಎ. ಶರವಣ, 'ಹಿಂದಿ ರಾಷ್ಟ್ರ ಭಾಷೆ ಅಲ್ಲ' ಎಂದರು. ಇದಕ್ಕೆ ಜೆಡಿಎಸ್ ಇತರ ಸದಸ್ಯರು ದನಿಗೂಡಿಸಿ, 'ಹಿಂದಿ ದಿವಸ್' ಆಚರಣೆ ವಿರುದ್ಧ ಘೋಷಣೆ ಕೂಗಿದರು. ಕನ್ನಡ ಧ್ವಜದ ಬಣ್ಣದ ಶಾಲು ಧರಿಸಿ ಬಂದಿದ್ದ ಸದಸ್ಯರು ಬಾರಿಸು 'ಕನ್ನಡ ಡಿಂಡಿಮವ...' ಎಂದು ಹಾಡಿದರು. ವಿರೋಧಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಕೂಡ ಹಿಂದಿ ಹೇರಿಕೆಯನ್ನು ವಿರೋಧಿಸಿದರು.

ನಕಲಿ ನೇಮಕಾತಿ ಆದೇಶ: ಪರಿಷತ್‌ನಲ್ಲಿ ಪ್ರತಿಧ್ವನಿ

ಬೆಂಗಳೂರು: ಪಶು ಸಂಗೋಪನಾ ಇಲಾಖೆಯ ನಕಲಿ ನೇಮಕಾತಿ ಆದೇಶ ಪ್ರಕರಣ ವಿಧಾನ ಪರಿಷತ್‌ನಲ್ಲಿ ಪ್ರತಿಧ್ವನಿಸಿತು. ಆಡಳಿತ – ವಿರೋಧ ಪಕ್ಷಗಳ ಸದಸ್ಯರ ನಡುವೆ ಮಾತಿನ ಚಕಮಕಿಯೂ ನಡೆಯಿತು. ಈ ಬಗ್ಗೆ ಸಮಗ್ರ ಚರ್ಚೆಗೆ ಅವಕಾಶ ಕಲ್ಪಿಸುವುದಾಗಿ ಸಭಾಪತಿ ರಘುನಾಥ್ ರಾವ್ ಮಲ್ಕಾಪುರೆ ಭರವಸೆ ನೀಡಿ ಗದ್ದಲಕ್ಕೆ ತೆರೆ ಎಳೆದರು.

ಕಾಂಗ್ರೆಸ್ಸಿನ ಅರವಿಂದಕುಮಾರ್ ಅರಳಿ ಪ್ರಶ್ನೆಗೆ ಉತ್ತರಿಸಿದ ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ್, 'ಈ ಪ್ರಕರಣದಲ್ಲಿ ಆರೋಪಿಗಳನ್ನು ಬಂಧಿಸಿ ತನಿಖೆ ನಡೆಸಲಾಗುತ್ತಿದೆ ಎಂದರು.

ಉತ್ತರಕ್ಕೆ ತೃಪ್ತರಾಗದ ಅರಳಿ, 'ಸಚಿವರ ಆಪ್ತ ಸಹಾಯಕ ಅಕ್ರಮದಲ್ಲಿ ಭಾಗಿಯಾಗಿದ್ದಾರೆ' ಎಂದು ಆರೋಪಿಸಿದರು. ಆಗ ಮಧ್ಯಪ್ರವೇಶಿಸಿದ ಸಭಾಪತಿ, 'ಸಚಿವರ ಆಪ್ತ ಸಹಾಯಕ ಎನ್ನಲು ದಾಖಲೆ ಇದೆಯೇ' ಎಂದು ಪ್ರಶ್ನಿಸಿದರು. ಅದಕ್ಕೆ ಅರಳಿ, 'ನೀವು ಏಕಪಕ್ಷೀಯವಾಗಿ ಕೆಲಸ ಮಾಡಬೇಡಿ' ಎಂದು ಸಭಾಪತಿ ಅವರನ್ನು ಉದ್ದೇಶಿಸಿ ಹೇಳಿದ್ದು ಗದ್ದಲಕ್ಕೆ ಕಾರಣವಾಯಿತು. ಬಳಿಕ ಆ ಮಾತನ್ನು ಅರಳಿ ವಾಪಸು ಪಡೆದರು.

'ಉದ್ಯೋಗ ಕೊಡಿಸುವುದಾಗಿ ನನ್ನ ಆಪ್ತ ಸಹಾಯಕ ಹಣ ಕೇಳುತ್ತಿದ್ದಾರೆ. ಯಾರೂ ಕೊಡಬೇಡಿ ಎಂದು ಮಾಧ್ಯಮಗಳ ಮುಂದೆ ಸಚಿವರೇ ಹೇಳಿದ್ದಾರೆ. ಉದ್ಯೋಗ ಕೊಡಿಸುವ ಭರವಸೆ ನೀಡಿ 90 ಜನರಿಂದ ಹಣ ಪಡೆಯಲಾಗಿದೆ. ಸಚಿವರು ಯಾಕೆ ದೂರು ಕೊಡಲಿಲ್ಲ' ಎಂದೂ ಅರಳಿ ಪ್ರಶ್ನಿಸಿದರು. ಆಗ ಬಿಜೆಪಿಯ ಬಸವರಾಜ ಹೊರಟ್ಟಿ, 'ಸಚಿವರ ಉತ್ತರದಿಂದ ಸಮಾಧಾನ ಇಲ್ಲದಿದ್ದರೆ ಈ ವಿಷಯವನ್ನು ಬೇರೆ ರೂಪದಲ್ಲಿ ಪ್ರಸ್ತಾಪಿಸಿ' ಎಂದು ಸಲಹೆ ನೀಡಿದರು.

ಸುದ್ದಿ 2 ನಿಮಿಷ

ಕಂದಾಯ ಗ್ರಾಮ: 2 ತಿಂಗಳಿನಲ್ಲಿ 50 ಸಾವಿರ ಹಕ್ಕುಪತ್ರ: ಅಶೋಕ

ಬೆಂಗಳೂರು: 'ಲಂಬಾಣಿ ತಾಂಡ, ಗೊಲ್ಲರ ಹಟ್ಟಿ, ಸೋಲಿಗ, ಕಾಡುಕುರುಬ ಸಮುದಾಯ ನೆಲೆಸಿರುವ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮವಾಗಿ ಘೋಷಿಸಿ, ಅಲ್ಲಿನ ನಿವಾಸಿಗಳು ಸೂಚಿಸುವ ಹೆಸರನ್ನೇ ಆ ಗ್ರಾಮಗಳಿಗೆ ಇಡಲಾಗುವುದು' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.



ವಿಧಾನಪರಿಷತ್‌ನಲ್ಲಿ ಬಿಜೆಪಿಯ ಶಶಿಲ್ ನಮೋಶಿ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಇನ್ನು ಎರಡು ತಿಂಗಳಿನಲ್ಲಿ 50 ಸಾವಿರ ಜನರಿಗೆ ಹಕ್ಕುಪತ್ರ ನೀಡಬೇಕೆಂದು ನಿರ್ಧರಿಸಿದ್ದೇನೆ. ಈ ಸಮುದಾಯದ ಜನರು ಹಕ್ಕುಪತ್ರ ನೋಂದಣಿ ಮಾಡಿಸಿಕೊಳ್ಳಲು ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಪ್ರತಿ ದಿನ ಒಂದು ಗಂಟೆ ಮೀಸಲಿಡಲು ಚಿಂತನೆ ಇದೆ' ಎಂದರು.

'ಕಂದಾಯ ಗ್ರಾಮ ಘೋಷಣೆಗೆ ಸಂಬಂಧಿಸಿದಂತೆ ಈಗಾಗಲೇ 2,091 ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದ್ದು, 1,166ಕ್ಕೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಇನ್ನೂ 925 ಪ್ರಾಥಮಿಕ ಅಧಿಸೂಚನೆಗೆ ಸಿದ್ಧವಾಗಿವೆ' ಎಂದು ಮಾಹಿತಿ ನೀಡಿದರು.

ಎಸ್ಸಿ, ಎಸ್ಟಿ ವಿದ್ಯಾರ್ಥಿಗಳಿಗೂ ವೇದಗಣಿತ ಕಲಿಕೆ

ಬೆಂಗಳೂರು: ರಾಜ್ಯದ ವಿವಿಧ ಶಾಲೆಗಳ 5ರಿಂದ 8ನೇ ತರಗತಿವರೆಗಿನ ಮಕ್ಕಳಿಗೆ ವೇದಗಣಿತ ಕಲಿಸಲು ಹಾಗೂ ಅದಕ್ಕೆ ಅಗತ್ಯವಾದ ಸಮವಸ್ತ್ರ ಒದಗಿಸಲು ಗ್ರಾಮ ಪಂಚಾಯತಿಗಳಲ್ಲಿನ ಪರಿಶಿಷ್ಟರಿಗೆ ಮೀಸಲಾದ ಶೇ 25ರ ಅನುದಾನ ಬಳಸಿಕೊಳ್ಳಲು ಗ್ರಾಮೀಣಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ಕೆಲ ತಿಂಗಳ ಹಿಂದೆಯೇ ಗ್ರಾಮೀಣಾಭಿವೃದ್ಧಿ ಇಲಾಖೆ ಹೊರಡಿಸಿದ್ದ ಈ ಆದೇಶದ ಅನ್ವಯ ಇತರೆ ಮಕ್ಕಳಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮಕ್ಕಳಿಗೂ ವೇದಗಣಿತ ಕಲಿಕೆಗೆ ಅವಕಾಶ ಮಾಡಿಕೊಡಲು ಶಿಕ್ಷಣ ಇಲಾಖೆ ಕ್ರಮ ಕೈಗೊಂಡಿದೆ. ಆಯಾ ಗ್ರಾಮ ಪಂಚಾಯತಿಗಳು ನೀಡಿದ ಅನುದಾನ ಬಳಸಿಕೊಂಡು ಸ್ಥಳೀಯ ಅಕಾಡೆಮಿ, ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಕಲಿಕೆ ಆರಂಭಿಸಲಾಗಿದೆ. ಸರ್ಕಾರಿ ಶಾಲೆಯ ಶಿಕ್ಷಕರಿಗೂ ಅಗತ್ಯ ತರಬೇತಿ ನೀಡುತ್ತಿದ್ದು, ತರಗತಿಗಳಿಗೆ ನಿಯೋಜಿಸಲಾಗುತ್ತಿದೆ.

ವೇದಗಣಿತವು ಪುರಾತನ ಗಣಿತದ ವಿಧಾನ. ಈ ಗಣಿತದ ಪ್ರಕಾರ ಗಣಿತದ ಯಾವುದೇ ಕ್ಲಿಷ್ಟಕರ ಸಮಸ್ಯೆಯನ್ನು ಮನಸ್ಸಿನಲ್ಲೇ ಯೋಚಿಸಿ, ಬರವಣಿಗೆಯಿಲ್ಲದೇ ವೇಗವಾಗಿ ಬಗೆಹರಿಸಬಹುದು. 16 ಸಂಸ್ಕೃತದ ಗಣಿತ ಸೂತ್ರಗಳಿಂದ ಹಾಗೂ ಅವುಗಳಿಂದ ದೊರಕುವ ಫಲಿತಾಂಶಗಳಿಂದ ಗಣಿತದ ಹಲವು ಸಮಸ್ಯೆಗಳಿಗೆ ಉತ್ತರ ಕಂಡು ಹಿಡಿಯಬಹುದು. ಕಳೆದು ಹೋಗಿದ್ದ ಈ ಸೂತ್ರಗಳನ್ನು ಭಾರತೀ ಕೃಷ್ಣತೀರ್ಥಜಿ ಮಹಾರಾಜ ಅವರು 1911–18ರ ಅವಧಿಯಲ್ಲಿ ವೇದ ಅಧ್ಯಯನ ಮೂಲಕ ಮತ್ತೆ ಪರಿಶೋಧನೆ ಮಾಡಿದರು ಎನ್ನಲಾಗಿದೆ.

ಹೆದ್ದಾರಿಯಲ್ಲಿ 60 ಕಿ.ಮೀ. ಮಧ್ಯದ ಟೋಲ್ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೆದ್ದಾರಿಗಳಲ್ಲಿ 60 ಕಿ.ಮೀ. ಅಂತರದ ಮಧ್ಯೆ ಇರುವ ಟೋಲ್ ಪ್ಲಾಜಾಗಳನ್ನು ತೆರವುಗೊಳಿಸುವ ಕುರಿತಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಜೊತೆ ಮಾತುಕತೆ ನಡೆಸಿದ್ದು, ಆದಷ್ಟು ಶೀಘ್ರ ಇಂಥ ಟೋಲ್‌ಗಳನ್ನು ತೆರವು ಮಾಡಲಾಗುವುದು' ಎಂದು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಕೆ. ಹರೀಶ್ ಕುಮಾರ್ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ರಾಜ್ಯದಲ್ಲಿ 60 ಕಿ.ಮಿ. ಅಂತರದ ಮಧ್ಯೆ 18 ಟೋಲ್ ಪ್ಲಾಜಾಗಳಿವೆ. ಅಂಥ ಟೋಲ್‌ಗಳನ್ನು ಕೇಂದ್ರದ ನಿಯಮದಂತೆ ತೆರವು ಮಾಡಬೇಕು. ಇದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವುದರಿಂದ. ಹೆದ್ದಾರಿ ಸಚಿವಾಲಯದ ಅಧಿಕಾರಿಗಳ ಜೊತೆ ಮಾತುಕತೆ ನಡೆಸಿ, ತೆರವಿಗೆ ಮನವಿ ಮಾಡಿದ್ದೇನೆ' ಎಂದರು.

'ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ನಲ್ಲಿರುವ ಟೋಲ್‌ಗೇಟ್ ಅಧಿ ಕೃತವೇ' ಎಂದು ಹರೀಶ್ ಕುಮಾರ್ ಕೇಳಿದ ಪ್ರಶ್ನೆಗೆ, 'ಇದು ಅಧಿಕೃತವಾ ಗಿದ್ದು, ಹೆದ್ದಾರಿ ಪ್ರಾಧಿಕಾರದ ಕಾರ್ಯ ವ್ಯಾಪ್ತಿಯಲ್ಲಿದೆ. ಪ್ರಾಧಿಕಾರ 2008 ರ ಡಿ. 5ರಂದು ಹೊರಡಿಸಿದ ಅಧಿಸೂಚನೆಯಂತೆ ಇಲ್ಲಿ ಸುಂಕ ವಸೂಲಾತಿ ನಡೆಯುತ್ತಿದೆ' ಎಂದರು.

'ಪ್ರಜಾವಾಣಿ' ವರದಿ ಪ್ರದರ್ಶಿಸಿದ ಎಚ್‌.ಡಿ.ಕುಮಾರಸ್ವಾಮಿ

'ರಸ್ತೆಯಲ್ಲಿ ನಿಂತು ಮಳೆಹಾನಿ ಅಂದಾಜು ಸಾಧ್ಯವೆ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅತಿವೃಷ್ಟಿ ಮತ್ತು ಪ್ರವಾಹದಿಂದ ರಾಜ್ಯದಲ್ಲಿ ಆಗಿರುವ ಹಾನಿ ಕುರಿತು ಅಧ್ಯಯನ ನಡೆಸಲು ಕೇಂದ್ರ ಸರ್ಕಾರ ಕಳುಹಿಸಿದ್ದ ಅಧಿಕಾರಿಗಳ ತಂಡ ರಸ್ತೆಯಲ್ಲೇ ನಿಂತು ಬೆಳೆ ಹಾನಿ ವೀಕ್ಷಿಸಿರುವುದು ವರದಿಯಾಗಿದೆ. ಹೀಗೆ ನಿಖರ ಅಂದಾಜು ಸಾಧ್ಯವೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

ವಿಧಾನಸಭೆಯಲ್ಲಿ ಬುಧವಾರ ಮಳೆಹಾನಿ ಕುರಿತ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಕೇಂದ್ರ ಸರ್ಕಾರದ ಅಧಿಕಾರಿಗಳ ತಂಡದ ಅಧ್ಯಯನ ಬಂದ ಪುಟ್ಟ, ಹೋದ ಪುಟ್ಟ ಎಂಬಂತಾಯಿತೊ ಗೊತ್ತಿಲ್ಲ. ಈ ರೀತಿ ಆದರೆ, ಅವರು ಕೇಂದ್ರ ಸರ್ಕಾರಕ್ಕೆ ಎಂತಹ ವರದಿ ಸಲ್ಲಿಸುತ್ತಾರೆ' ಎಂದು ಕೇಳಿದರು.

'ನೆರೆ ಹೋದರೂ ತೀರದ ಬವಣೆ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿದ್ದ 'ಒಳನೋಟ' ವಿಶೇಷ ವರದಿಯ ಪ್ರತಿಯನ್ನು ಸದನದಲ್ಲಿ ಪ್ರದರ್ಶಿಸಿದ ಕುಮಾರಸ್ವಾಮಿ, 'ರಾಜ್ಯದಲ್ಲಿ ಹಿಂದೆಯೂ ಹಲವು ಬಾರಿ ಪ್ರವಾಹ ಬಂದಿತ್ತು. ಸಂತ್ರಸ್ತರಾದ ಜನರಿಗೆ ಈಗಲೂ ಸರಿಯಾದ ಪರಿಹಾರ, ಪುನರ್ವಸತಿ ದೊರಕಿಲ್ಲ. ಈ ಬಾರಿಯೂ ಅದೇ ಸ್ಥಿತಿ ಇದೆ. ಪತ್ರಿಕೆಯ ವರದಿಯನ್ನು ನೋಡಿ' ಎಂದರು.

2004, 2005, 2018ರಲ್ಲಿ ಅತಿವೃಷ್ಟಿ, ಪ್ರವಾಹದಿಂದ ಭಾರಿ ಹಾನಿ ಸಂಭವಿಸಿತ್ತು. ಈ ವರ್ಷವೂ ದೊಡ್ಡ ಪ್ರಮಾಣದ ಹಾನಿಯಾಗಿದೆ. ಅತಿವೃಷ್ಟಿ ಆದಾಗ ಹೆಚ್ಚು ಹಾನಿಯಾಗದಂತೆ ತಡೆಯಲು ಶಾಶ್ವತವಾದ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು. ಇದಕ್ಕಾಗಿ ದೂರದೃಷ್ಟಿಯ ಯೋಜನೆಗಳನ್ನು ರೂಪಿಸಿ, ಅನುಷ್ಠಾನಕ್ಕೆ ತರಬೇಕು ಎಂದು ಸಲಹೆ ನೀಡಿದರು.

'ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ಮಾರ್ಗಸೂಚಿ ಬದಲಾವಣೆ ಆಗಬೇಕೆಂಬ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಒತ್ತಾಯಕ್ಕೆ ನನ್ನ ಸಹಮತ ಇದೆ' ಎಂದರು.

ವಂಚನೆ ಪ್ರಕರಣ: ವಿಚಾರಣೆಗೆ ನಟಿ ಜಾಕ್ವೆಲಿನ್ ಹಾಜರು

ನವದೆಹಲಿ(ಪಿಟಿಐ): 'ವಂಚನೆ ಆರೋಪ ಎದುರಿಸುತ್ತಿರುವ ಬೆಂಗಳೂರು ಮೂಲದ ಸುಕೇಶ್ ಚಂದ್ರಶೇಖರ್ ಹಾಗೂ ಇತರರಿಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಲಿವುಡ್ ನಟಿ ಜಾಕ್ವೆಲಿನ್ ಫರ್ನಾಂಡೀಸ್ ಅವರು ದೆಹಲಿ ಪೊಲೀಸ್ ಇಲಾಖೆಯ ಆರ್ಥಿಕ ಅಪರಾಧ ವಿಭಾಗ ನಡೆಸಿದ ವಿಚಾರಣೆಗೆ ಬುಧವಾರ ಹಾಜರಾಗಿದ್ದರು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರೈತರ ತಲುಪದ ಕಿಸಾನ್ ಸಮ್ಮಾನ್‌ನ ₹92 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ 2019–20 ರಿಂದ ₹91.99 ಕೋಟಿ ನೇರ ನಗದು ವರ್ಗಾವಣೆ (ಡಿಬಿಟಿ) ಪ್ರಕ್ರಿಯೆ ಬಾಕಿ ಇದ್ದು, ಫಲಾನುಭವಿಗಳು ಹಣ ಪಡೆಯುವುದರಿಂದ ವಂಚಿತರಾಗಿದ್ದಾರೆ ಎಂದು ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ(ಸಿಎಜಿ) ಹೇಳಿದೆ.

ಫಲಾನುಭವಿಗಳಲ್ಲದ ವ್ಯಕ್ತಿಗಳ ಬ್ಯಾಂಕ್ ಖಾತೆಗೂ ಹಣ ಜಮೆಯಾಗಿರುವುದು ಡಿಬಿಟಿ ದತ್ತಾಂಶ ವಿಶ್ಲೇಷಣೆಯಿಂದ ತಿಳಿದು ಬಂದಿದೆ ಎಂದೂ ವರದಿ ಹೇಳಿದೆ

'ನೇರ ನಗದು ವರ್ಗಾವಣೆ ಮೇಲಿನ ಕಾರ್ಯನಿರ್ವಹಣಾ ಲೆಕ್ಕ ಪರಿಶೋಧನೆ–2022' ವರದಿಯನ್ನು ವಿಧಾನಮಂಡಲದಲ್ಲಿ ಬುಧವಾರ ಮಂಡಿಸಲಾಯಿತು. ಈ ವರದಿಯು ಡಿಬಿಟಿಯ ದೋಷಗಳನ್ನು ವಿವರಿಸಿದೆ.

ರಾಜ್ಯದಲ್ಲಿ ಎಲ್ಲ ಯೋಜನೆಗಳ ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ ಹಣ ಪಾವತಿ ಮಾಡಲಾಗುತ್ತಿದೆ ಎಂದು ಸರ್ಕಾರ ಹೇಳಿಕೊಳ್ಳುತ್ತಿದ್ದರೂ ಶೇ 83 ರಷ್ಟು ಫಲಾನುಭವಿಗಳಿಗೆ ಮಾತ್ರ ನೇರ ನಗದು ವರ್ಗಾವಣೆ ಮೂಲಕ ಹಣ ಪಾವತಿ ಮಾಡಲಾಗಿದೆ. ಶೇ 14 ರಷ್ಟು ಪಾವತಿ ತಿರಸ್ಕೃತಗೊಂಡಿದೆ.

2018-19 ರ ಅವಧಿಯಲ್ಲಿ ನೇರ ನಗದು ವರ್ಗಾವಣೆ (ಡಿಬಿಟಿ) ಪೋರ್ಟಲ್ ಮೂಲಕ ಸಾಧ್ಯವಾಗದೇ 22 ಇಲಾಖೆಗಳ 168 ಯೋಜನೆಗಳ ಅಡಿ ₹2,829.02 ಕೋಟಿ ನಗದು ಪಾವತಿ ಮಾಡಲಾಗಿದೆ. ಇದಕ್ಕೆ ಐಸಿಟಿ ಅಪ್ಲಿಕೇಶನ್‌ಗಳ ಮತ್ತು ಫಲಾನುಭವಿ ದತ್ತಾಂಶ ಸಮಸ್ಯೆಯೇ ಕಾರಣ ಎಂದು ಪತ್ತೆ ಮಾಡಿದೆ.

ಕ್ಷೀರಸಿರಿ ಯೋಜನೆಯಲ್ಲಿ ಕಡತಗಳ ರಚನೆ ಮತ್ತು ಅನುಮೋದನೆಯಲ್ಲಿನ ವಿಳಂಬದಿಂದ ಡೇರಿಗೆ ಹಾಲು ಹಾಕುವ 8,464 ಹೈನುಗಾರರಿಗೆ 2020 ರಿಂದಲೂ ₹56.08 ಲಕ್ಷ ಬಾಕಿ ಇತ್ತು. ರಾಷ್ಟ್ರೀಯ ಆಹಾರ ಭದ್ರತಾ ಮಿಷನ್ ಮತ್ತು ರೈತ ಸಿರಿ ಯೋಜನೆಗಳನ್ನು ಡಿಬಿಟಿ ಪೋರ್ಟಲ್‌ಗೆ ಅಳವಡಿಸಿದ್ದರೂ ಈ ಎರಡೂ ಯೋಜನೆಗಳ ₹45.94 ಕೋಟಿ ಡಿಬಿಟಿ ಪಾವತಿಗಳನ್ನು ಡಿಬಿಟಿ ಪೋರ್ಟಲ್ ಮೂಲಕ ಮಾಡಲು ಸಾಧ್ಯವಾಗಿಲ್ಲ ಎಂದು ವರದಿ ಹೇಳಿದೆ.

ಮುಖ್ಯಾಂಶಗಳು

- ₹2,829.02 ಕೋಟಿ ನಗದು ಪಾವತಿ
- ಡಿಬಿಟಿ ಲೋಪ ಪತ್ತೆ ಮಾಡಿದ ಸಿಎಜಿ

ಡಿಬಿಟಿ ಅಡಿಯಲ್ಲಿ ಯೋಜನೆಗಳನ್ನು ಜಾರಿಗೊಳಿಸುತ್ತಿರುವ ಇಲಾಖೆಗಳು ವಿಫಲವಾದ ವಹಿವಾಟುಗಳನ್ನು ಸರಿಪಡಿಸಲು ಮತ್ತು ಪುನರಾರಂಭಿಸುವಲ್ಲಿ ವಿಫಲವಾದವು. ವಿಫಲವಾದ ದಿನಾಂಕದಿಂದ 30 ದಿನಗಳು ಕಳೆದಿದ್ದರೂ 91.283 ವಹಿವಾಟುಗಳು ಪುನರಾರಂಭಕ್ಕಾಗಿ ಕಾದಿದ್ದವು. ಪಾವತಿಯಲ್ಲಿ ಅಗತ್ಯ ಕ್ರಮಕೈಗೊಳ್ಳುವಲ್ಲಿ ವಿಫಲವಾಗಿದ್ದರಿಂದ 2018–19 ಮತ್ತು 2019–20 ರ ಸಾಲಿನಲ್ಲಿ 6.67 ಲಕ್ಷ ಫಲಾನುಭವಿಗಳು ₹153.30 ಕೋಟಿ ಆರ್ಥಿಕ ಪ್ರಯೋಜನದಿಂದ ವಂಚಿತರಾದರು.

ನಂಬಿಸಿ ಮೋಸ ಮಾಡಿದಿರಿ: ಶಂಕರ್

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಸಚಿವ ಸ್ಥಾನ ನೀಡುವುದಾಗಿ ಹೇಳಿ ಮಾತಿಗೆ ತಪ್ಪಿದ್ದೀರಿ. ನನ್ನ ರಾಜಕೀಯ ಭವಿಷ್ಯ ಹಾಳಾಗಿದ್ದು, ನನ್ನನ್ನು ನಂಬಿಸಿ ಮೋಸ ಮಾಡಿದ್ದೀರಿ' ಎಂದು ಬಿಜೆಪಿಯ ವಿಧಾನಪರಿಷತ್ ಸದಸ್ಯ ಆರ್.ಶಂಕರ್ ಅವರು ಬಿಜೆಪಿ ಶಾಸ ಕಾಂಗ ಪಕ್ಷದ ಸಭೆಯಲ್ಲಿ ಕಿಡಿಕಾರಿದ್ದಾರೆ.

ಮಂಗಳವಾರ ರಾತ್ರಿ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ, 'ಇನ್ನೂ ಸಂಪುಟ ವಿಸ್ತರಣೆ ಮಾಡಿಲ್ಲ, ಚುನಾವಣೆಗೆ ಇನ್ನು ಕೆಲವೇ ತಿಂಗಳುಗಳು ಬಾಕಿ ಇವೆ. ಇದ್ದ ಕ್ಷೇತ್ರವನ್ನೂ ಬಿಟ್ಟುಕೊಟ್ಟು ಅತಂತ್ರನಾಗಿದ್ದೇನೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು' ಎಂದು ಮೂಲಗಳು ಹೇಳಿವೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಮಾಧಾನಪಡಿಸಲು ಹೋದಾಗ ಅವರ ಬಗ್ಗೆಯೂ ಬೇಸರ ವ್ಯಕ್ತಪಡಿಸಿದ ಶಂಕರ್, 'ನನ್ನನ್ನು ಈ ರೀತಿ ನಡೆಸಿಕೊಂಡದ್ದು ಸರಿಯಲ್ಲ' ಎಂದರು. 'ಆದಷ್ಟು ಬೇಗ ಸಂಪುಟ ವಿಸ್ತರಣೆ ಮಾಡಲಾಗುವುದು' ಎಂದು ಬೊಮ್ಮಾಯಿ ಭರವಸೆ ನೀಡಿದರೆಂದು ಮೂಲಗಳು ಹೇಳಿವೆ.

'2030ಕ್ಕೆ ಸಾರಿಗೆ ಸಂಸ್ಥೆ ಬಸ್ ಸಂಪೂರ್ಣ ಎಲೆಕ್ಟ್ರಿಕ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ 2030 ರ ವೇಳೆಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಸಂಪೂರ್ಣ ಎಲೆಕ್ಟ್ರಿಕ್ ಬಸ್‌ಗಳನ್ನು ಹೊಂದಲು ಸಂಕಲ್ಪ ಮಾಡಿದ್ದೇವೆ' ಎಂದು ಸಾರಿಗೆ ಸಚಿವ ಬಿ. ಶ್ರೀರಾಮುಲು ತಿಳಿಸಿದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ತನ್ವೀರ್‌ಸೇಠ್ ಪ್ರಶ್ನೆಗೆ ಉತ್ತರಿಸಿದ ಅವರು, ಡೀಸೆಲ್ ಬಸ್‌ಗಳ ಬದಲಿಗೆ 35 ಸಾವಿರ ಎಲೆಕ್ಟ್ರಿಕ್ ಬಸ್‌ಗಳು ರಾಜ್ಯದಲ್ಲಿ ಓಡಾಡಲಿವೆ ಎಂದು ಹೇಳಿದರು.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯಡಿ 90 ಎಲೆಕ್ಟ್ರಿಕ್ ಬಸ್‌ಗಳನ್ನು ಗುತ್ತಿಗೆ ಆಧಾರದ ಮೇಲೆ 2021 ರ ಡಿಸೆಂಬರ್‌ನಿಂದ ಕಾರ್ಯಾಚರಣೆ ಮಾಡುತ್ತಿವೆ. ಈ ಎಲೆಕ್ಟ್ರಿಕ್ ಬಸ್ಸಿನ ಪ್ರತಿ ಕಿ.ಮೀ ವೆಚ್ಚ ₹64.67 ಇದೆ. ಕೇಂದ್ರ ಸರ್ಕಾರದ ಫೇಮ್–2 ಯೋಜನೆಯಡಿ 300 ಎಲೆಕ್ಟ್ರಿಕ್ ಬಸ್‌ಗಳ ಖರೀದಿಸಿದ್ದು, ಆಗಸ್ಟ್ 15 ರಿಂದ ಕಾರ್ಯಾಚರಣೆ ನಡೆಸುತ್ತಿವೆ. ಈ ಬಸ್ಸಿನ ಪ್ರತಿ ಕಿ.ಮೀ ವೆಚ್ಚವು ₹61.90 ಎಂದರು.

ಸಿಇಎಸ್‌ಎಲ್ ಮೂಲಕ ಕೇಂದ್ರ ಸರ್ಕಾರ ಫೇಮ್– 2 ಯೋಜನೆಯಡಿ 921 ಎಲೆಕ್ಟ್ರಿಕ್ ಬಸ್‌ಗಳನ್ನು ಕಾರ್ಯಾಚರಣೆ ಮಾಡಲು ಆಗಸ್ಟ್ 17 ರಿಂದ ಆದೇಶ ನೀಡಲಾಗಿದೆ. ಇದರ ಪ್ರತಿ ಕಿ.ಮೀ ವೆಚ್ಚವು ₹54 ಇದೆ. ಆದರೆ, ಡೀಸೆಲ್ ಬಸ್ಸಿನ ಪ್ರತಿ ಕಿ.ಮೀ ವೆಚ್ಚ ₹68.53 ಎಂದು ಅವರು ಹೇಳಿದರು.

'ಈಗ ಗುತ್ತಿಗೆ ಮೇಲೆ ಪಡೆದಿರುವ ಬಸ್ಸುಗಳು 12 ವರ್ಷ ಕಾರ್ಯಾಚರಣೆ ನಡೆಸುತ್ತವೆ. ಇದಕ್ಕೆ ಚಾಲಕರನ್ನು ಬಸ್ ಕಂಪನಿಯವರೇ ನೀಡುತ್ತಾರೆ. ಕಂಡಕ್ಟರ್ ನಮ್ಮವರು ಇರುತ್ತಾರೆ' ಎಂದು ಶ್ರೀರಾಮುಲು ವಿವರಿಸಿದರು.

ಕೇರಳ: ಸಚಿವ ಸೇರಿ ಐವರ ಮೇಲೆ ದೋಷಾರೋಪ

ತಿರುವನಂತಪುರದ (ಪಿಟಿಐ): ಕೇರಳ ವಿಧಾನಸಭೆಯಲ್ಲಿ 2015ರಲ್ಲಿ ನಡೆದ ಗದ್ದಲ ಪ್ರಕರಣದಲ್ಲಿ ಶಿಕ್ಷಣ ಸಚಿವ ವಿ.ಶಿವನ್‌ಕುಟ್ಟಿ ಹಾಗೂ ಎಲ್‌ಡಿಎಫ್‌ನ ಕೆಲವು ಪ್ರಮುಖ ನಾಯಕರ ವಿರುದ್ಧ ಸಿಜೆಎಂ ನ್ಯಾಯಾಲಯ ದೋಷಾರೋಪ ಪಟ್ಟಿ ಸಿದ್ಧಪಡಿಸಿದೆ.

ಸಚಿವ ಶಿವನ್‌ಕುಟ್ಟಿ, ಎಡ ಪಕ್ಷದ ಶಾಸಕ ಕೆ.ಟಿ. ಜಲೀಲ್ ಮತ್ತು ಮಾಜಿ ಶಾಸಕರಾದ ಕೆ.ಅಜಿತ್, ಸಿ.ಕೆ. ಸದಾಶಿವನ್ ಮತ್ತು ಕೆ. ಕುನಾಹ್ಮದ್ ಅವರ ಮೇಲೆ ದೋಷಾರೋಪಗಳನ್ನು ಹೊರಿಸಿದೆ.

ಈ ಪ್ರಕರಣದ ಮತ್ತೊಬ್ಬ ಆರೋಪಿ ಇ.ಪಿ. ಜಯರಾಜನ್ ವಿಚಾರಣೆ ವೇಳೆ ಗೈರು ಆಗಿದ್ದರಿಂದ, ವಿಚಾರಣೆಯನ್ನು ನ್ಯಾಯಾಲಯ ಇದೇ 26ಕ್ಕೆ ಪಟ್ಟಿ ಮಾಡಿದೆ. ಕಳೆದ ತಿಂಗಳು ಕೇರಳ ಹೈಕೋರ್ಟ್ ವಿಚಾರಣೆಗೆ ತಡೆ ನೀಡಲು ನಿರಾಕರಿಸಿ, ಸೆ. 14ರಂದು ವಿಚಾರಣಾ ನ್ಯಾಯಾಲಯದ ಮುಂದೆ ಹಾಜರಾಗಲು ಆರೋಪಿಗಳಿಗೆ ಸೂಚಿಸಿತ್ತು.

ಕನ್ನಡ ಕಡ್ಡಾಯಕ್ಕೆ ಕಾನೂನಿನ ಬಲ

ಒಂದನೇ ಪುಟದಿಂದ....

ವಿಷಯ ಪ್ರಸ್ತಾಪಿಸಿದ ಜೆಡಿಎಸ್ ಸದಸ್ಯರು, 'ಹಿಂದಿ ದಿವಸ್ ಆಚರಣೆ ಹೆಸರಿನಲ್ಲಿ ರಾಜ್ಯದಲ್ಲಿ ಹಿಂದಿ ಹೇರಿಕೆ ಮಾಡಲಾಗುತ್ತಿದೆ. ಇದನ್ನು ಸಹಿಸಲು ಸಾಧ್ಯವಿಲ್ಲ. ಈ ವಿಷಯದ ಬಗ್ಗೆ ಮಾತನಾಡಲು ಅವಕಾಶ ನೀಡಬೇಕು' ಎಂದು ಏರಿದ ಧ್ವನಿಯಲ್ಲಿ ಒತ್ತಾಯಿಸಿದರು.

'ಯಾರಾದರೂ ಒಬ್ಬರು ಮಾತನಾಡಿ, ಎಲ್ಲರೂ ಒಂದೇ ಸಲ ನಿಂತು ಮಾತನಾಡಿದರೆ ವಿಷಯ ಸ್ಪಷ್ಟವಾಗುವುದಿಲ್ಲ' ಎಂದು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು. ಆಗ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ, 'ನಮ್ಮ ದೇಶದಲ್ಲಿ ಹಲವಾರು ಭಾಷೆಗಳಿವೆ. 56ಕ್ಕೂ ಹೆಚ್ಚು ಭಾಷೆಗಳಿರುವ ಈ ರಾಷ್ಟ್ರದಲ್ಲಿ ಹಿಂದಿ ಕೂಡ ಒಂದು ಭಾಷೆ ಅಷ್ಟೇ. ಆದರೆ, ಒಂದು ಭಾಷೆ, ಒಂದು ರಾಷ್ಟ್ರ ಮಾಡಲು ಹೊರಟಿದ್ದಾರೆ. ಎಲ್ಲ ಭಾಷೆಗಳಿಗೂ ಅವುಗಳದ್ದೇ ಆದ ಇತಿಹಾಸವಿದೆ. ಆ ದೃಷ್ಟಿಯಿಂದ ಬಲವಂತದಿಂದ ಕತ್ತು ಹಿಸುಕುವ ಕೆಲಸ ಆಗಬಾರದು ಎಂಬುದು ನಮ್ಮ ಕಳಕಳಿ' ಎಂದರು.

ಅ.15ರಿಂದ ವಿಮಾನ ಪೈಲಟ್, ಸಿಬ್ಬಂದಿಗೆ ಉಸಿರಾಟ ವಿಶ್ಲೇಷಣಾ ಪರೀಕ್ಷೆ

ನವದೆಹಲಿ (ಪಿಟಿಐ): ಪೈಲಟ್‌ಗಳು ಮತ್ತು ಕ್ಯಾಬಿನ್ ಸಿಬ್ಬಂದಿ ಸೇರಿ ಎಲ್ಲ ವಿಮಾನ ಸಿಬ್ಬಂದಿ ಉಸಿರಾಟದ ವಿಶ್ಲೇಷಣಾ ಪರೀಕ್ಷೆಗೆ ಕಡ್ಡಾಯವಾಗಿ ಒಳಪಡುವುದು ಅಕ್ಟೋಬರ್ 15ರಿಂದ ಪುನಃ ಜಾರಿಗೆ ಬರಲಿದೆ ಎಂದು ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯ (ಡಿಜಿಸಿಎ) ಹೇಳಿದೆ.

ಪರೀಕ್ಷೆಗಳಿಗೆ ಅಗತ್ಯ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಲು ವಿಮಾನಯಾನ ಸಂಸ್ಥೆಗಳು ಮತ್ತು ಸಂಬಂಧಿತ ಇತರ ಸಂಸ್ಥೆಗಳಿಗೆ ಸಮಯಾವಕಾಶ ನೀಡಲಾಗಿದೆ.

ಕೋವಿಡ್ ಕಾರಣಕ್ಕಾಗಿ ಹೇರಿದ್ದ ನಿರ್ಬಂಧ ತೆರವುಗೊಳಿಸಲಾಗಿದೆ. ಯಾವುದೇ ಸಿಬ್ಬಂದಿ ಮದ್ಯ ಸೇವಿಸಿದ್ದಾರೆಯೇ ಎಂದು ಪರೀಕ್ಷೆಗೆ ಒಳಪಡಿಸುವುದು ಸಾಂಕ್ರಾಮಿಕ ರೋಗದ ನಡುವೆ ಶೇ 50ಕ್ಕೆ ಮಾತ್ರ ಸೀಮಿತವಾಗಿತ್ತು. ಕೋವಿಡ್ ಕ್ಷಣಗಳು ಕಂಡುಬಂದಲ್ಲಿ, ಅವರನ್ನು ಬಿಎ (ಬ್ರೆತ್ ವಿಶ್ಲೇಷಕ) ಪರೀಕ್ಷೆಯಿಂದ ವಿನಾಯಿತಿ ನೀಡಿ, ಅವರನ್ನು ಕರ್ತವ್ಯದಿಂದ ತೆಗೆದುಹಾಕಲಾಗುತ್ತದೆ. ಅಂತಹ ವ್ಯಕ್ತಿಯು ಅಗತ್ಯ ಪರೀಕ್ಷೆಗೆ ಒಳಗಾಗಬೇಕು ಎಂದು ಡಿಜಿಸಿಎ ತಿಳಿಸಿದೆ.

ಶೇ 40 ಲಂಚ: ಪರಿಷತ್‌ನಲ್ಲಿ ಗದ್ದಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೇ 40ರ ಲಂಚದ ವಿಚಾರ ವಿಧಾನ ಪರಿಷತ್‌ನಲ್ಲಿ ಬುಧವಾರ ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ಮಧ್ಯೆ ಬಿರುಸಿನ ವಾಗ್ವಾದಕ್ಕೆ ಕಾರಣವಾಯಿತು.

ನಿಯಮ 68ರ ಅಡಿಯಲ್ಲಿ ರಾಜ್ಯದಲ್ಲಿ ಸಂಭವಿಸಿದ ಅತಿವೃಷ್ಟಿ ಕುರಿತು ವಿಷಯ ಪ್ರಸ್ತಾಪಿಸಿದ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಅವರು, ಪ್ರವಾಹದಿಂದ ಜನರು ಎದುರಿಸುತ್ತಿರುವ ಸಂಕಷ್ಟಗಳನ್ನು ಎಳೆಎಳೆಯಾಗಿ ಸದನದ ಮುಂದೆ ಮಂಡಿಸಿದರು.

'ಪ್ರವಾಹ ಸಂತ್ರಸ್ತರಿಗೆ ನೀಡುವ ಪರಿಹಾರದಲ್ಲೂ ಶೇ 40ರಷ್ಟು ಲಂಚ ಹೊಡೆಯಬೇಡಿ' ಎಂದು ಹರಿಪ್ರಸಾದ್ ಅವರು ನೀಡಿದ ಹೇಳಿಕೆಯು ಬಿಜೆಪಿ ಸದಸ್ಯರ ಆಕ್ರೋಶಕ್ಕೆ ಕಾರಣವಾಯಿತು.

ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಮತ್ತು ಬಿಜೆಪಿಯ ಇತರ ಸದಸ್ಯರು ಎದ್ದುನಿಂತು ಶೇ 40 ಲಂಚಕ್ಕೆ ಸಾಕ್ಷ್ಯಾಧಾರಗಳನ್ನು ನೀಡುವಂತೆ ಒತ್ತಾಯಿಸಿದರು.

ಇದಕ್ಕೆ ತಿರುಗೇಟು ನೀಡಿದ ಹರಿಪ್ರಸಾದ್ ಅವರು, 'ಗುತ್ತಿಗೆದಾರ ಸಂಘದ ಅಧ್ಯಕ್ಷ ಕೆಂಪಣ್ಣ ನಮ್ಮ ಮಾವ ಅಲ್ಲ. ಶೇ 40 ಅಲ್ಲ. ಶೇ 50 ಎಂದು ಸಾಬೀತು ಪಡಿಸುತ್ತೇನೆ. ತನಿಖೆ ಮಾಡಿಸಿ. ನಿಮ್ಮ ತಮ್ಮ ಗುತ್ತಿಗೆದಾರ. ನೀವೇ ಲೂಟಿ ಮಾಡಿದ್ದೀರಿ' ಎಂದು ಅಶ್ವತ್ಥನಾರಾಯಣ ಅವರ ವಿರುದ್ಧ ಆರೋಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಅಶ್ವತ್ಥನಾರಾಯಣ ಮತ್ತು ಸದಸ್ಯರು, 'ಸಾಕ್ಷ್ಯಾಧಾರಗಳನ್ನು ಮಂಡಿಸಿ ಮಾತನಾಡಿ. ಈ ದೇಶವನ್ನು ಲೂಟಿ ಮಾಡಿದವರು ನೀವು' ಎಂದು ಕಿಡಿಕಾರಿದರು.

ಹರಿಪ್ರಸಾದ್ ಅವರ ಮಾತಿಗೆ ಅಡ್ಡಿಪಡಿಸಿದ್ದಕ್ಕೆ ಆಕ್ರೋಶಗೊಂಡ ಕಾಂಗ್ರೆಸ್ ಸದಸ್ಯರು ಪೀಠದ ಮುಂದೆ ಧರಣಿ ನಡೆಸಿದರು. ಮಾತಿನ ಚಕಮಕಿ ಮುಂದುವರಿದಿದ್ದರಿಂದ ಕಲಾಪವನ್ನು 10 ನಿಮಿಷಗಳ ಕಾಲ ಸಭಾಪತಿ ರಘುನಾಥ್ ರಾವ್ ಮಲ್ಕಾಪುರೆ ಅವರು ಮುಂದೂಡಿದರು. ಸದನ ಮತ್ತೆ ಸೇರಿದಾಗಲೂ ಮಾತಿನ ಚಕಮಕಿ ಮುಂದುವರಿಯಿತು.

'ವಿಶ್ವ ಗುರು ಅವರು ನಾ ಖಾವೂಂಗಾ, ನಾ ಖಾನೆ ದೂಂಗಾ ಎಂದು ಹೇಳಿದ್ದರು. ಆದರೂ, ಭ್ರಷ್ಟಾಚಾರ ಮುಂದುವರಿದಿದೆ. ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ಅವರು ಶೇ10ರಷ್ಟು ಸರ್ಕಾರ ಎಂದು ಆರೋಪಿಸಿದ್ದರು. ಆಗ ಅವರು ಸಾಕ್ಷ್ಯಾಧಾರಗಳನ್ನು ನೀಡಿರಲಿಲ್ಲ' ಎಂದು ಬಿ.ಕೆ. ಹರಿಪ್ರಸಾದ್ ಬಿಜೆಪಿ ಸದಸ್ಯರ ವಿರುದ್ಧ ಹರಿಹಾಯ್ದರು.

ಸಭಾಪತಿ ಅವರು ಕಲಾಪವನ್ನು ಗುರುವಾರಕ್ಕೆ ಮುಂದೂಡಿದರು.

ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿ ಕರಪತ್ರ ಹಂಚಿದ 'ಕನ್ನಡ ಮೊದಲು ಅಭಿಯಾನ'ದ ಸದಸ್ಯರು

ಹಿಂದಿ ದಿವಸ ವಿರೋಧಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿ ದಿವಸ ಆಚರಣೆ ವಿರೋಧಿಸಿ ರಾಜ್ಯದ ವಿವಿಧೆಡೆ ಮಂಗಳವಾರ ಪ್ರತಿಭಟನೆಗಳು ನಡೆದವು.

ವಿಧಾನಸೌಧದ ಗಾಂಧಿ ಪ್ರತಿಮೆ ಬಳಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ಶಾಸಕರು ಫಲಕಗಳನ್ನು ಹಿಡಿದು ಹಿಂದಿ ದಿವಸ್ ವಿರುದ್ಧ ಘೋಷಣೆ ಕೂಗಿದರು. ಸ್ವಾತಂತ್ರ್ಯ ಉದ್ಯಾನದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ.ನಾರಾಯಣಗೌಡ ನೇತೃತ್ವದಲ್ಲಿ ಕಾರ್ಯಕರ್ತರು ಧರಣಿ ನಡೆಸಿದರು.

'ಪ್ರತಿವರ್ಷ ಸೆಪ್ಟೆಂಬರ್ 14ರಂದು ಕೇಂದ್ರ ಸರ್ಕಾರ ನಮ್ಮ ತೆರಿಗೆ ಹಣದಲ್ಲಿ ಹಿಂದಿ ದಿವಸ ಆಚರಣೆ ಮಾಡುತ್ತಿದೆ. ಹಿಂದಿ ಭಾಷೆಗೆ ಮಾತ್ರ ಬೇರೆ ಭಾಷೆಗಳಿಗಿಂತ ಮೇಲಿನ ಸ್ಥಾನ ನೀಡಿರುವುದು ತಾರತಮ್ಯ ನೀತಿ. ಸಾಂವಿಧಾನಿಕ ಸಂಸ್ಥೆಗಳ ಮೂಲಕವೇ ಎಲ್ಲಾ ಹಿಂದಿಯೇತರರ ಮೇಲೆ ಹಿಂದಿ ಹೇರಿಕೆ ಮಾಡುತ್ತಿದ್ದು, ಇದು ತಕ್ಷಣದಿಂದಲೇ ನಿಲ್ಲಬೇಕು' ಎಂದು ನಾರಾಯಣಗೌಡ ಒತ್ತಾಯಿಸಿದರು.

ವಿಧಾನಸೌಧದ ಗಾಂಧಿ ಪ್ರತಿಮೆ ಎದುರು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ಶಾಸಕರು ಪ್ರತಿಭಟನೆ ನಡೆಸಿದರು

'ಈ ಅಸಮಾನತೆ ತೊಡೆದು ಹಾಕಬೇಕು, ಸಂವಿಧಾನಕ್ಕೆ ತಿದ್ದುಪಡಿ ತಂದು ಎಲ್ಲ ಇಪ್ಪತ್ತೆರಡು ಭಾಷೆಗಳನ್ನು ಕೇಂದ್ರ ಸರ್ಕಾರದ ಆಡಳಿತ ಭಾಷೆಗಳನ್ನಾಗಿ ಮಾಡಬೇಕು. ಹಿಂದಿ ಮತ್ತು ಇಂಗ್ಲಿಷ್‌ಗೆ ನೀಡಲಾಗಿರುವ ಮಾನ್ಯತೆ ಮತ್ತು ಅವಕಾಶಗಳನ್ನು ಇತರ ಎಲ್ಲ ಭಾಷೆಗಳಿಗೂ ನೀಡಬೇಕು' ಎಂದು ಆಗ್ರಹಿಸಿದರು.

ಮಲ್ಲೇಶ್ವರದ ಕುವೆಂಪು ಪ್ರತಿಮೆ ಬಳಿ ಕರ್ನಾಟಕ ರಕ್ಷಣಾ ವೇದಿಕೆ(ಎಚ್. ಶಿವರಾಮೇಗೌಡ ಬಣ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಎಚ್. ಶಿವರಾಮೇಗೌಡ ಮತ್ತು ಸಾ.ರಾ. ಗೋವಿಂದು ಅವರು ಹಿಂದಿ ವರ್ಣಮಾಲೆ ಚಿತ್ರಕ್ಕೆ ಮಸಿ ಬಳಿದು ಆಕ್ರೋಶ ವ್ಯಕ್ತಪಡಿಸಿದರು.

ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿ 'ಕನ್ನಡ ಮೊದಲು ಅಭಿಯಾನ'ದ ಸದಸ್ಯರು ಹಿಂದಿ ದಿವಸದ ವಿರುದ್ಧ ಕರಪತ್ರಗಳನ್ನು ಹಂಚಿದರು.

ಹಿಂದಿಯಿಂದ ದೇಶಕ್ಕೆ ಜಾಗತಿಕ ವಿಶೇಷ ಗೌರವ: ಮೋದಿ

ನವದೆಹಲಿ/ಸೂರತ್ (ಪಿಟಿಐ): ಹಿಂದಿ ಭಾಷೆಯು ಭಾರತಕ್ಕೆ ಜಾಗತಿಕವಾಗಿ ವಿಶೇಷ ಗೌರವ ತಂದಿದೆ. ಈ ಭಾಷೆಯಲ್ಲಿರುವ ಸರಳತೆ ಮತ್ತು ಸಂವೇದನೆಯು ಯಾವಾಗಲೂ ಜನರನ್ನು ಸೆಳೆಯುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಅಭಿಪ್ರಾಯಪಟ್ಟರು.

ಹಿಂದಿ ದಿನಾಚರಣೆ ಪ್ರಯುಕ್ತ ಬುಧವಾರ ಅವರು, ಅತಿದೊಡ್ಡ ಸಂಖ್ಯೆಯ ಜನರು ಮಾತನಾಡುವ ಈ ಭಾಷೆಯನ್ನು ಬಲಪಡಿಸಲು ಮತ್ತು ಶ್ರೀಮಂತಗೊಳಿಸಲು ದಣಿವರಿಯದ ಪ್ರಯತ್ನ ಮಾಡಿದ ಎಲ್ಲರಿಗೂ ಹೃದಯಪೂರ್ವಕ ಧನ್ಯವಾದ ಎಂದು ಟ್ವೀಟ್ ಮಾಡಿದ್ದಾರೆ.

ಹಿಂದಿ ಎಲ್ಲ ಭಾಷೆಗಳ ಮಿತ್ರ: 'ಹಿಂದಿ ಪ್ರತಿಸ್ಪರ್ಧಿ ಭಾಷೆಯಲ್ಲ, ಬದಲಾಗಿ ದೇಶದ ಎಲ್ಲ ಭಾಷೆಗಳ ಮಿತ್ರನಾಗಿದೆ. ಎಲ್ಲ ಭಾಷೆಗಳು ತಮ್ಮ ಬೆಳವಣಿಗೆಯಲ್ಲಿ ಪರಸ್ಪರ ಅವಲಂಬಿತವಾಗಿವೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಬುಧವಾರ ಹೇಳಿದ್ದಾರೆ.

ಸೂರತ್ ನಗರದಲ್ಲಿ ಅಖಿಲ ಭಾರತ ಅಧಿಕೃತ ಭಾಷಾ ಸಮ್ಮೇಳನ ಉದ್ದೇಶಿಸಿ ಮಾತನಾಡಿದ ಅವರು, 'ಹಿಂದಿ ಮತ್ತು ಗುಜರಾತಿ, ಹಿಂದಿ ಮತ್ತು ತಮಿಳು, ಹಿಂದಿ ಮತ್ತು ಮರಾಠಿ ಸ್ಪರ್ಧಿಗಳು ಎಂದು ಕೆಲವರು ಅಪಪ್ರಚಾರ ನಡೆಸುತ್ತಿದ್ದಾರೆ. ಪ್ರಾದೇಶಿಕ ಭಾಷೆಗಳ ವಿರುದ್ಧ ಹಿಂದಿ ಹೇರಿಕೆ ಮಾಡಲಾಗುತ್ತಿದೆ ಎನ್ನುವ ಅಪಪ್ರಚಾರ ಖಂಡನೀಯ. ಹಿಂದಿ ಭಾಷೆಯು ಬೇರೆ ಯಾವುದೇ ಭಾಷೆಯ ಪ್ರತಿಸ್ಪರ್ಧಿಯಾಗಿರಲು ಸಾಧ್ಯವಿಲ್ಲ. ಹಿಂದಿ ದೇಶದ ಎಲ್ಲ ಭಾಷೆಗಳ ಮಿತ್ರ ಎಂಬುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ಹಿಂದಿ ಜತೆಗೆ ಪ್ರಾದೇಶಿಕ' ಎಂದು ಅವರು ಹೇಳಿದರು.

ಲೋಕಾಯುಕ್ತರ ವೇತನ, ಭತ್ಯೆ ಹೆಚ್ಚಳಕ್ಕೆ ಮಸೂದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಾಯುಕ್ತರ ವೇತನ ಮತ್ತು ಭತ್ಯೆಗಳನ್ನು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯವರ ವೇತನ ಮತ್ತು ಭತ್ಯೆಗಳಿಗೆ ಸರಿಸಮನಾಗಿ ಹೆಚ್ಚಳ ಮಾಡುವುದಕ್ಕೆ ಅವಕಾಶ ಕಲ್ಪಿಸುವ 'ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ಮಸೂದೆ–2022'ಕ್ಕೆ ಸಂಪುಟ ಸಭೆ ಬುಧವಾರ ಒಪ್ಪಿಗೆ ನೀಡಿದೆ.

ಲೋಕಾಯುಕ್ತಕ್ಕೆ ಪ್ರಸ್ತುತ ಒಬ್ಬ ರಿಜಿಸ್ಟ್ರಾರ್ ಇದ್ದಾರೆ. ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಮತ್ತೊಂದು ರಿಜಿಸ್ಟ್ರಾರ್ ಹುದ್ದೆಯನ್ನು ಸೃಜಿಸುವುದಕ್ಕೂ ಈ ಮಸೂದೆ ಅವಕಾಶ ಕಲ್ಪಿಸಲಿದೆ. ವಿಧಾನಮಂಡಲದ ಇದೇ ಅಧಿವೇಶನದಲ್ಲಿ ಈ ಮಸೂದೆ ಮಂಡನೆಯಾಗಲಿದೆ.

ಸಭಾಪತಿ ಆಯ್ಕೆಗೆ ಚುನಾವಣೆ: ವಿಧಾನ ಪರಿಷತ್ ನೂತನ ಸಭಾಪತಿ ಆಯ್ಕೆಗೆ ಮುಂದಿನ ವಾರ ಚುನಾವಣಾ ಪ್ರಕ್ರಿಯೆ ನಡೆಸುವ ತೀರ್ಮಾನವನ್ನೂ ಸಂಪುಟ ಸಭೆ ಕೈಗೊಂಡಿದೆ.

ಸಂಪುಟ ಸಭೆಯ ಪ್ರಮುಖ ತೀರ್ಮಾನಗಳು:

- ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದಿಂದ ಬಡಾವಣೆ ನಿರ್ಮಿಸಲು ಅಲ್ಲಿನ ಕುಂದವಾಡ ಗ್ರಾಮದಲ್ಲಿ 53 ಎಕರೆ 19 ಗುಂಟೆ ಜಮೀನನ್ನು ರೈತರಿಂದ ನೇರವಾಗಿ ಖರೀದಿಸಲು ಒಪ್ಪಿಗೆ.
- ಮೈಸೂರು ವೈದ್ಯಕೀಯ ಕಾಲೇಜಿನ ವ್ಯಾಪ್ತಿಯ ಚೆಲುವಾಂಬ ಆಸ್ಪತ್ರೆ ಮತ್ತು ಪಿ.ಕೆ.ಟಿ.ಬಿ. ಆಸ್ಪತ್ರೆಗಳ 14 ಕಟ್ಟಡಗಳ ನವೀಕರಣಕ್ಕೆ ₹ 89 ಕೋಟಿ.
- ಹುಬ್ಬಳ್ಳಿಯಲ್ಲಿ ₹ 250 ಕೋಟಿ ವೆಚ್ಚದಲ್ಲಿ ಜಯದೇವ ಹೃದ್ರೋಗ ಸಂಸ್ಥೆಯ ಪ್ರಾದೇಶಿಕ ಕೇಂದ್ರ ನಿರ್ಮಿಸುವ ಪ್ರಸ್ತಾವಕ್ಕೆ ಆಡಳಿತಾತ್ಮಕ ಅನುಮೋದನೆ.
- ಬಳ್ಳಾರಿ ನಗರದ ನಲ್ಲಚೆರವು ಗ್ರಾಮದಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್‌ಗೆ 19 ಎಕರೆ 36 ಗುಂಟೆ ಜಮೀನು ಗುತ್ತಿಗೆಗೆ ನೀಡುವ ಪ್ರಸ್ತಾವಕ್ಕೆ ಒಪ್ಪಿಗೆ.
- ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ಹಂದಾಡಿ–ಕುಮ್ರಗೋಡಿನಿಂದ ಬಾರ್ಕೂರು–ಬೆಣ್ಣೆಕುದ್ರು ಮಧ್ಯದಲ್ಲಿ ಸೀತಾನದಿಗೆ ₹ 160.25 ಕೋಟಿ ವೆಚ್ಚದಲ್ಲಿ ಸೇತುವೆಸಹಿತ ಉಪ್ಪು ನೀರು ತಡೆ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ಅಂದಾಜುಪಟ್ಟಿಗೆ ಒಪ್ಪಿಗೆ.

ಐಐಟಿ ಮಟ್ಟಕ್ಕೆ ಏರಿಸುವ ಕನಸಿಗೆ ರೆಕ್ಕೆ

ಯುವಿಸಿಇಗೆ ಸ್ವಾಯತ್ತೆಯ ಗರಿ –ಉತ್ಕೃಷ್ಟತೆಯ ಸಾಧನೆಗೆ ಮುನ್ನುಡಿ

ಬಸವರಾಜ ಬೊಮ್ಮಾಯಿ

ಕರ್ನಾಟಕದ ವಿಶ್ವವಿದ್ಯಾಲಯ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು (ಯುವಿಸಿಇ) ರಾಜ್ಯದ ಅತ್ಯಂತ ಹಳೆಯ ಮತ್ತು ಪ್ರತಿಷ್ಠೆಯ ಶಿಕ್ಷಣ ಸಂಸ್ಥೆ. ಬೆಂಗಳೂರಿನ ವಿಧಾನಸೌಧದ ಕೂಗಳತೆ ದೂರದಲ್ಲಿ ಇರುವ ಕೆಂಪು ಕಟ್ಟಡದಲ್ಲಿನ ಈ ಎಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಿದವರು ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಆಗಿನ ದಿವಾನರಾಗಿದ್ದ ಸರ್ ಎಂ.ವಿಶ್ವೇಶ್ವರಯ್ಯ ಅವರು.

ಒಂದು ನಾಡು ಕಟ್ಟಲು ಅಗತ್ಯವಾದ ಕೌಶಲಗಳು ಉಳ್ಳ ಪೀಳಿಗೆ ಬೇಕು ಎಂದು ಅವರು ಇಬ್ಬರೂ ಈ ಕಾಲೇಜನ್ನು ಆರಂಭಿಸಿದರು. ಹಾಗೆ ನೋಡಿದರೆ ಇದು ಕರ್ನಾಟಕದ ಮೊದಲನೇ ಎಂಜಿನಿಯರಿಂಗ್‌ಕಾಲೇಜು. ಮತ್ತು ದೇಶದಲ್ಲಿಯೇ ಐದನೆಯ ಕಾಲೇಜು.

ಈ ಕಾಲೇಜಿನಲ್ಲಿ ಓದಿ ರಾಷ್ಟ್ರೀಯ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದವರು ಡಾ.ವಿ.ಕೆ.ಅತ್ರೆ, ಎಂ.ಆರ್. ಶ್ರೀನಿವಾಸ್, ರೊದ್ದಂ ನರಸಿಂಹ, ಪ್ರಹ್ಲಾದ್, ಅನುರಾಧಾ, ವಿಜಯ ಭಾಸ್ಕರ, ರಮೇಶ್ ಅರವಿಂದ, ನನ್ನ ಪ್ರಧಾನ ಕಾರ್ಯದರ್ಶಿ ಮಂಜುನಾಥ ಪ್ರಸಾದ್ ಹೀಗೆ ಹತ್ತು ಹಲವರು. ಆದರೆ, 105 ವರ್ಷಗಳ ಈ ಸಂಸ್ಥೆಯ ವೈಭಯಯುತ ಕಾಲವು ಮುಗಿಯುತ್ತ ಬಂದಿದೆ ಎಂದು ಅನಿಸತೊಡಗಿತ್ತು. ರಾಜ್ಯದ ಹತ್ತಾರು ಕಾಲೇಜುಗಳಲ್ಲಿ ಇದೂ ಒಂದು ಎನ್ನುವಂಥ ಸ್ಥಿತಿ ಬಂದಿತ್ತು.

ನಾನು ಓದಿದ್ದು ಹುಬ್ಬಳ್ಳಿಯ ಬಿ.ವಿ.ಬಿ ಎಂಜಿನಿಯರಿಂಗ್ ಕಾಲೇಜಿನಲ್ಲಿ. ಅದು ಕೂಡ ರಾಜ್ಯದ ಅತ್ಯಂತ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದು. ಆದರೆ, ಆಗಿನ ಕಾಲದಲ್ಲಿ ನಮಗೆಲ್ಲ ಬೆಂಗಳೂರಿಗೆ ಬಂದು ವಿಶ್ವೇಶ್ವರಯ್ಯ ಅವರು ಸ್ಥಾಪಿಸಿದ ಯುವಿಸಿಇ ಕಾಲೇಜಿನಲ್ಲಿ ಓದಬೇಕು ಎಂಬ ಹಂಬಲ ಇತ್ತು. ಆದರೆ, ಅನೇಕ ಕಾರಣಗಳಿಂದಾಗಿ ಅದು ಆಗಲಿಲ್ಲ.

ಆದರೆ, ನಾನು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ನಮ್ಮ ನೆಚ್ಚಿನ ಪ್ರಧಾನಿ ನರೇಂದ್ರ ಮೋದಿ ಅವರ ಆಶಯದಂತೆ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸುವಾಗ ಅದರಲ್ಲಿನ ಪರಿಕಲ್ಪನೆಗಳಿಗೆ ಅನುಸಾರವಾಗಿ ನಮ್ಮ ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ ಏನೆಲ್ಲ ಮಾಡಬಹುದು ಎಂದು ನಾನು ಮತ್ತು ನನ್ನ ಸಹೋದ್ಯೋಗಿಯಾದ ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್.ಅಶ್ವತ್ಥ ನಾರಾಯಣ ಅವರು ಕೂಡಿಕೊಂಡು ಹಲವು ಸುತ್ತಿನ ಚರ್ಚೆ ಮಾಡಿದೆವು. ತಜ್ಞರ ಸಲಹೆ ಪಡೆದೆವು. ಅಲ್ಲಿ ನಮ್ಮ ಗಮನಕ್ಕೆ ಬಂದುದು ಯುವಿಸಿಇ ಇತಿಹಾಸ ಮತ್ತು ಅದರ ಮಹತ್ವ.

ಈ ಕಾಲೇಜನ್ನು ದೇಶದ ಪ್ರತಿಷ್ಠಿತ ಐಐಟಿ ಮತ್ತು ಐಐಎಂಗಳ ಮಾದರಿಯಲ್ಲಿ, ರಾಷ್ಟ್ರೀಯ ಹೆಗ್ಗಳಿಕೆಯ ಒಂದು ಕಾಲೇಜಾಗಿ ರೂಪಿಸಬೇಲು ಎಂದು ಹಲವರು ಸಲಹೆ ಕೊಟ್ಟಿದ್ದರು. ಅದಕ್ಕೆ ಅನುಸಾರವಾಗಿ ಕಾಲೇಜಿನ ಭವಿಷ್ಯದ ಸ್ವರೂಪ ಹೇಗಿರಬೇಕು ಎಂದು ತಿಳಿಯಲು ಪ್ರೊ.ಸಡಗೋಪನ್ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಯಿತು.

ಆ ಸಮಿತಿಯು ಅನೇಕ ಸುತ್ತಿನ ಚರ್ಚೆ ನಡೆಸಿ ಈ ಕಾಲೇಜನ್ನು ಒಂದು ಸ್ವತಂತ್ರ ಮತ್ತು ಸ್ವಾಯತ್ತ ವಿಶ್ವವಿದ್ಯಾಲಯವಾಗಿ ರೂಪಿಸಬೇಕು ಎಂದು ಸಲಹೆ ನೀಡಿತು. ಇದು ಕೇವಲ ಔಪಚಾರಿಕ ಬದಲಾವಣೆ ಎನಿಸದೇ ಮೂಲಭೂತ ಬದಲಾವಣೆ ಎನಿಸಬೇಕು. ಮತ್ತು ಎಲ್ಲ ಅರ್ಥದಲ್ಲಿಯೂ ವಿಶ್ವವಿದ್ಯಾಲಯವು ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ಆಡಳಿತಾತ್ಮಕವಾಗಿ ಸ್ವತಂತ್ರವಾಗಿಯೂ ಸ್ವಾಯತ್ತವಾಗಿಯೂ ಇರಬೇಕು ಎಂಬ ಸಮಿತಿಯ ಶಿಫಾರಸನ್ನು ಸರ್ಕಾರ ಒಪ್ಪಿಕೊಂಡಿತು. ಮತ್ತು ಶಾಸನಸಭೆಯಲ್ಲಿ ಮೊದಲು ವಿಧೇಯಕ ಅಂಗೀಕರಿಸಿ 2022ರ ಫೆಬ್ರುವರಿಯಲ್ಲಿ ಈ ಕುರಿತು ಅಧಿಸೂಚನೆ ಹೊರಡಿಸಲಾಯಿತು. ಇಲ್ಲಿ ಉಲ್ಲೇಖಿಸಬೇಕಾದ ಸಂಗತಿ ಎಂದರೆ ಇಂಥ ಸಂಸ್ಥೆಗಳ ಮೇಲಿನ ಹಿಡಿತವನ್ನು ಬಿಟ್ಟುಕೊಡಲು ಸರ್ಕಾರದಲ್ಲಿ ಇದ್ದವರು ಸಾಮಾನ್ಯವಾಗಿ ಒಪ್ಪುವುದಿಲ್ಲ. ಆದರೆ, ನಾವು ಒಂದು ದಿಟ್ಟ ನಿರ್ಣಯವನ್ನು ಮಾಡಿದೆವು. ನಮಗೆ ಇದರಲ್ಲಿ ಯಾವ ಹಸ್ತಕ್ಷೇಪ ಮಾಡುವ ಇಚ್ಛೆ ಇರಲಿಲ್ಲ. ಈ ವಿಶ್ವವಿದ್ಯಾಲಯಕ್ಕೆ ವಾರ್ಷಿಕ ₹ 150 ಕೋಟಿ ಅನ್ನು ಬಜೆಟ್‌ನಲ್ಲಿ ಒದಗಿಸಲೂ ಸರ್ಕಾರ ನಿರ್ಧರಿಸಿದೆ. ದುಸ್ಥಿತಿಯಲ್ಲಿದ್ದ ಮೆಕ್ಯಾನಿಕಲ್ ಬ್ಲಾಕ್ ಅಭಿವೃದ್ಧಿಗೆ ₹ 85 ಕೋಟಿ ಬಿಡುಗಡೆಗೆ ಸಂಪುಟ ಒಪ್ಪಿಗೆ ಸೂಚಿಸಿದೆ.

ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿರುವ ಐಐಟಿ ಮತ್ತು ಐಐಎಂಗಳ ಹಾಗೆ ಇದು ಕೂಡ ಸರ್ಕಾರ ಮತ್ತು ಖಾಸಗಿ ಪಾಲುದಾರಿಕೆಯಲ್ಲಿಯೇ ನಡೆಯುತ್ತದೆ. ಅದಕ್ಕೆ ಪೂರಕವಾಗಿ, ಈ ಸಂಸ್ಥೆಯ ಎಲ್ಲ ಆಗುಹೋಗುಗಳನ್ನು ನೋಡಿಕೊಳ್ಳುವ ಆಡಳಿತ ಮಂಡಳಿಗೆ ಸಂಪೂರ್ಣ ಸ್ವಾತಂತ್ರ್ಯ ಇರುತ್ತದೆ. ಅದಕ್ಕಾಗಿಯೇ ಉದ್ಯಮದಲ್ಲಿ ಬಹಳ ದೊಡ್ಡ ಹೆಸರು ಮಾಡಿರುವ ಮದ್ರಾಸ್ ಐಐಟಿಯಿಂದ ಬಿ.ಟೆಕ್‌ಪದವಿಯನ್ನೂ ಜಮ್‌ಶೆಡ್‌ಪುರದ ಎಕ್ಸ್‌ಎಲ್‌ಆರ್‌ಐ ಸಂಸ್ಥೆಯಿಂದ ಎಂಬಿಎ ಪದವಿಯನ್ನೂ ಪಡೆದು ಟಾಟಾ ಸ್ಟೀಲ್ ಸಂಸ್ಥೆಯಲ್ಲಿ ಉಪಾಧ್ಯಕ್ಷರಾಗಿ ಕೆಲಸ ಮಾಡಿರುವ ಬಿ.ಮುತ್ತುರಾಮನ್ ಅವರನ್ನು ಈ ಸಂಸ್ಥೆಯ ಪ್ರಥಮ ಅಧ್ಯಕ್ಷರಾಗಿ ನೇಮಿಸಲಾಗಿದೆ. ಅವರ ಜತೆಗೆ ಹಲವರು ಪರಿಣತ ಸದಸ್ಯರೂ ಆಡಳಿತ ಮಂಡಳಿಯಲ್ಲಿ ಇರಲಿದ್ದಾರೆ.

ಇವರೆಲ್ಲ ಸೇರಿ ಸಮಕಾಲೀನ ಅಗತ್ಯಗಳಿಗೆ ಬೇಕಾದ ಪಠ್ಯಕ್ರಮವನ್ನು ರೂಪಿಸಲಿದ್ದಾರೆ. ಪರಿಣತ ಅಧ್ಯಾಪಕರನ್ನು ನೇಮಿಸಿಕೊಳ್ಳಲಿದ್ದಾರೆ. ಸಕಲ ಮೂಲಸೌಕರ್ಯಗಳನ್ನು ಒದಗಿಸಲಿದ್ದಾರೆ. ಈಗಾಗಲೇ ಸರ್ಕಾರ ₹ 10 ಕೋಟಿ ವೆಚ್ಚದಲ್ಲಿ ಆಧುನೀಕರಣ ಪ್ರಕ್ರಿಯೆ ಆರಂಭಿಸಿದೆ. ಮೇಜರ್ ಜನರಲ್ ನೀಲಕಂಠಪ್ಪ ಅವರ ನೇತೃತ್ವದ ಹಳೆಯ ವಿದ್ಯಾರ್ಥಿಗಳ ಸಂಘವು 10 ಲಕ್ಷ ಡಾಲರ್ ವೆಚ್ಚದಲ್ಲಿ ಅತ್ಯಾಧುನಿಕ ಪ್ರಯೋಗಾಲಯವನ್ನು ಸ್ಥಾಪಿಸಿದೆ. ಮತ್ತು ಇನ್ನೂ ₹ 30 ಕೋಟಿ ಅನ್ನು ಇದಕ್ಕಾಗಿ ಖರ್ಚು ಮಾಡುವುದಾಗಿ ಭರವಸೆ ಕೊಟ್ಟಿದ್ದಾರೆ.

ಇನ್ನು ಎಂಟು ವರ್ಷಗಳಲ್ಲಿ ಈ ವಿಶ್ವವಿದ್ಯಾಲಯವನ್ನು ರಾಷ್ಟ್ರದಲ್ಲಿಯೇ ಹೆಸರಾಂತ ಐಐಟಿ ಅಥವಾ ಐಐಎಂ ಹಾಗೆ ರೂಪಿಸುವುದು ಸರ್ಕಾರದ ಗುರಿಯಾಗಿದೆ. ಅದಕ್ಕೆ ಪೂರಕವಾಗಿ ಅವರು ಸರ್‌ಎಂ.ವಿಶ್ವೇಶ್ವರಯ್ಯ ಅವರ ಜನ್ಮದಿನವಾದ ಇಂದು (ಸೆಪ್ಟೆಂಬರ್ 15) ಈ ವಿಶ್ವವಿದ್ಯಾಲಯವನ್ನು ಔಪಚಾರಿಕವಾಗಿ ಉದ್ಘಾಟಿಸಲಾಗುವುದು. 2030ರ ವೇಳೆಗೆ ಈ ವಿಶ್ವವಿದ್ಯಾಲಯ ಹೇಗಿರಬೇಕು ಎಂಬ ದಿಕ್ಸೂಚಿ ಪತ್ರವನ್ನೂ ಬಿಡುಗಡೆ ಮಾಡಲಿದ್ದೇವೆ. ನಾವು ಬರೀ ಮಾತನಾಡುವುದಿಲ್ಲ. ಅದನ್ನು ಕ್ರಿಯೆಗೆ ಇಳಿಸುತ್ತೇವೆ ಎಂಬುದಕ್ಕೆ ಇದು ಮಹತ್ತರವಾದ ನಿದರ್ಶನ.

ಒಟ್ಟು ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ ನಾವು ಮಾಡಿರುವ ಸಾಧನೆಗಳು ಅಸಾಧಾರಣವಾದುವು ಎಂದು ಹೇಳಲು ನನಗೇನೂ ಸಂಕೋಚವಿಲ್ಲ. ರಾಷ್ಟ್ರಮಟ್ಟದಲ್ಲಿಯೇ ಎನ್‌ಇಪಿಯನ್ನು ಜಾರಿಗೆ ತಂದ ಮೊದಲ ರಾಜ್ಯ ನಮ್ಮದು. ಎನ್‌ಐಟಿಗಳ ಮಾದರಿಯಲ್ಲಿ ರಾಜ್ಯದ ಏಳು ಸರ್ಕಾರಿ ಎಂಜಿಯರಿಂಗ್ ಕಾಲೇಜುಗಳ ಉನ್ನತೀಕರಣ (ಕೆ.ಐ.ಟಿ), ಐಐಟಿ ಮಟ್ಟದ ಸೂಪರ್ 30 ಎಂಜಿಯರಿಂಗ್ ಕಾಲೇಜುಗಳನ್ನು ಅಸ್ತಿತ್ವಕ್ಕೆ ತರುವುದು ಮತ್ತು ಐದು ಲಕ್ಷ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸುವ ಸಮಗ್ರ ಕರ್ನಾಟಕ ಕಲಿಕಾ ನಿರ್ವಹಣೆ (ಎಲ್‌ಎಂಎಸ್) ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿರುವುದನ್ನು ಇಲ್ಲಿ ಉಲ್ಲೇಖಿಸಲು ನನಗೆ ಹೆಮ್ಮೆಯಾಗುತ್ತದೆ.

ದೊಡ್ಡ ಕನಸು ಕಾಣುವುದು ಮುಖ್ಯ. ಅಂಥ ಕನಸು ಕಂಡರೆ ಅವು ಒಂದು ದಿನ ನನಸಾಗುವುದು ನಿಜ. ವಿಶ್ವೇಶ್ವರಯ್ಯ ಅವರು ನಾಡು ಕಟ್ಟಲು ಬೇಕಾದ ಪೀಳಿಗೆಯನ್ನು ಸೃಷ್ಟಿಸಿದ ಈ ಕಾಲೇಜು ತನ್ನ ಆಶಯವನ್ನು ಈಡೇರಿಸುವ ಕಾಲ ಈಗಿನ ನಮ್ಮ ಸರ್ಕಾರದಲ್ಲಿ ಕೂಡಿ ಬಂದಿದೆ ಎಂದರೆ ಅದು ಅತಿಶಯೋಕ್ತಿಯ ಮಾತು ಅಲ್ಲ.

(ಲೇಖಕರು: ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ)

ಯುವಿಸಿಇ ವಿಶ್ವವಿದ್ಯಾಲಯ ಉದ್ಘಾಟನೆ ಇಂದು

ಬೆಂಗಳೂರು: ಐಐಟಿ ಮಾದರಿಯ ಪ್ರಪ್ರಥಮ ಸ್ವಾಯತ್ತ ಸಂಸ್ಥೆಯಾಗಿರುವ 'ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ'ವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಸಂಜೆ 5 ಗಂಟೆಗೆ ಉದ್ಘಾಟಿಸಲಿದ್ದಾರೆ. ನಗರದ ಕೆ.ಆರ್.ವೃತ್ತದಲ್ಲಿ ಇರುವ ಯುವಿಸಿಇ ಆವರಣದಲ್ಲಿ ನಡೆಯಲಿರುವ ಈ ಸಭೆಯಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಸಿ ಎನ್ ಅಶ್ವತ್ಥ ನಾರಾಯಣ ಉಪಸ್ಥಿತರಿರಲಿದ್ದಾರೆ. ಇದೇ ಸಂದರ್ಭದಲ್ಲಿ ಸರ್ ಎಂ.ವಿಶ್ವೇಶ್ವರಯ್ಯ ಅವರ 162ನೇ ಜನ್ಮದಿನದ ಅಂಗವಾಗಿ 'ಎಂಜಿನಿಯರುಗಳ ದಿನಾಚರಣೆ'ಯನ್ನೂ ಆಚರಿಸಲಾಗುವುದು.

105 ವರ್ಷಗಳಷ್ಟು ಹಳೆಯದಾದ ಯುವಿಸಿಇ ಕಾಲೇಜನ್ನು ಇತ್ತೀಚೆಗೆ 10 ಕೋಟಿ ರೂಪಾಯಿ ವೆಚ್ಚದಲ್ಲಿ ನವೀಕರಿಸಲಾಗಿದೆ. ಸದ್ಯಕ್ಕೆ ಇಲ್ಲಿರುವ ಆರು ವಿಭಾಗಗಳಲ್ಲಿ 3,300 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಎನ್‌ಇಪಿ ಚೌಕಟ್ಟಿಗೆ ಅನುಗುಣವಾಗಿ ಯುವಿಸಿಇಗೆ ಸ್ವಾಯತ್ತ ವಿವಿ ಸ್ಥಾನಮಾನ ಕೊಡಲಾಗುತ್ತಿದೆ. ಇದರ ಜತೆ ಉದ್ಯಮಗಳು ಮತ್ತು ಹಿರಿಯ ವಿದ್ಯಾರ್ಥಿಗಳ ಸಂಘ ಕೂಡ ಕೈ ಜೋಡಿಸಲಿವೆ. ಇಲ್ಲಿ ಸಹಭಾಗಿತ್ವದ ಮೂಲಕ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಸಚಿವ ಅಶ್ವತ್ಥ ನಾರಾಯಣ ತಿಳಿಸಿದ್ದಾರೆ.

ಯುವಿಸಿಇ: ಕಾಲೇಜಿನ ಹಳೆಯ ವಿದ್ಯಾರ್ಥಿಗಳು	
ಡಾ.ವಿ.ಕೆ.ಅತ್ರೆ	ರಕ್ಷಣಾ ಸಚಿವರ ಮಾಜಿ ಸಲಹೆಗಾರ
ಎಂ.ಆರ್.ಶ್ರೀನಿವಾಸನ್	ಪರಮಾಣು ವಿಜ್ಞಾನಿ
ರೊದ್ದಂ ನರಸಿಂಹನ್	ವೈಮಾನಿಕ ವಿಜ್ಞಾನಿ
ಅನುರಾಧಾ ಟಿ.ಕೆ	ಇಸ್ರೊ ಯೋಜನಾ ನಿರ್ದೇಶಕಿ
ವಿಜಯ ಭಾಸ್ಕರ	ಪ್ರಸಿದ್ಧ ಸಂಗೀತಗಾರ
ರಮೇಶ್ ಅರವಿಂದ	ಪ್ರಸಿದ್ಧ ನಟ
ಆರ್.ಗಣೇಶ್	ಶತಾವಧಾನಿ ಮತ್ತು ಪ್ರಸಿದ್ಧ ಸಂಸ್ಕೃತ ವಿದ್ವಾಂಸ
ದತ್ತಣ್ಣ	ವಿಂಗ್ ಕಮಾಂಡರ್, ಪ್ರಸಿದ್ಧ ನಟ
ಮನೋಮೂರ್ತಿ	ಪ್ರಸಿದ್ಧ ಸಂಗೀತಗಾರ
ಜಿ.ಕುಮಾರ್ ನಾಯಕ್	ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ
ಮಂಜುನಾಥ ಪ್ರಸಾದ್	ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ
ಮೇಜರ್ ಜನರಲ್ ನೀಲಕಂಠಪ್ಪ	ಪ್ರಸ್ತುತ, ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ, ಸಂಘದ 1000 ಆಜೀವ ಸದಸ್ಯರು

ಯೂನಿವೆಸಿಟಿ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಎಂಜಿನಿಯರಿಂಗ್ (ಯು.ವಿ.ಸಿ.ಇ) ಕಾಲೇಜಿನ ಒಂದು ನೋಟ.

ಕರ್ನಾಟಕದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ (2020)ಯನ್ನು ಜಾರಿಗೊಳಿಸುವಲ್ಲಿ ಶಿಕ್ಷಣ ತಜ್ಞರು ಸಾಕಷ್ಟು ಕೆಲಸ ಮಾಡಿದ್ದಾರೆ. ಎನ್‌ಇಪಿಯನ್ನು ಜಾರಿ ಮಾಡಿರುವ ಮೊದಲ ರಾಜ್ಯ ಕರ್ನಾಟಕ ಎಂಬುದೂ ಇಲ್ಲಿ ಉಲ್ಲೇಖನಾರ್ಹ. ಇದರೊಂದಿಗೆ ಕರ್ನಾಟಕವು ಇದುವರೆಗೆ ಒಂದು ವಿಶ್ವವಿದ್ಯಾಲಯಕ್ಕೆ ಸಂಲಗ್ನವಾಗಿದ್ದ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜನ್ನು ಸ್ವತಂತ್ರ, ಸ್ವಾಯತ್ತ ವಿಶ್ವವಿದ್ಯಾಲಯವಾಗಿ ಪರಿವರ್ತಿಸಿ ಅದನ್ನು ರಾಷ್ಟ್ರಮಟ್ಟದ ಐಐಟಿ ಮಟ್ಟಕ್ಕೆ ಏರಿಸುವ ಅಸಾಧಾರಣ ಹೆಜ್ಜೆ ಇಟ್ಟಿದೆ. ಇದು ಬರೀ ಕರ್ನಾಟಕದಲ್ಲಿ ಮಾತ್ರವಲ್ಲ ಇಡೀ ಭಾರತದಲ್ಲಿ ತಾಂತ್ರಿಕ ಶಿಕ್ಷಣವನ್ನು ಜಾಗತಿಕ ಮಟ್ಟಕ್ಕೆ ಎತ್ತರಿಸಲಿದೆ ಎಂಬುದರಲ್ಲಿ ನನಗೆ ಯಾವ ಅನುಮಾನವೂ ಇಲ್ಲ. ಕರ್ನಾಟಕ ಸರ್ಕಾರದ ಈ ದಿಟ್ಟ ಉಪಕ್ರಮವು ದೇಶದ ತಾಂತ್ರಿಕ ಪ್ರಗತಿ ಮತ್ತು ಆವಿಷ್ಕಾರದಲ್ಲಿ ಮಹತ್ತರ ಪರಿಣಾಮ ಬೀರಲಿದೆ. ಇದು ಆಗುತ್ತಿರುವುದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ದೂರದೃಷ್ಟಿ ಮತ್ತು ಸಂಕಲ್ಪದ ಫಲ. ಅವರ ಜತೆಗೆ ಈ ಉಪಕ್ರಮದ ಚಾಲಕ ಶಕ್ತಿಯಾಗಿ ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥ ನಾರಾಯಣ ಅವರು ನಿಂತಿದ್ದಾರೆ. ದೂರದೃಷ್ಟಿ ಮತ್ತು ಕ್ರಿಯಾಶೀಲತೆ ಸೇರಿದರೆ ಇಡೀ ಜಗತ್ತನ್ನೇ ಬದಲಿಸಬಹುದು ಎಂಬ ಮಾತಿಗೆ ಸಾಕ್ಷಿ ಒದಗಿಸುವಂತಿದೆ ಅವರ ಇಬ್ಬರ ಈ ನಡೆ.

ಬಿ.ಮುತ್ತುರಾಮನ್, ಯುವಿಸಿಇ ಆಡಳಿತ ಮಂಡಳಿ ಅಧ್ಯಕ್ಷ

ನಾನು ಯುವಿಸಿಇಯಲ್ಲೇ ಎಂಜಿನಿಯರಿಂಗ್ ಮಾಡಿದವನು. ಚಿನ್ನದ ಪದಕ ಕೂಡ ಪಡೆದೆ. ಆಮೇಲೆ, ದೆಹಲಿಯ ಐಐಟಿಯಲ್ಲಿ ಎಂ.ಟೆಕ್ ಮಾಡಿಕೊಂಡು ಬಂದು, ಮತ್ತೆ ಇಲ್ಲೇ ಆರು ವರ್ಷ ಉಪನ್ಯಾಸಕನಾಗಿದ್ದೆ. ಅಂದರೆ, ಯುವಿಸಿಇಯಲ್ಲಿ ಹತ್ತು ವರ್ಷ ಕಾಲ ನಾನು ಆತ್ಮೀಯ ಒಡನಾಟ ಇಟ್ಟುಕೊಂಡಿದ್ದೆ. ಆಗಿನ ಮೂಲಸೌಲಭ್ಯಕ್ಕೆ ಹೋಲಿಸಿದರೆ ಈಗ ವಿಶ್ವದರ್ಜೆ ಸೌಲಭ್ಯ, ಅನುಕೂಲಗಳಿವೆ. ಈ ಅಭೂತಪೂರ್ವ ಸುಧಾರಣೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಮತ್ತು ಶಿಕ್ಷಣ ಪ್ರೇಮಿಗಳಾಗಿರುವ ಉನ್ನತ ಶಿಕ್ಷಣ ಸಚಿವರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರೇ ಕಾರಣಕರ್ತರು. ನಾವೆಲ್ಲರೂ ಸೇರಿ, ಯುವಿಸಿಇ ಗತವೈಭವವು ಪುನಃ ಮರುಕಳಿಸುವಂತೆ ಮಾಡಬೇಕು ಎನ್ನುವುದೇ ನನ್ನ ಆಸೆ. ನಾವೆಲ್ಲರೂ ಶಕ್ತಿ ಮೀರಿ ಶ್ರಮಿಸೋಣ. ಯುವಿಸಿಇ ಮತ್ತೊಮ್ಮೆ ರಾಜ್ಯದ ಹಾಗೂ ದೇಶದ ಶೈಕ್ಷಣಿಕ ರಂಗದಲ್ಲಿ ಪ್ರಜ್ವಲಿಸುವ ತಾರೆಯಂತೆ ಬೆಳಗುವಂತೆ ಮಾಡೋಣ.

ಮಂಜುನಾಥ್ ಪ್ರಸಾದ್,
ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಉದ್ಘಾಟನೆಯಾಗುತ್ತಿರುವುದು ಒಟ್ಟು ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನದ ಜಾರಿಯಲ್ಲಿನ ದೂರದೃಷ್ಟಿಗೆ ಪೂರಕವಾಗಿಯೇ ಇದೆ. ಕರ್ನಾಟಕದ ಶಿಕ್ಷಣ ಕ್ಷೇತ್ರವನ್ನು ಸಂಪೂರ್ಣವಾಗಿ ರೂಪಾಂತರಿಸಲಿರುವ ಯೋಜನೆಗಳಲ್ಲಿ ಸೂಪರ್ ೩೦ ಎಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭಿಸಲು ಅನುವು ಮಾಡುವ ಕರ್ನಾಟಕ ಉನ್ನತ ಶಿಕ್ಷಣ ಸಂಸ್ಥೆಗಳ ಮಸೂದೆ (ರೇಟೆ) ಮತ್ತು ಎನ್‌ಐಟಿಗಳ ಮಾದರಿಯಲ್ಲಿ ಏಳು ಎಂಜಿನಿಯರಿಂಗ್ ಕಾಲೇಜುಗಳನ್ನು ಉನ್ನತೀಕರಿಸಲಿರುವ ಕೆ.ಐ.ಟಿಗಳು ಮಹತ್ವದ ಹೆಜ್ಜೆಗಳು. ಕರ್ನಾಟಕವು ಈಗಾಗಲೇ ಐ.ಟಿ ಮತ್ತು ಬಿ.ಟಿ ಕ್ಷೇತ್ರದಲ್ಲಿ ದೇಶದ ರಕ್ಷಣಾ ವಲಯದ ಸಂಶೋಧನೆಯಲ್ಲಿ ಮತ್ತು ವೈಜ್ಞಾನಿಕ ಸಾಧನೆಗಳಲ್ಲಿ ದಶಕಗಳಿಂದ ಮುಂಚೂಣಿಯಲ್ಲಿ ಇದೆ. ಈಗ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವನ್ನು ಉದ್ಘಾಟನೆ ಮಾಡುತ್ತಿರುವುದು ಕರ್ನಾಟಕವನ್ನು ಇಡೀ ದೇಶದ ಶೈಕ್ಷಣಿಕ ಕ್ಷೇತ್ರದಲ್ಲಿ ಯಾರೂ ಮೀರಿಸಲಾಗದ ಉನ್ನತ ಸ್ಥಾನದಲ್ಲಿ ತಂದು ನಿಲ್ಲಿಸುತ್ತದೆ.

ಪ್ರೊ. ಸಡಗೋಪನ್, ಮಾಜಿ ನಿರ್ದೇಶಕ, ಐಐಐಟಿ ಬೆಂಗಳೂರು

ಪ್ರೊ. ಸಡಗೋಪನ್ ಸಮಿತಿಯ ಸದಸ್ಯನಾಗಿ ಕೆಲಸ ಮಾಡಲು ಅವಕಾಶ ಸಿಕ್ಕಿದ್ದು ನನ್ನ ಅದೃಷ್ಟ ಎಂದು ಭಾವಿಸಿದ್ದೇನೆ. ಈ ಸಮಿತಿಯಲ್ಲಿ ಅನೇಕ ಕ್ಷೇತ್ರಗಳ ಪರಿಣತರು ಒಟ್ಟಾಗಿ ಕೂಡಿ, ಅದೂ ಕೋವಿಡ್ ಮಹಾಮಾರಿಯ ಹಾವಳಿ ಉತ್ತುಂಗದಲ್ಲಿ ಇದ್ದಾಗ, ಮಿಂಚಿನ ವೇಗದಲ್ಲಿ ವರ್ಚುಯೆಲ್ ಸಭೆಗಳನ್ನು ಮಾಡಿದೆವು. ಕೇವಲ ಅರವತ್ತು ದಿನಗಳಲ್ಲಿ ಯುವಿಸಿಇ ಮಸೂದೆಯ ಕರಡನ್ನು ಸಿದ್ಧ ಮಾಡಿ ಸರ್ಕಾರಕ್ಕೆ ಸಲ್ಲಿಸಿದೆವು. ಹಲವು ಪ್ರಕ್ರಿಯೆಗಳ ನಂತರ ಅಂತೂ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ವಿಶ್ವವಿದ್ಯಾಲಯ ಮಸೂದೆ ಪಾಸಾಯಿತು. ಬಹುದಿನಗಳ ಈ ಕನಸು ನನಸಾದುದಕ್ಕೆ ಯುವಿಸಿಇ ವಿದ್ಯಾರ್ಥಿಗಳು ಮತ್ತು ಹಳೆಯ ವಿದ್ಯಾರ್ಥಿಗಳು ಸದಾ ಋಣಿಯಾಗಿರುತ್ತೇವೆ.

ಬಿ.ವಿ.ಜಗದೀಶ್, ಯುವಿಸಿಇ ವಿದ್ಯಾರ್ಥಿ (1978ರ ಬ್ಯಾಚ್), ಸಿಲಿಕಾನ್ ಸಿಟಿಯಲ್ಲಿ ಹಲವು ಉದ್ಯಮಗಳ ಸ್ಥಾಪಕ, ಮಾರ್ಗದರ್ಶಕ ಮತ್ತು ದಾನಿ.

ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರೊಂದಿಗೆ ಸಿಬ್ಬಂದಿ, ಅಧಿಕಾರಿಗಳು.

'ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಗೆ ಮುನ್ನುಡಿ'

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಸಚಿವ ಸಿ.ಎನ್. ಅಶ್ವತ್ಥನಾರಾಯಣ ಅವರ ಸಂದರ್ಶನ

ಕರ್ನಾಟಕದ ಮುಕುಟಮಣಿಗಳಲ್ಲಿ ರಾಜಧಾನಿ ಬೆಂಗಳೂರಿನಲ್ಲಿರುವ 'ಯೂನಿವರ್ಸಿಟಿ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಎಂಜಿನಿಯರಿಂಗ್' (ಯುವಿಸಿಇ) ಕೂಡ ಒಂದು. ಇದು ಈಗ ಸಂಪೂರ್ಣ ಸ್ವಾಯತ್ತ, ಸ್ವತಂತ್ರ ವಿಶ್ವವಿದ್ಯಾಲಯದ ಸ್ಥಾನಮಾನವನ್ನು ಪಡೆಯುತ್ತಿದೆ. ಈ ಮೂಲಕ ರಾಜ್ಯದ ಪ್ರಪ್ರಥಮ 'ಇನ್‌ಸ್ಟಿಟ್ಯೂಟ್ ಆಫ್ ಸ್ಟೇಟ್ ಎಮಿನೆನ್ಸ್' ಆಗುತ್ತಿದೆ. ರಾಜ್ಯದ ಶೈಕ್ಷಣಿಕ ವಲಯದಲ್ಲಿ ಇದೊಂದು ಚಾರಿತ್ರಿಕ ಸಂದರ್ಭ. ಈ ನಿಮಿತ್ತ ಉನ್ನತ ಶಿಕ್ಷಣ ಸಚಿವರಾದ ಡಾ.ಸಿ ಎನ್ ಅಶ್ವತ್ಥನಾರಾಯಣ ಅವರೊಂದಿಗೆ ನಡೆಸಿದ ಮಹತ್ವದ ಸಂದರ್ಶನವಿದು.

- **ಯುವಿಸಿಇಗೆ ಸ್ವಾಯತ್ತ ಸಂಸ್ಥೆ ಸ್ಥಾನಮಾನ ನೀಡುತ್ತಿರುವ ಉದ್ದೇಶವೇನು? ಇದು ಕೇವಲ ಸ್ಥಾನಮಾನದ ಬದಲಾವಣೆಯೋ ಅಥವಾ ಕರ್ನಾಟಕದಲ್ಲಿ ತಾಂತ್ರಿಕ ಶಿಕ್ಷಣದಲ್ಲಿ ಆಮೂಲಾಗ್ರ ಬದಲಾವಣೆ ತರಲಿದೆಯೋ?**

ಯೂನಿವರ್ಸಿಟಿ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಎಂಜಿನಿಯರಿಂಗ್ (ಯುವಿಸಿಇ) ಗೆ ಸ್ವಾಯತ್ತ ಮತ್ತು ಸ್ವತಂತ್ರ ಸಂಸ್ಥೆ ಎನ್ನುವ ಸ್ಥಾನಮಾನ ಕೊಡುವುದರಿಂದ ಮೊದಲಿಗೆ ಈ ಸಂಸ್ಥೆಯ ಹಂತದಲ್ಲಿ ತಾಂತ್ರಿಕ ಶಿಕ್ಷಣದ ಸ್ವರೂಪ ಪರಿವರ್ತನೆ ಕಾಣಲಿದೆ. ಇನ್ನು ಕೆಲವೇ ವರ್ಷಗಳಲ್ಲಿ, ಈ ಗುಣಾತ್ಮಕ ಪರಿವರ್ತನೆಯು ಇಡೀ ಕರ್ನಾಟಕ ಮತ್ತು ಭಾರತದ ಮಟ್ಟದಲ್ಲೂ ಸಂಭವಿಸುವುದು ನಿಶ್ಚಿತ. ಅತ್ಯುತ್ತಮ ಗುಣಮಟ್ಟದ ಮತ್ತು ವಿಶ್ವದರ್ಜೆ ಗುಣಮಟ್ಟದ ಶಿಕ್ಷಣವನ್ನು ಕೊಡಬೇಕೆಂದರೆ ಹಣಕಾಸು, ಶೈಕ್ಷಣಿಕ ಮತ್ತು ಆಡಳಿತಾತ್ಮಕ ವಿಚಾರಗಳಲ್ಲಿ ಒಂದು ಸಂಸ್ಥೆಗೆ ಸ್ವಾಯತ್ತತೆ ಇರಬೇಕಾದ್ದು ಅತ್ಯಂತ ಮೂಲಭೂತ ಅವಶ್ಯಕತೆಯಾಗಿದೆ.

- **ಈ ಬದಲಾವಣೆ ಐಐಟಿ ಮಾದರಿಯಲ್ಲಿ ಇರಲಿದೆಯೇ? ಹಾಗಿದ್ದರೆ, ನಿಮ್ಮ ದೂರದೃಷ್ಟಿ ಅಥವಾ ಮುನ್ನೋಟವೇನು?**

ನಿಜ, ಯುವಿಸಿಇಯನ್ನು ನಾವು ಐಐಟಿ ಮಾದರಿಯಲ್ಲಿಯೇ ಅಭಿವೃದ್ಧಿ ಪಡಿಸುತ್ತಿದ್ದೇವೆ. ಈ ಪ್ರತಿಷ್ಠಿತ ಸಂಸ್ಥೆಯನ್ನು 2030ರ ಹೊತ್ತಿಗೆ ದೇಶದಲ್ಲಿಯೇ ತಾಂತ್ರಿಕ ಶಿಕ್ಷಣಕ್ಕೆ ಅತ್ಯುತ್ತಮ ಸಂಸ್ಥೆ ಎನ್ನುವ ರೀತಿಯಲ್ಲಿ ಬೆಳೆಸಬೇಕು ಎನ್ನುವುದು ನಮ್ಮ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರ ದೂರದೃಷ್ಟಿ, ಚಿಂತನೆಯಾಗಿದೆ.

- **ಯುವಿಸಿಇಯನ್ನು 'ಇನ್ಸ್ಟಿಟ್ಯೂಟ್ ಆಫ್ ಎಮಿನೆನ್ಸ್' ಆಗಿ ಬೆಳೆಸುವುದು ತಮ್ಮ ಇಚ್ಛೆಯಾಗಿದೆ ಎಂದು ನೀವು ಹೇಳುತ್ತಿದ್ದೀರಿ. ಇದನ್ನು ಸ್ವಲ್ಪ ವಿವರಿಸುತ್ತೀರ?**

'ಇನ್‌ಸ್ಟಿಟ್ಯೂಟ್ ಆಫ್ ಎಮಿನೆನ್ಸ್' ಎಂದರೆ, ಒಂದು ಸಂಸ್ಥೆಯು ತಾನು ಮಾಡುವ ಪ್ರತಿಯೊಂದು ಕೆಲಸದಲ್ಲೂ ಅತ್ಯುತ್ಕೃಷ್ಟ ಗುಣಮಟ್ಟವನ್ನು ಕಾಪಾಡಿಕೊಳ್ಳುವುದು ಎಂದರ್ಥ. ಉದಾಹರಣೆ, ಇಂತಹ ಸಂಸ್ಥೆಯಲ್ಲಿ ಬೋಧಕ ವೃಂದ, ಪಠ್ಯಕ್ರಮದ ಗುಣಮಟ್ಟ ಮತ್ತು ಅದರ ಪ್ರಸ್ತುತತೆ, ಉದ್ಯಮಗಳೊಂದಿಗೆ ಕೈಜೋಡಿಸಿ ಸಹಭಾಗಿತ್ವದ ಮೂಲಕ ಕೈಗೊಳ್ಳುವ ಸಂಶೋಧನಾ ಚಟುವಟಿಕೆಗಳು ಇವೆಲ್ಲವೂ ಶ್ರೇಷ್ಠಮಟ್ಟದಲ್ಲಿ ಇರಲಿವೆ. ಇದರ ಫಲವಾಗಿ ಸಂಸ್ಥೆಯಲ್ಲಿ ಕಲಿಯುವ ಮತ್ತು ಇಲ್ಲಿಂದ ಪದವೀಧರರಾಗಿ ಹೊರಬರುವ ವಿದ್ಯಾರ್ಥಿಗಳು ಕೂಡ ಅಷ್ಟೇ ಪ್ರತಿಭಾಸಂಪನ್ನರಾಗಿ, ಶ್ರೇಷ್ಠದರ್ಜೆಯರವರಾಗಿ ಇರುತ್ತಾರೆ.

- **ನೀವೀಗ ಯುವಿಸಿಇಯನ್ನು ಸಂಪೂರ್ಣವಾಗಿ ಒಂದು ಸ್ವಾಯತ್ತ ವಿಶ್ವವಿದ್ಯಾಲಯವನ್ನಾಗಿ ಮಾಡುತ್ತಿದ್ದೀರಿ. ಇದು ಶಿಕ್ಷಣದಲ್ಲಿ ಗುಣಮಟ್ಟ ಮತ್ತು ಸಮಾನತೆಯನ್ನು ಹೇಗೆ ತರಬಲ್ಲದು?**

ಸ್ವಾಯತ್ತತೆ ಅತ್ಯುತ್ತಮ ಮತ್ತು ಪ್ರಸ್ತುತವಾಗಿರುವ ಅಥವಾ ಸಮಕಾಲೀನ ಜಗತ್ತಿನ ಅಗತ್ಯಕ್ಕೆ ಪೂರಕ ಪಠ್ಯಕ್ರಮ ರೂಪಿಸಿಕೊಳ್ಳುವ ಸ್ವಾತಂತ್ರವನ್ನು ಯುವಿಸಿಇಗೆ ಕೊಡಲಿದೆ. ಜತೆಗೆ ಅತ್ಯುತ್ತಮ ಬೋಧಕರನ್ನು ಹೊಂದಲು ಮತ್ತು ಅತ್ಯುತ್ತಮ ಮಟ್ಟದ ಮೂಲಸೌಲಭ್ಯಗಳ ವ್ಯವಸ್ಥೆಗೆ ಸುಗಮ ಅವಕಾಶ ಕಲ್ಪಿಸಲಿದೆ. ಈ ಮೂಲಕ, ಸಮಾಜದ ಎಲ್ಲ ವರ್ಗಗಳಿಂದಲೂ ಬರುವ ಪ್ರತಿಭಾವಂತ ವಿದ್ಯಾರ್ಥಿಗಳ ಶೈಕ್ಷಣಿಕ ಅಗತ್ಯಗಳಿಗೆ ಇದು ನಿರಾತಂಕವಾಗಿ ಸ್ಪಂದಿಸುತ್ತ, ಅದನ್ನೆಲ್ಲ ಪೂರೈಸಲಿದೆ.

- **ನೀವು ಸ್ವಾಯತ್ತತೆ ಮಹತ್ವದ ಬಗ್ಗೆ ಸಾಕಷ್ಟು ಒತ್ತು ಕೊಟ್ಟು ಹೇಳುತ್ತಿದ್ದೀರಿ. ಅಂದರೆ, ಯುವಿಸಿಇ ಮುಂದೆ ಯಾವ ರೀತಿಯ ಸ್ವಾತಂತ್ರ ಪಡೆದುಕೊಳ್ಳಲಿದೆ? ಇದರ ಸಂರಚನೆಯ ಸ್ವರೂಪ ಏನು? ಇದರಲ್ಲಿ ಸರ್ಕಾರದ ಪಾತ್ರವೇನು?**

ಯುವಿಸಿಇ ಒಂದು ಸ್ವಾಯತ್ತ ವಿಶ್ವವಿದ್ಯಾಲಯವಾಗಿ ಕೈಗಾರಿಕೋದ್ಯಮಗಳು ಮತ್ತು ಹಿರಿಯ ವಿದ್ಯಾರ್ಥಿಗಳ ಸಂಘದೊಂದಿಗೆ ಅತ್ಯಂತ ನಿಕಟ ಸಂಬಂಧವನ್ನು ಹೊಂದಲಿದೆ. ಇನ್ನು, ಈ ವಿಶ್ವವಿದ್ಯಾಲಯದ ಆರ್ಥಿಕ ವ್ಯವಸ್ಥೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಉದ್ಯಮಗಳು/ಹಿರಿಯ ವಿದ್ಯಾರ್ಥಿಗಳ ಸಂಘ ಮತ್ತು ಸರಕಾರಗಳು ದೇಣಿಗೆ ಹಾಗೂ ಶುಲ್ಕಕ್ಕೆ ಸಂಬಂಧಿಸಿದಂತೆ ಸಮಾನ ಕಾಣಿಕೆ ನೀಡಲಿವೆ. ಒಟ್ಟಿನಲ್ಲಿ, ಈ ವಿಚಾರದಲ್ಲಿ ಆರೋಗ್ಯಕರ ಸಮತೋಲನ ಕಾಯ್ದು ಕೊಳ್ಳಲಾಗುವುದು. ಇವೆಲ್ಲವನ್ನೂ ಮುಂದಿನ ಏಳು ವರ್ಷಗಳೊಳಗೆ, ಅಂದರೆ 2030ರ ಹೊತ್ತಿಗೆ ಸಾಧಿಸುವ ಸ್ಪಷ್ಟ ಗುರಿಯನ್ನು ನಾವು ಇಟ್ಟುಕೊಂಡಿದ್ದೇವೆ. ಇದರ ಜತೆಯಲ್ಲೇ ಯುವಿಸಿಇ ವಿಶ್ವವಿದ್ಯಾಲಯವು ತನ್ನ ಎಲ್ಲಾ ಚಟುವಟಿಕೆಗಳಲ್ಲೂ ಸಂಪೂರ್ಣ ಸ್ವಾತಂತ್ರ ಹೊಂದಿರುವ ರಾಜ್ಯ ಸರಕಾರದ ಸಂಸ್ಥೆಯಾಗಿರಲಿದೆ.

- **ಭಾರತದ ಒಳಗೂ ಹೊರಗೂ ಸರಕಾರ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳ ಪಾಲ್ಗೊಳ್ಳುವಿಕೆಗೆ ನೀವು ಅನುಮತಿ ಕೊಡುತ್ತೀರ?**

ಹೌದು, ಖಂಡಿತವಾಗಿಯೂ ನಾವು ಇದನ್ನು ಪ್ರೋತ್ಸಾಹಿಸುತ್ತೇವೆ. ಸಹಭಾಗಿತ್ವದ ಮೂಲಕ ಸಂಶೋಧನಾ ಕಾರ್ಯ, ಸೂಕ್ತ ಪಠ್ಯಕ್ರಮ, ಒಳ್ಳೆಯ ಬೋಧನೆ, ಆರ್ಥಿಕ ಅನುಮೋದನೆ ಇತ್ಯಾದಿಗಳಲ್ಲಿ ನಮ್ಮ ಉದ್ಯಮ ಸಂಸ್ಥೆಗಳು ಯುವಿಸಿಇಯ ಅವಿಭಾಜ್ಯ ಅಂಗವಾಗಿ ಸಕ್ರಿಯವಾಗಿರಲಿವೆ.

- **ಇದು ನಮ್ಮ ಯುವಜನರ ಉದ್ಯೋಗಾರ್ಹತೆಯನ್ನೂ ಉದ್ಯೋಗಾವಕಾಶಗಳನ್ನೂ ಹೇಗೆ ಹೆಚ್ಚಿಸಲಿದೆ?**

ಒಂದು ಸಂಸ್ಥೆಯು ಅತ್ಯುತ್ತಮ ಮಟ್ಟದಲ್ಲಿ ಸಾಧನೆ ಮಾಡಬೇಕೆಂದರೆ, ಮೊದಲಿಗೆ ನಾವು ಗುಣಮಟ್ಟದ ಬೋಧಕ ವರ್ಗ ಮತ್ತು ಕಲಿಕೆಯ ವಾತಾವರಣವನ್ನು ಸೃಷ್ಟಿಸಬೇಕು. ಇದು ಸಹಜವಾಗಿಯೇ ವಿದ್ಯಾರ್ಥಿಗಳು ಸಮಕಾಲೀನ ಜಗತ್ತಿನ ಉದ್ಯೋಗಗಳಿಗೆ ಬೇಕಾದ ಕೌಶಲ್ಯ ಮತ್ತಿತರ ಅಂಶಗಳನ್ನು ಕಲಿಕೆಯ ಹಂತದಲ್ಲೇ ಕರಗತ ಮಾಡಿಕೊಳ್ಳಲು ಅವಕಾಶ ಮಾಡಿಕೊಡಲಿದೆ. ಹೀಗಾದಾಗ, ಉಜ್ವಲವಾದ ಉದ್ಯೋಗಾವಕಾಶಗಳು ಯುವಿಸಿಇಯಲ್ಲಿ ಕಲಿತ ವಿದ್ಯಾರ್ಥಿಗಳನ್ನು ಹುಡುಕಿಕೊಂಡು ಬರಲಿವೆ. ಈ ಮೂಲಕ ಇಲ್ಲಿನ ವಿದ್ಯಾರ್ಥಿಗಳು ಜಾಗತಿಕ ಮಟ್ಟದಲ್ಲಿ ದಕ್ಷ/ಸಮರ್ಥ ಎಂಜಿನಿಯರುಗಳಾಗಿ ಹೊರಹೊಮ್ಮುತ್ತಾರೆ.

- **ಈ ಸಂಸ್ಥೆಯು ಉದ್ಯಮಗಳೊಂದಿಗೆ ನಿಕಟ ಬಾಂಧವ್ಯ ಹೊಂದುವ ನಿಟ್ಟಿನಲ್ಲಿ ನೀವು ಯಾವ್ಯಾವ ಉಪಕ್ರಮಗಳನ್ನು ಕೈಗೊಳ್ಳಲಿದ್ದೀರಿ? ಈಗ ಈ ಸಂಬಂಧ ನೀವು ಕೈಗೊಂಡಿರುವ ಕ್ರಮಗಳೇನು?**

ನಿರ್ದಿಷ್ಟವಾಗಿ ಬೆಂಗಳೂರು ನಗರ ಮತ್ತು ಒಟ್ಟಾರೆಯಾಗಿ ಕರ್ನಾಟಕ ರಾಜ್ಯವು ತಂತ್ರಜ್ಞಾನ ಮತ್ತು ಉದ್ಯಮಗಳ ತಾಣಗಳಾಗಿದ್ದು, ಇಡೀ ಜಗತ್ತಿನ ಗಮನ ಸೆಳೆದಿವೆ. ನಾವು ಯುವಿಸಿಇ ಮೂಲಕವೇ ಉದ್ಯಮಗಳನ್ನು ಸಂಪರ್ಕಿಸಿ, ಸಂಶೋಧನಾ ಚಟುವಟಿಕೆಗಳನ್ನು ಕೈಗೊಳ್ಳುವ ಪ್ರಸ್ತಾವನೆಗಳನ್ನು ಮುಂದಿಡುತ್ತೇವೆ. ಈ ಸಂಶೋಧನೆಗಳು ಕೈಗಾರಿಕೋದ್ಯಮಗಳಿಗೂ ಉಪಯುಕ್ತವಾಗಲಿವೆ. ಯುವಿಸಿಇ ಮತ್ತು ಉದ್ದಿಮೆಗಳ ನಡುವಿನ ಈ ಸಹಭಾಗಿತ್ವವು ಸಹಜವಾಗಿಯೇ ಸಂಶೋಧನಾ ಮತ್ತು ಬೋಧನಾ ಗುಣಮಟ್ಟ ವೃದ್ಧಿಗೂ ಕಾರಣವಾಗಲಿದೆ. ಒಟ್ಟಿನಲ್ಲಿ, ಯುವಿಸಿಇ ಮತ್ತು ಉದ್ಯಮ ಸಂಸ್ಥೆಗಳು ಪರಸ್ಪರ ಸಲಹೆ, ಸಹಕಾರಗಳನ್ನು ನೀಡುತ್ತ, ಒಟ್ಟಿಗೇ ವಿಕಸನ ಹೊಂದಲಿವೆ.

- **ಯುವಿಸಿಇಯ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ನೀವು ಇಟ್ಟಿರುವ ಈ ಹೆಜ್ಜೆಗಳು 2020ರಲ್ಲಿ ಜಾರಿಗೆ ತಂದಿರುವ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಚೌಕಟ್ಟಿಗೆ ಹೇಗೆ ಹೊಂದಿಕೊಳ್ಳುತ್ತವೆ?**

ನಾವು ತೆಗೆದುಕೊಂಡಿರುವ ಈ ಕ್ರಮಗಳೆಲ್ಲ ಎನ್‌ಇಪಿ-2020ಕ್ಕೆ ಅನುಗುಣವಾಗಿಯೇ ಇವೆ. ಇದುವರೆಗೂ ಇದ್ದ ಶಿಕ್ಷಣ ಪದ್ಧತಿಯಲ್ಲಿ ನೂರಾರು ಕಾಲೇಜುಗಳನ್ನು ಒಂದು ವಿಶ್ವವಿದ್ಯಾಲಯದ ಅಡಿಗೆ ಒಳಪಡಿಸಲಾಗುತ್ತಿತ್ತು. ಆದರೆ, ಎನ್‌ಇಪಿ ಈ ಪದ್ಧತಿಗೆ ವಿದಾಯ ಹೇಳಲು ನಿರ್ಧರಿಸಿದೆ. ಒಂದೊಂದು ಕಾಲೇಜೂ ಸಹ ಸ್ವತಃ ವಿಶ್ವವಿದ್ಯಾಲಯಗಳಾಗಬೇಕು ಎನ್ನುವುದು ಎನ್‌ಇಪಿ ಗುರಿಗಳಲ್ಲಿ ಒಂದಾಗಿದೆ. ಹೀಗಾಗುವುದರಿಂದ ಶಿಕ್ಷಣ ಸಂಸ್ಥೆಗಳಿಗೆ ಅಗತ್ಯವಾದ ಸ್ವಾಯತ್ತತೆ, ಆಡಳಿತಾತ್ಮಕ ಸ್ವಾತಂತ್ರ ಎಲ್ಲವೂ ಸಿಗಲಿವೆ. ಇದರ ಪರಿಣಾಮವಾಗಿ, ಇಂತಹ ಸಂಸ್ಥೆಗಳು ಆಧುನಿಕ ಕಾಲಕ್ಕೆ ತಕ್ಕ ಸ್ಪರ್ಶವನ್ನು ಪಡೆಯಲಿವೆ.

- **ಈ ಪ್ರತಿಷ್ಠಿತ ಮತ್ತು ಚಾರಿತ್ರಿಕ ಸಂಸ್ಥೆಗೆ ಸರ್ ಎಂ. ವಿಶ್ವೇಶ್ವರಯ್ಯನವರ ಹೆಸರನ್ನು ಇಡಲಾಗಿದೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?**

ಸರ್ ಎಂ. ವಿಶ್ವೇಶ್ವರಯ್ಯನವರು ಕರ್ನಾಟಕವಷ್ಟೇ ಅಲ್ಲ, ಇಡೀ ಭಾರತ ಮತ್ತು ಜಗತ್ತು ಸಾರ್ವಕಾಲಿಕವಾಗಿ ಕಂಡ ಅತ್ಯಂತ ಉತ್ಕೃಷ್ಟ ಮತ್ತು ಮೇಧಾವಿ ಎಂಜಿನಿಯರ್. ಕರ್ನಾಟಕದ ಅಭಿವೃದ್ಧಿಗೆ ಅವರು ಕೊಟ್ಟಿರುವ ಕೊಡುಗೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಅದು ಅಷ್ಟೊಂದು ಮೌಲಿಕವಾದುದು. ರಾಷ್ಟ್ರೀಯ ಮಟ್ಟದಲ್ಲೂ ಸರ್ ಎಂವಿ ಅವರು ಅನೇಕ ಮಹತ್ತ್ವದ ಯೋಜನೆಗಳ ಭಾಗವಾಗಿ, ಬಹುದೊಡ್ಡ ಪಾತ್ರವನ್ನು ವಹಿಸಿದ್ದಾರೆ. ಭಾರತದ ಐದನೇ ಎಂಜಿನಿಯರಿಂಗ್ ಕಾಲೇಜನ್ನು 'ಸರಕಾರಿ ಎಂಜಿನಿಯರಿಂಗ್ ಕಾಲೇಜ್' ಎನ್ನುವ ಹೆಸರಿನಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸಿದ ಕೀರ್ತಿ ಕೂಡ ಅವರದೇ ಆಗಿದೆ. ಇದೇ ನಂತರದ ದಿನಗಳಲ್ಲಿ 'ಯೂನಿವರ್ಸಿಟಿ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಎಂಜಿನಿಯರಿಂಗ್' ಆಯಿತು. ಈಗ ಕರ್ನಾಟಕ ಸರ್ಕಾರ ಸ್ಥಾಪಿಸುತ್ತಿರುವ ಪ್ರಪ್ರಥಮ 'ಇನ್‌ಸ್ಟಿಟ್ಯೂಟ್ ಆಫ್ ಸ್ಟೇಟ್ ಎಮಿನೆನ್ಸ್'ಗೆ ಅಂಥ ಮಹಾನೀಯರ ಹೆಸರನ್ನೇ ಇಡುತ್ತಿರುವುದು ಅವರಿಗೆ ಸಲ್ಲಿಸುತ್ತಿರುವ ಸೂಕ್ತ ಗೌರವವಾಗಿದೆ.

- **ಇದು ರಾಜ್ಯದ ಉಳಿದ ಶಿಕ್ಷಣ ಸಂಸ್ಥೆಗಳೂ ಸಹ ಉತ್ಕೃಷ್ಟ ದರ್ಜೆಗೇರಲು ಮಾದರಿ ಸಂಸ್ಥೆ ಆಗಲಿದೆಯೇ? ಈ ಮೂಲಕ ರಾಷ್ಟ್ರ ಮಟ್ಟದಲ್ಲೂ ಇದು ಒಂದು ಆದರ್ಶದ ಮೇಲ್ಪಂಕ್ತಿ ಹಾಕಿಕೊಡಲಿದೆಯೇ?**

ಖಂಡಿತವಾಗಿ ಆಗಲಿದೆ. ಯುವಿಸಿಇ ವಿಶ್ವವಿದ್ಯಾಲಯವು ಹೀಗೆ ಒಂದು ಮಾದರಿ ಸಂಸ್ಥೆಯಾಗಿ ಬೆಳೆಯಬೇಕು ಎನ್ನುವುದೇ ನನ್ನ ನಿರೀಕ್ಷೆ.

- **ರಾಜ್ಯದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ 2030ರ ಹೊತ್ತಿಗೆ ಅಪಾರವಾದುದನ್ನು ಸಾಧಿಸುವ ಬಗ್ಗೆ ನೀವು ಸದಾ ಹೇಳುತ್ತಲೇ ಇದ್ದೀರಿ. ಇದರ ರೂಪುರೇಷೆಗಳೇನು ಮತ್ತು ಈ ನಿಟ್ಟಿನಲ್ಲಿ ಈಗಾಗಲೇ ಸಾಧಿಸಿರುವುದೇನು?**

ಉನ್ನತ ತಾಂತ್ರಿಕ ಶಿಕ್ಷಣ ಕ್ಷೇತ್ರದ ವಿಸ್ತರಣೆ ಮತ್ತು ಸುಧಾರಣೆಗೆ ಕರ್ನಾಟಕವು ಕಳೆದ ಕೆಲವು ವರ್ಷಗಳಲ್ಲಿ ಹತ್ತುಹಲವು ರಚನಾತ್ಮಕ ಕ್ರಮಗಳನ್ನು ಕೈಗೊಂಡಿದೆ. ಜೊತೆಗೆ ಎನ್‌ಇಪಿ ಅನುಷ್ಠಾನದಲ್ಲಿ ರಾಜ್ಯವು ಇಡೀ ದೇಶದಲ್ಲೇ ಪ್ರಥಮ ಸ್ಥಾನದಲ್ಲಿದೆ. ರಾಜ್ಯದಲ್ಲಿನ ತಾಂತ್ರಿಕ ಶಿಕ್ಷಣವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಬೇಕೆನ್ನುವುದು ನಮ್ಮ ಸಂಕಲ್ಪ. ಯುವಿಸಿಇಯನ್ನು ಸಂಪೂರ್ಣ ಸ್ವಾಯತ್ತ ಮತ್ತು ಸ್ವತಂತ್ರ ವಿಶ್ವವಿದ್ಯಾಲಯವಾಗಿ ಮಾಡುತ್ತಿರುವುದು ಈ ನಿಟ್ಟಿನಲ್ಲಿ ಇಟ್ಟಿರುವ ಇನ್ನೊಂದು ಮಹತ್ವದ ಹೆಜ್ಜೆಯಾಗಿದೆ.

ಕ್ರ. ಸಂ.	ವಲಯ	ವಾರ್ಡ್ ಸಂಖ್ಯೆ ಮತ್ತು ಹೆಸರು	ಸಹಾಯಕ ಅಭಿಯಂತರರ ಹೆಸರು ಮತ್ತು ಮೊಬೈಲ್ ಸಂಖ್ಯೆ	ಸಹಾಯಕ ಕಾರ್ಯಪಾಲಕ ಅಭಿಯಂತರರ ಹೆಸರು ಮತ್ತು ಮೊಬೈಲ್ ಸಂಖ್ಯೆ	ಕಾರ್ಯಪಾಲಕ ಅಭಿಯಂತರರ ಹೆಸರು ಮತ್ತು ಮೊಬೈಲ್ ಸಂಖ್ಯೆ
40	ದಕ್ಷಿಣ	179 ಶಾಕಾಂಬರಿನಗರ	ಡಿ. ಮನೋಹರ್ 9480688179	ಶ್ರೀ ವೆಂಕಟೇಶ್ (ಜೆ.ಪಿ. ನಗರ) 9480688253	ಶ್ರೀ ಎಸ್. ಮಂಜುನಾಥ್ ರೆಡ್ಡಿ ಕಾರ್ಯಪಾಲಕ ಅಭಿಯಂತರರು (ಜಯನಗರ) 9480688285 & 9480684064
41	ದಕ್ಷಿಣ	180 ಬನಶಂಕರಿ ಟೆಂಪಲ್	ಮಂಜುನಾಥ್ ವೆಂಕಣ್ಣ ನಾಯಕ್ 9480688180	ಶ್ರೀ ಯತೀಶ್ (ಬನಶಂಕರಿ) 9480688255 & 9968427514	ಶ್ರೀ ಶ್ರೀನಿವಾಸನ್. ಟಿ ಕಾರ್ಯಪಾಲಕ ಅಭಿಯಂತರರು (ಪದ್ಮನಾಭನಗರ) 9480688286 & 9035087060
42	ದಕ್ಷಿಣ	181 ಕುಮಾರಸ್ವಾಮಿ ಲೇಔಟ್	ಮಮತ ಐ/ಸಿ 9480688181	ಶ್ರೀ ಮುರಳೀಧರ್ (ಪದ್ಮನಾಭನಗರ) 9480688254 & 9035689994	ಶ್ರೀ ಶ್ರೀನಿವಾಸನ್. ಟಿ ಕಾರ್ಯಪಾಲಕ ಅಭಿಯಂತರರು (ಪದ್ಮನಾಭನಗರ) 9480688286 & 9035087060
43	ದಕ್ಷಿಣ	182 ಪದ್ಮನಾಭನಗರ	ಮಮತ 9480688182	ಶ್ರೀ ಮುರಳೀಧರ್ (ಪದ್ಮನಾಭನಗರ) 9480688254 & 9035689994	ಶ್ರೀ ಶ್ರೀನಿವಾಸನ್. ಟಿ ಕಾರ್ಯಪಾಲಕ ಅಭಿಯಂತರರು (ಪದ್ಮನಾಭನಗರ) 9480688286 & 9035087060
44	ದಕ್ಷಿಣ	183 ಚಿಕ್ಕಕಲಸಂದ್ರ	ಸಚಿನ್. ಎಸ್ 9480688183	ಶ್ರೀ ಮುರಳೀಧರ್ (ಪದ್ಮನಾಭನಗರ) 9480688254 & 9035689994	ಶ್ರೀ ಶ್ರೀನಿವಾಸನ್. ಟಿ ಕಾರ್ಯಪಾಲಕ ಅಭಿಯಂತರರು (ಪದ್ಮನಾಭನಗರ) 9480688286 & 9035087060
		ಬೊಮ್ಮನಹಳ್ಳಿ ವಲಯ			
1	ಬೊಮ್ಮನಹಳ್ಳಿ	184 ಉತ್ತರಹಳ್ಳಿ	ವೆಂಕಟರಮಣ. ಕೆ.ವಿ 9480688184	ನೀಲಕಂಠಯ್ಯ. ಕೆ.ಪಿ 9480688259	ಪ್ರಮೋದ್ ಕುಮಾರ್. ಎನ್.ಜಿ 9480688288
2	ಬೊಮ್ಮನಹಳ್ಳಿ	185 ಯಲಚೇನಹಳ್ಳಿ	ವೆಂಕಟರಮಣ. ಕೆ.ವಿ 9480688185	ನೀಲಕಂಠಯ್ಯ. ಕೆ.ಪಿ 9480688259	ಪ್ರಮೋದ್ ಕುಮಾರ್. ಎನ್.ಜಿ 9480688288
3	ಬೊಮ್ಮನಹಳ್ಳಿ	197 ವಸಂತಪುರ	ತಿಮ್ಮಯ್ಯ. ಎ 9480688197	ನೀಲಕಂಠಯ್ಯ. ಕೆ.ಪಿ 9480688259	ಪ್ರಮೋದ್ ಕುಮಾರ್. ಎನ್.ಜಿ 9480688288
4	ಬೊಮ್ಮನಹಳ್ಳಿ	194 ಗೊಟ್ಟಿಗೆರೆ	ಮಾರುತಿ 9480688194	ನರೇಂದ್ರ ಕುಮಾರ್ 9480688261	ಪ್ರಮೋದ್ ಕುಮಾರ್. ಎನ್.ಜಿ 9480688288
5	ಬೊಮ್ಮನಹಳ್ಳಿ	195 ಕೋಣನಕುಂಟೆ	ಶಿಲ್ಪಾ 9480688195	ನರೇಂದ್ರ ಕುಮಾರ್ 9480688261	ಪ್ರಮೋದ್ ಕುಮಾರ್. ಎನ್.ಜಿ 9480688288
6	ಬೊಮ್ಮನಹಳ್ಳಿ	196 ಅಂಜನಾಪುರ	ಕೃಷ್ಣಪ್ಪ 9480688196	ನರೇಂದ್ರ ಕುಮಾರ್ 9480688261	ಪ್ರಮೋದ್ ಕುಮಾರ್. ಎನ್.ಜಿ 9480688288
7	ಬೊಮ್ಮನಹಳ್ಳಿ	191 ಸಿಂಗಸಂದ್ರ	ಚೆಲುವರಾಜು 9480688191	ವೀರೇಶ್ ಆಲದಕಟ್ಟಿ 9480688260	ಪ್ರಮೋದ್ ಕುಮಾರ್. ಎನ್.ಜಿ 9480688288
8	ಬೊಮ್ಮನಹಳ್ಳಿ	192 ಬೇಗೂರ್	ಚೆಲುವರಾಜು 9480688192	ವೀರೇಶ್ ಆಲದಕಟ್ಟಿ 9480688260	ಪ್ರಮೋದ್ ಕುಮಾರ್. ಎನ್.ಜಿ 9480688288
9	ಬೊಮ್ಮನಹಳ್ಳಿ	174 ಹೆಚ್.ಎಸ್.ಆರ್ ಲೇಔಟ್	ರಾಜಗೋಪಾಲ ಬಾಬು ಐ/ಸಿ 9480688174	ರವಿ. ಡಿ 9480688256	ಶೇಷಾದ್ರಿ. ವೈ.ಎನ್ 9480688287
10	ಬೊಮ್ಮನಹಳ್ಳಿ	190 ಮಂಗಮ್ಮನಪಾಳ್ಯ	ರಾಜಗೋಪಾಲ ಬಾಬು 9480688190	ರವಿ. ಡಿ 9480688256	ಶೇಷಾದ್ರಿ. ವೈ.ಎನ್ 9480688287
11	ಬೊಮ್ಮನಹಳ್ಳಿ	175 ಬೊಮ್ಮನಹಳ್ಳಿ	ಚೈತ್ರ. ಎಸ್ ಐ/ಸಿ 9480688175	ಆಂಜಿನಪ್ಪ. ಸಿ.ಟಿ 9480688257	ಶೇಷಾದ್ರಿ. ವೈ.ಎನ್ 9480688287
12	ಬೊಮ್ಮನಹಳ್ಳಿ	188 ಬಿಳೇಕಹಳ್ಳಿ	ಚೈತ್ರ. ಎಸ್ 9480688188	ಆಂಜಿನಪ್ಪ. ಸಿ.ಟಿ 9480688257	ಶೇಷಾದ್ರಿ. ವೈ.ಎನ್ 9480688287
13	ಬೊಮ್ಮನಹಳ್ಳಿ	189 ಹೊಂಗಸಂದ್ರ	ಎಂ. ಜಯರಾಮ್ 9480688189	ಆಂಜಿನಪ್ಪ. ಸಿ.ಟಿ 9480688257	ಶೇಷಾದ್ರಿ. ವೈ.ಎನ್ 9480688287
14	ಬೊಮ್ಮನಹಳ್ಳಿ	186 ಜರಗನಹಳ್ಳಿ	ನರಸಿಂಹಮೂರ್ತಿ ನಾಯಕ್ 9480688186	ರಘುನಂದನ್ ಮಂತ್ರಿ 9480688258	ಶೇಷಾದ್ರಿ. ವೈ.ಎನ್ 9480688287
15	ಬೊಮ್ಮನಹಳ್ಳಿ	187 ಪುಟ್ಟೇನಹಳ್ಳಿ	ನಂದೀಶ್ (ಜೆ.ಇ) 9480688187	ರಘುನಂದನ್ ಮಂತ್ರಿ 9480688258	ಶೇಷಾದ್ರಿ. ವೈ.ಎನ್ 9480688287
16	ಬೊಮ್ಮನಹಳ್ಳಿ	193 ಅರಕೆರೆ	ಚೇತನ ಐ/ಸಿ 9480688193	ರಘುನಂದನ್ ಮಂತ್ರಿ 9480688258	ಶೇಷಾದ್ರಿ. ವೈ.ಎನ್ 9480688287
		ದಾಸರಹಳ್ಳಿ ವಲಯ			
1	ದಾಸರಹಳ್ಳಿ	12 ಶೆಟ್ಟಿಹಳ್ಳಿ	ಎಸ್.ಎನ್. ಕೃಷ್ಣಮೂರ್ತಿ 8971368695	ಎಸ್.ಎನ್. ಕೃಷ್ಣಮೂರ್ತಿ (ಪ್ರಭಾರ) 8971368695	ಎಸ್.ಎಲ್. ಪಾಪರೆಡ್ಡಿ 9480684887
2	ದಾಸರಹಳ್ಳಿ	13 ಮಲ್ಲಸಂದ್ರ	ಸಿ.ಎನ್. ಜಗದೀಶ್ 8660931367	ಎಸ್.ಎನ್. ಕೃಷ್ಣಮೂರ್ತಿ (ಪ್ರಭಾರ) 8971368695	ಎಸ್.ಎಲ್. ಪಾಪರೆಡ್ಡಿ 9480684887
3	ದಾಸರಹಳ್ಳಿ	14 ಬಾಗಲಗುಂಟೆ	ವೆಂಕಟೇಶಪ್ಪ 9480688014	ಬಿ.ಆರ್. ರಂಗನಾಥ್ 9480688205	ಎಸ್.ಎಲ್. ಪಾಪರೆಡ್ಡಿ 9480684887
4	ದಾಸರಹಳ್ಳಿ	15 ಟಿ. ದಾಸರಹಳ್ಳಿ	ವೆಂಕಟೇಶಪ್ಪ 9480688014	ಬಿ.ಆರ್. ರಂಗನಾಥ್ 9480688205	ಎಸ್.ಎಲ್. ಪಾಪರೆಡ್ಡಿ 9480684887
5	ದಾಸರಹಳ್ಳಿ	39 ಚೊಕ್ಕಸಂದ್ರ	ಸದಾಶಿವ 9480688039	ಪುಟ್ಟಹನುಮತ್‌ರಾಜು 9480688206	ಎಸ್.ಎಲ್. ಪಾಪರೆಡ್ಡಿ 9480684887
6	ದಾಸರಹಳ್ಳಿ	41 ಪಿಐಎ	ಸ್ವಾಮಿ. ಕೆ.ಎಸ್ 9480688041	ಪುಟ್ಟಹನುಮತ್‌ರಾಜು 9480688206	ಎಸ್.ಎಲ್. ಪಾಪರೆಡ್ಡಿ 9480684887
7	ದಾಸರಹಳ್ಳಿ	70 ರಾಜಗೋಪಾಲನಗರ	ಸ್ವಾಮಿ. ಕೆ.ಎಸ್ 9480688041	ಪುಟ್ಟಹನುಮತ್‌ರಾಜು 9480688206	ಎಸ್.ಎಲ್. ಪಾಪರೆಡ್ಡಿ 9480684887
8	ದಾಸರಹಳ್ಳಿ	71 ಹೆಗ್ಗನಹಳ್ಳಿ	ಅವೀಶ. ಹೆಚ್.ಎಂ 9480688070	ನಾಗೇಶ್ ಮೂರ್ತಿ 9480688207	ಎಸ್.ಎಲ್. ಪಾಪರೆಡ್ಡಿ 9480684887
		ಯಲಹಂಕ ವಲಯ			
1	ಯಲಹಂಕ	01 ಕೆಂಪೇಗೌಡ	ದೇವರಾಜ್ 9886153161	ರಾಮ ಸಂಜೀವಯ್ಯ 9480685320	ಸುಧಾಕರ್ ರೆಡ್ಡಿ 9480688262
2	ಯಲಹಂಕ	02 ಚೌಡೇಶ್ವರಿ	ನರಸಿಂಹಯ್ಯ 9480688002	ರಾಮ ಸಂಜೀವಯ್ಯ 9480685320	ಸುಧಾಕರ್ ರೆಡ್ಡಿ 9480688262
3	ಯಲಹಂಕ	03 ಅಟ್ಟೂರು	ರಾಮಕೃಷ್ಣಯ್ಯ 9972910910	ಸಚಿನ್. ಹೆಚ್.ಪಿ 9844508268	ಸುಧಾಕರ್ ರೆಡ್ಡಿ 9480688262
4	ಯಲಹಂಕ	04 ಯಲಹಂಕ ನ್ಯೂ ಟೌನ್	ಮೋಹನ್ 9900222431	ಸಚಿನ್. ಹೆಚ್.ಪಿ 9844508268	ಸುಧಾಕರ್ ರೆಡ್ಡಿ 9480688262
5	ಯಲಹಂಕ	05 ತಣಿಸಂದ್ರ	ಸುರೇಶ್ ದೇವತರಾಜ್ 9448421920	ನಾಗಪ್ಪ ಕಮತಿ 9916418194	ಪ್ರದೀಪ್. ಬಿ.ಎನ್ 9480688263
6	ಯಲಹಂಕ	06 ಜಕ್ಕೂರು	ಮಹಂತೇಶ್ ಕುಮಾರ್ 9901053319	ನಾಗಪ್ಪ ಕಮತಿ 9916418194	ಪ್ರದೀಪ್. ಬಿ.ಎನ್ 9480688263
7	ಯಲಹಂಕ	07 ಬ್ಯಾಟರಾಯನಪುರ	ಸೋಮನಾಥ್ ಜಾದವ್ 96978157555	ಸೋಮಶೇಖರ್ 9019211219	ಪ್ರದೀಪ್. ಬಿ.ಎನ್ 9480688263
8	ಯಲಹಂಕ	08 ಕೊಡಿಗೇಹಳ್ಳಿ	ಪ್ರವೀಣ್ 9060404354	ಸೋಮಶೇಖರ್ 9019211219	ಪ್ರದೀಪ್. ಬಿ.ಎನ್ 9480688263
9	ಯಲಹಂಕ	09 ವಿದ್ಯಾರಣ್ಯಪುರ	ಅರ್ಚನ 7349388139	ಭೀರೇಶ್ 6920992600	ಪ್ರದೀಪ್. ಬಿ.ಎನ್ 9480688263
10	ಯಲಹಂಕ	10 ದೊಡ್ಡಬೊಮ್ಮಸಂದ್ರ	ಪ್ರವೀಣ್ 9060404354	ಭೀರೇಶ್ 6920992600	ಪ್ರದೀಪ್. ಬಿ.ಎನ್ 9480688263
11	ಯಲಹಂಕ	11 ಕುವೆಂಪುನಗರ	ಜಯಂತ್‌ಕುಮಾರ್ 9844045089	ಭೀರೇಶ್ 6920992600	ಪ್ರದೀಪ್. ಬಿ.ಎನ್ 9480688263
		ಆರ್.ಆರ್. ನಗರ ವಲಯ			
1	ಆರ್.ಆರ್. ನಗರ	ಜಾಲಹಳ್ಳಿ	ಪೂಜಶ್ರೀ. ಆರ್ 9480688016	ಎಂ. ವಿಘ್ನೇಶರ 9480688220	ಎನ್. ಬಸವರಾಜು 9480688223
2	ಆರ್.ಆರ್. ನಗರ	ಜೆ.ಪಿ. ಪಾರ್ಕ್	ಎನ್.ಜಿ. ಉಮೇಶ್ 9480688017	ಎಂ. ವಿಘ್ನೇಶರ 9480688220	ಎನ್. ಬಸವರಾಜು 9480688223
3	ಆರ್.ಆರ್. ನಗರ	ಯಶವಂತಪುರ	ಹೇಮ. ಎಸ್.ಟಿ 9480688017	ಎಂ. ವಿಘ್ನೇಶರ 9480688220	ಎನ್. ಬಸವರಾಜು 9480688223
4	ಆರ್.ಆರ್. ನಗರ	ಹೆಚ್.ಎಂ.ಟಿ	ರಾಜೇಶ್ 9480688038	ಕೆ.ಎಂ. ಮೃತ್ಯುಂಜಯ 9480688221	ಎನ್. ಬಸವರಾಜು 9480688223
5	ಆರ್.ಆರ್. ನಗರ	ದೊಡ್ಡಬಿದರಕಲ್ಲು	ಗುಳಿಗೌಡ 9480688040	ಬಿ. ರಮೇಶ್ 9480688224	ಲೋಕೇಶ್. ಬಿ.ಸಿ 9480688272
6	ಆರ್.ಆರ್. ನಗರ	ಲಕ್ಷ್ಮೀದೇವಿನಗರ	ಮಂಜುನಾಥ್ 9480688042	ಕೆ.ಎಂ. ಮೃತ್ಯುಂಜಯ 9480688221	ಎನ್. ಬಸವರಾಜು 9480688223
7	ಆರ್.ಆರ್. ನಗರ	ಲಗ್ಗೆರೆ	ಪ್ರಜ್ವಲ್ 7975145297	ಡಿ. ಹೇಮಂತ್ 9480688222	ಎನ್. ಬಸವರಾಜು 9480688223
8	ಆರ್.ಆರ್. ನಗರ	ಹೆರೋಹಳ್ಳಿ	ನಟರಾಜ್ ಐ/ಸಿ 9480688072	ಬಿ. ರಮೇಶ್ 9480688224	ಲೋಕೇಶ್. ಬಿ.ಸಿ 9480688272
9	ಆರ್.ಆರ್. ನಗರ	ಕೊಟ್ಟಿಗೆಪಾಳ್ಯ	ಪ್ರಜ್ವಲ್ 7975145297	ಡಿ. ಹೇಮಂತ್ 9480688222	ಎನ್. ಬಸವರಾಜು 9480688223
10	ಆರ್.ಆರ್. ನಗರ	ಜ್ಞಾನಭಾರತಿ	ವೆಂಕಟೇಶ್. ಸಿ 9480688129	ಎನ್. ಬಸವರಾಜು 9480688223	ಎನ್. ಬಸವರಾಜು 9480688223
11	ಆರ್.ಆರ್. ನಗರ	ಉಳ್ಳಾಲ	ನಾಗಭೂಷಣ್ 9480688130	ಎಂ.ವಿ. ಗುರುಪ್ರಸಾದ್ 9480688225	ಲೋಕೇಶ್. ಬಿ.ಸಿ 9480688272
12	ಆರ್.ಆರ್. ನಗರ	ಕೆಂಗೇರಿ	ನಟರಾಜ್ 9480688159	ಎಂ.ವಿ. ಗುರುಪ್ರಸಾದ್ 9480688225	ಲೋಕೇಶ್. ಬಿ.ಸಿ 9480688272
13	ಆರ್.ಆರ್. ನಗರ	ರಾಜರಾಜೇಶ್ವರಿ ನಗರ	ಎಂ. ಸಿದ್ದರಾಮಯ್ಯ 9480688160	ಎನ್. ಬಸವರಾಜು 9480688223	ಎನ್. ಬಸವರಾಜು 9480688223
14	ಆರ್.ಆರ್. ನಗರ	ಹೆಮ್ಮಿಗೆಪುರ	ದಯಾನಂದ್. ಎನ್ 9480688198	ಎಂ.ವಿ. ಗುರುಪ್ರಸಾದ್ 9480688225	ಲೋಕೇಶ್. ಬಿ.ಸಿ 9480688272
		ಮಹದೇವಪುರ ವಲಯ			
1	ಮಹದೇವಪುರ	54 ಹೂಡಿ	ಜಗದೀಶ. ಎಂ 9480688054	ಶ್ರೀನಿವಾಸ ಮೂರ್ತಿ 9480688241	ಡಿ.ಎಂ. ಮುನಿರೆಡ್ಡಿ 9480688280
2	ಮಹದೇವಪುರ	82 ಗರುಡಚಾರ್‌ಪಾಳ್ಯ	ರಘು 9480688082	ಶ್ರೀನಿವಾಸ ಮೂರ್ತಿ 9480688241	ಡಿ.ಎಂ. ಮುನಿರೆಡ್ಡಿ 9480688280
3	ಮಹದೇವಪುರ	83 ಕಾಡುಗೋಡಿ	ಎನ್. ವೆಂಕಟೇಶ್ 9480688083	ಶ್ರೀಧರ್. ಸಿ 9480688242	ಡಿ.ಎಂ. ಮುನಿರೆಡ್ಡಿ 9480688280
4	ಮಹದೇವಪುರ	84 ಹಗದೂರು	ಬಸವರಾಜ್. ಕೆ ತಕಳಕ್ಕಿ 9480688084	ಶ್ರೀಧರ್. ಸಿ 9480688242	ಡಿ.ಎಂ. ಮುನಿರೆಡ್ಡಿ 9480688280
5	ಮಹದೇವಪುರ	85 ದೊಡ್ಡನೆಕ್ಕುಂದಿ	ಶ್ರೀಕಾಂತ್ 9480688085	ಶ್ರೀನಿವಾಸ ಮೂರ್ತಿ 9480688241	ಡಿ.ಎಂ. ಮುನಿರೆಡ್ಡಿ 9480688280
6	ಮಹದೇವಪುರ	86 ಮಾರತ್ತಹಳ್ಳಿ	ಶ್ರೀ ಉಮೇಶ್ 9449548850	ಶ್ರೀ ಜಿ.ಎಲ್. ಮಾರ್ಕಂಡಯ್ಯ 8951430322	ಡಿ.ಎಂ. ಮುನಿರೆಡ್ಡಿ 9448310811
7	ಮಹದೇವಪುರ	149 ವರ್ತೂರು	ವೆಂಕಟೇಶ್. ಟಿ.ಎಂ 9480688149	ಶ್ರೀಧರ್. ಸಿ 9480688242	ಡಿ.ಎಂ. ಮುನಿರೆಡ್ಡಿ 9480688280
8	ಮಹದೇವಪುರ	150 ಬೆಳ್ಳಂದೂರು	ಜಗದೀಶ. ಎಂ 9480688054	ಶ್ರೀನಿವಾಸ ಮೂರ್ತಿ 9480688241	ಡಿ.ಎಂ. ಮುನಿರೆಡ್ಡಿ 9480688280
9	ಮಹದೇವಪುರ	25 ಹೊರಮಾವು	ಶ್ರೀ ರಮೇಶ್ 9480688025	ಚಂದ್ರಶೇಖರ್. ಎ.ಜಿ 9480688238	ಶ್ರೀ ಗುರು 9448323311
10	ಮಹದೇವಪುರ	26 ರಾಮಮೂರ್ತಿನಗರ	ಶ್ರೀ ವಿಕ್ರಮ್ ಸಜ್ಜನ್ ಶೆಟ್ಟಿ 9480688026	ಚಂದ್ರಶೇಖರ್. ಎ.ಜಿ 9480688238	ಶ್ರೀ ಗುರು 9448323311
11	ಮಹದೇವಪುರ	51 ವಿಜ್ಞಾನಪುರ	ಶ್ರೀ ರಮೇಶ್ 9480688051	ಚಂದ್ರಶೇಖರ್. ಎ.ಜಿ 9480688238	ಶ್ರೀ ಗುರು 9448323311
12	ಮಹದೇವಪುರ	52 ಕೃಷ್ಣರಾಜಪುರ	ಶ್ರೀ ಕೇಶವ್ 9480688052	ಶ್ರೀ ಪಂಪಪತಿ. ಎಂ 9480688239	ಶ್ರೀ ಗುರು 9448323311
13	ಮಹದೇವಪುರ	53 ಬಸವಪುರ	ಶ್ರೀ ಕೇಶವ್ 9480688053	ಶ್ರೀ ಪಂಪಪತಿ. ಎಂ 9480688239	ಶ್ರೀ ಗುರು 9448323311
14	ಮಹದೇವಪುರ	55 ದೇವಸಂದ್ರ	ಶ್ರೀ ಕೇಶವ್ 9480688055	ಶ್ರೀ ಪಂಪಪತಿ. ಎಂ 9480688239	ಶ್ರೀ ಗುರು 9448323311
15	ಮಹದೇವಪುರ	56ಎ ನಾರಾಯಣಪುರ	ಸೋಮಯ್ಯ. ಜಿ.ಡಿ 9480688056	ವಿಜಯ್‌ಕುಮಾರ್. ಎ 9742606161 9480688240	ಶ್ರೀ ಗುರು. ಕೆ 9448323311 & 9480688279
16	ಮಹದೇವಪುರ	81 ವಿಜ್ಞಾನನಗರ	ಎಲ್. ಸುರೇಶ್ 9480688081	ವಿಜಯ್‌ಕುಮಾರ್. ಎ 9742606161 9480688240	ಶ್ರೀ ಗುರು. ಕೆ 9448323311 & 9480688279
17	ಮಹದೇವಪುರ	87 ಹೆಚ್‌ಎಎಲ್ ಏರ್‌ಪೋರ್ಟ್	ಸೋಮಯ್ಯ. ಜಿ.ಡಿ 9480688056	ವಿಜಯ್‌ಕುಮಾರ್. ಎ 9742606161 9480688240	ಶ್ರೀ ಗುರು. ಕೆ 9448323311 & 9480688279

ಸೂಚನೆ: ಹೊಸದಾಗಿ ರೂಪಿಸಲಾದ 243 ವಾರ್ಡ್‌ಗಳ ಬಗ್ಗೆ ಇತ್ತೀಚಿನ ವಿವರವನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು.

ಸಹಿ/- ಮುಖ್ಯ ಆಯುಕ್ತರು, ಬಿಬಿಎಂಪಿ.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಒಕಳೀಪುರ: ಅಧಿಕಾರಿಗಳ ವಿರುದ್ಧದ ತನಿಖೆ ಲೋಕಾಯುಕ್ತಕ್ಕೆ ಹಸ್ತಾಂತರ

ಸರ್ಕಾರಿ ಜಾಗ: ಕೋಟ್ಯಂತರ ಪರಿಹಾರ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಒಕಳೀಪುರ ಸಿಗ್ನಲ್‌ರಹಿತ ಕಾರಿಡಾರ್ ಯೋಜನೆಗೆ ಅಗತ್ಯವಿದ್ದ 196 ಚದರ ಮೀಟರ್ ಸರ್ಕಾರಿ ಜಾಗಕ್ಕೇ ₹5.92 ಕೋಟಿ ಪರಿಹಾರವನ್ನು ಬಿಬಿಎಂಪಿ ನೀಡಿದ್ದು, ಈ ಪ್ರಕರಣದ ತನಿಖೆ ಈಗ ಲೋಕಾಯುಕ್ತಕ್ಕೆ ಹಸ್ತಾಂತರವಾಗಿದೆ.

ಒಕಳೀಪುರದಲ್ಲಿ 8 ಪಥಗಳ 7 ಕಾರಿಡಾರ್ ನಿರ್ಮಿಸುವ ಯೋಜನೆಗೆ ಮೆ. ಖೋಡೇಸ್ ಈಶ್ವರಸ್ ಆ್ಯಂಡ್ ಸನ್ಸ್ ವಶದಲ್ಲಿದ್ದ 196 ಚದರ ಮೀಟರ್ ಜಾಗ ಅಗತ್ಯವಿದೆ ಎಂಬುದನ್ನು ಬಿಬಿಎಂಪಿ ಅಧಿಕಾರಿಗಳು ಗುರುತಿಸಿದ್ದರು. ಟಿಡಿಆರ್ (ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕು) ಪಡೆದು ಭೂಮಿ ಹಸ್ತಾಂತರಿಸಲು ಖೋಡೇಸ್ ಕಂಪನಿ ನಿರಾಕರಿಸಿದ್ದರಿಂದ ನಗದು ಪರಿಹಾರ ನೀಡಿತ್ತು.

ಚದರ ಮೀಟರ್‌ಗೆ ₹1.50 ಲಕ್ಷ ಮಾರ್ಗಸೂಚಿ ದರ ಇದ್ದು, ಎರಡು ಪಟ್ಟು ಎಂದರೆ ಚದರ ಅಡಿಗೆ ₹3.01 ಲಕ್ಷ ಪರಿಹಾರ ನೀಡಲು ಬಿಬಿಎಂಪಿ ನಿರ್ಧರಿಸಿತ್ತು. ಅದರಂತೆ ಒಟ್ಟು ₹5.92 ಕೋಟಿ ಪರಿಹಾರ ನಿಗದಿ ಮಾಡಿ ಕೌನ್ಸಿಲ್ ಸಭೆಯಲ್ಲೂ ಅನುಮೋದನೆ ಪಡೆದು ಪರಿಹಾರ ವಿತರಿಸಿ ಭೂಮಿ ಹಸ್ತಾಂತರ ಮಾಡಿಕೊಂಡಿತು.

ಈ ಪ್ರಕ್ರಿಯೆಗಳು ಪೂರ್ಣಗೊಂಡ ಬಳಿಕ ಯೋಜನೆಗೆ ರೈಲ್ವೆ ಇಲಾಖೆಯಿಂದ ವಶಕ್ಕೆ ಪಡೆದಿರುವ ಜಾಗದಲ್ಲಿ ತಮ್ಮ ಕಂಪನಿಯ ಜಾಗವೂ ಇದೆ ಎಂದು ಹೈಕೋರ್ಟ್‌ನಲ್ಲಿ ಖೋಡೇಸ್ ಕಂಪನಿ ರಿಟ್ ಅರ್ಜಿ(ಡಬ್ಲ್ಯುಪಿ 16545/2019) ಸಲ್ಲಿಸಿತು. ನ್ಯಾಯಾಲಯದ ನಿರ್ದೇಶನದಂತೆ ಬೆಂಗಳೂರು ಸಿಟಿ ಸರ್ವೆ ಭೂ ದಾಖಲೆಗಳ ಉಪ ನಿರ್ದೇಶಕಿ ಜೆ.ವಿಜಯಾ ಭವಾನಿ ವರದಿ ನೀಡಿದರು. ಅದರ ಪ್ರಕಾರ ಈಗಾಗಲೇ ಪರಿಹಾರ ನೀಡಿ ಹಸ್ತಾಂತರ ಮಾಡಿಕೊಂಡಿರುವ ಜಾಗವೂ ಪಾಲಿಕೆಯ ಸ್ವತ್ತು ಎಂಬುದು ಪತ್ತೆಯಾಯಿತು.

ಸರ್ವೆ ನಡೆಸದೆ ಕೆಲವು ದಾಖಲೆಗಳನ್ನಷ್ಟೇ ನೋಡಿ ಪರಿಹಾರ ನೀಡಿರುವುದು ಇಷ್ಟೆಲ್ಲಾ ಅವಾಂತರಗಳಿಗೆ ಕಾರಣವಾಗಿದೆ. ಬಿಬಿಎಂಪಿಗೆ ನಷ್ಟ ಉಂಟು ಮಾಡಿರುವ ಪಾಲಿಕೆ ವಿಶೇಷ ಆಯುಕ್ತರು, ಮುಖ್ಯ ಆಯುಕ್ತರಾಗಿದ್ದ (ಯೋಜನೆ) ಕೆ.ಟಿ. ನಾಗರಾಜ್, ಭೂಸ್ವಾಧೀನ ವಿಭಾಗದ ಉಪ ಆಯುಕ್ತರು, ಪಶ್ಚಿಮ ವಲಯದ ಜಂಟಿ ಆಯುಕ್ತರು, ಕಾನೂನು ಕೋಶದ ಮುಖ್ಯಸ್ಥ ದೇಶಪಾಂಡೆ, ಮುಖ್ಯ ಲೆಕ್ಕಾಧಿಕಾರಿ ಮಹದೇವ, ಕಾರ್ಯಪಾಲಕ ಎಂಜಿನಿಯರ್ ಮತ್ತು ವಿಶೇಷ ಭೂಸ್ವಾಧೀನಾಧಿಕಾರಿ ವಿರುದ್ಧ ಕ್ರಮ ಜರುಗಿಸಬೇಕು ಎಂದು ಎಸಿಬಿಗೆ ವ್ಯಕ್ತಿಯೊಬ್ಬರು ದೂರು ನೀಡಿದ್ದರು. ಈ ನಡುವೆ ಎಸಿಬಿ ರದ್ದಾಗಿದ್ದರಿಂದ ತನಿಖೆ ಈಗ ಲೋಕಾಯುಕ್ತಕ್ಕೆ ಹಸ್ತಾಂತರವಾಗಿದೆ.

‘ಕಂದಾಯ, ಭೂಸ್ವಾಧೀನ ಅಧಿಕಾರಿಗಳೇ ಹೊಣೆ’

ದೂರು ಆಧರಿಸಿ ಆಂತರಿಕ ತನಿಖೆ ನಡೆಸಿದ ನಗರಾಭಿವೃದ್ಧಿ ಇಲಾಖೆ, ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಸರ್ವೆಯರ್, ಬಿಬಿಎಂಪಿ ಕಂದಾಯ ವಿಭಾಗದ ಅಧಿಕಾರಿಗಳು, ಭೂಸ್ವಾಧೀನ ವಿಭಾಗದ ಅಧಿಕಾರಿಗಳು ಹೊಣೆಗಾರ-ರಾಗುತ್ತಾರೆ ಎಂದು ನಗರಾಭಿವೃದ್ಧಿ ಇಲಾಖೆ ವರದಿ ನೀಡಿದೆ.

ಆಸ್ತಿ ಮಾಲೀಕತ್ವ ದಾವೆ ಹೈಕೋರ್ಟ್‌ನಲ್ಲಿದ್ದು, ಸರ್ಕಾರಕ್ಕೇ ಸೇರಿದ ಆಸ್ತಿ ಎಂಬ ತೀರ್ಪು ಬಂದರೆ ತನಿಖೆಗೆ ಅನುಮತಿ ನೀಡಬಹುದು ಎಂದು ವರದಿ ತಿಳಿಸಿದೆ.

ಪ್ರಜಾವಾಣಿ ವಿಶೇಷ

ಮಲೆನಾಡು ‘ಕೆಳದಿ ಕರ್ನಾಟಕ’: ಪರಿಶೀಲನೆಗೆ ಪತ್ರ

ಬೆಂಗಳೂರು: ಮಲೆನಾಡು ಪ್ರದೇಶವನ್ನು ‘ಕೆಳದಿ ಕರ್ನಾಟಕ’ ವೆಂದು ಘೋಷಿಸುವ ಕೋರಿಕೆಯನ್ನು ಪರಿಶೀಲಿಸಿ, ಅಗತ್ಯಕ್ರಮ ಕೈಗೊಳ್ಳುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು ಕಂದಾಯ ಇಲಾಖೆಗೆ ಪತ್ರ ಬರೆದಿದ್ದಾರೆ.

ಹರಿಹರದ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಅವರು ಈ ಕುರಿತು ಮನವಿ ಸಲ್ಲಿಸಿದ್ದಾರೆ.

ಸರ್ಕಾರ ಹೈದರಾಬಾದ್ ಕರ್ನಾಟಕವನ್ನು ‘ಕಲ್ಯಾಣ ಕರ್ನಾಟಕ’, ಮುಂಬೈ ಕರ್ನಾಟಕ ವನ್ನು ‘ಕಿತ್ತೂರು ಕರ್ನಾಟಕ’ ಎಂದು ಘೋಷಿಸಿರುವಂತೆ ಮಲೆನಾಡು ಭಾಗವನ್ನು ‘ಕೆಳದಿ ಕರ್ನಾಟಕ’ ಎಂದು ಘೋಷಿಸುವಂತೆ ಅವರು ಮನವಿ ಮಾಡಿದ್ದಾರೆ. ಆದರೆ, ವಿಷಯವು ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ಹಾಗಾಗಿ, ಸೂಕ್ತಕ್ರಮ ಕೈಗೊಂಡು ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಕೋರಿದ್ದಾರೆ.

ಪಠ್ಯದಲ್ಲಿ ದೇಶಪ್ರೇಮದ ಪಾಠ ಅಳವಡಿಸಿ

ಆರ್‌ಎಸ್‌ಎಸ್‌ನ ಹಿರಿಯ ಪ್ರಚಾರಕ, ಲೇಖಕ ಚಂದ್ರಶೇಖರ ಭಂಡಾರಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಣ್ಣ ವಯಸ್ಸಿನಲ್ಲಿಯೇ ರಾಷ್ಟ್ರಪ್ರೇಮ ಜಾಗೃತಗೊಳಿಸುವಂತಹ ಪಾಠಗಳನ್ನು ಶಾಲಾ ಪಠ್ಯದಲ್ಲಿ ಅಳವಡಿಸಬೇಕು’ ಎಂದು ಲೇಖಕ ಹಾಗೂ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿರಿಯ ಪ್ರಚಾರಕ ಚಂದ್ರಶೇಖರ ಭಂಡಾರಿ ಆಗ್ರಹಿಸಿದರು.

ರಾಷ್ಟ್ರ ಜಾಗೃತಿ ಅಭಿಯಾನ ಸಮಿತಿ ನಗರದಲ್ಲಿ ಬುಧವಾರ ಆಯೋಜಿಸಿದ್ದ ರಾಷ್ಟ್ರ ಜಾಗೃತಿ ಅಭಿಯಾನದ ದೇಶ ಭಕ್ತಿ ಗೀತ ಗಾಯನ ಮತ್ತು ನೃತ್ಯ ಸ್ಪರ್ಧೆಯ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ, ಮಾತನಾಡಿದರು. ‘ರಾಷ್ಟ್ರ ಜಾಗೃತಿ ನಿರಂತರ ಪ್ರಕ್ರಿಯೆ. ಮನೆ ಹಾಗೂ ಶಾಲೆಯ ಹಂತದಲ್ಲಿಯೇ ದೇಶ ಭಕ್ತಿಯನ್ನು ಬೆಳೆಸುವ ಪ್ರಯತ್ನಗಳು ನಡೆಯಬೇಕು. ಪಠ್ಯದಲ್ಲಿಯೂ ದೇಶದ ಬಗ್ಗೆ ಅಭಿಮಾನ ಬೆಳೆಸುವ ಪಾಠಗಳು ಇರಬೇಕು’ ಎಂದು ಹೇಳಿದರು.

ಮೈಸೂರಿನ ರಾಮಕೃಷ್ಣ ಆಶ್ರಮದ ಮುಕ್ತಿದಾನಂದ ಸ್ವಾಮೀಜಿ, ‘ರಾಷ್ಟ್ರ ಪ್ರೇಮ ಉಚ್ಚಮಟ್ಟದ ಭಾವ. ಇದನ್ನು ಜಾಗೃತಗೊಳಿಸುವ ಕೆಲಸ ಎಲ್ಲೆಡೆ ಸತತವಾಗಿ ನಡೆಯಬೇಕು. ಧಮನಿ ಧಮನಿಗಳಲ್ಲಿ ರಾಷ್ಟ್ರ ಪ್ರೇಮ ಜಾಗೃತ ಆಗಬೇಕು. ಸ್ವಾಮಿ ವಿವೇಕಾನಂದರು ರಾಷ್ಟ್ರ ಜಾಗೃತಿಗೆ ಶ್ರಮಿಸಿದರು. ಗಾಂಧೀಜಿ, ಸುಭಾಷ್ ಚಂದ್ರ ಬೋಸ್ ಸೇರಿ ಹಲವರು ರಾಷ್ಟ್ರ ಜಾಗೃತಿ ಯಜ್ಞದಲ್ಲಿ ಪಾಲ್ಗೊಂಡಿದ್ದರು. ದೇಶ ಭಕ್ತಿ ಹಾಗೂ ರಾಷ್ಟ್ರದ ಬಗೆಗಿನ ಜ್ಞಾನ ಹೆಚ್ಚಿಸುವ ಕೆಲಸಗಳನ್ನು ಆಡಳಿತಾರೂಢ ಸರ್ಕಾರಗಳು ಮಾಡಬೇಕು’ ಎಂದು ತಿಳಿಸಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಚಾಲಕಿ ತೇಜಸ್ವಿನಿ ಅನಂತಕುಮಾರ್, ‘ವಂದೇ ಮಾತರಂ ಎಂಬ ಎರಡು ಪದಗಳು ರಾಷ್ಟ್ರ ಭಕ್ತಿ ಹೆಚ್ಚಿಸುತ್ತವೆ. ಸಂಪದ್ಭರಿತವಾಗಿದ್ದ ನಮ್ಮ ದೇಶವನ್ನು ಮೊಘಲರು, ಪೋರ್ಚುಗೀಸರು, ಡಚ್ಚರು ಹಾಗೂ ಬ್ರಿಟಿಷರು ಲೂಟಿ ಮಾಡಿದರು. ದಾಸ್ಯ, ದಬ್ಬಾಳಿಕೆ ಹಾಗೂ ಅತ್ಯಾಚಾರವನ್ನು ಮೀರಿ ದೇಶ ಬೆಳೆದಿದೆ. ನಮ್ಮಲ್ಲಿನ ವೇದ, ಉಪನಿಷತ್ತುಗಳನ್ನು ಓದಲು ಒಂದು ಜನ್ಮ ಸಾಕಾಗುವುದಿಲ್ಲ. ದೇಶ ಮತ್ತೆ ವಿಶ್ವಗುರುವಾಗಿ ಹೊರಹೊಮ್ಮುವುದರಲ್ಲಿ ಅನುಮಾನವಿಲ್ಲ’ ಎಂದರು.

ಸ್ವೇಚ್ಛೆಯಾಗುತ್ತಿದೆ ಸ್ವಾತಂತ್ರ್ಯ: ಗಾಯಕಿ ಅರ್ಚನಾ ಉಡುಪ, ‘ಪ್ರತಿಯೊಬ್ಬರಲ್ಲೂ ರಾಷ್ಟ್ರಪ್ರೇಮ ಜಾಗೃತ ಆಗಬೇಕು. ಲಕ್ಷಾಂತರ ಸೈನಿಕರು ಸದ್ದಿಲ್ಲದೆ ನಮಗಾಗಿ ಜೀವ ಕೊಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಸ್ವಾತಂತ್ರ್ಯ ಎನ್ನುವುದು ಸ್ವೇಚ್ಛೆಯಾಗುತ್ತಿದೆ. ಗುರು–ಶಿಷ್ಯ ಪರಂಪರೆ ಮರೆಯಾಗುತ್ತಿದೆ. ಎಲ್ಲವೂ ನಮ್ಮ ಇಷ್ಟದಂತೆ ನಡೆಯಬೇಕು ಎನ್ನುವ ಮನೋಭಾವವನ್ನು ಹೆಚ್ಚಿನವರು ಬೆಳೆಸಿಕೊಳ್ಳುತ್ತಿದ್ದಾರೆ’ ಎಂದು ಹೇಳಿದರು.

ಅಭಿಯಾನದ ಆಯೋಜಕ ರವಿ ಹೊಯ್ಸಳ, ‘ರಾಷ್ಟ್ರಗೀತೆಯನ್ನು ಬೇರೆ ದೇಶಗಳಲ್ಲಿ ಎಲ್ಲರೂ ಎಲ್ಲ ಅವಧಿಯಲ್ಲಿ ಹಾಡುವಂತಿಲ್ಲ. ನಮ್ಮ ದೇಶದಲ್ಲಿ ಮಾತ್ರ ಎಲ್ಲರಿಗೂ ಹಾಡಲು ಅವಕಾಶವಿದೆ. ಆದರೆ, ಬಹುತೇಕರಿಗೆ ರಾಷ್ಟ್ರಗೀತೆ ಪೂರ್ತಿಯಾಗಿ ಹಾಡಲು ಬರುವುದಿಲ್ಲ. ಶಾಲಾ ಅವಧಿಯಲ್ಲಿ ಹಾಡುವ ರಾಷ್ಟ್ರಗೀತೆಯನ್ನು ದೊಡ್ಡವರಾದಂತೆ ಮರೆಯುತ್ತಾರೆ. ಇದು ನಾವು ನಡೆಸಿದ ಸಮೀಕ್ಷೆಯೊಂದರಲ್ಲಿ ದೃಢಪಟ್ಟಿದೆ’ ಎಂದರು.

ಸಮಾರಂಭದಲ್ಲಿ ಮುಕ್ತಿದಾನಂದ ಸ್ವಾಮೀಜಿ, ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ ಹಾಗೂ ಅರ್ಚನಾ ಉಡುಪ ಚರ್ಚಿಸಿದರು. ನಿವೃತ್ತ ನ್ಯಾಯಮೂರ್ತಿ ಎನ್‌. ಕುಮಾರ್ ಇದ್ದಾರೆ. – ಪ್ರಜಾವಾಣಿ ಚಿತ್ರ

‘ಕುಟಿಲ ನೀತಿಗಳ ವಿರುದ್ಧ ಜಾಗೃತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರ ಬ್ರಿಟಿಷರ ಮಾದರಿಯಲ್ಲಿ ಧರ್ಮ, ಜಾತಿ ಹಾಗೂ ಜನರ ಮಧ್ಯೆ ಒಡೆದು ಆಳುವ ನೀತಿ ಅನುಸರಿಸುತ್ತಿದೆ. ಇಂತಹ ಕುಟಿಲ ನೀತಿಯನ್ನು ಸಮಾಜಕ್ಕೆ ಅರ್ಥಮಾಡಿಸಬೇಕಿದೆ’ ಎಂದು ಸ್ವರಾಜ್ ಇಂಡಿಯಾ ಸಂಸ್ಥಾಪಕ ಸದಸ್ಯ ಯೋಗೇಂದ್ರ ಯಾದವ್ ಹೇಳಿದರು.

ಬೆಂಗಳೂರಿನಲ್ಲಿ ಬುಧವಾರ ಸಾಮಾಜಿಕ ಕಾರ್ಯಕರ್ತರ ಜತೆ ಆಯೋಜಿಸಿದ್ದ ಸಂವಾದದಲ್ಲಿ ಅವರು ಮಾತನಾಡಿದರು.

‘ದೇಶದ ಆರ್ಥಿಕ ಸ್ಥಿತಿ ಕಳವಳಕಾರಿಯಾಗಿದೆ. ನಿರುದ್ಯೋಗ ಸಮಸ್ಯೆ ಏರುಗತಿಯಲ್ಲಿ ಸಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಕೊಟ್ಟ ಮಾತಿನಂತೆ ಉದ್ಯೋಗ ಸೃಷ್ಟಿಗೆ ಒತ್ತು ನೀಡಿಲ್ಲ. ಸಾಮಾಜಿಕ ಅಂತರ ಹೆಚ್ಚಾಗುತ್ತಲೇ ಸಾಗುತ್ತಿದೆ. ಇಂತಹ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಹುಡುಕುವ ಬದಲು ಧರ್ಮದ ವಿಚಾರಗಳಿಗೆ ಅಂಟಿಕೊಂಡು ರಾಜಕೀಯ ಮಾಡುತ್ತಿದ್ದಾರೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಯೋಗೇಂದ್ರ ಯಾದವ್

‘ಪ್ರಸ್ತುತ ದೇಶದ ಸನ್ನಿವೇಶವೂ ಕೆಟ್ಟದಾಗಿದೆ. ಪರಿಸ್ಥಿತಿ ಎದುರಿಸುವ ಮನೋಸ್ಥೈರ್ಯ ಜನರು ಹೊಂದುವುದು ಅಗತ್ಯ. ಅದಕ್ಕೆ ನಾಗರಿಕ ಸಮಾಜ ಸಿದ್ಧವಾಗಬೇಕು. ಅನಗತ್ಯ ವಿಷಯ ತೊರೆದು ತುರ್ತು ಆದ್ಯತೆಗಳತ್ತ ಸರ್ಕಾರ ಗಮನ ಹರಿಸುವಂತೆ ಒತ್ತಡ ಹಾಕಬೇಕಿದೆ. ಸಂಕಷ್ಟದಲ್ಲಿರುವ ಜನರ ಬದುಕಿಗೆ ಬೆಂಬಲವಾಗಿ ನಿಲ್ಲಬೇಕಿದೆ. ಧರ್ಮ, ಜಾತಿ ಭೇದ ತೊರೆದು ಎಲ್ಲರನ್ನೂ ಒಂದುಗೂಡಿಸಬೇಕಿದೆ’ ಎಂದು ಪ್ರತಿಪಾದಿಸಿದರು.

ಜನರು ಎಷ್ಟೇ ಜಾಗೃತರಾದರೂ ಇವಿಎಂಗಳನ್ನು ದುರ್ಬಳಕೆ ಮಾಡಿಕೊಂಡು ಬಿಜೆಪಿ ಅಧಿಕಾರಕ್ಕೆ ಬರುತ್ತದೆ ಎಂಬ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಯಾದವ್, ‘ದುರ್ಬಳಕೆಯಂಹ ವಿಷಯಗಳಿಗೆ ಮಹತ್ವ ನೀಡುವ ಬದಲು ನಮ್ಮ ಕೆಲಸವನ್ನು ನಾವು ಪ್ರಾಮಾಣಿಕವಾಗಿ ಮಾಡಬೇಕು’ ಎಂದರು. ಸ್ವರಾಜ್ ಇಂಡಿಯಾ ನಾಯಕಿ ಕಾವೇರಿ ಬೋಪಣ್ಣ ಉಪಸ್ಥಿತರಿದ್ದರು.

ಪ್ರೊ.ಎನ್‌. ಲಿಂಗಣ್ಣ ಮಾಹಿತಿ ಕಾರ್ಯಾಗಾರ ಉದ್ಘಾಟಿಸಿದರು. ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಚ್‌. ನಟರಾಜ್ ಇದ್ದಾರೆ.

‘ಸರ್ಕಾರಿ ಯೋಜನೆಗಳ ಪ್ರಯೋಜನ ಪಡೆಯಿರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಸ್ತೆ ಬದಿ ಕಾರ್ಯನಿರ್ವಹಿಸುತ್ತಿರುವ ಚರ್ಮ ಕುಶಲಕರ್ಮಿಗಳು ಸರ್ಕಾರಿ ಇಲಾಖೆಗಳಲ್ಲಿ ಜಾರಿಯಿರುವ ಪರಿಶಿಷ್ಟ ಜಾತಿ ಉಪ ಯೋಜನೆಯ (ಎಸ್‌ಸಿಎಸ್‌ಪಿ) ಪ್ರಯೋಜನಗಳನ್ನು ಸದ್ಬಳಕೆ ಮಾಡಿಕೊಂಡು, ಆರ್ಥಿಕ ಮತ್ತು ಸಾಮಾಜಿಕವಾಗಿ ಸಬಲರಾಗಬೇಕು’ ಎಂದು ಡಾ. ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ (ಲಿಡ್ಕರ್) ಅಧ್ಯಕ್ಷ ಪ್ರೊ.ಎನ್. ಲಿಂಗಣ್ಣ ತಿಳಿಸಿದರು.

ನಿಗಮವು ನಗರದಲ್ಲಿ ಬುಧವಾರ ಹಮ್ಮಿಕೊಂಡ ‘ಬೆಂಗಳೂರು ನಗರದ ಚರ್ಮ ಕುಶಲಕರ್ಮಿಗಳಿಗೆ ಅಭಿವೃದ್ಧಿಯ ಸದವಕಾಶಗಳು’ ಮಾಹಿತಿ ಕಾರ್ಯಾಗಾರ ಉದ್ಘಾಟಿಸಿ, ಮಾತನಾಡಿದರು. ‘ಕುಶಲಕರ್ಮಿಗಳು ಲಿಡ್ಕರ್ ಯೋಜನೆಗಳಲ್ಲದೆ ಇತರ ನಿಗಮಗಳು ಹಾಗೂ ಇಲಾಖೆಗಳ ಯೋಜನೆಯ ಲಾಭ ಪಡೆದುಕೊಳ್ಳಬೇಕು. ಕುಶಲಕರ್ಮಿಗಳು ವ್ಯಕ್ತಿತ್ವದಲ್ಲಿ ಬದಲಾವಣೆ ಮಾಡಿಕೊಂಡು, ಶಿಸ್ತುಬದ್ಧ ಜೀವನ ನಡೆಸಿದರೆ ಸಮಾಜದಲ್ಲಿ ಉತ್ತಮ ಸ್ಥಾನ ಪಡೆಯಬಹುದಾಗಿದೆ’ ಎಂದು ಹೇಳಿದರು.

ಕಾರ್ಯಾಗಾರದಲ್ಲಿ ಬೆಂಗಳೂರು ನಗರದ 250 ಕುಶಲಕರ್ಮಿಗಳು ಭಾಗವಹಿಸಿ, ತರಬೇತಿ ಪಡೆದುಕೊಂಡರು.

ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಚ್. ನಟರಾಜ್, ನಿವೃತ್ತ ಐಎಎಸ್ ಅಧಿಕಾರಿ ಡಿ.ಎಸ್. ವಿಶ್ವನಾಥ್, ಸಮುದಾಯ ಚಿಂತಕ ದಾಸನೂರು ಕೂಸಣ್ಣ, ರಾಷ್ಟ್ರೀಯ ಮಾನವ ಸಂಪನ್ಮೂಲ ತರಬೇತುದಾರ ಡಿ.ಟಿ. ರಾಮಾನುಜಂ ಇದ್ದರು.

ಕ್ರೌಡ್ ಫಂಡಿಂಗ್: 3.8 ಲಕ್ಷ ಮಂದಿಗೆ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್ ವೇದಿಕೆಯಲ್ಲಿ ಕ್ರೌಡ್ ಫಂಡಿಂಗ್ ನಡೆಸುವ ಮೂಲಕ 3.8 ಲಕ್ಷಕ್ಕೂ ಅಧಿಕ ಮಂದಿಗೆ ಚಿಕಿತ್ಸೆಯ ವೆಚ್ಚ ಭರಿಸಲು ಮಿಲಾಪ್ ಸಂಸ್ಥೆ ನೆರವಾಗಿದೆ.

ಬಡ ಕುಟುಂಬದ ವಿದ್ಯಾರ್ಥಿಗಳಿಗೆ ಶಿಕ್ಷಣದಂತಹ ಸಾಮಾಜಿಕ ಕಾರ್ಯಕ್ಕೂ ಆರ್ಥಿಕ ನೆರವು ಒದಗಿಸಲು ಸಂಸ್ಥೆ ವೇದಿಕೆ ಒದಗಿಸಿ ಕೊಟ್ಟಿದೆ. ಆರ್ಥಿಕ ನೆರವು ಅಗತ್ಯ ಇರುವವರು ಸಂಸ್ಥೆಯ ಪೋರ್ಟಲ್ ಮೂಲಕ ಅಗತ್ಯ ದಾಖಲಾತಿಗಳನ್ನು ಸಲ್ಲಿಸಿ, ಹೆಸರು ನೋಂದಾಯಿಸಿಕೊಳ್ಳಬಹುದು. ಸಂಸ್ಥೆ ವಿಶ್ವದಾದ್ಯಂತ ಸುಮಾರು 4 ಲಕ್ಷ ದಾನಿಗಳನ್ನು ಹೊಂದಿದೆ.

‘ದೇಶದಲ್ಲಿ ಶೇ 67ರಷ್ಟು ಮಂದಿ ವೈದ್ಯಕೀಯ ವಿಮೆ ಹೊಂದಿಲ್ಲ. ವೈದ್ಯಕೀಯ ತುರ್ತು ಸಂದರ್ಭದಲ್ಲಿ ಸರ್ಕಾರದ ಯೋಜನೆಗಳು ನೆರವಿಗೆ ಬರುವುದು ಕಷ್ಟ. ಆದ್ದರಿಂದ ನಿಧಿ ಸಂಗ್ರಹ ಸೇವೆಯನ್ನು ಒದಗಿಸಲಾಗುತ್ತಿದೆ. ಕ್ಯಾನ್ಸರ್, ಅಂಗಾಂಗ ಕಸಿ, ತೀವ್ರ ನಿಗಾ ಘಟಕ ಚಿಕಿತ್ಸೆ, ಅಪಘಾತ ಸಂದರ್ಭದಲ್ಲಿ ತುರ್ತು ಚಿಕಿತ್ಸೆ ಸೇರಿ ವಿವಿಧ ಸಂದರ್ಭದಲ್ಲಿ ವೈದ್ಯಕೀಯ ವೆಚ್ಚಕ್ಕೆ ಹೆಚ್ಚಿನ ಹಣ ಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಆನ್‌ಲೈನ್ ವೇದಿಕೆಯ ಮೂಲಕ ಕ್ರೌಡ್ ಫಂಡಿಂಗ್ ನಡೆಸಿ, ನೆರವು ಒದಗಿಸಲಾಗುತ್ತಿದೆ’ ಎಂದು ಸಂಸ್ಥೆಯ ಅಧ್ಯಕ್ಷ ಅನೋಜ್ ವಿಶ್ವನಾಥ್ ತಿಳಿಸಿದ್ದಾರೆ.

‘10 ವರ್ಷಗಳ ಅವಧಿಯಲ್ಲಿ ಸಂಸ್ಥೆಯು ಅಪೋಲೊ, ಮಣಿಪಾಲ್, ಟಾಟಾ ಕ್ಯಾನ್ಸರ್ ಆಸ್ಪತ್ರೆ ಸೇರಿ 3,600ಕ್ಕೂ ಅಧಿಕ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳೊಂದಿಗೆ ಒಪ್ಪಂದ ಮಾಡಿಕೊಂಡಿದೆ. ವಿವಿಧ ಪ್ರತಿಷ್ಠಾನ, ಟ್ರಸ್ಟ್‌ಗಳು ನೆರವು ಒದಗಿಸುತ್ತಿವೆ. ಈವರೆಗೆ 2 ಲಕ್ಷಕ್ಕೂ ಅಧಿಕ ವೈದ್ಯಕೀಯ ಶಿಬಿರಗಳನ್ನು ನಡೆಸಲಾಗಿದೆ. ₹ 1,250 ಕೋಟಿಗೂ ಅಧಿಕ ಹಣ ಸಂಗ್ರಹಿಸಲಾಗಿದೆ’ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ನೆರವು ಪಡೆಯಲು ಹಾಗೂ ನೆರವು ನೀಡಲು: https://milaap.org/

ಡಿಕೆಎಂಎಸ್–ಬಿಎಂಎಸ್‌ಟಿ ಫೌಂಡೇಷನ್ ಸಿಇಒ ಪ್ಯಾಟ್ರಿಕ್ ಪಾಲ್ ಕಳವಳ

‘ರಕ್ತದ ಕ್ಯಾನ್ಸರ್: ರೋಗಿಗಳಿಗೆ ಸಿಗದ ದಾನಿಗಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಕ್ತದ ಕ್ಯಾನ್ಸರ್ ಹಾಗೂ ರಕ್ತ ಸಂಬಂಧಿ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳನ್ನು ಕಾಪಾಡಲು ರಕ್ತದ ಆಕರ ಕೋಶ ಸಹಾಯಕ. ಈ ರೋಗಿಗಳಲ್ಲಿ ಶೇ 30ರಷ್ಟು ಮಂದಿಗೆ ಮಾತ್ರ ಹೊಂದಾಣಿಕೆಯಾಗುವ ರಕ್ತದ ಆಕರ ಕೋಶ ದೊರೆಯುತ್ತಿದೆ’ ಎಂದು ಡಿಕೆಎಂಎಸ್–ಬಿಎಂಎಸ್‌ಟಿ ಫೌಂಡೇಷನ್ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಪ್ಯಾಟ್ರಿಕ್ ಪಾಲ್ ಕಳವಳ ವ್ಯಕ್ತಪಡಿಸಿದರು.

ನಗರದಲ್ಲಿ ಬುಧವಾರ ಫೌಂಡೇಷನ್ ಆಯೋಜಿಸಿದ ಕಾರ್ಯಕ್ರಮದಲ್ಲಿ ರಕ್ತದ ಆಕರ ಕೋಶ ದಾನಿಗಳಾದ ಅರುಷಿತ್, ದೇಬ್ರಾಜ್, ಡೇನಿಯಲ್ ಮತ್ತು ಸುರೇಶ್ ಅವರನ್ನು ಸನ್ಮಾನಿಸಿ, ಮಾತನಾಡಿದರು.

‘ದೇಶದಲ್ಲಿ ಪ್ರತಿವರ್ಷ ಲಕ್ಷಕ್ಕೂ ಅಧಿಕ ಮಂದಿ ರಕ್ತದ ಕ್ಯಾನ್ಸರ್‌ಗೆ ಒಳಗಾಗುತ್ತಿದ್ದಾರೆ. ರಕ್ತದ ಕ್ಯಾನ್ಸರ್ ಹಾಗೂ ರಕ್ತ ಸಂಬಂಧಿ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳನ್ನು ಕಾಪಾಡಲು ರಕ್ತದ ಆಕರ ಕೋಶ ಸಹಾಯಕ. ದಾನಿಗಳ ರಕ್ತದಿಂದ ಆಕರ ಕೋಶಗಳನ್ನು ಪಡೆದು, ಅಸ್ಥಿಮಜ್ಜೆ ಹಾಳಾಗಿರುವಂತಹ ರೋಗಿಗಳಿಗೆ ಕಸಿ ಮಾಡಲಾಗುತ್ತದೆ. ಇದು ಅಗತ್ಯವಿರುವಂತಹ ರೋಗಿಗಳಲ್ಲಿ ಶೇ 70ರಷ್ಟು ಮಂದಿಗೆ ಕುಟುಂಬದ ಸದಸ್ಯರು ಹಾಗೂ ಸಂಬಂಧಿಗಳ ರಕ್ತದ ಆಕರಕೋಶ ಹೊಂದಾಣಿಕೆ ಆಗುವುದಿಲ್ಲ’ ಎಂದು ತಿಳಿಸಿದರು.

‘ಡಿಕೆಎಂಎಸ್– ಬಿಎಂಎಸ್‌ಟಿ ದಾನಿಗಳ ರಕ್ತದ ಆಕರಕೋಶ ರಿಜಿಸ್ಟ್ರಿಯಲ್ಲಿ ಕರ್ನಾಟಕದ 27,500 ಮಂದಿ ಹೆಸರು ನೋಂದಾಯಿಸಿಕೊಂಡಿದ್ದಾರೆ. ಫೌಂಡೇಷನ್‌ನಿಂದ ಮೂರು ವರ್ಷಗಳಲ್ಲಿ ದೇಶದಾದ್ಯಂತ 67 ರಕ್ತದ ಆಕರಕೋಶ ಕಸಿಗಳನ್ನು ನಡೆಸಲಾಗಿದೆ. ರೋಗಿಗಳಿಗೆ ಆರಂಭಿಕ ಹಂತದಲ್ಲಿಯೆ ಹೊಂದಾಣಿಕೆಯಾಗುವ ದಾನಿ ಸಿಕ್ಕಲ್ಲಿ ವ್ಯಕ್ತಿ ಬೇಗ ಚೇತರಿಸಿಕೊಳ್ಳುತ್ತಾನೆ’ ಎಂದು ಹೇಳಿದರು.

ನಾರಾಯಣ ಹೆಲ್ತ್‌ನ ಕಸಿ ವಿಭಾಗದ ನಿರ್ದೇಶಕ ಡಾ. ಸುನೀಲ್ ಭಟ್, ‘ರಕ್ತದ ಆಕರ ಕೋಶಗಳು ಆರು ವಾರಗಳಲ್ಲಿ ಮತ್ತೆ ಬೆಳೆಯುತ್ತವೆ. ರಕ್ತದಿಂದ ಆಕರ ಕೋಶಗಳನ್ನು ಪಡೆಯುವ ಪ್ರಕ್ರಿಯೆ 4ರಿಂದ 5 ಗಂಟೆಗಳಲ್ಲಿ ಮುಕ್ತಾಯವಾಗಲಿದೆ. ಕೇವಲ 200ರಿಂದ 250 ಎಂ.ಎಲ್ ರಕ್ತವನ್ನು ಪಡೆಯಲಾಗುತ್ತದೆ. ದಾನಿಗೆ ಯಾವುದೇ ಸಮಸ್ಯೆಯಾಗುವುದಿಲ್ಲ’ ಎಂದು ವಿವರಿಸಿದರು.

ರಕ್ತದ ಆಕರ ಕೋಶ ದಾನಿಗಳು ತಮ್ಮ ಅನುಭವಗಳನ್ನು ಹಂಚಿಕೊಂಡು, ರಕ್ತದ ಆಕರ ಕೋಶ ದಾನ ಮಾಡುವಂತೆ ಮನವಿ ಮಾಡಿಕೊಂಡರು.

ರಕ್ತದ ಆಕರ ಕೋಶ ದಾನಿಗಳಾದ ಆರುಷಿತ್‌, ದೇಬ್ರಾಜ್‌, ಡೇನಿಯಲ್ ಮತ್ತು ಸುರೇಶ್ ಅವರು ಕೇಕ್ ಕತ್ತರಿಸಿ ಸಂಭ್ರಮಿಸಿದರು. ಪ್ಯಾಟ್ರಿಕ್ ಪಾಲ್ ಹಾಗೂ ಡಾ. ಸುನೀಲ್ ಭಟ್ ಇದ್ದಾರೆ.

ಜಾರಕಬಂಡೆ ಉದ್ಯಾನ ಕಾಮಗಾರಿ: ಶೀಘ್ರವೇ ಚಾಲನೆ

ಬೆಂಗಳೂರು: ‘ನಗರದ ಜಾರಕಬಂಡೆ ಕಾವಲಿನಲ್ಲಿ 353 ಎಕರೆ ಪ್ರದೇಶದಲ್ಲಿ ಅಟಲ್ ಬಿಹಾರಿ ವಾಜಪೇಯಿ ಉದ್ಯಾನ ನಿರ್ಮಿಸುವುದು ಖಚಿತ. ಶೀಘ್ರವೇ ಗುದ್ದಲಿ ಪೂಜೆ ಮಾಡಿ ಕಾಮಗಾರಿಗೆ ಚಾಲನೆ ನೀಡುತ್ತೇವೆ’ ಎಂದು ತೋಟಗಾರಿಕೆ ಸಚಿವ ಮುನಿರತ್ನ ಹೇಳಿದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಎಸ್.ಆರ್. ವಿಶ್ವನಾಥ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ’ಅರಣ್ಯ ಇಲಾಖೆಗೆ ಸೇರಿದ ಮೂರು ಸರ್ವೆ ಸಂಖ್ಯೆಗಳಲ್ಲಿ 307 ಎಕರೆ 30 ಗುಂಟೆ ಪ್ರದೇಶವು ಡೀಮ್ಡ್ ಅರಣ್ಯ ಪ್ರದೇಶವಾಗಿದೆ. ಈ ಜಾಗ ಪಡೆಯಲು ಕೇಂದ್ರದ ಅನುಮತಿ ಬೇಕು’ ಎಂದು ಹೇಳಿದರು.

‘ಪರಿಸರವಾದಿಗಳು ಎಂದು ಹೇಳಿಕೊಳ್ಳುವವರು ಉದ್ಯಾನದ ನಿರ್ಮಾಣ ಅಡ್ಡಿ ಮಾಡುತ್ತಿದ್ದಾರೆ. ಇಲ್ಲಿ 600 ರೀತಿಯ ಇರುವೆ ಇವೆ, 300 ರೀತಿಯ ಚಿಟ್ಟೆಗಳು ಇವೆ ಎನ್ನುತ್ತಾರೆ. ಪರಿಸರ ಉಳಿಸುವುದು ನಮಗೂ ಗೊತ್ತು’ ಎಂದು ಶಾಸಕ ವಿಶ್ವನಾಥ್ ಹೇಳಿದರು.

‘ಗೋಹತ್ಯೆ ತಡೆಗೆ ಪಿಎಸ್‌ಐಗಳಿಗೆ ತರಬೇತಿ’

ಪ್ರಜಾವಾಣಿ ವಾರ್ತೆ

ಪ್ರಭು ಚವ್ಹಾಣ್

ಬೆಂಗಳೂರು: ‘ಪ್ರಾಣಿಗಳ ಮೇಲೆ ನಡೆಯುವ ಕ್ರೌರ್ಯ ತಡೆಯಲು ಮತ್ತು ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ -2020 ಅನುಷ್ಠಾನಕ್ಕೆ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್ಐ) ಮಟ್ಟದ ಅಧಿಕಾರಿಗಳಿಗೆ ತರಬೇತಿ ನೀಡಲು ಚಿಂತನೆ ನಡೆದಿದೆ’ ಎಂದು ಪಶುಸಂಗೋಪನೆ ಸಚಿವ ಪ್ರಭು ಬಿ. ಚವ್ಹಾಣ್ ತಿಳಿಸಿದರು.

ಹೆಬ್ಬಾಳದಲ್ಲಿರುವ ಪಶುಪಾಲನಾ ಭವನದಲ್ಲಿ ಈಚೆಗೆ ನಡೆದ ‘ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿ’ ಸಭೆಯ ಬಳಿಕ ಮಾತನಾಡಿದ ಅವರು, ‘ಗೋಹತ್ಯೆ ನಿಷೇಧ ಕಾಯ್ದೆಯಡಿ ಎಫ್‌ಐಆರ್ ದಾಖಲಿಸುವ ವೇಳೆಯಲ್ಲಿ ನಿಯಮಗಳನ್ನು ಅನ್ವಯಿಸುವ ಕುರಿತಂತೆ ಪ್ರತಿ ಜಿಲ್ಲೆಯಲ್ಲಿ ಪೊಲೀಸ್ ಅಧಿಕಾರಿಗಳಿಗೆ ತರಬೇತಿ ನೀಡಲು ಉದ್ದೇಶಿಸಲಾಗಿದೆ. ಆ ಮೂಲಕ, ಈ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಾಧ್ಯವಿದೆ’ ಎಂದು ಅಭಿಪ್ರಾಯಪಟ್ಟರು.

‘ಅನಧಿಕೃತ ಗೋ ವಧೆ, ಗೋ ಮಾಂಸ ಸಾಗಣೆ ಮತ್ತು ಶೇಖರಣೆ ತಡೆಯಲು ಕೆಲವು ಕಡೆಗಳಲ್ಲಿ ಪೊಲೀಸ್ ಇಲಾಖೆ ಸಹಕಾರ ನೀಡುತ್ತಿದ್ದರೆ, ಕೆಲವು ಕಡೆಗಳಲ್ಲಿ ದೂರು ನೀಡಿದರೂ ಎಫ್‌ಐಆರ್ ದಾಖಲಿಸುತ್ತಿಲ್ಲ ಎಂಬ ದೂರುಗಳಿವೆ. ಕಾಯ್ದೆಯಲ್ಲಿರುವ ನಿಯಮಗಳು ಕಟ್ಟುನಿಟ್ಟಾಗಿ ಜಾರಿ ಆಗದೇ ಇರುವುದರಿಂದ ಅಕ್ರಮ ಜಾನುವಾರು ಸಾಗಣೆದಾರರು ಮತ್ತು ಅಕ್ರಮ ಕಸಾಯಿಖಾನೆಗಳ ಮಾಲೀಕರು ಶಿಕ್ಷೆಯಿಂದ ಪಾರಾಗುತ್ತಿದ್ದಾರೆ. ಈ ಬಗ್ಗೆ ಗೃಹ ಸಚಿವರ ಜೊತೆ ಸಭೆ ನಡೆಸುತ್ತೇನೆ’ ಎಂದೂ ಅವರು ತಿಳಿಸಿದರು.

ಸತತ ಮಳೆಯಿಂದಾಗಿ ಮಾರುಕಟ್ಟೆಗೆ ತರಕಾರಿ ಆವಕ ಕಡಿಮೆ, ದರದಲ್ಲಿ ಏರಿಳಿತ

ಕೊತ್ತಂಬರಿ: ಕಟ್ಟಿಗೆ ₹60

• ಖಲೀಲಅಹ್ಮದ ಶೇಖ

ಸಾಂದರ್ಭಿಕ ಚಿತ್ರ

ಪ್ರಜಾವಾಣಿ ವಿಶೇಷ

ಬೆಂಗಳೂರು: ಇತ್ತೀಚೆಗೆ ಸುರಿದ ಸತತ ಮಳೆಗೆ ಸೊಪ್ಪು ಮತ್ತು ತರಕಾರಿ ಬೆಳೆಗಳಿಗೆ ಹಾನಿಯಾಗಿದ್ದು, ಅದರ ಪರಿಣಾಮ ಗ್ರಾಹಕರನ್ನು ಬಾಧಿಸತೊಡಗಿದೆ. ಕೊತ್ತಂಬರಿ ಕಟ್ಟಿಗೆ ₹60ರಂತೆ ಮಾರಾಟವಾಗುತ್ತಿದೆ. ಕೆಲ ತರಕಾರಿ ದರಗಳಲ್ಲಿ ಏರಳಿತವಾಗಿದೆ.

ಕೆಲ ದಿನಗಳ ಹಿಂದೆ ಕೊತ್ತಂಬರಿ ಪ್ರತಿ ಕಟ್ಟಿಗೆ ₹20ರಂತೆ ಮಾರಾಟವಾಗುತ್ತಿತ್ತು. ಮಾರುಕಟ್ಟೆಗೆ ಉತ್ಪನ್ನಗಳ ಆವಕದಲ್ಲಿ ವ್ಯತ್ಯಾಸ ಆಗಿರುವುದು ದಿಢೀರನೇ ಬೆಲೆ ಏರಿಕೆಗೆ ಕಾರಣ ಎಂದು ಎಪಿಎಂಸಿ ವರ್ತಕರು ಮತ್ತು ಕೆ.ಆರ್. ಮಾರ್ಕೆಟ್ ಸೊಪ್ಪುಗಳ ವ್ಯಾಪಾರಿ ಸೊಪ್ಪುಕುಮಾರ್ ತಿಳಿಸಿದರು.

ಸೊಪ್ಪು ತುಟ್ಟಿ: ’ಮಳೆಯ ಕಾರಣಕ್ಕೆ ಸೊಪ್ಪಿನ ಬೆಲೆ ಏರಿಕೆಯಾಗಿದೆ. ಅದರಲ್ಲೂ ನಾಟಿ ಕೊತ್ತಂಬರಿ ಆವಕ ಕಡಿಮೆಯಾಗಿದೆ. ದಪ್ಪನೆಯ ಕಟ್ಟು ₹50-60ವರೆಗೂ ಮಾರಾಟವಾಗುತ್ತಿದೆ. ಸಬ್ಬಸ್ಸಿಗೆ ಪ್ರತಿ ಕಟ್ಟಿಗೆ ₹40ರಂತೆ ಮಾರಾಟವಾಗುತ್ತಿದೆ. ಮೆಂತೆ, ಪಾಲಕ್ ದರದಲ್ಲೂ ಏರಿಕೆ ಆಗಿದ್ದು, ಇನ್ನೂ ಕೆಲವು ದಿನ ಈ ಪರಿಸ್ಥಿತಿ ಮುಂದುವರಿಯಲಿದೆ’ ಎಂದರು.

ಬೀಟ್‌ರೂಟ್, ಮೆಣಸಿನಕಾಯಿ, ಅವರೆಕಾಯಿ ದರಗಳೂ ಕೆ.ಜಿ.ಗೆ ₹50ಕ್ಕಿಂತ ಹೆಚ್ಚಳ ಕಂಡಿವೆ. ಈ ತರಕಾರಿಗಳ ದರ ಕಳೆದ ವಾರ ಕಡಿಮೆ ಇತ್ತು. ಪ್ರತಿ ತರಕಾರಿ ದರ ಕೆ.ಜಿಗೆ ₹20ರಿಂದ ₹30 ಹೆಚ್ಚಳವಾಗಿದೆ.

‘ಪ್ರತಿ ಕೆ.ಜಿ. ಕ್ಯಾರೆಟ್ ₹80, ಪಡವಲಕಾಯಿ ₹80, ಬೀನ್ಸ್ ₹100 ಬಟಾಣಿ ₹120ರಂತೆ ಮಾರಾಟವಾಗುತ್ತಿದೆ. ಟೊಮೊಟೊ, ಬದನೆ, ಆಲೂಗೆಡ್ಡೆ, ಈರುಳ್ಳಿ, ಹಾಗಲಕಾಯಿ ದರಗಳು ಸ್ಥಿರವಾಗಿವೆ. ಟೊಮೆಟೊ ಕೆ.ಜಿ.ಗೆ ₹20ರಿಂದ ₹30ರವರೆಗೆ ಮಾರಾಟವಾಗುತ್ತಿದೆ’ ಎನ್ನುತ್ತಾರೆ ಕೆ.ಆರ್. ಮಾರುಕಟ್ಟೆಯ ತರಕಾರಿ ವ್ಯಾಪಾರಿಗಳಾದ ವೆಂಕಟೇಶ್ ಮತ್ತು ತಬ್ರೇಜ್.

‘ಮೊದಲಿನಂತೆ ಅಗತ್ಯ ಪ್ರಮಾಣದ ತರಕಾರಿಗಳು ಮಾರುಕಟ್ಟೆಗೆ ಪೂರೈಕೆಯಾಗಲು ತಿಂಗಳುಗಟ್ಟಲೆ ಸಮಯ ಬೇಕು. ಅಲ್ಲಿಯವರೆಗೆ ದರ ಏರಿಕೆ ತಪ್ಪಿದ್ದಲ್ಲ’ ಎಂದು ಮಾಹಿತಿ ನೀಡಿದರು.

ಚಿಲ್ಲರೆ ಮಾರುಕಟ್ಟೆ (ಪ್ರತಿ ಕೆ.ಜಿಗೆ ₹ಗಳಲ್ಲಿ)

ತರಕಾರಿ	ಕಳೆದ ವಾರದ ದರ	ಈ ವಾರದ ದರ
ಬೀನ್ಸ್	60	100
ಕ್ಯಾಪ್ಸಿಕಮ್	40	60
ಕ್ಯಾರೆಟ್	60	80
ದಪ್ಪ ಮೆಣಸಿಕಾಯಿ	50	65
ಹೀರೆಕಾಯಿ	50	65
ಬೆಂಡೇಕಾಯಿ	30	40
ಚವಳಿಕಾಯಿ	40	50
ಮೆಣಸಿನಕಾಯಿ (ಬಜ್ಜಿ)	60	80
ಬಟಾಣಿ	80	120
ಆಲೂಗೆಡ್ಡೆ	30	40
ಟೊಮೆಟೊ	20	30
ಈರುಳ್ಳಿ (ಮಧ್ಯಮ ಗಾತ್ರದ್ದು)	25	35
ಸೋರೆಕಾಯಿ	30	40
ಪಡವಲಕಾಯಿ	70	80
ನುಗ್ಗೆಕಾಯಿ	80	120
ಬದನೆಕಾಯಿ	40	50
ಸೊಪ್ಪು - ಮಧ್ಯಮ ಗಾತ್ರದ ಕಟ್ಟಿಗೆ		
ಕೊತ್ತಂಬರಿ	20	60
ಸಬ್ಬಸ್ಸಿಗೆ	20	50
ಮೆಂತೆ	15	30
ಪಾಲಕ್	10	20

ಸುದ್ದಿ 2 ನಿಮಿಷ

ರಾಜ್ಯದೆಲ್ಲೆಡೆ ಭಗವದ್ಗೀತಾ ಅಭಿಯಾನ ನ.4ರಿಂದ

ಶಿರಸಿ: ‘14ನೇ ವರ್ಷದ ಭಗವದ್ಗೀತಾ ಅಭಿಯಾನ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ನ.4 ರಿಂದ ಆರಂಭಿ ಸಲಾಗುತ್ತಿದೆ. ಡಿ.4ರಂದು ದಾವಣಗೆರೆಯಲ್ಲಿ ಸಮಾರೋಪಗೊಳ್ಳಲಿದೆ’ ಎಂದು ತಾಲ್ಲೂಕಿನ ಸೋಂದಾ ಸ್ವರ್ಣವಲ್ಲಿ ಮಠದ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ತಿಳಿಸಿದ್ದಾರೆ.

‘ಅಭಿಯಾನಕ್ಕೆ ಈ ಬಾರಿ 5ನೇ ಅಧ್ಯಾಯ ಆಯ್ಕೆ ಮಾಡಿಕೊಳ್ಳಲಾಗಿದೆ. ಕೋವಿಡ್ ಕಾರಣದಿಂದ ಕಳೆದ ಎರಡು ವರ್ಷ ಸಾರ್ವಜನಿಕವಾಗಿ ಅಭಿಯಾನ ನಡೆಸಲು ನಡೆಸಲು ಸಾಧ್ಯ ಆಗಿರಲಿಲ್ಲ. ಈ ವರ್ಷ ಸರ್ಕಾರ, ವಿವಿಧ ಸಂಘ–ಸಂಸ್ಥೆಗಳ ಸಹಯೋಗದೊಂದಿಗೆ ಅಭಿಯಾನ ನಡೆಸಲಾಗುವುದು’ ಎಂದು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

‘ರಾಜ್ಯದ ಎಲ್ಲ ಕಾರಾಗೃಹದಲ್ಲೂ ಅಭಿಯಾನ ನಡೆಸಲು ಯೋಚಿಸಲಾಗಿದೆ. ಅಭಿಯಾನದಲ್ಲಿ ಹಿರಿಯ ಪ್ರಾಥಮಿಕ, ಪ್ರೌಢಶಾಲೆ, ಹಾಗೂ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಭಗವದ್ಗೀತೆ ಕುರಿತ ವಿವಿಧ ಸ್ಪರ್ಧೆ ರಾಜ್ಯ ಮಟ್ಟದವರೆಗೆ ನಡೆಯಲಿದೆ. ಅಭಿಯಾನ ನಡೆಸಲು ಪ್ರತಿ ಜಿಲ್ಲೆಯಲ್ಲಿ ಪ್ರಮುಖರಿಗೆ ಜವಾಬ್ದಾರಿ ನೀಡಲಾಗಿದೆ’ ಎಂದು ತಿಳಿಸಿದ್ದಾರೆ.

ಸಿದ್ದರಾಮಯ್ಯಗೆ ಬಹಿರಂಗ ಪತ್ರ

ಬೆಂಗಳೂರು: ‘ಕಾನೂನು ಸಚಿವರಾಗಿದ್ದ ಟಿ.ಬಿ. ಜಯಚಂದ್ರ 2013-2018ರ ತಮ್ಮ ಆಡಳಿತಾವಧಿಯಲ್ಲಿ ನಡೆಸಿರುವ ಎಪಿಪಿ ಹಾಗೂ ಎಜಿಪಿ ಹುದ್ದೆಗಳ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಚರ್ಚೆಗೆ ಬನ್ನಿ’ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಎನ್.ಆರ್. ರಮೇಶ್ ಬಹಿರಂಗ ಪತ್ರ ಬರೆದಿದ್ದಾರೆ.

‘ಕಾನೂನುಬಾಹಿರವಾಗಿ ಆಯ್ಕೆಯಾಗಿರುವ 197 ಮಂದಿ ನೇಮಕದಲ್ಲಿ ತಲಾ ₹30 ಲಕ್ಷದಿಂದ ₹ 40 ಲಕ್ಷಕ್ಕೂ ಹೆಚ್ಚು ವಸೂಲಿ ಮಾಡಲಾಗಿದೆ. ₹70 ಕೋಟಿಗೂ ಹೆಚ್ಚು ಭ್ರಷ್ಟಾಚಾರ ನಡೆದಿದೆ. ನ್ಯಾಯಾಲಯದ ಆದೇಶದಂತೆ ಈ ಹಗರಣದಲ್ಲಿ ಭಾಗಿಯಾಗಿರುವ 31 ಮಂದಿ ಅಧಿಕಾರಿಗಳನ್ನು ಅಮಾನತು ಮಾಡಿರುವ ವಿಷಯ ನಿಮಗೆ ತಿಳಿದಿಲ್ಲವೇ’ ಎಂದು ಪ್ರಶ್ನಿಸಿದ್ದಾರೆ.

‘ತಮ್ಮದೇ ಸರ್ಕಾರದಲ್ಲಿ ಸಚಿವರಾಗಿದ್ದ 13 ಮಂದಿ ಸಚಿವರ ಮೇಲೆ ವಿವಿಧ ನ್ಯಾಯಾಲಯಗಳ ಆದೇಶದಂತೆ ವಿವಿಧ ತನಿಖಾ ಸಂಸ್ಥೆಗಳು ಎಫ್‌ಐಆರ್ ದಾಖಲಿಸಿದ್ದರೂ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳುವ ರಾಜಕೀಯ ನೈತಿಕತೆ ಏಕೆ ಪ್ರದರ್ಶಿಸಲಿಲ್ಲ’ ಎಂದು ಕೇಳಿದ್ದಾರೆ.

ಕೊಚ್ಚಿ ಹೋಗಿದ್ದ ವೈದ್ಯನ ಶವ ಪತ್ತೆ

ಕನಕಪುರ: ನಿರಂತರ ಕಾರ್ಯಾಚರಣೆ ಮೂಲಕ ಮಾವತ್ತೂರು ಕೆರೆಯಲ್ಲಿ ಕಾಲುಜಾರಿ ಬಿದ್ದು ಕೊಚ್ಚಿಹೋಗಿದ್ದ ವೈದ್ಯ ಎಂ.ಎಸ್. ಸಚಿನ್ ಮೃತದೇಹವನ್ನು ಹೊರತೆಗೆಯುವಲ್ಲಿ ಪೊಲೀಸರು ಮತ್ತು ಅಗ್ನಿಶಾಮಕ ಸಿಬ್ಬಂದಿ ಯಶಸ್ವಿಯಾಗಿದ್ದಾರೆ. ಬುಧವಾರ ಮಧ್ಯಾಹ್ನ 3 ಗಂಟೆ ವೇಳೆಗೆ ಶವ ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಮೃತ ವೈದ್ಯ ಸಚಿನ್ ಸ್ನೇಹಿತರಾದ ಡಾ. ನಿರಂಜನ್ ಮತ್ತು ಡಾ. ಜಾವೇದ್ ಅಹಮ್ಮದ್ ಜತೆಗೂಡಿ ಸೋಮವಾರ ಸಂಜೆ ಮಾವತ್ತೂರು ಕೆರೆ ವೀಕ್ಷಣೆಗೆ ಹೋಗಿದ್ದರು. ಈ ವೇಳೆ ಕೆರೆಯ ಕೋಡಿ ಮೇಲೆ ನಡೆದುಕೊಂಡು ಹೋಗುವಾಗ ಮದ್ಯದ ನಶೆಯಲ್ಲಿದ್ದ ಸಚಿನ್ ಕಾಲು ಜಾರಿ ಬಿದ್ದು, ನಾಪತ್ತೆಯಾಗಿದ್ದರು.

ಸೋಮವಾರ ಸಂಜೆಯಿಂದ ಮೃತದೇಹದ ಪತ್ತೆಗಾಗಿ ಕಾರ್ಯಾಚರಣೆ ನಡೆಸಲಾಗಿತ್ತು.

ಸರ್ಕಾರ, ಟೆಲಿಕಾಂ ಕಂಪನಿಗೆ ವಂಚನೆ

ದೇಶದ ಆಂತರಿಕ ಭದ್ರತೆಗೆ ಧಕ್ಕೆ ತರುವ ಕೃತ್ಯ: ಐವರು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಶುಭಾಷ್

ದಿನೇಶ್ ಪಾವೂರ್

ವಿಪಿನ್

ಶಮದ ಷಹಜನ್

ಬೆಜಿನ್ ಜೋಸೆಫ್

ಬೆಂಗಳೂರು: ಅಂತರರಾಷ್ಟ್ರೀಯ ಮೊಬೈಲ್ ಕರೆಗಳನ್ನು ಸ್ಥಳೀಯ ಕರೆಗಳನ್ನಾಗಿ ಪರಿವರ್ತಿಸಿ ವಂಚಿಸುತ್ತಿದ್ದ ಕೇರಳದ ಐವರು ಆರೋಪಿಗಳನ್ನು ನಗರದ ಸಿಸಿಬಿ ಹಾಗೂ ಆರ್ಥಿಕ ಅಪರಾಧ ದಳದ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ, ಬುಧವಾರ ಬಂಧಿಸಿದ್ದಾರೆ.

ಕೇರಳದ ದಿನೇಶ್ ಪಾವೂರ್, ಕೆ.ಪಿ. ವಿಪಿನ್, ಸುಭಾಷ್, ಬೆಜಿನ್ ಜೋಸೆಫ್, ಷಮದ್ ಷಹಜನ್ ಬಂಧಿತರು.

ಕೇಂದ್ರ ಸರ್ಕಾರದ ದೂರ ಸಂಪರ್ಕ ಇಲಾಖೆಯ ಮಾಹಿತಿ ಆಧರಿಸಿ ನಗರದ ಕೋರಮಂಗಲ, ಮೈಕೋ ಲೇಔಟ್ ಹಾಗೂ ರಾಜಾಜಿನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ. ಸರ್ವರ್, ಗೇಟ್ ವೇ, ಕಂಪ್ಯೂಟರ್ ಸೇರಿ ಆರೋಪಿಗಳು ಬಳಸುತ್ತಿದ್ದ ವಿವಿಧ ಪರಿಕರ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಆಯುಕ್ತ ಪ್ರತಾಪ್ ರೆಡ್ಡಿ ಪತ್ರಿಕಾಗೋಷ್ಠಿಯಲ್ಲಿ ಬುಧವಾರ ತಿಳಿಸಿದರು.

‘ಐವರು ಆರೋಪಿಗಳು ದೇಶದ ಆಂತರಿಕ ಭದ್ರತೆಗೆ ಧಕ್ಕೆ ಉಂಟಾಗುವ ಕೃತ್ಯ ಎಸಗುತ್ತಿದ್ದರು. ಟೆಲಿಕಾಂ ಕಂಪನಿ ಹಾಗೂ ಸರ್ಕಾರಕ್ಕೆ ಅಪಾರ ನಷ್ಟ ಉಂಟು ಮಾಡುತ್ತಿದ್ದರು’ ಎಂದು ಮಾಹಿತಿ ನೀಡಿದರು.

‘ಕೋರಮಂಗಲದ ಬಿಜ್‌ಹಬ್ ಸಲ್ಯೂಷನ್ ಸಂಸ್ಥೆಯಿಂದ 1,500 ಸಿಪ್ ಪೋರ್ಟಲ್ ಸಂಪರ್ಕ ಪಡೆದು 40 ದಿನಗಳಲ್ಲಿ 68 ಲಕ್ಷ ನಿಮಿಷಗಳ ಹಾಗೂ ಮೈಕ್ರೋ ಲೇಔಟ್‌ನ ಆರ್ಚುರೆ ಸಂಸ್ಥೆಯಲ್ಲಿ 900 ಸಿಪ್ ಪೋರ್ಟಲ್ ಸಂಪರ್ಕ ಪಡೆದು 6 ದಿನಗಳಲ್ಲಿ ಒಟ್ಟು 24 ಲಕ್ಷ ನಿಮಿಷಗಳ ಅಕ್ರಮ ಕರೆ ಮಾಡಿ ಸರ್ಕಾರಕ್ಕೆ ನಷ್ಟ ಉಂಟು ಮಾಡಿದ್ದಾರೆ ಎಂಬುದು ತನಿಖೆಯಿಂದ ಬಯಲಾಗಿದೆ’ ಎಂದು ಮಾಹಿತಿ ನೀಡಿದರು.

‘ನಕಲಿ ದಾಖಲೆ ಸೃಷ್ಟಿಸಿ ಸಿಪ್ ಪೋರ್ಟ್‌ಗಳಿರುವ ಸ್ಥಿರ ದೂರವಾಣಿಯನ್ನು ಪಡೆದುಕೊಂಡು ಅನಧಿಕೃತವಾಗಿ ಟೆಲಿಫೋನ್ ಎಕ್ಸ್‌ಚೇಂಜ್ ರೀತಿಯಲ್ಲಿ ಕರೆಗಳನ್ನು ಸ್ಥಳೀಯ ಜಿಎಸ್‌ಎಂ ಕರೆಗಳಾಗಿ ಬದಲಾಯಿಸಿ ದೂರ ಸಂಪರ್ಕ ಇಲಾಖೆಗೆ ವಂಚನೆ ಎಸಗುತ್ತಿದ್ದರು. ಆರೋಪಿಗಳು ಲಕ್ಷಾಂತರ ರೂಪಾಯಿ ಹಣ ಗಳಿಸುತ್ತಿದ್ದರು’ ಎಂದು ತಿಳಿಸಿದರು.

‘ಆರೋಪಿಗಳು ಬಳಸುತ್ತಿದ್ದ ಪರಿಕರವು ಒಂದು ನಿಮಿಷಕ್ಕೆ ಲಕ್ಷಾಂತರ ಅಂತರರಾಷ್ಟ್ರೀಯ ಕರೆಗಳನ್ನು ಸ್ಥಳೀಯ ಕರೆಗಳಾಗಿ ಪರಿವರ್ತಿಸುತ್ತಿತ್ತು’ ಎಂದು ಮಾಹಿತಿ ನೀಡಿದರು.

‘ಕುಡುಕ ದೋಣಿಯ ಹುಟ್ಟು ಹಾಕಿದಂತೆ ಸರ್ಕಾರದ ನಡೆ’

ಬೆಂಗಳೂರು: ‘ಕುಡುಕ, ದೋಣಿಯ ಹುಟ್ಟು ಹಾಕುವಂತೆ ಸರ್ಕಾರ ನಡೆಯುತ್ತಿದೆ’ ಎಂಬ ಡಿ.ವಿ.ಗುಂಡಪ್ಪನವರ ಮಂಕುತಿಮ್ಮನ ಕಗ್ಗವನ್ನು ತನ್ನ ತೀರ್ಪೊಂದರಲ್ಲಿ ಉದಾಹರಿಸಿರುವ ಹೈಕೋರ್ಟ್, ‘ನಮ್ಮ ಸಂವಿಧಾನವು ಜಾರಿಗೆ ತರಲು ಬಯಸುತ್ತಿರುವ ಕಲ್ಯಾಣ ರಾಜ್ಯವು ಇನ್ನೂ ಸಂಪೂರ್ಣವಾಗಿ ಸಾಕಾರಗೊಂಡಿಲ್ಲ’ ಎಂದು ವ್ಯಥೆ ವ್ಯಕ್ತಪಡಿಸಿದೆ.

‘ಕರ್ನಾಟಕ ಟೋಯಿಂಗ್ ವಾಹನ ಮಾಲೀಕರು ಮತ್ತು ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘ’ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಭಾಗಶಃ ಪುರಸ್ಕರಿಸಿರುವ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ವಾಹನ ಟೋಯಿಂಗ್ ಆಪರೇಟರ್‌ಗಳ ಸಂಘಟನೆಯು ನೀಡಿರುವ ಮನವಿಯನ್ನು 6 ವಾರಗಳಲ್ಲಿ ಪರಿಗಣಿಸಿ’ ಎಂದು ಸಕ್ಷಮ ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶಿಸಿದೆ.

ಡಿವಿಜಿ ಅವರ, ‘ಸರಕಾರ ಹರಿಗೋಲು, ತೆರೆ ಸುಳಿಗಳತ್ತಿತ್ತ, ಸೆರೆ ಕುಡಿದವರು ಕೆಲರು ಹುಟ್ಟು ಹಾಕುವರು, ಬಿರುಗಾಳಿ ಬೀಸುವುದು, ಜನವೆದ್ದು ಕುಣಿಯುವುದು ಉರುಳದಿಹುದಚ್ಚರಿಯೊ! ಮಂಕುತಿಮ್ಮ’ ಎಂಬ ಕಗ್ಗವನ್ನು ಉಲ್ಲೇಖಿಸಿರುವ ನ್ಯಾಯಮೂರ್ತಿ, ‘ಸರ್ಕಾರಗಳ ಅಸಮರ್ಥತೆಯ ಬಗ್ಗೆ ನಮ್ಮ ವಿದ್ವಾಂಸರು ಸ್ವಾತಂತ್ರ್ಯ ಪೂರ್ವದಲ್ಲೇ ಉಲ್ಲೇಖಿಸಿದ್ದಾರೆ. ಆ ಉಲ್ಲೇಖಗಳು ಮೊದಲಿಗಿಂತ ಈಗ ಹೆಚ್ಚು ನಿಜವಾಗುತ್ತಿವೆ’ ಎಂದರು.

‘ಬೆಂಗಳೂರಲ್ಲಿ ನಿರ್ವಾಹಕರಿಂದ ಕಿರುಕುಳ ಮತ್ತು ಭ್ರಷ್ಟಾಚಾರದ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿವೆ‘ ಎಂಬ ಕಾರಣದಿಂದ ಪೊಲೀಸರು ಟೋಯಿಂಗ್ ವಾಹನಗಳ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದರು. ‘ಈಗಾಗಲೇ ಸಂಗ್ರಹಿಸಿರುವ ಮೊತ್ತವನ್ನು ಟೋಯಿಂಗ್ ಶುಲ್ಕವಾಗಿ ಬಿಡುಗಡೆ ಮಾಡಲು ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ನಿರ್ದೇಶನ ನೀಡಬೇಕು ಎಂಬ ನಮ್ಮ ಮನವಿಯನ್ನು ಪರಿಗಣಿಸಿಲ್ಲ’ ಎಂದು ಸಂಘಟನೆ ಹೈಕೋರ್ಟ್ ಮೆಟ್ಟಿಲೇರಿತ್ತು. ಅರ್ಜಿದಾರರ ಪರ ಎಂ. ಶಿವಪ್ರಕಾಶ್ ವಾದ ಮಂಡಿಸಿದ್ದರು.

ಮೈಸೂರು ರೇಸ್

ಫಾರೆವರ್ ಟುಗೆದರ್ ಗೆಲ್ಲುವ ನಿರೀಕ್ಷೆ

ಸ್ಟೀವಾರ್ಡ್ಸ್ ಟ್ರೋಫಿ ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಫಾರೆವರ್ ಟುಗೆದರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ

1ನೇ ರೇಸ್: ಬಾರ್ನ್ ಕಿಂಗ್ 1, ಅಂಟನೋರಿ 2, ವಾರ್ ಸಾಂಗ್ 5
2ನೇ ರೇಸ್: ಎಂಗಲ್‌ಬರ್ಗ್ 11, ವಿಜಯ ಮಿರಾಕಲ್ 3, ಯಾರ್ಪ್ಸರ್ 10
3ನೇ ರೇಸ್: ಮ್ಯಾಜಿಕ್ ಸರ್ಕಲ್ 7, ಮಾರ್ಕ್ ಒನ್ 4, ಸ್ಮಾರ್ಟ್ ಕ್ಯಾಡಿಲ್ಲಾಕ್ 9
4ನೇ ರೇಸ್: ರಿಥ್ಮಿಕ್ 4, ಡಿ ಫೈರ್ 5, ಕಂಟ್ರೇಸ್ ಫ್ಲಾಶ್ 8
5ನೇ ರೇಸ್: ಫಾರೆವರ್ ಟುಗೆದರ್ 2, ಕೇಪಬಲ್ 9, ಡ್ರುಸಿಲಾ 8
6ನೇ ರೇಸ್: ಟ್ರೆವಾಲಿಯಸ್ 6, ಟ್ವಿಲೈಟ್ ಟೋರ್ನಾಡೊ 7, ಸ್ಟಾರ್ ಡಾಮಿನೇಷನ್ 1
7ನೇ ರೇಸ್: ಸದರನ್ ಪವರ್ 1, ಜಾನಿ ಬ್ರೇವೋ 2, ಸೀ ಮೈ ಹೀಲ್ಸ್ 3

ಉತ್ತಮ ಬೆಟ್: ಟ್ರೆವಾಲಿಯಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇಟ್ರಿಬಲ್
3,4,5,6,7	2,3,4	5,6,7

ಮಾದಕ ಪೂರೈಕೆ: ಇಬ್ಬರ ಬಂಧನ

ಭರತ್ ರೆಡ್ಡಿ

ರಿಯಾನ್ ಅಹಮದ್

ಬೆಂಗಳೂರು: ನಗರದ ಸಂಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಡ್ರಗ್ಸ್ ಪೂರೈಕೆಯಲ್ಲಿ ತೊಡಗಿದ್ದ ರಿಯಾನ್ ಅಹಮದ್ (28) ಹಾಗೂ ಭರತ್ ರೆಡ್ಡಿ (23) ಎಂಬ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತರಿಂದ ₹ 6 ಲಕ್ಷ ಮೌಲ್ಯದ ಎಂಡಿಎಂಎ ಕ್ರಿಸ್ಟಲ್ ಹಾಗೂ ಎರಡು ಮೊಬೈಲ್ ವಶಕ್ಕೆ ಪಡೆಯಲಾಗಿದೆ. ಇಬ್ಬರು ಆರೋಪಿಗಳು ಕಾಲೇಜು ವಿದ್ಯಾರ್ಥಿಗಳು ಹಾಗೂ ಪರಿಚಯಸ್ಥರಿಗೆ ಮಾದಕ ವಸ್ತು ಪೂರೈಸುತ್ತಿದ್ದರು ಎಂದು ಸಿಸಿಬಿ ಪೊಲೀಸ್ ಮೂಲಗಳು ತಿಳಿಸಿವೆ.

ಪುತ್ರನ ಕೊಂದು, ತಾಯಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಲಕ್ಷ್ಮಮ್ಮ

ಮದನ್

ಬೆಂಗಳೂರು: ಹೊಸಗುಡ್ಡದಹಳ್ಳಿಯಲ್ಲಿ 13 ವರ್ಷದ ಪುತ್ರ ಮದನ್‌ನನ್ನು ಕತ್ತು ಹಿಸುಕಿ ಸಾಯಿಸಿ, ತಾಯಿ ಲಕ್ಷ್ಮಮ್ಮ (48) ಎಂಬುವವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಂಗಳವಾರ ರಾತ್ರಿ ನಡೆದಿದೆ.

ಬ್ಯಾಟರಾಯನಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ.

ಲಕ್ಷ್ಮಮ್ಮ ಅವರ ಖಿನ್ನತೆಯೇ ಘಟನೆಗೆ ಕಾರಣ ಇರಬಹುದು ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹಗಳನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ.

‘ಲಕ್ಷ್ಮಮ್ಮ ಅವರ ಪತಿ ಶಿವಲಿಂಗೇಗೌಡ ಗಾಂಧಿನಗರದಲ್ಲಿ ಹೋಟೆಲ್ ನಡೆಸುತ್ತಿದ್ದಾರೆ. ಹಿರಿಯ ಪುತ್ರ ನವೀನ್ ಜತೆಗೆ ಹೋಟೆಲ್‌ಗೆ ತೆರಳಿದ ಬಳಿಕ ಇಬ್ಬರೇ ಮನೆಯಲ್ಲಿದ್ದರು. ರಾತ್ರಿ ಕರೆ ಮಾಡಿದರೂ ಸ್ವೀಕರಿಸಿರಲಿಲ್ಲ. ಪಕ್ಕದ ಮನೆಯವರಿಗೆ ತಿಳಿಸಿದಾಗ ಅವರು ನೋಡಿದಾಗ ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ. ಲಕ್ಷ್ಮಮ್ಮ ಅವರು ತಮ್ಮ ಸಹೋದರ ಸಿದ್ದೇಗೌಡ ಅವರಿಗೆ ತಾವೇ ಹುಡುಗಿ ನೋಡಿ ಮದುವೆ ಮಾಡಿಸಿದ್ದರು. ಅವರಿಬ್ಬರ ದಾಂಪತ್ಯ ಜೀವನ ಉತ್ತಮವಾಗಿರಲಿಲ್ಲ ಎನ್ನಲಾಗಿದೆ.

ತಮ್ಮನ ಪತ್ನಿ ವರದಕ್ಷಿಣೆ ಕಿರುಕುಳದ ದೂರು ದಾಖಲಿಸಿದ್ದರಿಂದ ಸಿದ್ದೇಗೌಡನನ್ನು ಬಂಧಿಸಿದ್ದರು. ಇದರಿಂದ ಲಕ್ಷ್ಮಮ್ಮ ನೊಂದಿದ್ದರು ಎಂದು ಕುಟುಂಬಸ್ಥರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಸುಲಿಗೆಕೋರರ ಬಂಧನ: 619 ಮೊಬೈಲ್ ವಶ

ಬೆಂಗಳೂರು: ಮಾರತ್‌ಹಳ್ಳಿ, ಕಾಡುಬೀಸನಹಳ್ಳಿ ವ್ಯಾಪ್ತಿಯಲ್ಲಿ ಮೊಬೈಲ್ ಹಾಗೂ ಚಿನ್ನಾಭರಣ ಸುಲಿಗೆ ಮಾಡುತ್ತಿದ್ದ ಮೂವರು ಅಂತರರಾಜ್ಯ ಸುಲುಗೆಕೋರರು ಹಾಗೂ ಮೊಬೈಲ್ ಮಾರಾಟಕ್ಕೆ ಸಹಕಾರ ನೀಡುತ್ತಿದ್ದ ಇಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಬಂಧಿತರಿಂದ 619 ಮೊಬೈಲ್, ಎರಡು ಕಾರು, ಒಂದು ದ್ವಿಚಕ್ರ ವಾಹನ, ಲ್ಯಾಪ್‌ಟಾಪ್ ಸೇರಿ ₹ 50 ಲಕ್ಷ ಮೌಲ್ಯದ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ.

ಬೆಂಗಳೂರು ನಗರದ ಬಾಗಲೂರು, ಹನುಮಂತನಗರ, ಸಿಟಿ ಮಾರುಕಟ್ಟೆ, ಕಾಟನ್‌ಪೇಟೆ, ದೇವನಹಳ್ಳಿ ಹಾಗೂ ಚಾಮರಾಜಪೇಟೆ ಪೊಲೀಸ್ ಠಾಣೆಗಳಲ್ಲಿ ಆರೋಪಿಗಳ ವಿರುದ್ಧ ಪ್ರಕರಣಗಳು ದಾಖಲಾಗಿದ್ದವು ಎಂದು ಸಿಸಿಬಿ ಮೂಲಗಳು ತಿಳಿಸಿವೆ.

‘ಮಾರಕಾಸ್ತ್ರ ತೋರಿಸಿ ಬೆದರಿಸಿ ಹಣ, ಮೊಬೈಲ್, ಚಿನ್ನಾಭರಣ ಸುಲಿಗೆ ಮಾಡುತ್ತಿದ್ದರು. ಕದ್ದ ಮೊಬೈಲ್‌ಗಳನ್ನು ಫ್ಲ್ಯಾಶ್ ಮಾಡಿಸಿ ಮಧ್ಯವರ್ತಿಗಳ ಮೂಲಕ ಮಾರಾಟ ಮಾಡುತ್ತಿದ್ದರು’ ಎಂದು ಮೂಲಗಳು ತಿಳಿಸಿವೆ.

₹ 2.3 ಲಕ್ಷ ಪರಿಹಾರಕ್ಕೆ ಸೂಚನೆ

ದೇವನಹಳ್ಳಿ: ಮಾನ್ಯವಾದ ವೀಸಾ ಇದ್ದರೂ ವಿಮಾನ ಹತ್ತಲು ನಿರಾಕರಿಸಿದ ಆರೋಪದ ಹಿನ್ನೆಲೆಯಲ್ಲಿ ಮಹಿಳಾ ಪ್ರಯಾಣಿಕರಿಗೆ ₹ 2.3 ಲಕ್ಷ ಪರಿಹಾರ ನೀಡುವಂತೆ ಗ್ರಾಹಕರ ನ್ಯಾಯಾಲಯವು ಬ್ರಿಟಿಷ್ ಏರ್‌ವೇಸ್‌ಗೆ ಸೂಚಿಸಿದೆ.

ಬೆಂಗಳೂರಿನ ನಾಗರಬಾವಿ ನಿವಾಸಿ ಧನಲಕ್ಷ್ಮೀ ಎಂಬುವರು 10 ದಿನಗಳ ಯುರೋಪ್ ಪ್ರವಾಸಕ್ಕೆ ಸಿದ್ಧರಾಗಿದ್ದರು. 2019ರ ಏ. 8ರಂದು ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಲಂಡನ್ ಮೂಲಕ ಬಾರ್ಸಿಲೋನಾಗೆ ಬ್ರಿಟಿಷ್ ಏರ್‌ವೇಸ್ ಮೂಲಕ ಪ್ರಯಾಣಿಸಲು ಸಿದ್ಧರಾಗಿದ್ದರು. ಆದರೆ, ವಿಮಾನ ಹತ್ತುವ ಮುನ್ನ ಕೆಐಎನ ಬ್ರಿಟಿಷ್ ಏರ್‌ವೇಸ್ ಚೆಕ್ ಇನ್ ಕೌಂಟರ್‌ನಲ್ಲಿ ನೇರ ಏರ್‌ಸೈಡ್ ಟ್ರಾನ್ಸಿಟ್ ವೀಸಾ (ಡಿಎಟಿವಿ) ಇಲ್ಲ ಎಂಬ ಕಾರಣ ನೀಡಿ ವಿಮಾನ ಹತ್ತಲು ನಿರಾಕರಿಸಲಾಗಿತ್ತು.

ಹೆಚ್ಚು ಏರ್‌ಸೈಡ್ ಟ್ರಾನ್ಸಿಟ್ ವೀಸಾ ಹೊಂದಿರುವ ಪ್ರಯಾಣಿಕರು ಲಂಡನ್ ಮೂಲಕ ಯಾವುದೇ ದೇಶಕ್ಕೆ ಪ್ರಯಾಣಿಸಬಹುದು. ಆದರೆ, ಆಸ್ಟ್ರೇಲಿಯಾ ವೀಸಾ ಮತ್ತು ಭಾರತೀಯ ಪಾಸ್‌ಪೋರ್ಟ್ ಇದ್ದರೆ ಡಿಎಟಿವಿ ವೀಸಾದ ಅವಶ್ಯಕತೆ ಇರುವುದಿಲ್ಲ.

ಧನಲಕ್ಷ್ಮೀ ಅವರ ಬಳಿ ಆಸ್ಟ್ರೇಲಿಯಾ ವೀಸಾ ಮತ್ತು ಭಾರತೀಯ ಪಾಸ್‌ಪೋರ್ಟ್ ಇತ್ತು. ಬ್ರಿಟಿಷ್ ಏರ್‌ವೇಸ್ ಸಿಬ್ಬಂದಿಯ ವರ್ತನೆಯಿಂದ ಮಾನಸಿಕ ಆಘಾತಕ್ಕೆ ಒಳಗಾಗಿದ್ದ ಅವರು, ಇ-ಮೇಲ್ ಮೂಲಕ ಬ್ರಿಟಿಷ್ ಏರ್‌ವೇಸ್‌ಗೆ ದೂರು ಸಲ್ಲಿಸಿದರು. ಇದಕ್ಕೆ ಪ್ರತಿಯಾಗಿ ಏರ್‌ವೇಸ್ ತನ್ನ ಸಿಬ್ಬಂದಿಯ ವರ್ತನೆಗೆ ಅಸಮಾಧಾನ ವ್ಯಕ್ತಪಡಿಸಿ ಕ್ಷಮೆ ಕೇಳಿತ್ತು. ಜೊತೆಗೆ, 600 ಯೂರೊಗಳನ್ನು ನೀಡಲು ಮುಂದಾಗಿತ್ತು.

2021ರ ಏಪ್ರಿಲ್‌ನಲ್ಲಿ ಧನಲಕ್ಷ್ಮೀ ಅವರು ಶಾಂತಿನಗರದಲ್ಲಿ ಇರುವ ಬೆಂಗಳೂರು ಗ್ರಾಮಾಂತರ ಮತ್ತು ನಗರದ 1ನೇ ಹೆಚ್ಚುವರಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಕೋರ್ಟ್‌ನಲ್ಲಿ ಮೊಕದ್ದಮೆ ಹೂಡಿದ್ದರು. ಆ. 20ರಂದು ತೀರ್ಪು ನೀಡಿದ ಗ್ರಾಹಕ ನ್ಯಾಯಾಲಯ ಬ್ರಿಟಿಷ್ ಏರ್‌ವೇಸ್ ಮತ್ತು ಕೆಐಎಯಲ್ಲಿನ ಅದರ ಪ್ರತಿನಿಧಿಗಳು ಜಂಟಿಯಾಗಿ ₹ 2.3 ಲಕ್ಷ ಪಾವತಿಸಬೇಕು ಎಂದು ಆದೇಶಿಸಿದೆ.

ಇದರಲ್ಲಿ ₹ 1 ಲಕ್ಷ ಹಾನಿ, ₹ 15,000 ಪ್ರಯಾಣಿಕರ ವ್ಯಾಜ್ಯ ವೆಚ್ಚ, ₹ 46 ಸಾವಿರ ಬಡ್ಡಿಯೊಂದಿಗೆ ಟಿಕೆಟ್ ಮರುಪಾವತಿ ಮತ್ತು ₹ 75 ಸಾವಿರ ವಿವಿಧ ಪ್ರವಾಸ ವೆಚ್ಚ ಸೇರಿದೆ. 30 ದಿನದೊಳಗೆ ಈ ಮೊತ್ತ ಪಾವತಿಸುವಂತೆ ಆದೇಶಿಸಿದೆ.

ಗೋಡ್ಸೆ ಚಿತ್ರ ಪ್ರದರ್ಶನ: ಬೊಮ್ಮಾಯಿಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಿವಮೊಗ್ಗದಲ್ಲಿ ಗಣೇಶ ಮೂರ್ತಿ ವಿಸರ್ಜನೆ ವೇಳೆ ಹಿಂದೂ ಮಹಾಸಭಾದ ಕಾರ್ಯಕರ್ತರು ನಾಥೂರಾಮ್ ಗೋಡ್ಸೆ ಭಾವಚಿತ್ರ ಪ್ರದರ್ಶಿಸಿರುವುದು ಆತಂಕಕಾರಿ ಘಟನೆ. ತಪ್ಪೆಸಗಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ.

‘ಗಾಂಧೀಜಿ ಹತ್ಯೆ ವಿಜೃಂಭಿಸುವುದು ದೇಶಕ್ಕೆ ಅಗೌರವ ತೋರಿಸಿದಂತಾಗುತ್ತದೆ. ಶಿವಮೊಗ್ಗದ ಅಮೀರ್ ಅಹಮದ್ ವೃತ್ತ ಹಾಗೂ ಬಸ್ ನಿಲ್ದಾಣದ ಎದುರು ಅಶೋಕ ಸ್ತಂಭದ ಮೇಲಿನ ರಾಷ್ಟ್ರ ಲಾಂಛನದ ಮೇಲೆ ಭಗವಾಧ್ವಜ ಹಾರಾಡಿಸಿದ ಘಟನೆಯೂ ನಡೆದಿದೆ. ಈ ಎರಡೂ ಘಟನೆಗಳು ಕರ್ನಾಟಕ ಗಾಂಧಿ ಸ್ಮಾರಕ ನಿಧಿಗೆ ಆತಂಕ ತಂದಿವೆ‘ ಎಂದಿದ್ದಾರೆ.

‘ಬೆಂಗಳೂರಿನ ಗಾಂಧಿ ಭವನದ ಆವರಣದಲ್ಲಿ ಮೌನ ಪ್ರತಿಭಟನೆ ಮಾಡುವ ಬಗ್ಗೆ ಆಲೋಚಿಸಿದ್ದೆವು. ಆದರೆ, ರಾಜ್ಯದಲ್ಲಿ ನಡೆಯುತ್ತಿರುವ ಮತೀಯ ಸಂಘರ್ಷದ ಸಂದರ್ಭದಲ್ಲಿ ಈ ವಿಷಯವನ್ನು ಮತ್ತೆ ಮುನ್ನೆಲೆಗೆ ತಂದು ಸೌಹಾರ್ದ ವಾತಾವರಣವನ್ನು ಹದಗೆಡುವಂತೆ ಮಾಡುವುದು ಸರಿಯಲ್ಲ ಎಂದು ತೀರ್ಮಾನಿಸಿ ಪ್ರತಿಭಟನೆ ವಿಷಯ ಕೈಬಿಟ್ಟಿದ್ದೇವೆ. ಮುಂದಿನ ದಿನಗಳಲ್ಲಿ ಈ ರೀತಿಯ ಘಟನೆಗಳು ನಡೆಯದಂತೆ ಕಾನೂನು ಕ್ರಮ ಜರುಗಿಸಬೇಕು’ ಎಂದು ಒತ್ತಾಯಿಸಿದ್ದಾರೆ.

‘ಹಿಂದೂ ಮಹಾಸಭಾ ಸಂಘಟನೆಯು ತನ್ನ ವಿಚಾರಗಳನ್ನು ಸಾರ್ವಜನಿಕವಾಗಿ ಪ್ರಚಾರಪಡಿಸಲು ನಮ್ಮ ಆಕ್ಷೇಪ ಇಲ್ಲ. ಆದರೆ, ರಾಷ್ಟ್ರಪಿತ ಎಂದು ಇಡೀ ದೇಶದ ಜನ ಒಪ್ಪಿಕೊಂಡಿರುವಾಗ ಅವರೆಲ್ಲರ ಮನಸಿಗೆ ಆಘಾತ ಆಗುವ ಕೃತ್ಯ ನಡೆಸುವುದು ಸರಿಯಲ್ಲ. ನಮ್ಮ ರಾಷ್ಟ್ರ ಧ್ವಜ ಮತ್ತು ರಾಷ್ಟ್ರೀಯ ಲಾಂಛನಗಳ ಸಂಹಿತೆಗೆ ಅಪಚಾರ ಆಗುವಂತಹ ನಡವಳಿಕೆಗಳೂ ಸಂವಿಧಾನಬಾಹಿರ’ ಎಂದಿದ್ದಾರೆ.

‘ರಾಷ್ಟ್ರೀಯ ಭಾವನೆಗಳಿಗೆ ಧಕ್ಕೆ ತರುವಂತೆ ಉದ್ದೇಶಪೂರ್ವಕವಾಗಿ ನಡೆದುಕೊಂಡಿರುವುದು ಸರಿಯಾದ ನಡವಳಿಕೆ ಅಲ್ಲ. ನಮ್ಮ ಸದುದ್ದೇಶದ ಭಾವನೆಯನ್ನು ಹಾಗೂ ನಮ್ಮ ಪ್ರತಿಭಟನಾತ್ಮಕ ನಿಲುವನ್ನು ನೀವು ಗೌರವಿಸಿ ತಪ್ಪು ಎಸಗಿರುವ ಸಂಘಟನೆ ಅಥವಾ ವ್ಯಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಮನವಿ ಮಾಡಿದ್ದಾರೆ.

ಸ್ವರಾಮೃತ ಸಂಗೀತ ಸೆ. 18ಕ್ಕೆ

ಬೆಂಗಳೂರು: ಲಕ್ಷ್ಮೀಶ ಫೌಂಡೇಷನ್ ವತಿಯಿಂದ ಸೆಪ್ಟೆಂಬರ್ 18 ಸಂಜೆ 3.45ಕ್ಕೆ ‘ಸ್ವರಾಮೃತ’ ಸಂಗೀತ ಕಾರ್ಯಕ್ರಮವನ್ನು ಜೆ.ಪಿ. ನಗರದ ಆರ್.ವಿ. ಡೆಂಟಲ್ ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಲಕ್ಷ್ಮೀಶ್ ಫೌಂಡೇಷನ್ ಕ್ಯಾನ್ಸರ್ ರೋಗಿಗಳು ಮತ್ತು ಅವರ ಸಂಬಂಧಿಗಳಿಗೆ ಕೌನ್ಸಿಲಿಂಗ್ ನೀಡುತ್ತದೆ. ಬಡ ಕ್ಯಾನ್ಸರ್ ರೋಗಿಗಳ ಮಕ್ಕಳಿಗೆ ಶಿಕ್ಷಣ ನೀಡುವ ಕೆಲಸ ಮಾಡುತ್ತಿದ್ದು, ದೇಣಿಗೆ ಸಂಗ್ರಹಿಸುವ ಉದ್ದೇಶದಿಂದ ‘ಸ್ವರಾಮೃತ’ ಆಯೋಜಿಸಿದೆ.

ಗಾಯಕಿ ಲಕ್ಷ್ಮಿ ನಾಗರಾಜ್, ಇಂದು ನಾಗರಾಜ್ ಮತ್ತು ಶ್ರೀಹರ್ಷ ಮೈಸೂರು ಸಂಗೀತ ಪ್ರಿಯರಿಗೆ ರಸದೌತಣ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪ್ರತಿಭಾ ಪುರಸ್ಕಾರ

ಬೆಂಗಳೂರು: ವಿಜಯನಗರದ ಭೈರವೇಶ್ವರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ. ವತಿಯಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇಕಡಾ 80ರಷ್ಟು ಅಂಕ ಗಳಿಸಿದ ಸದಸ್ಯರ ಮಕ್ಕಳು ಸೆಪ್ಟೆಂಬರ್ 15ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ 08023383530 ಸಂಪರ್ಕಿಸಿ.

ಸಾರಿಗೆ ಇಲಾಖೆ ನೌಕರರ ಆತ್ಮಹತ್ಯೆ ಪ್ರಕರಣ: ಎಎಪಿ ಪ್ರತಿಭಟನೆ

ಸಚಿವ ಶ್ರೀರಾಮುಲು ರಾಜೀನಾಮೆಗೆ ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ಇಲಾಖೆ ಅಧಿಕಾರಿಗಳ ಕಿರುಕುಳ ತಾಳದೇ 15 ದಿನಗಳ ಅಂತರದಲ್ಲಿ ಆರು ಮಂದಿ ನೌಕರರು ಆತ್ಮಹತ್ಯೆ ಮಾಡಿಕೊಂಡಿದ್ದು, ಸಾರಿಗೆ ಸಚಿವ ಬಿ.ಶ್ರೀರಾಮುಲು ಯಾವ ಕ್ರಮವನ್ನೂ ಕೈಗೊಂಡಿಲ್ಲ. ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಇಲ್ಲವೇ ಅವರನ್ನು ವಜಾಗೊಳಿಸಬೇಕು ಎಂದು ಆಗ್ರಹಿಸಿ ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿರೆಡ್ಡಿ ನೇತೃತ್ವದಲ್ಲಿ ಬುಧವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಬಳಿಕ ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ್ದು, ಪೊಲೀಸರು ಅವಕಾಶ ನೀಡಲಿಲ್ಲ.

ಪ್ರತಿಭಟನೆಗೂ ಮೊದಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿದ ಪೃಥ್ವಿರೆಡ್ಡಿ, ಬೇರೆಯವರಿಗೆ ಸಾರಿಗೆ ಖಾತೆ ನೀಡುವಂತೆ ಕೋರಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಬುಧವಾರ ಸಾರಿಗೆ ಸಚಿವ ಬಿ.ಶ್ರೀರಾಮುಲು ಅವರ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

‘ಬಿಜೆಪಿ ಸರ್ಕಾರದ ಅವಧಿಯಲ್ಲಿ 35 ಮಂದಿ ಸಾರಿಗೆ ನೌಕರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 15 ದಿನಗಳ ಅಂತರದಲ್ಲಿ ಆರು ಮಂದಿ ಸಾರಿಗೆ ನೌಕರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನೌಕರರು ಆತ್ಮಹತ್ಯೆ ಹಾದಿ ಹಿಡಿದಿದ್ದರೂ ಸಾರಿಗೆ ಸಚಿವರು ಮೌನ ವಹಿಸಿದ್ದಾರೆ. ಸಚಿವರು, ಅಧಿಕಾರಿಗಳು ಮೃತ ನೌಕರರ ದರ್ಶನ ಪಡೆಯುವುದಕ್ಕೂ ಬಂದಿಲ್ಲ. ಅವರ ಕುಟುಂಬಕ್ಕೆ ಸಾಂತ್ವನ ಸಹ ಹೇಳಲಿಲ್ಲ’ ಎಂದು ಪೃಥ್ವಿರೆಡ್ಡಿ ಆಕ್ರೋಶ ಹೊರಹಾಕಿದರು.

‘ಎಎಪಿಯಿಂದ ಪ್ರತಿಭಟನೆ ನಡೆದ ಬಳಿಕ ಡಿಪೋದ ವ್ಯವಸ್ಥಾಪಕರೊಬ್ಬರನ್ನು ಅಮಾನತು ಮಾಡಿರುವುದನ್ನು ಹೊರತುಪಡಿಸಿ ಬೇರೆ ಯಾವ ಕ್ರಮವನ್ನೂ ಕೈಗೊಂಡಿಲ್ಲ. ನೌಕರರ ಕುಟುಂಬಕ್ಕೆ ಪರಿಹಾರ ನೀಡಿಲ್ಲ’ ಎಂದು ಆಪಾದಿಸಿದರು.

‘ಆತ್ಮಹತ್ಯೆ ಮಾಡಿಕೊಂಡ ಕೆಲವು ನೌಕರರು ಡೆತ್‌ನೋಟ್ ಬರೆದಿಟ್ಟಿದ್ದಾರೆ. ಆತ್ಮಹತ್ಯೆಗೆ ಅಧಿಕಾರಿಗಳ ಕಿರುಕುಳವೇ ಕಾರಣವೆಂದು ಸ್ಪಷ್ಟವಾಗಿ ಬರೆದಿದ್ದಾರೆ. ಆದರೂ ಸರ್ಕಾರ ಎಚ್ಚೆತ್ತುಕೊಂಡಿಲ್ಲ. ಪ್ರಕರಣದ ಸಮಗ್ರ ತನಿಖೆ ನಡೆಸಬೇಕು’ ಎಂದು ಪಕ್ಷದ ಬೆಂಗಳೂರು ನಗರ ಅಧ್ಯಕ್ಷ ಮೋಹನ್ ದಾಸರಿ ಆಗ್ರಹಿಸಿದರು.

110ಕ್ಕೂ ಹೆಚ್ಚು ನೌಕರರು ಕೋವಿಡ್‌ಗೆ ಬಲಿಯಾಗಿದ್ದಾರೆ. ಎಲ್ಲ ಕುಟುಂಬಗಳಿಗೂ ₹ 30 ಲಕ್ಷ ಪರಿಹಾರ ನೀಡುವುದಾಗಿ ಸರ್ಕಾರ ಭರವಸೆ ನೀಡಿತ್ತು. ಏಳು ಕುಟುಂಬಗಳಿಗೆ ಮಾತ್ರ ಪರಿಹಾರ ನೀಡಲಾಗಿದೆ ಎಂದು ಹೇಳಿದರು.

ಮುಖಂಡರಾದ ವಿಜಯ್ ಶರ್ಮ, ಸಂಚಿತ್, ಬಿ.ಟಿ.ನಾಗಣ್ಣ, ಜಗದೀಶ್ ವಿ. ಸದಂ, ದರ್ಶನ್ ಜೈನ್, ಸುರೇಶ್ ರಾಥೋಡ್, ಜಗದೀಶ್ ಚಂದ್ರ, ಚನ್ನಪ್ಪಗೌಡ ನೆಲ್ಲೂರು, ಕುಶಲಸ್ವಾಮಿ, ಉಷಾ ಮೋಹನ್ ಪ್ರತಿಭಟನೆಯಲ್ಲಿ ಹಾಜರಿದ್ದರು.

ಕುಲಪತಿಯಾಗಿ ಎಲ್.ಎಸ್.ಗಣೇಶ್

ಬೆಂಗಳೂರು: ಹೈದರಾಬಾದಿನ ಐಸಿಎಫ್ ಎಐ ವಿಶ್ವವಿದ್ಯಾಲಯದ ಕುಲಪತಿಯಾಗಿ ಪ್ರೊ. ಎಲ್.ಎಸ್.ಗಣೇಶ್ ಅಧಿಕಾರ ವಹಿಸಿಕೊಂಡರು.

ಸಂಶೋಧಕ ಮತ್ತು ಶಿಕ್ಷಣ ತಜ್ಞರೂ ಆಗಿರುವ ಗಣೇಶ್ ಅವರು, ದೇಶದ ಹಲವು ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ.

ನಿಧನ ವಾರ್ತೆ

ಶಂಕರಗೌಡ

ಬೆಂಗಳೂರು: ನಗರದ ಮಹಾಲಕ್ಷ್ಮಿಪುರಂ 2ನೇ ಮುಖ್ಯರಸ್ತೆ, 5ನೇ ಕ್ರಾಸ್‌ನ ನಿವಾಸಿ ಶಂಕರಗೌಡ (47 ವರ್ಷ) (ಬೋರ) ಮಂಗಳವಾರ ಸಂಜೆ ಹೃದಯಾಘಾತದಿಂದ ನಿಧನರಾದರು.

ಅವರಿಗೆ ಪತ್ನಿ, ಪುತ್ರ, ಪುತ್ರಿ, ತಂದೆ, ತಾಯಿ, ಇಬ್ಬರು ಸೋದರರು ಇದ್ದಾರೆ.

ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

‘ಡಿಸಿ, ಎಸಿ, ತಹಶೀಲ್ದಾರ್‌ಗೆ ಗುರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆಸ್ತಿಗಳಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳಿಗೆ 75, ಉಪ ವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರ್‌ಗಳಿಗೆ ತಲಾ 100 ಪ್ರಕರಣಗಳನ್ನು ಇತ್ಯರ್ಥಪಡಿಸುವ ಗುರಿ ನೀಡಲಾಗಿದೆ. ದಾಖಲೆಗಳಲ್ಲಿನ ಅಕ್ಷರ ತಿದ್ದುಪಡಿ ಅಧಿಕಾರವನ್ನು ತಹಶೀಲ್ದಾರ್‌ಗೆ ನೀಡುವ ಚಿಂತನೆ ಇದೆ’ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಜೆಡಿಎಸ್‌ನ ಸಿ.ಎನ್. ಮಂಜೇಗೌಡ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಹೆಚ್ಚುವರಿ ಜಿಲ್ಲಾಧಿಕಾರಿಗಳಿಗೂ ಪ್ರಕರಣಗಳ ಇತ್ಯರ್ಥಪಡಿಸುವ ಅಧಿಕಾರ ನೀಡಿದ್ದು, ವಾರಕ್ಕೆ ಎರಡು ದಿನ ಕಡ್ಡಾಯವಾಗಿ ಕೋರ್ಟ್ ನಡೆಸಲು ಸೂಚಿಸಲಾಗಿದೆ. ಶಿರಸ್ತೇದಾರರಿಗೂ ಕೋರ್ಟ್ ನಡೆಸಲು ಅವಕಾಶ ಕಲ್ಪಿಸಲಾಗಿದೆ. ಪ್ರತಿ ತಿಂಗಳು ಜಿಲ್ಲಾಧಿಕಾರಿಗಳ ಜೊತೆ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಪ್ರಗತಿ ಪರಿಶೀಲನೆ ನಡೆಸುವಂತೆ ಸೂಚಿಸಲಾಗಿದೆ’ ಎಂದರು.

3 ಸಾವಿರ ಸರ್ವೇಯರ್ ನೇಮಕ: ‘ಬೆಂಗಳೂರು ಮತ್ತು ಬೆಂಗಳೂರು ಗ್ರಾಮಾಂತರದಲ್ಲಿ ದರ್ಖಾಸ್ತು ಜಮೀನಿನ ಪೋಡಿ ವಿಳಂಬ ತಪ್ಪಿಸಲು ಹೆಚ್ಚುವರಿಯಾಗಿ ಸರ್ವೇಯರ್‌ಗಳನ್ನು ನೇಮಿಸಲಾಗುವುದು’ ಎಂದರು.

ಬಿಜೆಪಿಯ ಪಿ. ಮುನಿರಾಜುಗೌಡ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಬೆಂಗಳೂರು ಮತ್ತು ಗ್ರಾಮಾಂತರದಲ್ಲಿ ದರ್ಖಾಸ್ತು ಜಮೀನು ಮಂಜೂರು ಮಾಡಬೇಕಾದರೆ ದಾಖಲೆ ಸಮಸ್ಯೆ ಎದುರಾಗುತ್ತಿದೆ. ಹೀಗಾಗಿ ಸರ್ವೇ ವಿಳಂಬವಾಗುತ್ತಿದೆ. ಹೊಸದಾಗಿ 3 ಸಾವಿರ ಪರವಾನಗಿ ಪಡೆದ ಸರ್ವೇಯರ್‌ಗಳನ್ನು ನೇಮಕ ಮಾಡಿದ್ದು, ಅಗತ್ಯ ಇರುವ ಕಡೆ ಹೆಚ್ಚು ಸರ್ವೇಯರ್‌ಗಳನ್ನು ನೇಮಿಸಲಾಗುವುದು’ ಎಂದರು.

‘ಗೋಮಾಳ ಜಮೀನು ಕೊಡುವಂತೆ ಒತ್ತಡ’

‘ಇನ್ನು 10 ವರ್ಷ ಕಳೆದರೆ ಸಾರ್ವಜನಿಕ ಉದ್ದೇಶದ ಬಳಕೆಗೆ ಸರ್ಕಾರಿ ಜಾಗವೇ ಸಿಗದಂತಹ ವಾತಾವರಣ ನಿರ್ಮಾಣವಾಗಲಿದೆ. ಹೀಗಾಗಿ, ಮುಂದಿನ 20-30 ವರ್ಷದ ಅಗತ್ಯತೆ ನೋಡಿಕೊಂಡು ಗ್ರಾಮಗಳಲ್ಲಿ ಸರ್ಕಾರಿ ಜಾಗ ಮಂಜೂರು ಮಾಡಿಸಿಕೊಳ್ಳಿ’ ಎಂದು ಜನಪ್ರತಿನಿಧಿಗಳಿಗೆ ಅಶೋಕ ಸಲಹೆ ನೀಡಿದರು.

ಕಾಂಗ್ರೆಸ್ಸಿನ ಮಂಜುನಾಥ ಭಂಡಾರಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಸಾರ್ವಜನಿಕ ಅಗತ್ಯಗಳಿಗೆ ಸರ್ಕಾರದಿಂದ ದಕ್ಷಿಣ ಕನ್ನಡ ಜಿಲ್ಲೆಗೆ 2,123 ಎಕರೆ, ಉಡುಪಿಗೆ 1,181 ಎಕರೆ ಜಾಗ ನೀಡಲಾಗಿದೆ. ಕೆಲವೆಡೆ ಪರಿಭಾವಿತ ಅರಣ್ಯ ಇರುವ ಕಾರಣ ವಿಳಂಬವಾಗಿದ್ದು, ಶೀಘ್ರ ವಿಲೇವಾರಿ ಮಾಡಲಾಗುವುದು’ ಎಂದರು.

‘ಖಾಸಗಿ ಬಳಕೆಗೆ ಗೋಮಾಳ ಜಮೀನು ಕೊಡುವಂತೆ ಒತ್ತಡ ಬರುತ್ತಿದೆ. ಆದರೆ ಅದಕ್ಕೆ ನಾನು ಒಪ್ಪುತ್ತಿಲ್ಲ. ಶಿಕ್ಷಣ, ಆಸ್ಪತ್ರೆ, ಸಾರ್ವಜನಿಕ ಮೈದಾನದಂಥ ಸಾರ್ವಜನಿಕ ಉದ್ದೇಶಕ್ಕೆ ಮಾತ್ರ ಕೊಡುತ್ತೇನೆ. ಅಂಥ ಉದ್ದೇಶದ ಕಡತಗಳನ್ನು ಪ್ರತ್ಯೇಕ ಪರಿಗಣಿಸಲು ತಹಶೀಲ್ದಾರ್ ನೇಮಿಸಲಾಗಿದೆ. ಸಾರ್ವಜನಿಕ ಉದ್ದೇಶದ ಅಗತ್ಯದ ಜಾಗದ ಸರ್ವೇ ನಂಬರ್ ನಮೂದಿಸಿ ಪತ್ರ ಬರೆದರೆ ತಕ್ಷಣ ಜಾಗ ಮಂಜೂರು ಮಾಡುತ್ತೇನೆ’ ಎಂದೂ ಹೇಳಿದರು.

ಅತಿವೃಷ್ಟಿ–ಪ್ರವಾಹದ ಕುರಿತು ವಿಧಾನಸಭೆಯಲ್ಲಿ ಚರ್ಚೆ: ಕಾನೂನಿನ ಪ್ರಕಾರ ರಾಜಕಾಲುವೆಗಳ ಒತ್ತುವರಿ ತೆರವು

ಮನೆ ನೆಲಸಮವೇ ಪರಿಹಾರವಲ್ಲ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಪ್ರವಾಹ ತಡೆಯಲು ಮನೆಗಳನ್ನು ನೆಲಸಮ ಮಾಡುವುದೇ ಪರಿಹಾರವಲ್ಲ. ರಾಜಕಾಲುವೆಗಳ ನೀರು ಹರಿಸಲು ಪರ್ಯಾಯ ಜಾಗ ಲಭ್ಯವಿದ್ದಲ್ಲಿ ಮನೆ ಕೆಡಹುವುದಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಅತಿವೃಷ್ಟಿ ಮತ್ತು ಪ್ರವಾಹದ ಕುರಿತು ವಿಧಾನಸಭೆಯಲ್ಲಿ ಬುಧವಾರ ನಡೆದ ಚರ್ಚೆಗೆ ಪ್ರತಿಕ್ರಿಯಿಸಿದ ಅವರು, ‘ಮಳೆ ನೀರು ರಾಜಕಾಲುವೆಗಳ ಮೂಲಕ ಹರಿದು ಹೋಗಬೇಕು. ಅದಕ್ಕೆ ಬೇಕಾದ ಎಲ್ಲ ಕ್ರಮಗಳನ್ನೂ ಸರ್ಕಾರ ಕೈಗೊಳ್ಳಲಿದೆ’ ಎಂದರು.


ಬಸವರಾಜ ಬೊಮ್ಮಾಯಿ

ನೀರು ಹರಿದುಹೋಗಲು ತಡೆಯೊಡ್ಡುತ್ತಿರುವ ಕಟ್ಟಡಗಳು ಇರುವ ಜಾಗದ ಬದಲಿಗೆ ಕೆಲವು ಬಡಾವಣೆಗಳವರು ಕಾಲುವೆಗೆ ಬೇಕಾದ ಜಮೀನನ್ನು ನೀಡಲು ಮುಂದಾಗಿದ್ದಾರೆ. ಆ ರೀತಿ ನೀರು ಹರಿದುಹೋಗುವ ವ್ಯವಸ್ಥೆಯಾದರೆ ಕಟ್ಟಡಗಳನ್ನು ನೆಲಸಮ ಮಾಡಬೇಕಾದ ಪರಿಸ್ಥಿತಿ ಉದ್ಭವಿಸುವುದಿಲ್ಲ ಎಂದು ಹೇಳಿದರು.

ರಾಜಕಾಲುವೆಗಳ ಒತ್ತುವರಿ ತೆರವು ಕಾನೂನಿನ ಪ್ರಕಾರ ಮುಂದುವರಿಯಲಿದೆ. ಯಾವುದೇ ಒತ್ತಡಕ್ಕೂ ಮಣಿಯುವುದಿಲ್ಲ ಎಂದರು.

‘ಮಹಾನಗರಗಳಲ್ಲಿ ಮಳೆ ಸುರಿದಾಗ ಪ್ರವಾಹ ಉಂಟಾಗುವುದು ಸಹಜ. ಎಲ್ಲ ಮಹಾನಗರಗಳಲ್ಲೂ ಈ ಸಮಸ್ಯೆ ಇದೆ. ಈ ಬಾರಿ ಬೆಂಗಳೂರಿನಲ್ಲಿ ಹಿಂದೆಂದೂ ಆಗದಷ್ಟು ಮಳೆ ಬಿದ್ದಿದೆ. ಪ್ರವಾಹಕ್ಕೆ ಕಾರಣ ಹುಡುಕಲು ಹೊರಟರೆ ಕೊನೆ ಇರುವುದಿಲ್ಲ. ಈಗ ಸಮಸ್ಯೆ ಪರಿಹರಿಸುವುದು ಮುಖ್ಯ. ಆ ದಿಸೆಯಲ್ಲಿ ನಮ್ಮ ಸರ್ಕಾರ ಕೆಲಸ ಮಾಡಲಿದೆ’ ಎಂದು ಹೇಳಿದರು.

ಕೆರೆ ಮುಚ್ಚಿದ್ದು ಯಾರು?

‘ಬೆಂಗಳೂರು ನಗರದಲ್ಲಿದ್ದ ಕೆರೆಗಳನ್ನು ಮುಚ್ಚಿದ್ದು ಯಾರು’ ಎಂಬ ಪ್ರಶ್ನೆ ವಿಧಾನಸಭೆಯಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಬುಧವಾರ ತೀವ್ರ ವಾಕ್ಸಮರಕ್ಕೆ ಕಾರಣವಾಯಿತು.

ಪ್ರವಾಹ ಕುರಿತ ಚರ್ಚೆಯಲ್ಲಿ ಮಧ್ಯ ಪ್ರವೇಶಿಸಿದ ಕಂದಾಯ ಸಚಿವ ಆರ್. ಅಶೋಕ, ‘ಬಿಡಿಎ ನಗರದ ಕೆರೆಗಳನ್ನು ಮುಚ್ಚಿ ಬಡಾವಣೆಗಳನ್ನು ನಿರ್ಮಿಸಿದ್ದೇ ಈಗಿನ ಸಂಕಷ್ಟಕ್ಕೆ ಕಾರಣ. ಕೆರೆಗಳನ್ನು ಮುಚ್ಚಲು ಅನುಮತಿ ಕೊಟ್ಟವರು ಯಾರು?’ ಎಂದು ಕೇಳಿದರು.

ಆಗ ಪ್ರತಿಕ್ರಿಯಿಸಿದ ಕಾಂಗ್ರೆಸ್‌ನ ರಾಮಲಿಂಗಾ ರೆಡ್ಡಿ, ‘ಮಂತ್ರಿಗಳು, ಶಾಸಕರು ಕೆರೆ ಮುಚ್ಚಲು ಹೇಳಿಲ್ಲ. ಯೋಜನೆ ರೂಪಿಸುವವರು ಅಧಿಕಾರಿಗಳು’ ಎಂದರು.

‘ಕೆರೆ ಮುಚ್ಚಿ ಎಂದು ಹೇಳಿಲ್ಲ ಎನ್ನುತ್ತೀರಿ. ಬಿಡಿಎ ಹೊಸ ಬಡಾವಣೆಗಳ ಪ್ರಸ್ತಾವ ಮುಂದಿಟ್ಟಾಗ ಅನುಮೋದನೆ ಕೊಡುವವರು ಯಾರು? ನನ್ನ ಕ್ಷೇತ್ರದ ಚಲ್ಲಘಟ್ಟ ಕೆರೆಯನ್ನು ಗಾಲ್ಫ್ ಆಡುವುದಕ್ಕೆ ಕೊಟ್ಟಿದ್ದಾರೆ’ ಎಂದು ಅರವಿಂದ ಲಿಂಬಾವಳಿ ತಿರುಗೇಟು ನೀಡಿದರು.

ಆಗ ಮಧ್ಯ ಪ್ರವೇಶಿಸಿದ ಕಾಂಗ್ರೆಸ್‌ನ ಕೆ.ಜೆ. ಜಾರ್ಜ್, ‘ಕೆರೆ ಮುಚ್ಚಿದ್ದಕ್ಕೆ ಕಾರಣಗಳಿವೆ. ಈಗ ಇರುವ ಕೆರೆಗಳನ್ನು ಉಳಿಸಿಕೊಳ್ಳಬೇಕು’ ಎಂದರು.

ಇದೇ ವಿಚಾರವಾಗಿ ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರ ನಡುವೆ ಕೆಲಕಾಲ ಆರೋಪ– ಪ್ರತ್ಯಾರೋಪ ನಡೆಯಿತು.

ಬಿಡಿಎ ನೇರ ಹೊಣೆ: ಎಚ್‌.ಡಿ.ಕುಮಾರಸ್ವಾಮಿ

ಬೆಂಗಳೂರು: ನಗರದಲ್ಲಿ ಪ್ರವಾಹದಿಂದ ಸೃಷ್ಟಿಯಾಗಿರುವ ಸಮಸ್ಯೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನೇರ ಹೊಣೆ. ಬಡಾವಣೆಗಳ ನಿರ್ಮಾಣಕ್ಕೆ ಕೆರೆಗಳನ್ನು ಮುಚ್ಚಿರುವುದೇ ಈ ಸ್ಥಿತಿಗೆ ಕಾರಣ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದರು.

ವಿಧಾನಸಭೆಯಲ್ಲಿ ಬುಧವಾರ ನಡೆದ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ಬಿಡಿಎ ಕರ್ಮಕಾಂಡವೇ ಬೆಂಗಳೂರಿನ ದುಃಸ್ಥಿತಿಗೆ ಕಾರಣ. ಕೆರೆಗಳನ್ನು ಮುಚ್ಚಿ ಬಡಾವಣೆ ಮಾಡಿದರು. ರಾಜ ಕಾಲುವೆಗಳನ್ನೂ ಮುಚ್ಚಿದರು. 1985ರಲ್ಲಿ ಐಎಎಸ್ ಅಧಿಕಾರಿ ಲಕ್ಷ್ಮಣ ರಾವ್ ಅವರು ಕೆರೆಗಳನ್ನು ಮುಚ್ಚದಂತೆ ನೀಡಿದ್ದ ವರದಿಯನ್ನು ಕಸದ ಬುಟ್ಟಿಗೆ ಎಸೆದರು. ಅದರ ಫಲ ಈಗ ಅನುಭವಿಸುವಂತಾಗಿದೆ’ ಎಂದರು.

ಕೆರೆ ಮುಚ್ಚಿ ಬಿಡಿಎ ವತಿಯಿಂದ ನಿರ್ಮಿಸಿದ ಜೆ.ಪಿ. ನಗರ ಡಾಲರ್ಸ್ ಕಾಲೊನಿಯಲ್ಲಿ ಐಎಎಸ್ ಅಧಿಕಾರಿಗಳು, ಶ್ರೀಮಂತರೇ ನಿವೇಶನ ಪಡೆದಿದ್ದಾರೆ. ಬಿಡಿಎ ಅಧಿಕಾರಿಗಳ ಮೇಲೆ ಮೊದಲು ಕ್ರಮ ಜರುಗಿಸಬೇಕು ಎಂದು ವಾಗ್ದಾಳಿ ನಡೆಸಿದರು.

ಕರುಣೆ ಇರಲಿ: ಒತ್ತುವರಿ ತೆರವು ಮಾಡುವಾಗ ಮಾನವೀಯತೆ, ಕರುಣೆಯಿಂದ ವರ್ತಿಸಬೇಕು. ಯಾರೋ ಕೆರೆ, ರಾಜಕಾಲುವೆಗಳ ಮೇಲೆ ಬಡಾವಣೆ ನಿರ್ಮಿಸಿ ನಿವೇಶನ ಮಾರಾಟ ಮಾಡಿರುತ್ತಾರೆ. ಖರೀದಿಸಿದ ಬಡವರು ಸಂಕಷ್ಟಕ್ಕೆ ಸಿಲುಕುತ್ತಾರೆ. ಅಂತಹ ಕಟ್ಟಡ ನೆಲಸಮ ಮಾಡುವ ಮುನ್ನ ಅವರಿಗೆ ಪರ್ಯಾಯ ವ್ಯವಸ್ಥೆ ಮಾಡಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು.

ಮಾಧುಸ್ವಾಮಿ ಹೇಳಿಕೆಗೆ ಲಿಂಬಾವಳಿ ವಿರೋಧ

‘ನಗರದ ಕೆರೆಗಳಿಗೆ ಕೊಳಚೆ ನೀರು ಹರಿಯುತ್ತಿಲ್ಲ’ ಎಂಬ ಸಣ್ಣ ನೀರಾವರಿ ಸಚಿವ ಜೆ.ಸಿ. ಮಾಧುಸ್ವಾಮಿ ಅವರ ಹೇಳಿಕೆಯನ್ನು ಬಿಜೆಪಿ ಸದಸ್ಯ ಅರವಿಂದ ಲಿಂಬಾವಳಿ ಸದನದಲ್ಲೇ ವಿರೋಧಿಸಿದರು.

ಪ್ರವಾಹ ಕುರಿತ ಚರ್ಚೆಯಲ್ಲಿ ಕೊಳಚೆ ನೀರನ್ನು ನೇರವಾಗಿ ಕೆರೆಗಳಿಗೆ ಹರಿಸುತ್ತಿರುವ ವಿಚಾರ ಪ್ರಸ್ತಾಪವಾಯಿತು. ತಮ್ಮ ಕ್ಷೇತ್ರದಲ್ಲಿರುವ ಕೆರೆಗಳಿಗೆ ಕೊಳಚೆ ನೀರು ಹರಿಯುತ್ತಿದೆ ಎಂದು ಕಾಂಗ್ರೆಸ್‌ನ ಕೆ.ಜೆ. ಜಾರ್ಜ್ ಹೇಳಿದರು. ಆಗ ಪ್ರತಿಕ್ರಿಯಿಸಿದ ಮಾಧುಸ್ವಾಮಿ, ‘ಹಾಗೆ ಹೇಳಬೇಡಿ. ಯಾವುದೇ ಕೆರೆಗೂ ಕೊಳಚೆ ನೀರು ಹರಿಸುತ್ತಿಲ್ಲ. ನಿಮ್ಮ ಹೇಳಿಕೆ ಆಧಾರದಲ್ಲಿ ಯಾರಾದರೂ ಹಸಿರು ನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಿದರೆ ಕಷ್ಟವಾಗುತ್ತದೆ’ ಎಂದರು.

‘ಕೆರೆಗಳಿಗೆ ಕೊಳಚೆ ನೀರು ಹರಿಯುತ್ತಿರುವುದು ನಿಜ. ನನ್ನ ಜತೆ ಬನ್ನಿ ತೋರಿಸುವೆ. ಸುಳ್ಳು ಹೇಳಬೇಡಿ’ ಎಂದು ಲಿಂಬಾವಳಿ ಸಿಟ್ಟಿನಿಂದ ಹೇಳಿದರು.

ಅರಮನೆ ಆವರಣದಲ್ಲಿ ಗಂಡು ಮರಿಗೆ ಜನ್ಮ ನೀಡಿದ ದಸರಾ ಆನೆ ‘ಲಕ್ಷ್ಮಿ’

ದಸರಾ: ಮರಿಗೆ ಜನ್ಮ ನೀಡಿದ ‘ಲಕ್ಷ್ಮಿ’

ಮೈಸೂರು: ಅರಮನೆಯಲ್ಲಿ ಬಿಡಾರ ಹೂಡಿರುವ ದಸರಾ ಆನೆ ‘ಲಕ್ಷ್ಮಿ’ ಮಂಗಳವಾರ ರಾತ್ರಿ ಗಂಡು ಮರಿಗೆ ಜನ್ಮ ನೀಡಿದ್ದು, ತಾಯಿ– ಮರಿಯನ್ನು ಉಳಿದ ಆನೆಗಳಿಂದ ಬೇರ್ಪಡಿಸಿ ಸುರಕ್ಷಿತ ಪ್ರದೇಶದಲ್ಲಿ ಇರಿಸಲಾಗಿದೆ.

‘ಗರ್ಭಿಣಿ ಆನೆಯನ್ನು ದಸರೆಗೆ ಕರೆತಲಾಗಿದೆ. ಇಲಾಖೆ ಸಿಬ್ಬಂದಿ ಮೊದಲೇ ಪರೀಕ್ಷಿಸಿರಲಿಲ್ಲವೆ’ ಎಂಬ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಪರ–ವಿರೋಧ ಚರ್ಚೆ ಆರಂಭವಾಗಿದೆ. ಇದೇ ವೇಳೆ ‘ಲಕ್ಷ್ಮಿ ಪುತ್ರ’ನ ಆಗಮನ ದಸರೆಯ ಕಳೆ ಹೆಚ್ಚಿಸಿದೆ ಎಂದು ಹಲವರು ಫೋಟೊ ಹಂಚಿಕೊಂಡು ಸಂಭ್ರಮಿಸಿದ್ದಾರೆ.

ಅಂಬಾರಿ ಆನೆ ಅಭಿಮನ್ಯು ನೇತೃತ್ವದ 14 ಆನೆಗಳು ದಸರಾ ಜಂಬೂಸವಾರಿಯಲ್ಲಿ ಪಾಲ್ಗೊಳ್ಳಲು ಆ.7ರಂದು ವಿವಿಧ ಆನೆ ಶಿಬಿರಗಳಿಂದ ನಗರಕ್ಕೆ ಆಗಮಿಸಿದ್ದವು. ‘ಲಕ್ಷ್ಮಿ’ ಬಂಡೀಪುರ ರಾಷ್ಟ್ರೀಯ ಉದ್ಯಾನದ ರಾಮಾಪುರ ಆನೆ ಶಿಬಿರದ ಸದಸ್ಯೆ.

ಡಿಸಿಎಫ್ ಡಾ.ವಿ.ಕರಿಕಾಳನ್ ಮಾತನಾಡಿ, ‘ತಾಯಿ ಹಾಗೂ ಮರಿಯಾನೆ ಆರೋಗ್ಯವಾಗಿದ್ದು, ಸುರಕ್ಷತೆಯ ದೃಷ್ಟಿಯಿಂದ ಎರಡನ್ನೂ ಪ್ರತ್ಯೇಕವಾಗಿ ಇರಿಸಲಾಗಿದೆ. 20 ವರ್ಷದ ಹಿಂದಿನ ದಸರೆಯಲ್ಲೂ ‘ಸರಳ’ ಎಂಬ ಆನೆಯು ಮರಿ ಹಾಕಿತ್ತು. ವಿಶೇಷ ಆಹಾರ ನೀಡುತ್ತಿರುವುದರಿಂದ ‘ಲಕ್ಷ್ಮಿ’ ಆನೆಯು ತಿಂಗಳಲ್ಲಿ 2,920 ಕೆ.ಜಿ.ಯಿಂದ 3,150 ಕೆ.ಜಿ ಏರಿಕೆಯಾಗಿರುವುದು ತೂಕ ಪರೀಕ್ಷೆಯಲ್ಲಿ ಕಂಡು ಬಂದಿದೆ’ ಎಂದಿದ್ದಾರೆ.

ಮಹದೇವಪುರದಲ್ಲಿ ಬಹುತೇಕ ಸ್ಥಗಿತಗೊಂಡ ಕಾರ್ಯಾಚರಣೆ; ಸರ್ವೆಗೆ ಒತ್ತು

ರಾಜಕಾಲುವೆ: 11 ಸ್ಥಳಗಳಲ್ಲಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರ, ಯಲಹಂಕ ಹಾಗೂ ಪಶ್ಚಿಮ ವಲಯದಲ್ಲಿ ರಾಜಕಾಲುವೆ ಒತ್ತುವರಿಯನ್ನು 11 ಸ್ಥಳಗಳಲ್ಲಿ ಬಿಬಿಎಂಪಿ ಸಿಬ್ಬಂದಿ ಬುಧವಾರ ತೆರವುಗೊಳಿಸಿದರು. ಮಹದೇವಪುರ ವಲಯದಲ್ಲಿ ಸೋಮವಾರದಿಂದ ಎರಡು ದಿನ ಹೆಚ್ಚು ತೆರವು ಮಾಡಲಾಗಿತ್ತು. ಬುಧವಾರ ತೆರವು ಕಾರ್ಯ ಬಹುತೇಕ ಸ್ಥಗಿತಗೊಂಡಿದ್ದು, ಸರ್ವೆ ಮಾಡಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಯಲಹಂಕ ವಲಯದಲ್ಲಿ ಕುವೆಂಪು ನಗರ ವಾರ್ಡ್ ಸಿಂಗಾಪುರ ವ್ಯಾಪ್ತಿಯಲ್ಲಿ ಸರ್ವೆ ಸಂ.81 ಹಾಗೂ 82ರಲ್ಲಿ ಬಾಲನ್ ಆಗ್ರೋ ಪ್ರಾಡಕ್ಟ್ ಸಂಸ್ಥೆಯ ಜ್ಯೂಸ್ ಫ್ಯಾಕ್ಟರಿಯಿಂದ ಸುಮಾರು 21 ಮೀಟರ್ ಅಗಲ, 65 ಮೀಟರ್ ಉದ್ದದ ಜಾಗವನ್ನು ತೆರವು ಮಾಡಲಾಗಿದೆ. ಸಿಂಗಾಪುರ ಕೆರೆಯಿಂದ ಅಬ್ಬಿಗೆರೆ ಕೆರೆಗೆ ನೀರುಗಾಲುವೆಯನ್ನು ಸರ್ವೆ ಸಂ. 97 ಹಾಗೂ 100ರಲ್ಲಿ 2.4 ಮೀಟರ್ ಅಗಲ ಹಾಗೂ 200 ಮೀಟರ್ ಉದ್ದ ತೆರವು ಮಾಡಲಾಗಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಪಶ್ಚಿಮ ವಲಯದಲ್ಲಿ ಸುಭಾಷ್‌ನಗರದ ಬರಗಿ ಮುದ್ದೇನಹಳ್ಳಿಯಲ್ಲಿ 120 ಚ.ಮೀ ಖಾಲಿ ಜಾಗ ಹಾಗೂ 120 ಚ.ಮೀ ರೈಲ್ವೆ ಇಲಾಖೆಯ ಜಾಗ ಸೇರಿ ಒಟ್ಟು 240 ಚ.ಮೀ ನಷ್ಟು ಒತ್ತುವರಿ ತೆರವು ಮಾಡಲಾಗಿದೆ. ಮಹದೇವಪುರ ವಲಯದಲ್ಲಿ ಮುನ್ನೇಕೊಳಲು ವ್ಯಾಪ್ತಿಯಲ್ಲಿ ತೆರವು ಮಾಡಲಾಗಿದೆ.

ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದಲ್ಲಿ ಹೊರಮಾವು ವಾರ್ಡ್ ಪಟೇಲ್ ರಾಮಯ್ಯ ಲೇಔಟ್‌ನ ಕೊತ್ತನೂರು ಹಳ್ಳಿ ಸರ್ವೆ ಸಂ. 6, 7, 30, 14 ಸೇರಿದಂತೆ ಒಟ್ಟಾರೆ 600 ಮೀ. ಉದ್ದ ಹಾಗೂ 19.5 ಮೀ. ಅಗಲದ ರಾಜಕಾಲುವೆಯ ಒತ್ತುವರಿ ತೆರವು ಕಾರ್ಯಾಚರಣೆ ಆರಂಭವಾಗಿದೆ. ಗೋಡೆ, ಶೆಡ್ ತೆರವು ಮಾಡಲಾಗಿದೆ.

ನಲಪಾಡ್ ಅಕಾಡೆಮಿ ಒತ್ತುವರಿ ತೆರವು: ಚೆಲ್ಲಘಟ್ಟದ ಸರ್ವೆ ಸಂ. 70/14 ರಲ್ಲಿರುವ ನಲಪಾಡ್ ಅಕಾಡೆಮಿಯಿಂದ ಒತ್ತುವರಿಯಾಗಿದ್ದ 2.5 ಮೀಟರ್ ಅಗಲ ಹಾಗೂ 150.5 ಮೀಟರ್ ಉದ್ದದ ಕಾಲುವೆ ಜಾಗದಲ್ಲಿ ಅಳವಡಿಸಿದ್ದ ಕಾಂಕ್ರೀಟ್ ಸ್ಲ್ಯಾಬ್ ಅನ್ನು ತೆರವುಗೊಳಿಸಲಾಗಿದೆ. ತಡೆಗೋಡೆ ಮೇಲೆ ಅಳವಡಿಸಿದ್ದ ಫೆನ್ಸಿಂಗ್ ತೆರವು ಕಾರ್ಯಾಚರಣೆ ಪ್ರಗತಿಯಲ್ಲಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಚಲ್ಲಘಟ್ಟದಲ್ಲಿರುವ ನಲಪಾಡ್ ಅಕಾಡೆಮಿಯಲ್ಲಿ ಒತ್ತುವರಿಯನ್ನು ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸಿದರು. ಮಹದೇವಪುರದಲ್ಲಿ ಪುರ್ವ ಪಾರ್ಕ್‌ರಿಡ್ಜ್‌ನಲ್ಲಿ ಬಿಬಿಎಂಪಿ, ಕಂದಾಯ ಇಲಾಖೆ ಅಧಿಕಾರಿಗಳು ಒತ್ತುವರಿ ಸರ್ವೆ ನಡೆಸಿದರು.

ವಾರದಲ್ಲಿ ನಕ್ಷೆ ತಯಾರಿ...

ಪರಮೇಶ ನಾಯ್ಕ

ರಾಜಕಾಲುವೆಯ ನಕ್ಷೆ ತಯಾರಿ ಮಾಡುವುದಕ್ಕೆ ಅತಿ ಹೆಚ್ಚು ಸಮಯವೇನೂ ಬೇಕಾಗಿಲ್ಲ. ಸರ್ಕಾರ, ಬಿಬಿಎಂಪಿ ಅಥವಾ ಜಿಲ್ಲಾಡಳಿತಕ್ಕೆ ಆಸಕ್ತಿ ಇದ್ದದ್ದೇ ಆದರೆ ಒಂದು ವಾರದಲ್ಲಿ ರಾಜಕಾಲುವೆ ಹಿಂದಿದ್ದ ಇಂಚು ಇಂಚು ನಕ್ಷೆಯನ್ನೇ ತಯಾರಿಸಬಹುದು’ ಎಂದು ಭೂಪರಿಸರ ತಜ್ಞ ಡಾ. ಡಿ.ಪರಮೇಶ ನಾಯ್ಕ ತಿಳಿಸಿದರು.

‘ಹಳೆಯ ಟೊಪೊ ಮ್ಯಾಪ್ ಹಾಗೂ ಈಗಿನ ತಂತ್ರಜ್ಞಾನದ ಸಹಾಯದಿಂದ ರಾಜಕಾಲುವೆ ಎಲ್ಲಿತ್ತು, ಈಗ ಹೇಗಿದೆ ಎಂಬುದನ್ನು ದಾಖಲೆಸಹಿತವಾಗಿ ನಕ್ಷೆ ಮೂಲಕ ತೋರಬಹುದು. ಇದಕ್ಕೆ ಅದನ್ನು ತಯಾರಿಸಲು ಆದೇಶ ನೀಡಬೇಕಾದ ಆಸಕ್ತಿ ಇರಬೇಕಷ್ಟೆ’ ಎಂದು ಎನ್ವಿರಾನ್‌ಮೆಂಟಲ್ ಸೊಸೈಟಿ ಆಫ್ ಇಂಡಿಯಾದ ಅಧ್ಯಕ್ಷರೂ ಆದ ಪರಮೇಶ ನಾಯ್ಕ ಹೇಳಿದರು.

‘ನೈಸರ್ಗಿಕ ನೀರುಗಾಲುವೆಗಳನ್ನು ಅಭಿವೃದ್ಧಿ ಹೆಸರಿನಲ್ಲಿ ಅವೈಜ್ಞಾನಿಕವಾಗಿ ಮರುವಿನ್ಯಾಸಗೊಳಿಸಲಾಗಿದೆ. ಕಾಲುವೆಗಳ ಅಗಲ, ಆಳವನ್ನೇ ಕಡಿಮೆ ಮಾಡಲಾಗಿದೆ. ನೀರುಗಾಲುವೆಗಳಿಗೆ ಅಡಚಣೆ ಮಾಡಿರುವುದರಿಂದಲೇ ಮಳೆ ಬಂದ ಸಂದರ್ಭದಲ್ಲಿ ಬಡಾವಣೆಗಳು, ರಸ್ತೆಗಳು ಜಲಾವೃತವಾಗುತ್ತಿವೆ’ ಎಂದರು.

ಬಾಗ್ಮನೆ: ಸರ್ವೆ ಕಾರ್ಯ ಪೂರ್ಣ

ಹೈಕೋರ್ಟ್ ಹಾಗೂ ಸೆ.12ರಂದು ಲೋಕಾಯುಕ್ತರ ಅದೇಶದ ಮೇರೆಗೆ ಗರುಡಾಚಾರಪಾಳ್ಯ ಕೆರೆಯಿಂದ ಮಹದೇವಪುರ ಕೆರೆಗೆ ಸೇರುವ ಮಳೆ ನೀರುಗಾಲುವೆಯನ್ನು ಪುರ್ವ ಪಾರ್ಕ್‌ರಿಡ್ಜ್ ಸ್ವತ್ತು ಹಾಗೂ ಬಾಗ್ಮನೆ ಟೆಕ್‌ಪಾರ್ಕ್ ಸ್ವತ್ತಿನ ಮೂಲಕ ಆದು ಹೋಗುವ ಈ ಕಾಲುವೆ ಸರ್ವೆಯನ್ನು ತಹಶೀಲ್ದಾರ್, ಸರ್ವೆಯರ್‌ಗಳ ಮೂಲಕ ನಡೆಸಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಬಾಗ್ಮನೆ ಟೆಕ್ ಪಾರ್ಕ್‌ನಲ್ಲಿ 2.5 ಮೀಟರ್ ಅಗಲದ ರಾಜಕಾಲುವೆ ಮೇಲೆ ಕಾಂಕ್ರೀಟ್ ಸ್ಲ್ಯಾಬ್ ಹಾಕಿ ಮುಚ್ಚಲಾಗಿದೆ. ಪುರ್ವ ಪಾರ್ಕ್ರಿಡ್ಜ್ ನಲ್ಲಿ 2.5 ಮೀಟರ್ ಅಗಲದ ಸ್ಥಳದಲ್ಲಿ ಕಟ್ಟಡ, ಖಾಲಿ ಜಾಗ ಹಾಗೂ ರಸ್ತೆಯನ್ನು ನಿರ್ಮಿಸಲಾಗಿದೆ. ಗರುಡಾಚಾರ್ ಪಾಳ್ಯ ಕೆರೆಯಿಂದ ಮಹದೇವಪುರ ಕೆರೆಯ ಭಾಗದಲ್ಲಿ ಸುಮಾರು 13 ಮೀಟರ್ ಅಗಲದ ರಾಜಕಾಲುವೆಯ ಮೇಲೆ ಗೋಡೆ, ಕಟ್ಟಡ ಹಾಗೂ ಶೆಡ್ ನಿರ್ಮಾಣ ಮಾಡಲಾಗಿದೆ ಎಂಬುದನ್ನು ಸರ್ವೆ ಮೂಲಕ ಪತ್ತೆ ಹಚ್ಚಲಾಗಿದೆ ಎಂದು ಹೇಳಿದ್ದಾರೆ.

ತೆರವಿಗೆ ಅಡ್ಡಿಯಾಗಿಲ್ಲ: ನಂದೀಶ್ ರೆಡ್ಡಿ

‘ಚಿನ್ನಪ್ಪನಹಳ್ಳಿಯಲ್ಲಿ 20X30 ನಿವೇಶನದಲ್ಲಿ ಕಟ್ಟಿಕೊಂಡಿರುವ ಮನೆಗಳನ್ನು ಕೆಡವಬೇಡಿ. ಅದರ ಬದಲಿಗೆ ಮನೆಗಳ ಪಕ್ಕದಲ್ಲಿರುವ ರಸ್ತೆಯಲ್ಲಿ ಕಾಲುವೆ ಮಾಡಿ. ಅದರ ಮೇಲೆ ಸ್ಲ್ಯಾಬ್ ಅಳವಡಿಸಿ ಎಂದು ಬಿಬಿಎಂಪಿ ಅಧಿಕಾರಿಗಳಿಗೆ ಸಲಹೆ ನೀಡಿದ್ದೇನೆ. ದೊಡ್ಡ ಮನೆ, ಐಷಾರಾಮಿ ಬಂಗಲೆಗಳಿಂದಾಗಿರುವ ರಾಜಕಾಲುವೆ ತೆರವು ಮಾಡಬೇಡಿ ಎಂದು ಹೇಳಿಲ್ಲ’ ಎಂದು ಬಿಜೆಪಿಯ ಮಾಜಿ ಶಾಸಕ ನಂದೀಶ್ ರೆಡ್ಡಿ ಹೇಳಿದರು.

‘ಬಸವನಪುರದಲ್ಲಿ 10 ವರ್ಷದ ಹಿಂದೆ ಇಂತಹದ್ದೇ ಸುಮಾರು 200 ಸಣ್ಣ ಮನೆಗಳನ್ನು ಉಳಿಸಲು ರಸ್ತೆಯ ಕೆಳಗೇ ರಾಜಕಾಲುವೆಯನ್ನು ಮಾಡಿದ್ದೇವೆ. ಬಾಕ್ಸ್ ರೀತಿಯಲ್ಲಿ ಮಾಡಿದ್ದೇವೆ. ಯಾವುದೇ ತೊಂದರೆ ಇಲ್ಲ. ಅದರಂತೆ ಇಲ್ಲಿಯೂ ಮಾಡಿ ಎಂದು ಹೇಳಿದೆ’ ಎಂದು ತಿಳಿಸಿದರು.

ಕೇಂದ್ರದ ತಾರತಮ್ಯ ಧೋರಣೆ: ಬಿ.ಕೆ. ಹರಿಪ್ರಸಾದ್

‘ನಿಮ್ಹಾನ್ಸ್ ಆಸ್ಪತ್ರೆಯ 3 ಎಕರೆ ಕಬಳಿಕೆ’

ಬೆಂಗಳೂರು: ‘ನಗರದಲ್ಲಿ ಪ್ರವಾಹ ಸೃಷ್ಟಿಯಾಗಲು ಒತ್ತುವರಿ ಮತ್ತು ದೂರದೃಷ್ಟಿ ಕೊರತೆಯೇ ಕಾರಣ’ ಎಂದು ಬಿ.ಕೆ. ಹರಿಪ್ರಸಾದ್ ದೂರಿದರು.

ವಿಧಾನ ಪರಿಷತ್‌ನಲ್ಲಿ ಬುಧವಾರ ಅತಿವೃಷ್ಟಿ ಕುರಿತು ವಿಷಯ ಪ್ರಸ್ತಾಪಿಸಿದ ಅವರು, ‘ನಿಮ್ಹಾನ್ಸ್‌ಗೆ ಸೇರಿದ ಮೂರು ಎಕರೆ ಪ್ರದೇಶವನ್ನು ಕಬಳಿಸಲಾಗಿದೆ. ಇದುವರೆಗೆ ಮರುವಶಪಡಿಸಿಕೊಳ್ಳಲು ಸಾಧ್ಯವಾಗಿಲ್ಲ. ಒತ್ತುವರಿ ಕುರಿತು ಎ.ಟಿ. ರಾಮಸ್ವಾಮಿ, ಸಲ್ದಾನ ಸಮಿತಿ ಹಾಗೂ ಕೋಳಿವಾಡ ಸಮಿತಿಗಳು ನೀಡಿದ್ದ ವರದಿಯನ್ನು ಇದುವರೆಗಿನ ಎಲ್ಲ ಸರ್ಕಾರಗಳು ನಿರ್ಲಕ್ಷಿಸಿವೆ’ ಎಂದು ದೂರಿದರು.

‘ಒತ್ತುವರಿಗೆ ಅಧಿಕಾರಿಗಳೇ ಪ್ರಮುಖ ಕಾರಣ. ಬೊಮ್ಮನಹಳ್ಳಿ, ಮಹದೇವಪುರದ ಪ್ರದೇಶಗಳಲ್ಲಿ 10 ಅಡಿ ರಸ್ತೆ ಇಲ್ಲ. ಆದರೆ, 30 ಮಹಡಿಯ ಕಟ್ಟಡ ನಿರ್ಮಿಸಲು ಪರವಾನಗಿ ನೀಡಲಾಗಿದೆ. ಸರ್ಕಾರ ಒತ್ತುವರಿ ತೆರವುಗೊಳಿಸಲು ಕ್ರಮ ಕೈಗೊಂಡಿರುವುದು ಶ್ಲಾಘನೀಯ. ಕಾಂಗ್ರೆಸ್ ಶಾಸಕರಿಗೆ ಸೇರಿದ ಕಟ್ಟಡ ಕೆಡವಲಾಗಿದೆ. ಇದೇ ರೀತಿ ಎಲ್ಲ ಒತ್ತುವರಿದಾರರ ವಿರುದ್ಧ ಕ್ರಮ ಕೈಗೊಳ್ಳಲಿ’ ಎಂದು ಒತ್ತಾಯಿಸಿದರು.


ಹರಿಪ್ರಸಾದ್

‘1986ರಲ್ಲಿ 54 ಚದರ ಕಿಲೋ ಮೀಟರ್‌ನಷ್ಟು ಇದ್ದ ಬೆಂಗಳೂರು ನಗರ ಈಗ 800 ಚದರ ಕಿಲೋ ಮೀಟರ್‌ಗೂ ಹೆಚ್ಚು ಬೆಳೆದಿದೆ. ಬಿಬಿಎಂಪಿ 169 ಪ್ರದೇಶಗಳು ಅಪಾಯಕಾರಿ ಎಂದು ಗುರುತಿಸಿದೆ. ನಗರದಲ್ಲಿ 10 ಸಾವಿರಕ್ಕೂ ಹೆಚ್ಚು ಗುಂಡಿಗಳಿವೆ. ಈ ಗುಂಡಿಗಳಲ್ಲಿ ಬಿದ್ದು ಜನ ಸಾವಿಗೀಡಾಗುತ್ತಿದ್ದಾರೆ. ಸ್ಮಾರ್ಟ್ ಸಿಟಿಯಾಗಿದ್ದ ಬೆಂಗಳೂರು ನಗರದ ಈಗಿನ ಸ್ಥಿತಿಗೆ ಬರಲು ಬಿಬಿಎಂಪಿಯೇ ಹೊಣೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಇಂದಿನ ಆಧುನಿಕ ತಂತ್ರಜ್ಞಾನದಿಂದ ಭಾರಿ ಮಳೆ ಬರುವ ಮುನ್ಸೂಚನೆಗಳಿದ್ದರೂ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಅಡಿಯಲ್ಲಿ ನೀಡುವ ಪರಿಹಾರವನ್ನು 2015ರಿಂದ ಪರಿಷ್ಕರಿಸಿಲ್ಲ. ಹೀಗಾಗಿ, ಪರಿಹಾರ ಹೆಚ್ಚಿಸುವಂತೆ ಸದನದಲ್ಲಿ ನಿರ್ಣಯ ಕೈಗೊಂಡು ಕೇಂದ್ರಕ್ಕೆ ಕಳುಹಿಸಬೇಕು’ ಎಂದು ಒತ್ತಾಯಿಸಿದರು.

‘ಪ್ರವಾಹದಂತಹ ಪರಿಸ್ಥಿತಿಯಲ್ಲಿ ಜನರು ಸಂಕಷ್ಟಕ್ಕೆ ಸಿಲುಕಿದಾಗ ಪ್ರಧಾನಮಂತ್ರಿ ಅಥವಾ ಗೃಹ ಸಚಿವರು ವೈಮಾನಿಕ ಸಮೀಕ್ಷೆ ಮಾಡಬೇಕಾಗಿತ್ತು. ಕರ್ನಾಟಕದ ಜತೆಗೆ ಕೇಂದ್ರ ಸರ್ಕಾರದ ತಾರತಮ್ಯದ ಧೋರಣೆ ಮತ್ತೆ ಮುಂದುವರಿದಿದೆ’ ಎಂದು ದೂರಿದರು.

ರಾಜಕಾಲುವೆ ಹೂಳು ತೆಗೆಯಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆ.ಪಿ. ನಗರ 4ನೇ ಫೇಸ್‌ನ ಡಾಲರ್ಸ್ ಕಾಲೊನಿಯಲ್ಲಿ ರಾಜಕಾಲುವೆ ಹೂಳಿನಿಂದ ತುಂಬಿ ಕೊಂಡಿದ್ದು, ನೀರು ಬಡಾವಣೆಗಳಿಗೆ ಹರಿಯುತ್ತಿದೆ. ಎಂಟು ವರ್ಷಗಳಿಂದ ಮನವಿ ಮಾಡಿಕೊಂಡರೂ ಈವರೆಗೂ ಪರಿಹಾರ ಸಿಕ್ಕಿಲ್ಲ ಎಂದು ಜೆ.ಪಿ. ನಗರ 4ನೇ ಫೇಸ್ ಡಾಲರ್ಸ್ ಲೇಔಟ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಪತ್ರ ಬರೆದಿದೆ.

‘ಕಾಲೊನಿ ಪೂರ್ವಭಾಗ ಹಾಗೂ 4ನೇ ಅಡ್ಡರಸ್ತೆಯಲ್ಲಿ ರಾಜಕಾಲುವೆಯನ್ನು ಸ್ಲ್ಯಾಬ್ ಮೂಲಕ ಮುಚ್ಚಲಾಗಿದೆ. ಬನ್ನೇರುಘಟ್ಟ ರಸ್ತೆ ಮತ್ತು ಕಾಲೊನಿ ಮಧ್ಯೆ ರೈನ್‌ಬೊ ಆಸ್ಪತ್ರೆ ಕಟ್ಟಡದ ಸಮೀಪ ರಾಜಕಾಲುವೆ ಕಿರಿದಾಗಿದೆ’ ಎಂದು ಸಂಘದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರು ತಿಳಿಸಿದ್ದಾರೆ.

‘ರಾಜಕಾಲುವೆ ಕಿರಿದಾಗಿರುವ ಬಗ್ಗೆಯೂ ಕ್ರಮಕೈಗೊಂಡಿಲ್ಲ. ಪರ್ಯಾಯ ಕಾಲುವೆ ಮಾಡಿಕೊಡಿ ಎಂಬುದನ್ನು ಬಿಬಿಎಂಪಿ ಅಧಿಕಾರಿಗಳು ಪರಿಗಣಿಸಿಲ್ಲ’ ಎಂದು ಆರೋಪಿಸಿದ್ದಾರೆ.

‘ಈ ರಾಜಕಾಲುವೆ ಹೂಳನ್ನು ತೆಗೆದು ಸರಾಗವಾಗಿ ನೀರು ಹರಿಯಲು ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ಅವರು ಮನವಿ ಮಾಡಿದ್ದಾರೆ.

ಧರ್ಮರಾಯ ದೇಗುಲ ಜಾಗ ಒತ್ತುವರಿ: ತನಿಖೆಗೆ ಎಸ್‌ಐಟಿ

ಬೆಂಗಳೂರು: ‘ತಿಗಳರಪೇಟೆಯಲ್ಲಿರುವ ಶ್ರೀ ಧರ್ಮರಾಯ ಸ್ವಾಮಿ ದೇವಾಲಯದ ಜಾಗ ಒತ್ತುವರಿ ಪ್ರಕರಣವನ್ನು ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ವಹಿಸಲಾಗುವುದು. ಯಾವುದೇ ದೇವಾಲಯದ ಒತ್ತುವರಿ ಜಾಗ ತೆರವುಗೊಳಿಸುವ ವಿಚಾರದಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಬಿಜೆಪಿಯ ಎನ್. ರವಿಕುಮಾರ್, ‘ಧರ್ಮರಾಯಸ್ವಾಮಿ ದೇವಾಲಯಕ್ಕೆ ಸೇರಿರುವ ನೀಲಸಂದ್ರ ಗ್ರಾಮದಲ್ಲಿರುವ 15.12 ಎಕರೆ ಮತ್ತು ಹೊಂಗಸಂದ್ರ ಗ್ರಾಮದಲ್ಲಿ 16.25 ಎಕರೆ ಜಾಗವನ್ನು ಒಟ್ಟು 229 ಜನ ಒತ್ತುವರಿ ಮಾಡಿದ್ದಾರೆಂದು ಸಚಿವರೇ ಉತ್ತರ ನೀಡಿದ್ದಾರೆ. ಆದರೆ, 13 ಜನರ ವಿರುದ್ಧ ಪೊಲೀಸ್ ಠಾಣೆಯಲ್ಲಿ, 5 ಜನರ ಮೇಲೆ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದೆ. ಉಳಿದವರ ಮೇಲೆ ಯಾಕೆ ದೂರು ದಾಖಲಿಸಿಲ್ಲ? ಒತ್ತುವರಿದಾರರು ಕೋರ್ಟ್‌ಗೆ ಹೋಗಲು ಕಾಗದ ಪತ್ರಗಳು ಸಿಕ್ಕಿದ್ದು ಹೇಗೆ? ಒತ್ತುವರಿ ಜಾಗದಲ್ಲಿ ಮನೆ ಕಟ್ಟಲು ಪರವಾನಗಿ ಕೊಟ್ಟಿದ್ದು ಯಾರು’ ಎಂದು ಪ್ರಶ್ನಿಸಿದರು.

ಅದಕ್ಕೆ ಜೊಲ್ಲೆ, ‘ಒತ್ತುವರಿ ಜಾಗದಲ್ಲಿ 229 ಕಟ್ಟಡಗಳನ್ನು ಕಟ್ಟಲಾಗಿದ್ದು, 500ರಿಂದ 600 ಜನ ವಾಸ ಇದ್ದಾರೆ. ಒತ್ತುವರಿದಾರರು ಕೋರ್ಟ್‌ಗೆ ಹೋಗಿದ್ದರೂ ತೀರ್ಪು ದೇವಸ್ಥಾನದ ಪರ ಬಂದಿದೆ. ಐದು ಜನರ ಸಮಿತಿ ಮಾಡಿ ನಂತರ ಇಡೀ ರಾಜ್ಯದ ದೇವಾಲಯಗಳ ಮಾಹಿತಿ ಪಡೆದು ಒತ್ತುವರಿ ಸಮೀಕ್ಷೆ ಮಾಡಲಾಗುವುದು. ಒತ್ತುವರಿ ಜಾಗದಲ್ಲಿ ಮನೆ ಕಟ್ಟಲು ಅನುಮತಿ ನೀಡಿದ್ದ ಅಧಿಕಾರಿಗಳಿಗೆ ನೋಟಿಸ್ ನೀಡಲಾಗಿದೆ. ಯಾರು ತಪ್ಪು ಮಾಡಿದ್ದಾರೋ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು’ ಎಂದರು.

ಈ ವೇಳೆ ಮಾತನಾಡಿದ ಸಚಿವ ಸೋಮಣ್ಣ, ‘ಈ ಪ್ರಕರಣವನ್ನು ಎಸ್‌ಐಟಿಗೆ ಕೊಡುವುದಾಗಿ ಈ ಹಿಂದೆಯೇ ಹೇಳಿದ್ದೆವು. ಕಂದಾಯ ಸಚಿವರ ಜೊತೆ ಮಾತನಾಡಿ ಎಸ್‌ಐಟಿಗೆ ಕೊಡಲು ಕ್ರಮ ವಹಿಸಲಾಗುವುದು’ ಎಂದು ಭರವಸೆ ನೀಡಿದರು. ಅದಕ್ಕೆ ದನಿಗೂಡಿಸಿದ ಜೊಲ್ಲೆ, ‘ದೇವಾಲಯದ 9 ಎಕರೆ ಜಾಗಕ್ಕೆ ಕಾಂಪೌಂಡ್ ಹಾಕಲು ಹಣ ಬಿಡುಗಡೆ ಮಾಡಲಾಗಿದೆ. ದೇವಾಲಯದ ಜಮೀನು ಒತ್ತುವರಿ ತೆರವುಗೊಳಿಸಲು ಮುಲಾಜಿಲ್ಲದೆ ಕ್ರಮ ತೆಗೆದುಕೊಳ್ಳಲಾಗುವುದು’ ಎಂದರು.

ನೇಣು ಬಿಗಿದ ಸ್ಥಿತಿಯಲ್ಲಿ ಬಾಲಕಿಯರು ಪತ್ತೆ

ಲಖೀಂಪುರ ಖೇರಿ (ಉತ್ತರ ಪ್ರದೇಶ) (ಪಿಟಿಐ): ಇಲ್ಲಿನ ನಿಘಾಸನ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪರಿಶಿಷ್ಟ ಸಮುದಾಯದ ಇಬ್ಬರು ಹದಿಹರೆಯದ ಸಹೋದರಿಯರ ಮೃತದೇಹಗಳು ಅವರ ಮನೆ ಸಮೀಪದ ಜಮೀನಿನ ಮರವೊಂದರಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಬುಧವಾರ ಪತ್ತೆಯಾಗಿದೆ.

ಪಕ್ಕದ ಗ್ರಾಮದ ಮೂವರು ಯುವಕರು ನನ್ನ ಮಕ್ಕಳನ್ನು ಅಪಹರಿಸಿ ಕೊಂದಿದ್ದಾರೆ’ ಎಂದು ಮೃತರ ತಾಯಿ ಆರೋಪಿಸಿದ್ದಾರೆ.

ಸ್ಥಳದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಒತ್ತುವರಿ ತೆರವು: ಆದೇಶ ಪಾಲಿಸಲು ನಿರ್ದೇಶನ

ಬೆಂಗಳೂರು: ಕೆ.ಆರ್. ಪುರ ತಾಲ್ಲೂಕಿನ ಮಹದೇವಪುರ ಗ್ರಾಮದಲ್ಲಿ ಭಾಗಮನೆ ಡೆವಲಪರ್ಸ್ ಆಸ್ತಿಗೆ ಹೊಂದಿಕೊಂಡಿರುವ ರಾಜಕಾಲುವೆಯ ಒತ್ತುವರಿ ತೆರವು ಮಾಡುವಾಗ ಹೈಕೋರ್ಟ್ ಆದೇಶ ಮತ್ತು ಕಾನೂನಿನ ಅನುಸಾರ ಕ್ರಮ ಕೈಗೊಳ್ಳುವಂತೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಬಿಬಿಎಂಪಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಭಾಗಮನೆ ಡೆವಲಪರ್ಸ್ ಕಟ್ಟಡಕ್ಕೆ ಹೊಂದಿಕೊಂಡಿರುವ ರಾಜಕಾಲುವೆ ಒತ್ತುವರಿಗೆ ಬಿಬಿಎಂಪಿ ಅಧಿಕಾರಿಗಳು ಸಿದ್ಧತೆ ನಡೆಸಿದ್ದರು. ಒತ್ತುವರಿ ತೆರವು ಕಾರ್ಯಾಚರಣೆಯಲ್ಲಿ ಬಿಬಿಎಂಪಿ ಅಧಿಕಾರಿಗಳು ಪಕ್ಷಪಾತ ಎಸಗುತ್ತಿದ್ದಾರೆ ಮತ್ತು ತಮ್ಮ ಕಟ್ಟಡಕ್ಕೆ ಹಾನಿಯಾಗುವ ರೀತಿಯಲ್ಲಿ ಕ್ರಮಕ್ಕೆ ಮುಂದಾಗಿದ್ದಾರೆ. ಎಂದು ಆರೋಪಿಸಿ ಭಾಗಮನೆ ಡೆವಲಪರ್ಸ್‌ನ ಪ್ರದೀಪ್ ಎಂಬುವವರು ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು.

‘ಬಿಬಿಎಂಪಿ ಅಧಿಕಾರಿಗಳು ನಮ್ಮ ಕಟ್ಟಡಕ್ಕೆ ಹೊಂದಿಕೊಂಡಿರುವ ರಾಜ ಕಾಲುವೆಯ ಕಾಂಕ್ರೀಟ್ ಬ್ಲಾಕ್‌ಗಳನ್ನು ತರಾತುರಿಯಲ್ಲಿ ಒಡೆಯಲು ಮುಂದಾಗಿದ್ದಾರೆ. ಹಾಗೆ ಮಾಡಿದರೆ ಕಟ್ಟಡ ಜಲಾವೃತವಾಗುತ್ತದೆ. ಅಕ್ಕಪಕ್ಕದಲ್ಲಿರುವ ಒತ್ತುವರಿಗಳನ್ನು ತೆರವು ಮಾಡದೆ ನಮ್ಮ ಕಟ್ಟಡವನ್ನು ಮಾತ್ರ ತೆರವುಗೊಳಿಸಲು ಮುಂದಾಗಿದ್ದಾರೆ’ ಎಂದು ದೂರಿನಲ್ಲಿ ಆರೋಪಿಸಿದ್ದರು.

ಲೋಕಾಯುಕ್ತರು ಸೋಮವಾರ ಈ ದೂರಿನ ವಿಚಾರಣೆ ನಡೆಸಿದ್ದರು. ಬಿಬಿಎಂಪಿ ಜಂಟಿ ಆಯುಕ್ತ ಆರ್. ವೆಂಕಟಾಚಲಪತಿ ಮತ್ತು ಮುಖ್ಯ ಎಂಜಿನಿಯರ್ ಬಸವರಾಜ್ ಆರ್. ಕಬಾಡಿ ವಿಚಾರಣೆಗೆ ಹಾಜರಾಗಿದ್ದರು. ಈ ಪ್ರದೇಶದ ಒತ್ತುವರಿ ತೆರವಿಗೆ ಸಂಬಂಧಿಸಿದಂತೆ ಹೈಕೋರ್ಟ್ ಆದೇಶ ಪಾಲಿಸುವುದಾಗಿ ಇಬ್ಬರೂ ವಿಚಾರಣೆ ವೇಳೆ ಒಪ್ಪಿಕೊಂಡಿದ್ದರು.

‘ಮಹದೇವಪುರ ಗ್ರಾಮದ ಸರ್ವೆ ನಂಬರ್ 33/2ಬಿ, 33/3, 34/2, 35/2, 35/3, 37/1, 38/1 ಮತ್ತು 38/3ರಲ್ಲಿ ಹಾದುಹೋಗಿರುವ ರಾಜಕಾಲುವೆಯ ಒತ್ತುವರಿಯ ಕುರಿತು ಭೂಮಾಪನ ನಡೆಸಿ, ನಿಖರ ವರದಿ ತಯಾರಿಸಿ ಕ್ರಮ ಜರುಗಿಸಬೇಕು ಎಂದು ಹೈಕೋರ್ಟ್ ಆಗಸ್ಟ್ 25ರಂದು ನೀಡಿರುವ ಆದೇಶವನ್ನು ಪಾಲಿಸಬೇಕು’ ಎಂದು ನಿರ್ದೇಶನ ನೀಡಿದ್ದಾರೆ.

ಚಿತ್ರಾವಳಿ

ಹಿಂದಿ ದಿವಸ ವಿರೋಧಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಟಿ.ಎ.ನಾರಾಯಣಗೌಡ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಹಿಂದಿ ದಿವಸ ವಿರೋಧಿಸಿ ಕರ್ನಾಟಕ ರಕ್ಷಣಾ ವೇದಿಕೆಯ (ಎಚ್‌.ಶಿವರಾಮೇಗೌಡ ಬಣ) ಕಾರ್ಯಕರ್ತರು ಮಲ್ಲೇಶ್ವರದ ಕುವೆಂಪು ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದರು. ಈ ಸಂದರ್ಭದಲ್ಲಿ ವ್ಯಕ್ತಿಯೊಬ್ಬರು ‘ನಾವು ಕನ್ನಡದ ಮಂದಿ, ನಮಗೆ ಏಕೆ ಬೇಕು ಹಿಂದಿ’ ಎಂಬ ಬರಹವನ್ನು ಮೈಮೇಲೆ ಬರೆದುಕೊಂಡು ಆಕ್ರೋಶ ವ್ಯಕ್ತಪಡಿಸಿದರು.

ಮನೆ ತೆರವು ಆತಂಕ: ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುನ್ನೇಕೊಳಲಿನ ವೀರಪ್ಪ ರೆಡ್ಡಿ ಬಡಾವಣೆಯಲ್ಲಿರುವ ಎನ್. ಅನಿಲ್ ಎಂಬುವವರ ಮನೆಯನ್ನು ನೋಟಿಸ್ ನೀಡದೆ ತೆರವುಗೊಳಿಸುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಕಾರ್ಯಾಚರಣೆಗೆ ಹೈಕೋರ್ಟ್ ತಡೆ ಒಡ್ಡಿದೆ.

ಈ ಸಂಬಂಧ ಮನೆ ಮಾಲೀಕ ಎನ್.ಅನಿಲ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ್ ಚಂದನಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಅರ್ಜಿದಾರರಿಗೆ ನೋಟಿಸ್ ನೀಡದೇ ಮನೆಯನ್ನು ತೆರವುಗೊಳಿಸಬಾರದು’ ಎಂದು ಬಿಬಿಎಂಪಿಗೆ ನಿರ್ದೇಶಿಸಿದೆ.

‘ರಾಜಕಾಲುವೆ ಜಾಗವನ್ನು ಒತ್ತುವರಿ ಮಾಡಿ ಮನೆ ನಿರ್ಮಿಸಲಾಗಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಬಿಬಿಎಂಪಿ ನಮ್ಮ ಮನೆಯನ್ನು ತೆರವುಗೊಳಿಸುವ ಆತಂಕ ಇದೆ‘ ಎಂದು ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ವಿಚಾರಣೆಯನ್ನು ಇದೇ 16ಕ್ಕೆ ಮುಂದೂಡಲಾಗಿದೆ.

ಒತ್ತುವರಿ: ಮಹದೇವಪುರ ಕ್ಷೇತ್ರದಲ್ಲಿ ಜೆಸಿಬಿಗಳದ್ದೇ ಸದ್ದು

ನೆಲೆ ಕಳೆದುಕೊಳ್ಳುವ ಭೀತಿ, ಬರೀ ಕಣ್ಣೀರು

• ಶಿವರಾಜ್ ಮೌರ್ಯ

ಕೆ.ಆರ್.ಪುರ: ಮಹದೇವಪುರ ಕ್ಷೇತ್ರದ ಎಲ್ಲೆಡೆ ಒತ್ತುವರಿ ವಿಚಾರವಾಗಿ ಜೆಸಿಬಿಗಳದ್ದೇ ಸದ್ದು. ಕೆಲವರಿಗೆ ಮನೆ ಕಳೆದುಕೊಳ್ಳುವ ಭೀತಿ, ದುಗುಡ. ಇನ್ನು ಕೆಲವರು ಒತ್ತುವರಿ ತೆರವಿನಿಂದ ಪ್ರವಾಹದಿಂದ ಮುಕ್ತಿ ಸಿಗಲಿದೆ ಎಂಬ ನೆಮ್ಮದಿಯ ನಿಟ್ಟುಸಿರು ಬಿಡುತ್ತಿದ್ದಾರೆ. ಮತ್ತೊಂದೆಡೆ ಒತ್ತುವರಿ ತೆರವಿನಿಂದಾಗಿ ಸರ್ಕಾರಕ್ಕೆ ಹಿಡಿಶಾಪ ಹಾಕುತ್ತಿರುವ ಬಡವರು ಇದ್ದಾರೆ.

ಮಹದೇವಪುರದ ಕ್ಷೇತ್ರದ ವ್ಯಾಪ್ತಿಯಲ್ಲಿ ಮಳೆಯಿಂದ ಪ್ರವಾಹಕ್ಕೆ ಕಾರಣವಾದ ಹಲವು ಜಾಗಗಳಲ್ಲಿ ಬಿಬಿಎಂಪಿ ತೆರವು ಕಾರ್ಯಾಚರಣೆ ಕೈಗೊಂಡಿದೆ.

ಬಡವರ ಮನೆಗಳನ್ನು ಗುರಿಯಾಗಿಸಿ ಒತ್ತುವರಿ ತೆರವು ಮಾಡಲಾಗುತ್ತದೆ ಎಂದು ನಿವಾಸಿಗಳು ಅಳಲು ತೋಡಿಕೊಂಡರು. ಸಾಲ ಮಾಡಿ ಮನೆ ಕಟ್ಟಿಕೊಂಡಿದ್ದು, ಈಗ ಮನೆಯೂ ಇಲ್ಲದೇ ಎಲ್ಲಿಗೆ ಹೋಗಬೇಕು ಎಂದು ಕಣ್ಣೀರು ಸುರಿಸಿದರು.

ಎಇಸಿಎಸ್ ಬಡಾವಣೆಯಲ್ಲಿ ಒತ್ತುವರಿ ತೆರವಿಗೆ ಗುರುತು ಮಾಡಲಾದ ಮನೆಯ ಕಾಂಪೌಂಡ್ ಒಡೆಯಲಾಗಿದೆ.

ಎಇಸಿಎಸ್ ಬಡಾವಣೆಯ ಚಿನ್ನಪ್ಪನಹಳ್ಳಿ ಕೆರೆಯಿಂದ ಮುನ್ನೆಕೊಳಲು ಕೆರೆಗೆ ಸಂಪರ್ಕ ಕಲ್ಪಿಸುವ ರಾಜಕಾಲುವೆ ಒತ್ತುವರಿ ಆಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಗುರುತು ಮಾಡಿ ಮನೆ, ವಾಣಿಜ್ಯ ಕಟ್ಟಡಗಳನ್ನು ಒಡೆಯಲು ನಿಂತಿದ್ದಾರೆ. ಕಾಂಪೌಂಡ್ ಒಡೆದು ಹಾಕಲಾಗಿದೆ. ಉಳಿದ ಕಟ್ಟಡಗಳನ್ನು ಒಂದು ವಾರದೊಳಗೆ ತೆರವು ಮಾಡುವಂತೆ ಮನೆ ಮಾಲೀಕರಿಗೆ ಸೂಚನೆ ನೀಡಲಾಗಿದೆ. 20ಕ್ಕೂ ಹೆಚ್ಚು ಮನೆಗಳನ್ನು ಒತ್ತುವರಿ ತೆರವಿಗಾಗಿ ಗುರುತು ಮಾಡಲಾಗಿದೆ.

ಸುಜೀತ್ ಜೈನ್

ರೇಣು

’12 ವರ್ಷಗಳ ಹಿಂದೆ ನಿವೇಶನ ತೆಗೆದುಕೊಂಡು ಮನೆ ಕಟ್ಟಿಸಿದಾಗ ಇಲ್ಲಿ ಯಾವುದೇ ರೀತಿಯ ರಾಜಕಾಲುವೆ ಇರಲಿಲ್ಲ. ಸೂಕ್ತ ದಾಖಲೆಯನ್ನು ಹೊಂದಿ ನಿವೇಶನ ಖರೀದಿ ಮಾಡಲಾಗಿತ್ತು. ಸರ್ಕಾರಕ್ಕೆ ತೆರಿಗೆಯನ್ನು ಕಾಲಕಾಲಕ್ಕೆ ಪಾವತಿಸುತ್ತಾ ಬರುತ್ತಿದ್ದೇವೆ. ಸರ್ಕಾರದಿಂದ ಸರ್ವೆ ಮಾಡಿಸಿ ಮನೆ ತೆಗೆದುಕೊಂಡಿದ್ದರೂ ಈಗ ಏಕಾಏಕಿ ನಮ್ಮ ಮನೆಯ ಜಾಗ ಒತ್ತುವರಿ ಆಗಿದೆ ಯೆಂದು ಹೇಳುತ್ತಿದ್ದಾರೆ’ ಎಂದು ಎಇಸಿಎಸ್ ಬಡಾವಣೆ ನಿವಾಸಿ ರೇಣು ಅಳಲು ತೋಡಿಕೊಂಡರು.

‘ಎಲ್ಲಾ ಸರ್ಕಾರಿ ದಾಖಲೆಗಳನ್ನು ಸಂಗ್ರಹಿಸಿದ್ದೇನೆ. ಕಾವೇರಿ ನೀರು ಸರಬರಾಜು ಸಂಪರ್ಕದಿಂದ ಹಿಡಿದು ಯೋಜನಾ ನಕ್ಷೆಯವರೆಗೂ ಕಾನೂನು ಪ್ರಕಾರ ದಾಖಲೆ ಹೊಂದಿ ದ್ದೇನೆ. ಯಾವುದೇ ರೀತಿಯಲ್ಲಿ ರಾಜ ಕಾಲುವೆ ಒತ್ತುವರಿ ಮಾಡಿಕೊಂಡಿಲ್ಲ ವಾದರೂ ನಮ್ಮ ಮನೆಯನ್ನು ಒಡೆದಿದ್ದಾರೆ’ ಎಂದು ಒತ್ತುವರಿ ತೆರವಿಗೆ ಮನೆ ಕಳೆದುಕೊಂಡ ನಿವಾಸಿ ಸುಜೀತ್ ಜೈನ್ ಆರೋಪಿಸಿದರು.

‘ಸೋಮವಾರ ಇದ್ದಕ್ಕಿದ್ದಂತೆ ಐವತ್ತು ಪೊಲೀಸರೊಂದಿಗೆ ಬಂದು ಜೆಸಿಬಿಯಿಂದ ಮನೆ ತೆರವು ಮಾಡಿದ್ದಾರೆ. ಮನೆ ಒಡೆಯಲು ಸರ್ಕಾರದ ಯಾವುದಾದರೂ ಆದೇಶ ಪತ್ರ ತೋರಿಸುವಂತೆ ಕೋರಿದರೂ ತೋರಿಸಿದೆ ಮನೆ ಒಡೆದು ಹೋಗಿದ್ದಾರೆ. ಇದನ್ನು ಪ್ರಶ್ನಿಸಿ ಕೋರ್ಟ್‌ಗೆ ಹೋಗುತ್ತೇನೆ’ ಎಂದು ಅವರು ಹೇಳಿದರು.

ಸ್ಪರ್ಧಾ ವಾಣಿ

'ಎಸ್‌ಬಿಐ'ಗೆ ಬೇಕು 5,008 ಜೂನಿಯರ್ ಅಸೋಸಿಯೇಟ್ಸ್

ಭಾರತೀಯ ಸ್ಟೇಟ್ ಬ್ಯಾಂಕ್ 5008 ಜೂನಿಯರ್ ಅಸೋಸಿಯೇಟ್ಸ್ ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಿದೆ. ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇಮಕಾತಿ ನಡೆಯಲಿದೆ. ಅರ್ಜಿ ಸಲ್ಲಿಕೆ ಮತ್ತು ಪರೀಕ್ಷೆ ಪ್ರಕ್ರಿಯೆ ಕುರಿತ ವಿವರ ಇಲ್ಲಿದೆ.

ಬಾಲಚಂದ್ರ ಕೆ.ಆರ್

ಬ್ಯಾಂಕಿಂಗ್ ಪರೀಕ್ಷೆ

ದೇಶದ ಅತ್ಯಂತ ದೊಡ್ಡ ಬ್ಯಾಂಕುಗಳಲ್ಲಿ ಒಂದಾದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ದೇಶದಾದ್ಯಂತ ವಿವಿಧ ಶಾಖೆಗಳಲ್ಲಿ ಅಗತ್ಯವಿರುವ 5,008 ಜೂನಿಯರ್ ಅಸೋಸಿಯೇಟ್ ಹುದ್ದೆಗಳ ನೇಮಕಕ್ಕೆ ಅಧಿಸೂಚನೆ ಹೊರಡಿಸಿದೆ.

ಕರ್ನಾಟಕದಲ್ಲಿ 316 ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾಗುತ್ತದೆ. ಪರಿಶಿಷ್ಟ ಜಾತಿಯವರಿಗೆ 51, ಪರಿಶಿಷ್ಟ ಪಂಗಡದವರಿಗೆ 22, ಹಿಂದುಳಿದ ವರ್ಗದವರಿಗೆ 85, ಸಾಮಾನ್ಯ ವರ್ಗದವರಿಗೆ 127, ಆರ್ಥಿಕವಾಗಿ ಹಿಂದುಳಿದವರಿಗೆ 31 ಹುದ್ದೆಗಳು ಮೀಸಲಾಗಿವೆ.

ಈಗಾಗಲೇ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಕೆ ಆರಂಭವಾಗಿದ್ದು, ಸೆಪ್ಟೆಂಬರ್ 27 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ.

ಕನ್ನಡದಲ್ಲಿಯೇ ಪರೀಕ್ಷೆ

ರಾಜ್ಯದ ಅಭ್ಯರ್ಥಿಗಳು ಕನ್ನಡದಲ್ಲಿಯೇ ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆ ಬರೆಯುವ ಅವಕಾಶವನ್ನು ಭಾರತೀಯ ಸ್ಟೇಟ್ ಬ್ಯಾಂಕ್ ಕಲ್ಪಿಸಿದೆ. ಕಳೆದ ಬಾರಿಯಂತೆಯೇ ನೇಮಕ ಪ್ರಕ್ರಿಯೆಯ ಭಾಗವಾಗಿ ಸ್ಥಳೀಯ ಭಾಷಾ ಪರೀಕ್ಷೆಯನ್ನೂ ನಡೆಸಲಿದೆ. ಕರ್ನಾಟಕದ ಅಭ್ಯರ್ಥಿಗಳು ಇಂಗ್ಲಿಷ್, ಹಿಂದಿ ಮತ್ತು ಕನ್ನಡ ಇವುಗಳಲ್ಲಿ ಯಾವುದಾದರೊಂದು ಭಾಷೆಯನ್ನು ಆಯ್ದುಕೊಂಡು ಪರೀಕ್ಷೆ ಬರೆಯಬಹುದು. ಈ ಆಯ್ಕೆ ಅಭ್ಯರ್ಥಿಗಳಿಗೆ ಬಿಟ್ಟಿದ್ದು, ಇಂಗ್ಲಿಷ್ ಭಾಷಾ ಪರೀಕ್ಷೆಯನ್ನು ಮಾತ್ರ ಇಂಗ್ಲಿಷ್ ಭಾಷೆಯಲ್ಲಿಯೇ ಬರೆಯಬೇಕಾಗುತ್ತದೆ. ಇದರಲ್ಲಿ ನೇಮಕ ಪ್ರಕ್ರಿಯೆಯ ಭಾಗವಾಗಿ ಸ್ಥಳೀಯ ಭಾಷಾ ಪರೀಕ್ಷೆಯನ್ನೂ ನಡೆಸಲಾಗುತ್ತಿದೆ. ಎಸ್ಸೆಸ್ಸೆಲ್ಸಿ ಅಥವಾ ಪಿಯುಸಿಯಲ್ಲಿ ಕನ್ನಡ ಭಾಷೆಯಲ್ಲಿ ಓದಿರುವ ಅಭ್ಯರ್ಥಿಗಳಿಗೆ ಸ್ಥಳೀಯ ಭಾಷಾ ಪರೀಕ್ಷೆ ನಡೆಸಲಾಗುವುದಿಲ್ಲ.

ನೆನಪಿರಲಿ: ಈಗಾಗಲೇ ಎಸ್‌ಬಿಐ ಕ್ಲರಿಕಲ್ ಕೇಡರ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವವರು ಅರ್ಜಿ ಸಲ್ಲಿಸಲು ಅವಕಾಶವಿಲ್ಲ.

ಗಮನಿಸಿ

ಅರ್ಜಿ ಸಲ್ಲಿಸುವ ಮುನ್ನ ಅಭ್ಯರ್ಥಿಗಳು ಸಂಪೂರ್ಣವಾಗಿ ಅಧಿಸೂಚನೆ ಓದಿಕೊಳ್ಳಬೇಕು. ನೇಮಕಾತಿಗೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿಯನ್ನು ಎಸ್‌ಬಿಐ ತನ್ನ ವೆಬ್‌ಸೈಟ್‌ನಲ್ಲೇ ಪ್ರಕಟಿಸುತ್ತದೆ.

ನೆನಪಿಡಿ: ಒಬಿಸಿ ವರ್ಗಕ್ಕೆ ಸೇರಿದ ಆದರೆ ಕೆನೆ ಪದರದ ಅಡಿಯಲ್ಲಿ ಬರುವ ಅಭ್ಯರ್ಥಿಗಳು ಒಬಿಸಿ ಮೀಸಲಾತಿಗೆ ಅರ್ಹರಾಗಿರುವುದಿಲ್ಲ. ಅವರು ಅರ್ಜಿಯಲ್ಲಿ ತಮ್ಮ ವರ್ಗವನ್ನು 'ಸಾಮಾನ್ಯ' ಎಂದು ಸೂಚಿಸಬೇಕು. ಅಭ್ಯರ್ಥಿಯು ಕಾಲಕಾಲಕ್ಕೆ ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ಕೆನೆರಹಿತ ಪದರ (Non creamy layer) ಷರತ್ತಿನೊಂದಿಗೆ OBC ಪ್ರಮಾಣಪತ್ರವನ್ನು ಹೊಂದಿರಬೇಕು.

ಪೂರ್ವಭಾವಿ ಪರೀಕ್ಷೆಗೆ ತರಬೇತಿ

ಎಸ್.ಸಿ/ಎಸ್.ಟಿ/ಇ ಎಸ್ ಎಮ್ ಹಾಗೂ ಧಾರ್ಮಿಕ ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ ಬ್ಯಾಂಕ್ ವತಿಯಿಂದ ಉಚಿತ ಪರೀಕ್ಷಾ ತರಬೇತಿ ನೀಡಲಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಅರ್ಜಿ ಸಲ್ಲಿಸುವಾಗಲೇ ಅಭ್ಯರ್ಥಿಗಳು ಕೋರಿಕೆ ಸಲ್ಲಿಸಬೇಕಾಗುತ್ತದೆ. ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆಗೆ ನಿಗದಿಪಡಿಸಿದ ಕೇಂದ್ರಗಳಲ್ಲಿಯೇ ಉಚಿತ ಪರೀಕ್ಷಾ ತರಬೇತಿಯನ್ನೂ ನೀಡಲಾಗುತ್ತದೆ.

ಈ ಉಚಿತ ಪರೀಕ್ಷಾ ತರಬೇತಿ ಪಡೆಯುವ ಅಭ್ಯರ್ಥಿಗಳಿಗೆ ಅಕ್ಟೋಬರ್ 20ರ ನಂತರ ಪ್ರವೇಶಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ನೀಡಲಾಗುತ್ತದೆ. ಅಭ್ಯರ್ಥಿಗಳಿಗೆ ಮುದ್ರಿತ ಪ್ರವೇಶಪತ್ರ ಕಳಿಸಲಾಗುವುದಿಲ್ಲ ಎಂದು ಬ್ಯಾಂಕ್ ತನ್ನ ಅಧಿಸೂಚನೆಯಲ್ಲಿ ತಿಳಿಸಿದೆ.

ರಾಜ್ಯದಲ್ಲಿ ಎಲ್ಲೆಲ್ಲಿ ?

ರಾಜ್ಯದ 12 ಜಿಲ್ಲಾ ಕೇಂದ್ರಗಳಲ್ಲಿ ಪೂರ್ವಭಾವಿ/ಮುಖ್ಯ/ ಉಚಿತ ತರಬೇತಿ ಪರೀಕ್ಷಾ ಕೇಂದ್ರಗಳಿವೆ. ಅವುಗಳೆಂದರೆ, ಬೆಂಗಳೂರು, ಬಳ್ಳಾರಿ, ಬೆಳಗಾವಿ, ದಾವಣಗೆರೆ, ಕಲಬುರಗಿ,ಹಾಸನ, ಹುಬ್ಬಳ್ಳಿ- ಧಾರವಾಡ, ಮಂಡ್ಯ,ಮಂಗಳೂರು, ಮೈಸೂರು,ಶಿವಮೊಗ್ಗ ಮತ್ತು ಉಡುಪಿ.

ವಿದ್ಯಾರ್ಹತೆ

ಅಂಗೀಕೃತ ವಿಶ್ವವಿದ್ಯಾಲಯದಿಂದ ಯಾವುದೇ ವಿಷಯದಲ್ಲಿ ಪದವಿ ಪಡೆದವರು ಅರ್ಜಿ ಸಲ್ಲಿಸಬಹುದು. ಪದವಿ ಅಂತಿಮ ವರ್ಷ/ಸೆಮಿಸ್ಟರ್ ನಲ್ಲಿರುವವರು ಅರ್ಜಿ ಸಲ್ಲಿಸಬಹುದು. ಒಂದು ವೇಳೆ ಆಯ್ಕೆಯಾದಲ್ಲಿ, ಅವರು 30ನೇ ನವೆಂಬರ್ 2022 ಅಥವಾ ಅದಕ್ಕಿಂತ ಮೊದಲು ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವುದಕ್ಕೆ ಪುರಾವೆಗಳನ್ನು ಒದಗಿಸಬೇಕು. ಇಂಟಿಗ್ರೇಟೆಡ್ ಡ್ಯುಯಲ್ ಡಿಗ್ರಿ (ಐಡಿಡಿ) ಪ್ರಮಾಣಪತ್ರ ಹೊಂದಿರುವ ಅಭ್ಯರ್ಥಿಗಳು ಐಡಿಡಿ ಉತ್ತೀರ್ಣರಾದ ದಿನಾಂಕ 30 ನವೆಂಬರ್ 2022 ಅಥವಾ ಅದಕ್ಕಿಂತ ಮುಂಚೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

ವಯೋಮಿತಿ

ಕನಿಷ್ಠ (01.08.2022 ಕ್ಕೆ ಅನ್ವಯವಾಗುವಂತೆ) 20 ವರ್ಷ ಹಾಗೂ ಗರಿಷ್ಠ ವಯೋಮಿತಿ 28 ವರ್ಷ ನಿಗದಿಪಡಿಸಲಾಗಿದೆ. ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ ಮತ್ತು ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ 3 ವರ್ಷ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗಿದೆ.

ಅರ್ಜಿ ಶುಲ್ಕ

ಸಾಮಾನ್ಯ, ಆರ್ಥಿಕ ದುರ್ಬಲ ವರ್ಗ ಹಾಗೂ ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ಇಂಟಿಮೇಷನ್ ಶುಲ್ಕ ಸೇರಿ ಒಟ್ಟು ₹750 ಅರ್ಜಿ ಶುಲ್ಕ ಪಾವತಿಸಬೇಕು. ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳು/ ಅಂಗವಿಕಲ ಅಭ್ಯರ್ಥಿಗಳು ಮತ್ತು ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಸಂಪೂರ್ಣ ಶುಲ್ಕ ವಿನಾಯತಿ ನೀಡಲಾಗಿದೆ. ನೋಂದಣಿ ನಂತರ ಅಭ್ಯರ್ಥಿಗಳು ಅರ್ಜಿ ಶುಲ್ಕವನ್ನು ಡೆಬಿಟ್ ಕಾರ್ಡ್/ ಕ್ರೆಡಿಟ್ ಕಾರ್ಡ್/ ಇಂಟರ್ನೆಟ್ ಬ್ಯಾಂಕಿಂಗ್ ಬಳಸಿ ಪಾವತಿಸಬೇಕಾಗುತ್ತದೆ.

ಪರೀಕ್ಷಾ ಪ್ರಕ್ರಿಯೆ

- **ಮೊದಲ ಹಂತ:** ಆನ್‌ಲೈನ್ ಪೂರ್ವಭಾವಿ ಪರೀಕ್ಷೆ- ನವೆಂಬರ್, 2022
- **ಎರಡನೇ ಹಂತ:** ಆನ್‌ಲೈನ್ ಮುಖ್ಯ ಪರೀಕ್ಷೆ- ಡಿಸೆಂಬರ್ 2022 / ಜನವರಿ, 2023

ಪರೀಕ್ಷೆ ಹೀಗಿರುತ್ತದೆ

ಪೂರ್ವಭಾವಿ ಪರೀಕ್ಷೆ ಒಂದು ಗಂಟೆಗಳ ಕಾಲ ನಡೆಯಲಿದ್ದು,(ಪ್ರತಿ ಪತ್ರಿಕೆಗೂ 20 ನಿಮಿಷಗಳಂತೆ ಒಟ್ಟಾರೆ 60 ನಿಮಿಷಗಳು) 100 ಅಂಕಗಳಿಗೆ ನೂರು ಪ್ರಶ್ನೆಗಳನ್ನು ಕೇಳಲಾಗುತ್ತದೆ (ಅಂದರೆ ಪ್ರತಿ ಪ್ರಶ್ನೆಗೆ ಒಂದೊಂದು ಅಂಕ ನಿಗದಿಯಾಗಿರುತ್ತದೆ). ಇದರಲ್ಲಿ ಇಂಗ್ಲಿಷ್ ಭಾಷಾ ಪತ್ರಿಕೆಯ 30, ನ್ಯೂಮರಿಕಲ್ ಎಬಿಲಿಟಿ ವಿಷಯದ 35 ಹಾಗೂ ರೀಸನಿಂಗ್ ಎಬಿಲಿಟಿಯ 35 ಪ್ರಶ್ನೆಗಳಿರಲಿವೆ. ಪ್ರತಿ ಪರೀಕ್ಷೆಯಲ್ಲೂ ಕನಿಷ್ಟ ಅಂಕ ಗಳಿಸಬೇಕೆಂಬ ನಿಯಮವಿಲ್ಲ.ಅದರೆ ಒಟ್ಟಾರೆ ಹೆಚ್ಚು ಅಂಕ ಗಳಿಸುವುದು ಮುಖ್ಯ.(ಆಯಾ ವರ್ಗಗಳಿಗೆ ಇರುವ ಹುದ್ದೆಗಳ ಸಂಖ್ಯೆಗಿಂತ 10 ಪಟ್ಟು ಹೆಚ್ಚು ಅಭ್ಯರ್ಥಿಗಳನ್ನ ಮುಖ್ಯ ಪರೀಕ್ಷೆಗೆ ಆಯ್ಕೆ ಮಾಡಲಾಗುತ್ತದೆ. ಅಂದರೆ 1:10 ಅನುಪಾತದಲ್ಲಿ ಆಯ್ಕೆ ಮಾಡಲಾಗುತ್ತದೆ)

ಈ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಮುಂದಿನ ಹಂತದ ಅಂದರೆ ಮುಖ್ಯ ಪರೀಕ್ಷೆಗೆ ಅರ್ಹತೆ ಪಡೆಯುತ್ತಾರೆ. ಮುಖ್ಯ ಪರೀಕ್ಷೆಯು ನಿಗದಿತ ದಿನದಂದು ಆನ್‌ಲೈನ್‌ನಲ್ಲಿಯೇ ನಡೆಯಲಿದೆ. ಮುಖ್ಯ ಪರೀಕ್ಷೆಯು 2 ಗಂಟೆ 40 ನಿಮಿಷಗಳ ಕಾಲಾವಧಿಯಲ್ಲಿ ನಡೆಯಲಿದೆ. ಪರೀಕ್ಷೆಯಲ್ಲಿ 200 ಅಂಕಗಳಿಗೆ 190 ಪ್ರಶ್ನೆಗಳನ್ನು ಕೇಳಲಾಗುತ್ತದೆ.

ಪತ್ರಿಕೆ	ವಿಷಯ	ಪ್ರಶ್ನೆಗಳು	ಅಂಕಗಳು	ಅವಧಿ(ನಿ.)
I	ರೀಸನಿಂಗ್ ಮತ್ತು ಕಂಪ್ಯೂಟರ್‌ಆಪ್ಟಿಟ್ಯೂಡ್	50	60	45
II	ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್	50	50	45
III	ಜನರಲ್ / ಫೈನಾನ್ಷಿಯಲ್ ಅವೇರ್‌ನೆಸ್	50	50	35
IV	ಇಂಗ್ಲಿಷ್ ಭಾಷಾ ಪತ್ರಿಕೆ	40	40	35

ಇಂಗ್ಲಿಷ್ ಭಾಷೆ ಒಂದನ್ನು ಹೊರತುಪಡಿಸಿ ಮತ್ತೆಲ್ಲಾ ಪ್ರಶ್ನೆಗಳು ಕನ್ನಡ, ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಇರುತ್ತವೆ. ತಪ್ಪು ಉತ್ತರ ಗುರುತಿಸಿದಲ್ಲಿ, ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಳಲ್ಲಿ ಆಯಾ ವಿಷಯಕ್ಕೆ ಪ್ರತಿ ಪ್ರಶ್ನೆಗೆ ನಿಗದಿ ಪಡಿಸಿದ ಅಂಕದ 0.25 ಅಂಕವನ್ನು ಋಣಾತ್ಮಕ ಮೌಲ್ಯಮಾಪನದ ನಿಯಮದಂತೆ ಗಳಿಸಿದ ಅಂಕದಿಂದ ಕಳೆಯಲಾಗುತ್ತದೆ.

ವೇತನ: ₹17900 ರಿಂದ ₹ 47920 (ವೇತನ 17900 + ಪದವಿ ಪೂರ್ಣ ಗೊಳಿಸಿದ ಅಭ್ಯರ್ಥಿಗಳಿಗೆ ಎರಡು ಹೆಚ್ಚುವರಿ ಇನ್‌ಕ್ರಿಮೆಂಟ್)

ಹೆಚ್ಚಿನ ಮಾಹಿತಿಗಾಗಿ:022-22820427

ವಿವರ ಹಾಗೂ ಅರ್ಜಿ ಸಲ್ಲಿಸಲು ವೆಬ್ ಲಿಂಕ್:
https://bank.sbi/careers
https://www.sbi.co.in/careers

(ಮುಂದಿನ ವಾರ: ಬ್ಯಾಂಕಿಂಗ್ ನೇಮಕದ ಆಯ್ಕೆ ಪ್ರಕ್ರಿಯೆ ಮತ್ತು ಹೊಸ ನಿಯಮಗಳ ಕುರಿತ ವಿವರ)

(ಲೇಖಕರು: ಬ್ಯಾಂಕಿಂಗ್ ತರಬೇತುದಾರರು ಹಾಗೂ ವ್ಯಕ್ತಿತ್ವ ವಿಕಸನ ತರಬೇತುದಾರರು ಮತ್ತು ವೃತ್ತಿ ಮಾರ್ಗದರ್ಶಕರು.ಮಡಿಕೇರಿ)

ಪಾರಂಪರಿಕ ಜ್ಞಾನದ ಡಿಜಿಟಲ್ ಲೈಬ್ರರಿ

ಯು.ಟಿ. ಆಯಿಶ ಫರ್ಝಾನ

ಇತ್ತೀಚೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಭಾರತದ ಸಾಂಪ್ರದಾಯಿಕ ಅಥವಾ ಪಾರಂಪರಿಕ ಜ್ಞಾನದ ಡಿಜಿಟಲ್ ಲೈಬ್ರರಿಗಳ(Traditional Knowledge Digital Library-TKDL) ಡೇಟಾಬೇಸ್ ಉಪಯೋಗಿಸಲು ಪೇಟೆಂಟ್ ಕಚೇರಿಗಳ ಜೊತೆಗೆ ಸಾಮಾನ್ಯ ಜನರಿಗೂ ಅನುಮತಿ ನೀಡಲಾಯಿತು.

ಪಾರಂಪರಿಕ ಜ್ಞಾನ ಡಿಜಿಟಲ್ ಲೈಬ್ರರಿ(ಟಿಕೆಡಿಎಲ್):

- ಇದು 2001ರಲ್ಲಿ, ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ (CSIR) ಹಾಗೂ ಇಂಡಿಯನ್ ಸಿಸ್ಟಮ್ಸ್ ಆಫ್ ಮೆಡಿಸಿನ್ ಮತ್ತು ಹೋಮಿಯೋಪತಿ ಇಲಾಖೆಯು(ಈಗ ಆಯುಷ್ ಸಚಿವಾಲಯ) ಜಂಟಿಯಾಗಿ ಸ್ಥಾಪಿಸಿದ ಭಾರತೀಯ ಪಾರಂಪರಿಕ ಜ್ಞಾನದ ಡೇಟಾಬೇಸ್.
- ಜಾಗತಿಕವಾಗಿ ಇದೇ ಮೊದಲ ಬಾರಿಗೆ ಇಂಥದ್ದೊಂದು ವಿಶಿಷ್ಟ ಪ್ರಯೋಗ ನಡೆದಿದೆ. ಇದು ಇತರ ರಾಷ್ಟ್ರಗಳಿಗೆ ಮಾದರಿಯಾಗಿದೆ. ಟಿಕೆಡಿಎಲ್, ಪ್ರಸ್ತುತ ಆಯುರ್ವೇದ, ಯುನಾನಿ, ಸಿದ್ಧ, ಸೋವಾ ರಿಗ್ಪಾ ಮತ್ತು ಯೋಗದಂತಹ ಭಾರತೀಯ ವೈದ್ಯಕೀಯ ಪದ್ಧತಿಗಳಿಗೆ ಸಂಬಂಧಿಸಿದಂತೆ ದೊರಕಿರುವ ಬರಹಗಳು ಮತ್ತು ದಾಖಲೆಗಳ ಮಾಹಿತಿಯನ್ನು ಒಳಗೊಂಡಿದೆ.
- ಇಂಗ್ಲಿಷ್, ಜರ್ಮನ್, ಫ್ರೆಂಚ್, ಜಪಾನೀಸ್ ಮತ್ತು ಸ್ಪ್ಯಾನಿಷ್ ಮುಂತಾದ ಐದು ಅಂತರರಾಷ್ಟ್ರೀಯ ಭಾಷೆಗಳಲ್ಲಿ ಡಿಜಿಟಲ್ ರೂಪದಲ್ಲಿ ಈ ಮಾಹಿತಿಗಳನ್ನು ದಾಖಲಿಸಲಾಗಿದೆ.
- ಸುಳ್ಳು ಪೇಟೆಂಟ್‌ಗಳನ್ನು ತಡೆಯಲು, ವಿಶ್ವದಾದ್ಯಂತ ಇರುವ ಪೇಟೆಂಟ್ ಪರೀಕ್ಷಕರಿಗೆ ಅರ್ಥವಾಗುವ ರೀತಿಯ ಭಾಷೆ ಮತ್ತು ವಿಧಾನದಲ್ಲಿ ಮಾಹಿತಿಗಳನ್ನು ವಿವರಿಸಲಾಗಿದೆ.
- ಇಲ್ಲಿಯವರೆಗೆ ತಪಾಸಣೆ(ಪರೀಕ್ಷೆಯ)ಯಂತಹ ಉದ್ದೇಶಗಳಿಗಾಗಿ ಟಿಕೆಡಿಎಲ್ ಡೇಟಾಬೇಸ್ ಬಳಸಲು ವಿಶ್ವದಾದ್ಯಂತ 14 ಪೇಟೆಂಟ್ ಕಚೇರಿಗಳಿಗೆ ಮಾತ್ರ ಅವಕಾಶ ನೀಡಲಾಗಿತ್ತು.
- ಪಾರಂಪರಿಕ ಜ್ಞಾನ ಡಿಜಿಟಲ್ ಲೈಬ್ರರಿಯ ಈ ರಕ್ಷಣಾತ್ಮಕ ಹೆಜ್ಜೆಯು ಭಾರತೀಯ ಸಾಂಪ್ರದಾಯಿಕ ಜ್ಞಾನದ ದುರ್ಬಳಕೆಗೆ ಅವಕಾಶ ನೀಡದಂತೆ ತಡೆಯುತ್ತದೆ. ಹಾಗೆಯೇ, ಇದನ್ನು ಜಾಗತಿಕ ಮಾನದಂಡವೆಂದು ಪರಿಗಣಿಸಲಾಗಿದೆ.

ಉದ್ದೇಶಿತ ಪ್ರಯೋಜನಗಳು :

- ಟಿಕೆಡಿಎಲ್, ಮಾಹಿತಿಯ ಪ್ರಮುಖ ಮೂಲವಾಗಿದೆ. ಈಗ ಪೇಟೆಂಟ್ ಕಚೇರಿಗಳನ್ನು ಮೀರಿ ಡೇಟಾಬೇಸ್‌ನ ಪ್ರವೇಶವನ್ನು ಸಾಮಾನ್ಯರಿಗೂ ವಿಸ್ತರಿಸಲು ಅನುಮೋದನೆ ದೊರೆತಿರುವುದರಿಂದ, ಪಾರಂಪರಿಕ ಜ್ಞಾನದ ಅತ್ಯುನ್ನತ ಬಳಕೆಗೆ ಅವಕಾಶವಾಗಬಹುದು.
- ಈ ಲೈಬ್ರರಿಯು, ಪ್ರಸ್ತುತ ವೈದ್ಯಕೀಯ ಲೋಕದಲ್ಲಿ ಭಾರತೀಯ ಪಾರಂಪರಿಕ ಚಿಕಿತ್ಸಾ ಪದ್ಧತಿಗಳನ್ನು ವ್ಯಾಪಕವಾಗಿ ಅಳವಡಿಸಲು ಅನುಕೂಲವಾಗುವಂತೆ ಮಾಡುತ್ತದೆ. ಹಾಗೆಯೇ ಪಾರಂಪರಿಕ ಜ್ಞಾನದ ಆಧಾರದ ಮೇಲೆ, ಲಾಭದಾಯಕವಾಗಿ ಉದ್ದಿಮೆಗಳನ್ನು ಕಟ್ಟಲು ಹೊಸ ಉತ್ಪಾದಕರು ಮತ್ತು ಅನ್ವೇಷಕರನ್ನು ಪ್ರೇರೇಪಿಸುತ್ತದೆ.
- ಈ ಡಿಜಿಟಲ್ ಗ್ರಂಥಾಲಯ, ಗಿಡಮೂಲಿಕೆ, ಆರೋಗ್ಯ ರಕ್ಷಣೆ ,ಆಯುಷ್, ಫಾರ್ಮಾಸ್ಯುಟಿಕಲ್ಸ್, ಫೈಟೊಫಾರ್ಮಾಸ್ಯುಟಿಕಲ್ಸ್, ಮತ್ತು ನ್ಯೂಟ್ರಾಸ್ಯುಟಿಕಲ್ಸ್ ಕ್ಷೇತ್ರದ ವ್ಯಾಪಾರ ಮತ್ತು ಕಂಪನಿಗಳಿಗೆ ಒತ್ತಾಸೆಯಾಗಿ ನಿಲ್ಲುತ್ತದೆ.
- ಸಂಶೋಧನಾ ಸಂಸ್ಥೆಗಳು, ಸಾರ್ವಜನಿಕ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳು, ಶಿಕ್ಷಣತಜ್ಞರು ಮತ್ತು ವಿದ್ಯಾರ್ಥಿಗಳು, ಪೇಟೆಂಟ್‌ದಾರರು ಮತ್ತು ಅವರ ಕಾನೂನು ಪ್ರತಿನಿಧಿಗಳು ಮತ್ತು ಸರ್ಕಾರ ಹಾಗೂ ಇತರ ಹಲವಾರು ಬಳಕೆದಾರರಿಗೆ ಉತ್ತಮ ಮಾಹಿತಿಯ ಆಕರವಾಗುತ್ತದೆ.
- ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಬಳಕೆದಾರರು ಟಿಕೆಡಿಎಲ್ ಡೇಟಾಬೇಸ್ ಬಳಕೆಗಾಗಿ ಚಂದಾ ಹಣವನ್ನು ಪಾವತಿಸಬೇಕಾಗಿರುತ್ತದೆ

ಯುಪಿಎಸ್‌ಸಿ-ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-3, ಕೆಪಿಎಸ್‌ಸಿ- ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-3 ಸೇರಿದಂತೆ ಎಲ್ಲಾ ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ವಿದ್ಯಮಾನವೊಂದರ ಕುರಿತಮಾಹಿತಿ ಇಲ್ಲಿದೆ.

ಪಾರಂಪರಿಕ ಜ್ಞಾನದ ಮಹತ್ವ

- ಭಾರತೀಯ ಪಾರಂಪರಿಕ ಜ್ಞಾನವು, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿನ ಅಗತ್ಯಗಳನ್ನು ಪೂರೈಸುವಂತಹ ಸಾಮರ್ಥ್ಯ ಹೊಂದಿದೆ. ಉದಾಹರಣೆಗೆ, ಆಯುರ್ವೇದ, ಸಿದ್ಧ, ಯುನಾನಿ, ಸೋವಾ ರಿಗ್ಪಾ ಮತ್ತು ಯೋಗದಂತಹ ನಮ್ಮ ದೇಶದ ಸಾಂಪ್ರದಾಯಿಕ ಔಷಧ ಹಾಗೂ ಚಿಕಿತ್ಸಾ ಪದ್ಧತಿಗಳು ದೇಶ-ವಿದೇಶದ ಜನರ ಅಗತ್ಯಗಳನ್ನು ಪೂರೈಸುತ್ತಿವೆ.
- ಇತ್ತೀಚೆಗೆ ಕೋವಿಡ್-19 ಸಾಂಕ್ರಾಮಿಕ ರೋಗದ ವಿರುದ್ಧದ ಹೋರಾಟಕ್ಕೆ ಈ ಸಾಂಪ್ರದಾಯಿಕ ಔಷಧಗಳನ್ನು ವ್ಯಾಪಕವಾಗಿ ಬಳಸಿರುವುದು ಈ ಮಾತಿಗೆ ಸಾಕ್ಷಿಯಾಗಿದೆ. ದೇಹದಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಿಸಲು ಹಾಗೂ ರೋಗ ಹರಡುವ ವೈರಸ್‌ಗಳ ವಿರುದ್ಧ ಹೋರಾಡಲು ಈ ಔಷಧಗಳನ್ನು ಬಳಲಾಗಿತ್ತು.
- ಈ ವರ್ಷದ ಏಪ್ರಿಲ್‌ನಲ್ಲಿ, ವಿಶ್ವ ಆರೋಗ್ಯ ಸಂಸ್ಥೆ (WHO) ತನ್ನ ಮೊದಲ ಆಫ್-ಶೋರ್ ಗ್ಲೋಬಲ್ ಸೆಂಟರ್ ಫಾರ್ ಟ್ರೆಡಿಷನಲ್ ಮೆಡಿಸಿನ್ಸ್ (GCTM) ಅಂದರೆ ಪಾರಂಪರಿಕ ಚಿಕಿತ್ಸಾ ಪದ್ಧತಿಗಳ ಜಾಗತಿಕ ಕೇಂದ್ರವನ್ನು ಗುಜರಾತ್‌ನ ಜಾಮ್‌ನಗರದಲ್ಲಿ ಸ್ಥಾಪಿಸಿದೆ. ❖

EXAM DH ಪ್ರಜಾವಾಣಿ MASTERMIND™
ಮತ್ತಷ್ಟು ಮಾಹಿತಿಗೆ
ಪಾರಂಪರಿಕ ಜ್ಞಾನದ ಡಿಜಿಟಲ್ ಲೈಬ್ರರಿ ಕುರಿತ ಇನ್ನಷ್ಟು ಮಾಹಿತಿ ಹಾಗೂ ನಾಗರಿಕ ಸೇವಾ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಸಿದ್ಧಪಡಿಸಿರುವ ವಿಡಿಯೊ ಸಹಿತ ಸರಳಗನ್ನಡದ ವಿವರಣೆಗಳಿಗಾಗಿ ಪ್ರಜಾವಾಣಿ-ಡೆಕ್ಕನ್‌ಹೆರಾಲ್ಡ್‌ನ 'ಮಾಸ್ಟರ್‌ಮೈಂಡ್'ಗೆ ಚಂದಾದಾರರಾಗಿ. ಚಂದಾಕ್ಕಾಗಿ ಪಕ್ಕದಲ್ಲಿರುವ ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
www.exammastermind.com

ಮಾದರಿ ಪ್ರಶ್ನೋತ್ತರ

ಸಾಮಾನ್ಯ ಜ್ಞಾನ

ಕೆಪಿಎಸ್‌ಸಿ, ಯುಪಿಎಸ್‌ಸಿ ಸೇರಿದಂತೆ ಮುಂದೆ ನಡೆಯಲಿರುವ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳು ಇಲ್ಲಿವೆ.

1. 1)……………………… ಕಾಡಿನಲ್ಲಿದ್ದ ಬುಡಕಟ್ಟು ಜನಾಂಗದ ವ್ಯಕ್ತಿಯೊಬ್ಬನನ್ನು`ಮ್ಯಾನ್ ಆಫ್ ದಿ ಹೋಲ್' ಎಂದು ಕರೆಯಲಾಗುತಿತ್ತು. ಆತನ ನಿಧನದೊಂದಿಗೆ ಆ ಬುಡಕಟ್ಟು ಜನಾಂಗವೇ ಸರ್ವನಾಶವಾಯಿತು.

ಎ) ಅಮೆಜಾನ್ ಕಾಡು
ಬಿ) ಜಿಯಾಂಗ್ ಜಿಂಗ್ ಕಾಡು ಚೀನಾ
ಸಿ) ಭಾರತದ ಪಶ್ಚಿಮ ಘಟ್ಟದ ಕಾಡು
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ: ಎ

2)ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಭಾರತದ ಮೊದಲ ಸ್ವದೇಶಿ ನಿರ್ಮಿತ ಯುದ್ಧವಿಮಾನ ವಾಹಕ `ಐಎನ್‌ಎಸ್ ವಿಕ್ರಾಂತ್'ಗೆ ಕೇರಳದ ಕೊಚ್ಚಿಯಲ್ಲಿ ಚಾಲನೆ ನೀಡಲಾಯಿತು. ಋಗ್ವೇದದ ವಾಕ್ಯವೊಂದನ್ನು ಘೋಷವಾಕ್ಯವಾಗಿ ಈ ವಿಮಾನ ವಾಹಕ ಹೊಂದಿದೆ.

21971ರಲ್ಲಿ ಬಂಗಾಳ ಕೊಲ್ಲಿಯಲ್ಲಿ ನಿಗೂಢವಾಗಿ ಆಕ್ರಮಣ ಮಾಡಲು ಬಂದ ಪಾಕಿಸ್ತಾನದ `ಪಿಎನ್‌ಎಸ್ ಘಾಜಿ'ಯನ್ನು ಬಂಗಾಳ ಕೊಲ್ಲಿಯಲ್ಲಿ ನಡುನೀರಿನಲ್ಲಿ ಹೊಡೆದುರುಳಿಸಿತು ಐಎನ್‌ಎಸ್ ವಿಕ್ರಾಂತ. ಇದೇ ಹೆಸರನ್ನು ನೂತನವಾಗಿ ನಿರ್ಮಿತವಾದ ಭಾರತದ ಯುದ್ಧ ವಿಮಾನ ವಾಹಕಕ್ಕೆ ಇಡಲಾಗಿದೆ.

3ಗಂಟೆಗೆ 33 ಕಿ.ಮೀ ವೇಗದಲ್ಲಿ ಚಲಿಸಿ, ಒಂದೇ ಬಾರಿಗೆ 75000 ನಾಟಿಕಲ್ ಮೈಲ್ ಕ್ರಮಿಸಬಲ್ಲದು, ಅಂದರೆ ಭಾರತದಿಂದ ಹೊರಟು ಬ್ರೆಜಿಲ್ ವರೆಗೆ ನಿಲ್ಲದೇ ಚಲಿಸಬಲ್ಲುದು.

ಉತ್ತರ ಸಂಕೇತಗಳು
ಎ)1ನೇ ಮತ್ತು 2ನೇ ಹೇಳಿಕೆ ಮಾತ್ರ ಸರಿಯಾಗಿದೆ
ಬಿ)2ನೇ ಮತ್ತು 3ನೇ ಹೇಳಿಕೆ ಮಾತ್ರ ಸರಿಯಾಗಿದೆ.
ಸಿ) 1 ಮತ್ತು 3ನೇ ಹೇಳಿಕೆ ಮಾತ್ರ ಸರಿಯಾಗಿದೆ
ಡಿ)1 ರಿಂದ 3ರವರೆಗೆ ಎಲ್ಲ ಹೇಳಿಕೆಗಳು ಸರಿಯಾಗಿವೆ

ಉತ್ತರ: ಡಿ

3) ಪರಖ್(PARAKH) ರಚಿಸಲು ಕೇಂದ್ರ ಸರ್ಕಾರ ಹೊರಟಿದೆ. ಹಾಗಾದರೆ ಪರಖ್ ಯಾವುದಕ್ಕೆ ಸಂಬಂಧಿಸಿದ್ದು?

ಎ)10 ಮತ್ತು 12ನೇ ತರಗತಿಗಳ ಉತ್ತರ ಪತ್ರಿಕೆ ಮೌಲ್ಯಮಾಪನದಲ್ಲಿ ಏಕರೂಪತೆ ತರುವುದು.
ಬಿ)ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಒಂದೇ ವೇದಿಕೆಯಲ್ಲಿ ತರುವುದು.
ಸಿ)ಎಲ್ಲಾ ಜನಾಂಗದ ಜನರಿಗೆ ಇರುವ ಸರ್ಕಾರಿ ಯೋಜನೆಗಳನ್ನು ಒಂದೇ ವೇದಿಕೆಗೆ ತರುವುದು
ಡಿ) ಮೇಲಿನ ಯಾವುದೂ ಅಲ್ಲ.

ಉತ್ತರ: ಎ

4) ಬಹುರಾಷ್ಟ್ರೀಯ ಕಂಪನಿ ಸ್ಟಾರ್‌ಬಕ್ಸ್‌ನ ನೂತನ ಸಿಇಒ ಆಗಿ ಯಾರನ್ನು ನೇಮಕ ಮಾಡಲಾಗಿದೆ?

ಎ)ಲಕ್ಷ್ಮಣ್ ನರಸಿಂಹನ್
ಬಿ) ರಮೇಶ್ ಜಾದವ್
ಸಿ) ಸುಂದರ್ ಪಿಚ್ಚೈ
ಡಿ) ಮೇಲಿನ ಯಾರೂ ಅಲ್ಲಾ

ಉತ್ತರ: ಎ

5) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಲೈಂಗಿಕ ಅಪರಾಧಗಳಿಂದ ಮಕ್ಕಳನ್ನು ರಕ್ಷಿಸುವ ಕಾಯ್ದೆ ಪೊಕ್ಸೊ ಕಾನೂನು(The Protection of Children from Sexual Offences Act, 2012) 2012ರಲ್ಲಿ ಜಾರಿಗೆ ಬಂತು
2) ಮಕ್ಕಳನ್ನು ಲೈಂಗಿಕ ಅಪರಾಧಗಳಿಂದ ರಕ್ಷಿಸುವುದು ಈ ಕಾಯ್ದೆಯ ಮುಖ್ಯ ಉದ್ದೇಶವಾಗಿದೆ. ಸ್ಪರ್ಶ, ಅತ್ಯಾಚಾರ, ಮಕ್ಕಳಿಗೆ ಲೈಂಗಿಕ ಸಂಪರ್ಕದ ವಿಡಿಯೊ ಅಥವಾ ಚಿತ್ರ ತೋರಿಸುವುದು, ಮೊದಲಾದವುಗಳಿಂದ ಪೊಕ್ಸೊ ಕಾನೂನು ರಕ್ಷಣೆ ನೀಡುತ್ತದೆ.
3)ಹೆಣ್ಣು ಮಕ್ಕಳು ಮಾತ್ರವಲ್ಲ ಗಂಡು ಮಕ್ಕಳಿಗೆ ತೊಂದರೆಯಾದರೂ ಪೊಕ್ಸೊ ಕಾನೂನು ರಕ್ಷಣೆ ನೀಡುತ್ತದೆ

ಉತ್ತರ ಸಂಕೇತಗಳು
ಎ)1ನೇ ಮತ್ತು 3ನೇ ಹೇಳಿಕೆ ಮಾತ್ರ ಸರಿಯಾಗಿದೆ.
ಬಿ)3ನೇ ಹೇಳಿಕೆ ಮಾತ್ರ ಸರಿಯಾಗಿದೆ.
ಸಿ)1 ಮತ್ತು 2ನೇ ಹೇಳಿಕೆ ಮಾತ್ರ ಸರಿಯಾಗಿದೆ
ಡಿ)1 ರಿಂದ 3ನೇ ಎಲ್ಲ ಹೇಳಿಕೆಗಳು ಸರಿಯಾಗಿದೆ

ಉತ್ತರ: ಡಿ

6) ಕೆಳಗಿನ ಹೇಳಿಕೆಗಳನ್ನು ಗಮನಿಸಿ

ಎ)ಫ್ರಾನ್ಸ್, ಸ್ಪೇನ್ ಮತ್ತು ಪೋರ್ಚುಗಲ್ ಸೇರಿದಂತೆ ಹಲವು ರಾಷ್ಟ್ರಗಳ ರೈತರು ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಯೂರೋಪ್, 500 ವರ್ಷಗಳಲ್ಲಿ ಕಂಡುಕೇಳರಿಯದಂತಹ ಜಲಕ್ಷಾಮಕ್ಕೆ ಈಡಾಗುತ್ತಿದೆ. ದಾಖಲೆಯ ಬಿಸಿಲು ಬರುತ್ತಿದ್ದು, ಬತ್ತುತ್ತಿರುವ ನದಿಗಳು, ಹೆಚ್ಚುತ್ತಿರುವ ಕಾಡ್ಗಿಚ್ಚು ಯೂರೋಪ್ ಅನ್ನು ಆವರಿಸಿದೆ.
2)ಇಂಗ್ಲೆಂಡ್‌ನ ಥೇಮ್ಸ್ ನದಿ ಬತ್ತಲಾರಂಭಿಸಿದೆ. ಜರ್ಮನಿಯ ರೈನ್ ನದಿಯೂ ಸಹಾ ಬತ್ತುತಿದೆ. ಯೂರೋಪ್‌ನಲ್ಲಿರುವ ಎರಡನೇ ಅತಿದೊಡ್ಡ ನದಿಯಾದ ಓಡರ್ ನದಿಯಲ್ಲಿ ಮೀನುಗಳು ಸಾಯುತ್ತಿವೆ.

ಉತ್ತರ ಸಂಕೇತಗಳು
ಎ)1ನೇ ಹೇಳಿಕೆ ಮಾತ್ರ ಸರಿಯಾಗಿದೆ.
ಬಿ 2ನೇ ಹೇಳಿಕೆ ಮಾತ್ರ ಸರಿಯಾಗಿದೆ.
ಸಿ)1 ಮತ್ತು 2 ಎರಡೂ ಹೇಳಿಕೆಗಳು ಸರಿಯಾಗಿವೆ
ಡಿ)1 ರಿಂದ 2ನೇ ಎಲ್ಲ ಹೇಳಿಕೆಗಳು ಸರಿಯಾಗಿಲ್ಲ

ಉತ್ತರ: ಸಿ

(ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್)

ನಿಮಗಿದು ಗೊತ್ತೆ?

ಅಸ್ತ್ರಗಳ ಬಳಕೆ

ಕೋಲು/ದೊಣ್ಣೆ, ಪ್ರಾಚಿನ ಮಾನವನ ಮೊದಲ ಅಸ್ತ್ರವಾಗಿತ್ತು. ಮನುಷ್ಯ, ಕಾಡುಪ್ರಾಣಿಗಳಿಂದ ರಕ್ಷಿಸಿಕೊಳ್ಳಲು, ಅದನ್ನು ಉಪಯೋಗಿಸುತ್ತಿದ್ದ. ಕಾಲಾನಂತರ ಕಲ್ಲುಗಳನ್ನು ಚೂಪು ಮಾಡಿ, ಬೇಟೆಗಾಗಿ ಬಳಸತೊಡಗಿದ. ಕಾಲಕ್ರಮೇಣ ಮಾನವ ತನ್ನ ಮೊಟ್ಟ ಮೊದಲ ಬಿಲ್ಲನ್ನು ತಯಾರಿಸಿದ. ಮರವೊಂದರ ಬಾಗಿದ ಕೊಂಬೆಗೆ ಪ್ರಾಣಿಯ ನರದಿಂದ ಮಾಡಿದ ದಾರವನ್ನು ಕಟ್ಟಿ, ಬಿಲ್ಲು ಮಾಡಿಕೊಂಡ. ಸಾವಿರಾರು ವರ್ಷಗಳ ಕಾಲ ಈ ಬಿಲ್ಲು ಮಾನವನ ಅಸ್ತ್ರವಾಗಿತ್ತು.

ಸುಮಾರು 8000 ವರ್ಷಗಳ ಹಿಂದೆ, ತಾಮ್ರ ಕರಗಿಸಿ, ಅದಕ್ಕೆ ತವರವನ್ನು ಸೇರಿಸಿ ಕಂಚಾಗಿಸಿ ಆದರಿಂದ, ಕಠಾರಿ ಮತ್ತು ಕತ್ತಿಗಳ ತಯಾರಿಕೆ ಕಲಿತ. ನಾಗರಿಕತೆ ಮೂಡುತ್ತಿದ್ದಂತೆ ಮಾನವ ಗುಂಪಿನಲ್ಲಿ ವಾಸ ಮಾಡುವುದನ್ನು ಕಲಿತ, ಕ್ರಮೇಣ ಸೈನ್ಯದ ಸಣ್ಣ ಸಣ್ಣ ತುಕಡಿಗಳನ್ನು ರಚಿಸಿದ.

ಕ್ರಿ, ಪೂ 355ರಲ್ಲಿ ಅಲೆಗ್ಸಾಂಡರ್‌ನ ತಂದೆ ಮ್ಯಾಸಿಡೋನ ಫಿಲಿಪ್, ಒಂದು ಮರದ ಯಂತ್ರ ತಯಾರಿಸಿದ್ದ. ಈ ಯಂತ್ರಕ್ಕೆ ದೊಡ್ಡ ದೊಡ್ಡ ಕಲ್ಲುಗಳನ್ನು ಶತ್ರುಗಳ ಕೋಟೆಯಾಚೆ ಎಸೆಯಬಲ್ಲ ಸಾಮರ್ಥ್ಯವಿತ್ತು. 13ನೇ ಶತಮಾನದಲ್ಲಿ ಇಂಗ್ಲೆಂಡ್‌ನ ರೋಜರ್ ಬೇಕನ್ ತನ್ನ ಪುಸ್ತಕದಲ್ಲಿ ಗನ್ ಪೌಡರ್ ಬಗ್ಗೆ ಮಾಹಿತಿ ನೀಡಿದ. ಚೀನಾದಲ್ಲಿ ಮೊದಲು ಗನ್ ಪೌಡರ್ ಕಂಡುಹಿಡಿಯಲಾಯಿತು. 1380ರ ಹೊತ್ತಿಗೆ ಕೈಯಿಂದ ತಯಾರಿಸಲಾದ ಬಂದೂಕನ್ನು ಯೂರೋಪ್‌ನಲ್ಲಿ ಬಳಸಲಾಯಿತು.

15ನೇ ಶತಮಾನದ ಮಧ್ಯಭಾಗದ ವೇಳೆಗೆ. ಹೆಚ್ಚು ಕಡಿಮೆ ಎಲ್ಲ ಮುಖ್ಯ ಐರೋಪ್ಯ ರಾಷ್ಟ್ರಗಳ ಸೈನ್ಯಗಳು ಅಸ್ತ್ರಗಳಿಂದ ಮತ್ತು ಯುದ್ಧ ನೌಕೆಗಳಿಂದ ಸಜ್ಜುಗೊಂಡಿದ್ದವು. 16ನೇ ಶತಮಾನದಲ್ಲಿ ಮಾನವ, ರೈಫಲ್ ಮತ್ತು ಕೈ ಬಾಂಬ್‌ಗಳನ್ನು ತಯಾರಿಸಿದ.1862ರಲ್ಲಿ ಅಮೆರಿಕನ್ನರು ಮಷಿನ್ ಗನ್‌ಗಳನ್ನು ಅಭಿವೃದ್ಧಿಪಡಿಸಿದರು. 1866 ರಲ್ಲಿ ಆಲ್‌ಫ್ರೆಡ್ ನೊಬೆಲ್ ಡೈನಮೈಟ್ ಕಂಡುಹಿಡಿದ. ಅನಂತರ ಶಸ್ತ್ರಾಸ್ತ್ರಗಳ ತಯಾರಿಕೆಯಲ್ಲಿ ಅಗಾಧ ಪ್ರಗತಿ ಕಂಡುಬಂದಿತು. ಮೊದಲ ಮಹಾಯುದ್ಧದಲ್ಲಿ ಬ್ರಿಟಿಷರು ಟ್ಯಾಂಕರ್‌ಗಳನ್ನು ಕಂಡುಹಿಡಿದು ಅವುಗಳನ್ನು ಯಶಸ್ವಿಯಾಗಿ ಬಳಸಿದರು. ಎರಡನೇ ಮಹಾಯುದ್ಧದಲ್ಲಿ ಅಣುಬಾಂಬ್ ಅಭಿವೃದ್ಧಿಯಾಗಿತ್ತು. ಅಮೆರಿಕನ್ನರು ಅದನ್ನು ಜಪಾನಿನ ಮೇಲೆ ಪ್ರಯೋಗಿಸಿದರು. ಭಾರತದಲ್ಲಿ ಮೊದಲು ಗನ್ ಪೌಡರ್ ಯುದ್ದದಲ್ಲಿ ಬಳಸಿದವನು ಬಾಬರ್. ಟಿಪ್ಪು ರಾಕೆಟ್ ಮತ್ತು ನ್ಯಾನೊ ತಂತ್ರಜ್ಞಾನ ಬಳಸಿದ.

ಉದ್ಯೋಗ ವಾರ್ತೆ

ಮೀನುಗಾರಿಕೆ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರ ಹುದ್ದೆಗಳು

ಕರ್ನಾಟಕ ಲೋಕಸೇವಾ ಆಯೋಗವು(ಕೆಪಿಎಸ್‌ಸಿ) ಮೀನುಗಾರಿಕೆ ಇಲಾಖೆಯಲ್ಲಿ ಖಾಲಿ ಇರುವ ಎಂಟು ಸಹಾಯಕ ನಿರ್ದೇಶಕರ ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಿದೆ.

ಇಲಾಖೆಯ ವೆಬ್‌ಸೈಟ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು. ಸೆಪ್ಟೆಂಬರ್ 20ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಲಿದೆ. ಅಕ್ಟೋಬರ್ 19, 2022 ಅರ್ಜಿ ಸಲ್ಲಿಸಲು ಕೊನೆ ದಿನ. ಶುಲ್ಕ ಪಾವತಿಸಲು ಅ.20 ಕೊನೆ ದಿನ.

ಅರ್ಜಿ ಶುಲ್ಕ: ಸಾಮಾನ್ಯ ಅಭ್ಯರ್ಥಿಗಳಿಗೆ ₹600, ಪ್ರವರ್ಗ 2(ಎ), 2(ಬಿ), 3(ಎ), 3(ಬಿ)ಗೆ ಸೇರಿದ ಅಭ್ಯರ್ಥಿಗಳಿಗೆ ₹300, ಎಸ್.ಸಿ, ಎಸ್‌ಟಿ, ಪ್ರವರ್ಗ-1 ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ಶುಲ್ಕದಿಂದ ವಿನಾಯಿತಿ ಇದೆ. ಮಾಜಿ ಸೈನಿಕರಿಗೆ ₹50.

ವಿದ್ಯಾರ್ಹತೆ: ಯಾವುದೇ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಮೀನುಗಾರಿಕೆ ಕ್ಷೇತ್ರಕ್ಕೆ ಸಂಬಂಧಿಸಿದ ವಿಜ್ಞಾನ ವಿಷಯದಲ್ಲಿ (ಬ್ಯಾಚುಲರ್ ಆಫ್ ಫಿಷರೀಸ್ ಸೈನ್ಸ್) ಪದವಿ ಪಡೆದಿರಬೇಕು.

ವಯೋಮಿತಿ: ಕನಿಷ್ಠ 18 ವರ್ಷಗಳು, ಗರಿಷ್ಠ 35 ವರ್ಷಗಳು. ಪ್ರವರ್ಗ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿ 38 ವರ್ಷಗಳು. ಎಸ್‌ಸಿ, ಎಸ್‌ಟಿ ಮತ್ತು ಪ್ರವರ್ಗ 1ರ ಅಭ್ಯರ್ಥಿಗಳಿಗೆ 40 ವರ್ಷಗಳನ್ನು ನಿಗದಿಪಡಿಸಲಾಗಿದೆ.

ನೇಮಕಾತಿ ವಿಧಾನ

ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಸ್ಪರ್ಧಾತ್ಮಕ ಪರೀಕ್ಷೆ ಗಳಲ್ಲಿ ಗಳಿಸಿದ ಅಂಕಗಳ ಶೇಕಡಾವಾರು ಪ್ರಮಾಣ ಆಧರಿಸಿ ಹಾಗೂ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳ ಅನ್ವಯ ಆಯ್ಕೆ ಮಾಡಲಾಗುತ್ತದೆ ಎಂದು ಅಧಿಸೂಚನೆಯಲ್ಲಿ ತಿಳಿಸಿದೆ.

ಸ್ಪರ್ಧಾತ್ಮಕ ಪರೀಕ್ಷೆ

ಎ) ಪರೀಕ್ಷೆಯು ತಲಾ 300 ಅಂಕಗಳ ಎರಡು ಲಿಖಿತ ಪ್ರಶ್ನೆ ಪತ್ರಿಕೆಗಳನ್ನು ಒಳಗೊಂಡಿದೆ. ವಸ್ತುನಿಷ್ಠ ಬಹು ಆಯ್ಕೆ ಮಾದರಿಯಲ್ಲಿ ಪ್ರಶ್ನೆಗಳಿರುತ್ತವೆ. ಪ್ರತಿ ಪ್ರಶ್ನೆಯೂ ಋಣಾತ್ಮಕ(ನೆಗೆಟಿವ್) ಅಂಕವನ್ನು ಒಳಗೊಂಡಿರುತ್ತದೆ. ತಪ್ಪಾದ ಉತ್ತರಕ್ಕೆ, ಪ್ರಶ್ನೆಗಳಿಗೆ ನಿಗದಿಪಡಿಸಿದ ಅಂಕಗಳಲ್ಲಿ ನಾಲ್ಕನೇ ಒಂದು ಭಾಗ(1/2)ದಷ್ಟು ಅಂಕಗಳನ್ನು ಕಡಿತಗೊಳಿಸಲಾಗುತ್ತದೆ

ಪತ್ರಿಕೆ	ವಿಷಯ	ಅಂಕಗಳು	ಅವಧಿ (ಗಂಟೆಗಳಲ್ಲಿ)
1	ಸಾಮಾನ್ಯ ಪತ್ರಿಕೆ	300	$1^1/_2$ ಗಂಟೆ
2	ನಿರ್ದಿಷ್ಟ ಪತ್ರಿಕೆ	300	2 ಗಂಟೆ

ಎ) ಸ್ಪರ್ಧಾತ್ಮಕ ಪರೀಕ್ಷಾ ಪಠ್ಯಕ್ರಮವನ್ನು ಆಯೋಗದ ವೆಬ್‌ಸೈಟ್ http://kpsc.kar.nic.in/ Syllabus ನಲ್ಲಿ ಪ್ರಕಟಿಸಲಾಗಿದೆ.
ಬಿ) ಪ್ರಶ್ನೆ ಪತ್ರಿಕೆಗಳು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿರುತ್ತವೆ.
ಸಿ) ಅಭ್ಯರ್ಥಿಯು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿನ ಒಟ್ಟು ಅಂಕಗಳಲ್ಲಿ ಕನಿಷ್ಠ ಶೇ 35ರಷ್ಟು ಅಂಕಗಳನ್ನು ಗಳಿಸುವುದು ಕಡ್ಡಾಯ.

ಸ್ಪರ್ಧಾತ್ಮಕ ಪರೀಕ್ಷೆಯನ್ನು ಆಫ್‌ಲೈನ್-ಒಎಂಆರ್ ಮಾದರಿ ಅಥವಾ ಕಂಪ್ಯೂಟರ್ ಆಧಾರಿತವಾಗಿ ನಡೆಸಲಾಗುತ್ತದೆ.

ಭಾಷಾ ಪತ್ರಿಕೆ ಕಡ್ಡಾಯ

ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಪರೀಕ್ಷೆ ಕಡ್ಡಾಯ. ಇದು ಗರಿಷ್ಠ 150 ಅಂಕಗಳಿಗೆ ಒಂದು ಪ್ರಶ್ನೆ ಪತ್ರಿಕೆ ಇರುತ್ತದೆ. ಈ ಪತ್ರಿಕೆಯಲ್ಲಿ ಅರ್ಹತೆ ಪಡೆಯಲು ಅಭ್ಯರ್ಥಿಯು ಶೇ 50ರಷ್ಟು ಅಂಕಗಳನ್ನು ಕಳಿಸಬೇಕು. ಈ ಪ್ರಶ್ನೆ ಪತ್ರಿಕೆಯನ್ನು ಎಸ್ಸೆಸ್ಸೆಲ್ಸಿ ಹಂತದ ಪ್ರಥಮ ಭಾಷೆ ಕನ್ನಡವನ್ನು ಮಾನದಂಡವಾಗಿಟ್ಟುಕೊಂಡು ರೂಪಿಸಲಾಗಿರುತ್ತದೆ.

ಹೆಚ್ಚಿನ ಮಾಹಿತಿಗೆ: https://kpsc.kar.nic.in ಜಾಲತಾಣಕ್ಕೆ ಭೇಟಿ ನೀಡಿ. ಅಧಿಸೂಚನೆಗಾಗಿ https://kpsc.kar.nic.in/Notification%20of%20Asst%20Director%20of%20Fisheries%20(HK).pdf ಇಲ್ಲಿಗೆ ಭೇಟಿ ನೀಡಿ. ❖

ಉನ್ನತ ಹುದ್ದೆಯ 140 ಅಧಿಕಾರಿಗಳ ಪ್ರಮಾಣಪತ್ರದ ನೈಜತೆ ಪರಿಶೀಲನೆ

ಮುಂಬಡ್ತಿಗಾಗಿ ನಕಲಿ ಪದವಿ ಕರಾಮತ್ತು

• ರಾಜೇಶ್ ರೈ ಚಟ್ಲ

ಬೆಂಗಳೂರು: ಹೊರ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿಯೇ ಇಲ್ಲದ ಮತ್ತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಹೆಸರಿನಲ್ಲಿ 'ನಕಲಿ' ಪದವಿ ಪ್ರಮಾಣಪತ್ರ ಸಲ್ಲಿಸಿ ಮುಂಬಡ್ತಿ ಪಡೆಯಲು ಯತ್ನಿಸಿದ ಎಂಟು ಮಂದಿ ವಿರುದ್ಧ ಕಾನೂನು ಕ್ರಮ ಕೈಗೊಂಡ ಬೆನ್ನಲ್ಲೆ, ಈಗಾಗಲೇ ಉನ್ನತ ಹುದ್ದೆಗೆ ಬಡ್ತಿ ಪಡೆದಿರುವ 140 ಅಧಿಕಾರಿಗಳ ಪದವಿ ಪ್ರಮಾಣ ಪತ್ರಗಳ ನೈಜತೆ ಪರಿಶೀಲನೆಗೆ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮುಂದಾಗಿದೆ.

ಮುಂಬಡ್ತಿ ನೀಡುವ ಮೊದಲು ಆಯಾ ವಿಶ್ವವಿದ್ಯಾಲಯಗಳಿಂದ ಮಾಹಿತಿ ಪಡೆಯಲು ಪತ್ರ ಬರೆಯಲಾಗಿದೆ. ವರದಿ ಬಂದ ನಂತರ ನಕಲಿ ಬಗ್ಗೆ ಸ್ಪಷ್ಟತೆ ಸಿಗಲಿದೆ.

ಎನ್. ಪಾಥುರಾಜ್, ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ

ಪ್ರಜಾವಾಣಿ ವಿಶೇಷ

ಸಹಾಯಕ ಸಾಂಖ್ಯಿಕ ಅಧಿಕಾರಿ ಮತ್ತು ಸಹಾಯಕ ನಿರ್ದೇಶಕ ಹುದ್ದೆಗಳಿಗೆ ಮುಂಬಡ್ತಿ ಪಡೆಯಲು ನಕಲಿ ಪದವಿ ಪ್ರಮಾಣಪತ್ರ ಸಲ್ಲಿಸಿರುವ ಬಗ್ಗೆ ನಿರ್ದೇಶನಾಲಯಕ್ಕೆ ಮತ್ತು ಸರ್ಕಾರಕ್ಕೆ ಹಲವು ದೂರುಗಳು ಬಂದಿವೆ. ಹೀಗಾಗಿ, ಈ ಹುದ್ದೆಗಳಿಗೆ ಬಡ್ತಿ ಪಡೆದವರ ಪದವಿ ಅಂಕಪಟ್ಟಿಗಳ ನೈಜತೆ ಪತ್ತೆ ಹಚ್ಚಲು ನಿರ್ದೇಶನಾಲಯ ನಿರ್ಧರಿಸಿದೆ.

ಈ ಬಗ್ಗೆ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ವಿ. ರಶ್ಮಿ ಮಹೇಶ್ ಅವರಿಗೆ ಪತ್ರ ಬರೆದಿರುವ ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, 140 ಸಿಬ್ಬಂದಿ ಪೈಕಿ, ಎಂಟು ಹೊರ ರಾಜ್ಯಗಳಲ್ಲಿರುವ 16 ವಿಶ್ವವಿದ್ಯಾಲಯಗಳು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಿಂದ 18, ಕರ್ನಾಟಕ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಿಂದ 114 ಮಂದಿ ಪದವಿ ಪ್ರಮಾಣಪತ್ರ ಸಲ್ಲಿಸಿದ್ದು, ಅವುಗಳ ನೈಜತೆ ಬಗ್ಗೆ ಮಾಹಿತಿ ನೀಡುವಂತೆ ಕೋರಿದ್ದಾರೆ.

ಈ ವಿಶ್ವವಿದ್ಯಾಲಯಗಳಿಗೆ ಆಯಾ ರಾಜ್ಯಗಳು ಅನುಮತಿ ನೀಡುವ ವೇಳೆ ಹೊರ ರಾಜ್ಯಗಳಲ್ಲಿ ಕೇಂದ್ರಗಳನ್ನು ತೆರೆದು ಪದವಿ ಪರೀಕ್ಷೆ ನಡೆಸಲು ಅನುಮತಿ ನೀಡಲಾಗಿದೆಯೇ, ಈ ವಿಶ್ವವಿದ್ಯಾಲಯಗಳಿಗೆ ದೂರ ಶಿಕ್ಷಣ ಅಥವಾ ಅಂಚೆ ತೆರಪಿನ ಶಿಕ್ಷಣ ಮೂಲಕ ಪದವಿ ನೀಡಲು ಯುಜಿಸಿ ಅಥವಾ ರಾಜ್ಯ ಸರ್ಕಾರ ಅನುಮತಿ ನೀಡಿದೆಯೇ, ನೀಡಿದ್ದರೆ ಯಾವ ವರ್ಷದ ಮಾಹಿತಿ ನೀಡಬೇಕು ಎಂದು ಪತ್ರದಲ್ಲಿ ಮನವಿ ಮಾಡಿದ್ದಾರೆ.

ಅಲ್ಲದೆ, ಆಯಾ ರಾಜ್ಯಗಳಲ್ಲಿ ಯಾವ, ಯಾವ ಭಾಷೆಯಲ್ಲಿ (ಪ್ರಥಮ ಭಾಷೆ, ದ್ವಿತೀಯ ಭಾಷೆ, ತೃತೀಯ ಭಾಷೆ) ಪರೀಕ್ಷೆ ಬರೆಯಲು ಅನುಮತಿ ನೀಡಲಾಗಿದೆ? ಯುಜಿಸಿ ಅಥವಾ ರಾಜ್ಯ ಸರ್ಕಾರ ವಿಶ್ವವಿದ್ಯಾಲಯಗಳನ್ನು ರದ್ದುಪಡಿಸಿದ್ದರೆ ಅದರ ವಿವರ ಮತ್ತು ಯಾವ ವರ್ಷ ರದ್ದು ಆಗಿದೆ ಎಂಬ ಮಾಹಿತಿ, ಈ ವಿ. ವಿಗಳಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಅರ್ಥಶಾಸ್ತ್ರ, ಸಂಖ್ಯಾಶಾಸ್ತ್ರ, ಗಣಿತಶಾಸ್ತ್ರ ವಿಷಯಗಳಲ್ಲಿ ದೂರ ಶಿಕ್ಷಣ, ಅಂಚೆ ತೆರಪಿನ ಮೂಲಕ ಕಲಿಯಲು ಅವಕಾಶ ಇದೆಯೇ? ವಿಶೇಷವಾಗಿ ಬಂಗಳೂರು ವಿಶ್ವವಿದ್ಯಾಲಯದಲ್ಲಿ ಪದವಿ ಪ್ರಥಮ ವರ್ಷ ಸಮಾಜವಿಜ್ಞಾನ ವಿಷಯವನ್ನು ಅಧ್ಯಯನ ಮಾಡಿ, ದ್ವಿತೀಯ ವರ್ಷದಲ್ಲಿ ಅರ್ಥಶಾಸ್ತ್ರದ ವಿಷಯ ಬದಲಾವಣೆ ಮಾಡಲು ಅವಕಾಶ ಇದೆಯೇ?' ಎಂಬ ಬಗ್ಗೆಯೂ ಸ್ಪಷ್ಟಪಡಿಸುವಂತೆ ಕೋರಿದ್ದಾರೆ.

ಮುಂಬಡ್ತಿಗಾಗಿ ಪದವಿ– ಹೊರ ರಾಜ್ಯಗಳ 16 ವಿವಿಗಳು

ಗಾಂಧಿ, ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮತ್ತು ಮ್ಯಾನೇಜ್‌ಮೆಂಟ್, ಆಂಧ್ರಪ್ರದೇಶ
ಡಾ. ಸಿ.ವಿ. ರಾಮನ್ ವಿವಿ, ಬಿಲಾಸ್‌ಪುರ, ಛತ್ತೀಸಗಢ
ಅಳಗಪ್ಪ ವಿವಿ, ತಮಿಳುನಾಡು
ವಿನಾಯಕ ಮಿಷನ್ಸ್ ರಿಸರ್ಚ್ ಫೌಂಡೇಷನ್, ತಮಿಳುನಾಡು
ಮಧುರೈ ಕಾಮರಾಜ್ ವಿವಿ, ತಮಿಳುನಾಡು
ನಾಮ್ ಶ್ರೀಗೋಬಾಲಾ ಇನ್‌ಸ್ಟಿಟ್ಯೂಟ್ ಆಫ್ ಅಗ್ರಿಕಲ್ಚರ್ ಟೆಕ್ನಾಲಜಿ ಆ್ಯಂಡ್ ಸೈನ್ಸ್, ಅಲಹಾಬಾದ್, ಉತ್ತರಪ್ರದೇಶ
ಬುಂಧೇಲ್ ವಿವಿ, ಝಾನ್ಸಿ, ಉತ್ತರಪ್ರದೇಶ
ಸ್ವಾಮಿ ವಿವೇಕಾನಂದ ಸುಭಾಷ್ ವಿವಿ, ಉತ್ತರಪ್ರದೇಶ
ಶೋಭಿತ್ ವಿವಿ, ಮೀರತ್, ಉತ್ತರಪ್ರದೇಶ
ರಬೀಂದ್ರನಾಥ್ ಟಾಗೋರ್ ವಿವಿ, ಭೋಪಾಲ್, ಮಧ್ಯಪ್ರದೇಶ
ಸಿಎಂಜೆ ವಿವಿ, ಮೇಘಾಲಯ
ಸಂಗೈ ಇಂಟರ್‌ನ್ಯಾಷನಲ್ ವಿವಿ, ಮಣಿಪುರ
ದಿ ಗ್ಲೋಬಲ್ ಓಪನ್ ವಿವಿ, ನಾಗಾಲ್ಯಾಂಡ್,
ಜೆ.ಆರ್.ಎನ್. ರಾಜಸ್ಥಾನ್ ವಿದ್ಯಾಪೀಠ, ಉದಯಪುರ, ರಾಜಸ್ಥಾನ
ಕೇಂದ್ರೀಯ ವಿವಿ, ತಮಿಳುನಾಡು
ಈಸ್ಟರ್ನ್ ಇನ್‌ಸ್ಟಿಟ್ಯೂಟ್ ಫಾರ್ ಇಂಟಿಗ್ರೇಟೆಡ್ ಲರ್ನಿಂಗ್ ಇನ್ ಮ್ಯಾನೇಜ್‌ಮೆಂಟ್ ವಿವಿ, ಸಿಕ್ಕಿಂ

ನಕಲಿ ಪ್ರಮಾಣ ಪತ್ರ ಸಲ್ಲಿಸಿ ಮುಂಬಡ್ತಿ; ಯೋಜನಾಧಿಕಾರಿ ವಶಕ್ಕೆ

ಉಮೇಶಗೌಡ

ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ): ಪದವಿಯ ನಕಲಿ ಅಂಕಪಟ್ಟಿ ಮತ್ತು ಮೈಗ್ರೇಶನ್ ಪ್ರಮಾಣ ಪತ್ರಗಳನ್ನು ಸಲ್ಲಿಸಿ ಮುಂಬಡ್ತಿ ಪಡೆದಿದ್ದ ಇಲ್ಲಿನ ತಾಲ್ಲೂಕು ಪಂಚಾಯಿತಿ ಯೋಜನಾಧಿಕಾರಿ ಉಮೇಶಗೌಡ ವೆಂಕನಗೌಡರ್ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಅನುಕಂಪ ಆಧಾರದಲ್ಲಿ ಸಹಾಯಕ ಸಾಂಖ್ಯಿಕ ಅಧಿಕಾರಿಯಾಗಿ ಕೆಲಸ ಪಡೆದ ಉಮೇಶಗೌಡ ಮುಂಬಡ್ತಿಗಾಗಿ 2007, 2008, 2009ನೇ ಸಾಲಿನಲ್ಲಿ ಮೈಸೂರಿನ ಮಾನಸಗಂಗೋತ್ರಿಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಪದವಿಯ ನಕಲಿ ಅಂಕಪಟ್ಟಿಗಳು, ಪಾಸಿಂಗ್ ಸರ್ಟಿಫಿಕೆಟ್ ಹಾಗೂ ಮೈಗ್ರೇಶನ್ ಪ್ರಮಾಣ ಪತ್ರಗಳನ್ನು ಸೃಷ್ಟಿಸಿಕೊಂಡಿದ್ದರು. ಅವುಗಳನ್ನು ಸರ್ಕಾರಕ್ಕೆ ಸಲ್ಲಿಸಿ ತಾಲ್ಲೂಕು ಯೋಜನಾಧಿಕಾರಿ ಹುದ್ದೆಗೆ ಮುಂಬಡ್ತಿ ಪಡೆದು ಇಲ್ಲಿನ ತಾಲ್ಲೂಕು ಪಂಚಾಯಿತಿಯಲ್ಲಿ ಕಾನೂನು ಬಾಹಿರವಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು' ಎಂದು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಶೈಲಾ ಎಸ್. ಕುಲಕರ್ಣಿ ಅವರು ಮಂಗಳವಾರ ಪಟ್ಟಣ ಠಾಣೆಗೆ ದೂರು ಕೊಟ್ಟಿದ್ದರು. ಅದನ್ನು ಆಧರಿಸಿ ತನಿಖೆ ನಡೆಸಲಾಗುತ್ತಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕೆ. ಬುಧವಾರ ತಿಳಿಸಿದ್ದಾರೆ. ಹಗರಿಬೊಮ್ಮನಹಳ್ಳಿ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

159 ಪದವಿಗಳಲ್ಲಿ 8 ನಕಲಿ!

ವೃಂದ ಮತ್ತು ನೇಮಕಾತಿ ನಿಯಮದ ಅನ್ವಯ 2010ನೇ ಸಾಲಿನಿಂದ ಮುಂಬಡ್ತಿ ಪಡೆಯಲು ಪದವಿ ಕಡ್ಡಾಯಗೊಳಿಸಲಾಗಿದೆ. ಹೀಗಾಗಿ, ಮುಂಬಡ್ತಿ ನೀಡುವುದಕ್ಕೂ ಮೊದಲು ಮುಂಬಡ್ತಿಗೆ ಅರ್ಹರಾಗಿದ್ದ 159 ನೌಕರರ ಪದವಿ ಪ್ರಮಾಣಪತ್ರಗಳನ್ನು ನೈಜತೆಗೆ ಒಳಪಡಿಸಲಾಗಿದೆ. ಆಗ ಎಂಟು ಮಂದಿ ಸಲ್ಲಿಸಿದ್ದ ಪ್ರಮಾಣಪತ್ರ ನಕಲಿ ಎಂದು ಸಂಬಂಧಿಸಿದ ವಿಶ್ವವಿದ್ಯಾಲಯಗಳು ವರದಿ ನೀಡಿವೆ. ಈ ನೌಕರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಇಲಾಖಾ ವಿಚಾರಣೆಯೂ ನಡೆಯುತ್ತಿದೆ. ಮುಂಬಡ್ತಿ ನೀಡುವ ವೇಳೆ ಪದವಿಯ ಮೂಲ ಪ್ರತಿ ಪಡೆಯದೆ ನಕಲು ಪ್ರತಿ ಪಡೆದು ಬಡ್ತಿ ನೀಡಲಾಗಿದ್ದು, ನೌಕರರ ಜೊತೆ ನಿರ್ದೇಶನಾಲಯದ ವಿಷಯ ನಿರ್ವಾಹಕರು ಮತ್ತು ಅಧೀಕ್ಷಕರು ಶಾಮೀಲಾಗಿರುವ ಅನುಮಾನವೂ ಇದೆ' ಎಂದು ನಿರ್ದೇಶನಾಲಯದ ಅಧಿಕಾರಿಯೊಬ್ಬರು ತಿಳಿಸಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು
ಕೆಆರ್‌ಎಸ್*	124.80	124.50	28,411	30,370
ಹಾರಂಗಿ	2,859	2,858.02	2,050	2,050
ಕಬಿನಿ	2,284	2,283.12	7,895	5,000
ಹೇಮಾವತಿ	2,922	2,921.80	11,765	11,705
ಲಿಂಗನಮಕ್ಕಿ	1,819	1,816	18,724	3,579
ಸೂಪಾ (ಮೀ)	564	552.70	18,493	-
ವಾಣಿ	595	589	2,629	-
ತುಂಗಭದ್ರಾ	1,633	1,632.67	58,068	46,349
ಮಲಪ್ರಭಾ	2079.50	2,079.50	13,294	13,294
ಘಟಪ್ರಭಾ	2175	2,174.50	27,464	28,750
ಭದ್ರಾ	186	185	10,732	14,367
ಆಲಮಟ್ಟಿ (ಮೀ)	519.60	519.45	1,26,528	1,50,000
ನಾರಾಯಣಪುರ (ಮೀ)	492.25	491.38	1,55,000	1,63,860

* ನೆಲಮಟ್ಟದಿಂದ

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ವರ್ಚುವಲ್ ನೇರಪ್ರಸಾರ
ಇಂದು
ಮಿಸಳ್ ಹಾಪ್ಚಾ
ಬದುಕು ಜಟಕಾ ಬಂಡಿ
ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಕಿರುತೆರೆ ನಟ ಎಂ.ರವಿಪ್ರಸಾದ್ ನಿಧನ

ಪ್ರಜಾವಾಣಿ ವಾರ್ತೆ

ಎಂ.ರವಿಪ್ರಸಾದ್

ಮಂಡ್ಯ: ರಂಗಭೂಮಿ, ಕಿರುತೆರೆ ನಟ ಎಂ. ರವಿಪ್ರಸಾದ್ (43) ಅನಾರೋಗ್ಯದಿಂದ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ನಿಧನರಾದರು.

ಅವರಿಗೆ ತಂದೆ, ಲೇಖಕ ಡಾ.ಎಚ್.ಎಸ್.ಮುದ್ದೇಗೌಡ, ತಾಯಿ, ಪತ್ನಿ, ಪುತ್ರ, ಇಬ್ಬರು ತಂಗಿಯರಿದ್ದಾರೆ. ಮಂಡ್ಯದ ಗೆಳೆಯರ ಬಳಗ, ಜನದನಿ ತಂಡಗಳ ಮೂಲಕ ರಂಗಕ್ಷೇತ್ರಕ್ಕೆ ಕಾಲಿಟ್ಟಿದ್ದ ಅವರು ನಂತರ ಕಿರುತೆರೆ ಧಾರಾವಾಹಿ, ಸಿನಿಮಾಗಳಲ್ಲಿ ಅಭಿನಯಿಸಿ 'ಮಂಡ್ಯ ರವಿ' ಎಂದೇ ಪ್ರಸಿದ್ಧಿ ಪಡೆದಿದ್ದರು. ಎಂ.ಎ ಇಂಗ್ಲಿಷ್, ಎಲ್‌ಎಲ್‌ಬಿ ಪದವೀಧರರಾಗಿದ್ದ ಅವರು ನಟನಾ ಕ್ಷೇತ್ರವನ್ನೇ ವೃತ್ತಿಯಾಗಿ ಸ್ವೀಕರಿಸಿದ್ದರು.

ಟಿ.ಎಸ್. ನಾಗಾಭರಣ ನಿರ್ದೇಶನದ 'ಮಹಾಮಾಯಿ' ಧಾರಾವಾಹಿ ಮೂಲಕ ಕಿರುತೆರೆಗೆ ಕಾಲಿಟ್ಟಿದ್ದರು. ಟಿ.ಎನ್. ಸೀತಾರಾಮ್ ಅವರ ಬಹುತೇಕ ಧಾರಾವಾಹಿಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದರು. ಮಿಂಚು, ಮುಕ್ತ ಮುಕ್ತ, ಮಗಳು ಜಾನಕಿ, ಚಿತ್ರಲೇಖ, ಯಶೋಧೆ, ವರಲಕ್ಷ್ಮಿ ಸ್ಟೋರ್ಸ್ ಧಾರಾವಾಹಿಗಳು ಖ್ಯಾತಿ ತಂದುಕೊಟ್ಟಿದ್ದವು. 'ಮಗಳು ಜಾನಕಿ' ಯಲ್ಲಿ 'ಚಂದು ಬಾರ್ಗಿ' ಪಾತ್ರದ ಮೂಲಕ ಗಮನ ಸೆಳೆದಿದ್ದರು. ಕಾಫಿ ತೋಟ ಸೇರಿದಂತೆ ಹಲವು ಸಿನಿಮಾಗಳಲ್ಲೂ ನಟಿಸಿದ್ದರು.

ಒಂದೆರಡು ಪುಟಗಳ ಸಂಭಾಷಣೆಯನ್ನು ನೀಡಿದರೆ ಸಾಕು. ಅರ್ಧಗಂಟೆಯೊಳಗೆ ಸಿದ್ಧರಾಗಿ ಪಾತ್ರದೊಳಗೆ ಪ್ರವೇಶಿಸಿ ಬಿಡುತ್ತಿದ್ದರು ಎಂದು ಅವರ ಆಪ್ತರು ತಿಳಿಸಿದ್ದಾರೆ.

ಅಂತ್ಯಕ್ರಿಯೆ ನಗರದ ಕಲ್ಲಹಳ್ಳಿಯ ರುದ್ರಭೂಮಿಯಲ್ಲಿ ಗುರುವಾರ ಮಧ್ಯಾಹ್ನ 1 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನ.ರತ್ನಗೆ 'ದಸರಾ ರಂಗ ಪುರಸ್ಕಾರ'

ಪ್ರಜಾವಾಣಿ ವಾರ್ತೆ



ನ.ರತ್ನ

ಮೈಸೂರು: ಇಲ್ಲಿನ ರಂಗಾಯಣದ 2022ನೇ ಸಾಲಿನ 'ದಸರಾ ರಂಗಗೌರವ ಪುರಸ್ಕಾರ'ಕ್ಕೆ ಖ್ಯಾತ ನಾಟಕಕಾರ ನ.ರತ್ನ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ₹ 10 ಸಾವಿರ, ಫಲಕವನ್ನು ಒಳಗೊಂಡಿದೆ.

'ರತ್ನ ಅವರು ರಂಗಭೂಮಿಯ ಬೆಳವಣಿಗೆಗೆ ಅಪಾರ ಕೊಡುಗೆ ನೀಡಿದ್ದನ್ನು ಪರಿಗಣಿಸಿ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ. ಅ.4ರಂದು ರಂಗಾಯಣದ ಭೂಮಿಗೀತದಲ್ಲಿ ನಡೆಯುವ ದಸರಾ ರಂಗೋತ್ಸವದ ಸಮಾರೋಪ ಸಮಾರಂಭದಲ್ಲಿ ಪ್ರದಾನ ಮಾಡಲಾಗುವುದು' ಎಂದು ರಂಗಾಯಣದ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಪತ್ರಿಕಾಗೋಷ್ಠಿಯಲ್ಲಿ ಬುಧವಾರ ತಿಳಿಸಿದರು.

'ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನೀಲ್ ಕುಮಾರ್ ಭಾಗವಹಿಸಲಿದ್ದಾರೆ. ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ' ಎಂದರು.

'ರಂಗಭೀಷ್ಮ ಬಿ.ವಿ.ಕಾರಂತರ ಜನ್ಮೋತ್ಸವದ ಅಂಗವಾಗಿ ಸೆ.19ರಿಂದ 23ರವರೆಗೆ 'ಭಾರತೀಯ ರಂಗ ಸಂಗೀತೋತ್ಸವ' ಹಾಗೂ ದಸರಾ ಮುನ್ನದಿನವಾದ ಸೆ.25ರಿಂದ ಅ.4ರವರೆಗೆ ದಸರ ರಂಗೋತ್ಸವ ಆಯೋಜಿಸಲಾಗಿದೆ. 10 ನಾಟಕಗಳ ಪ್ರದರ್ಶನವಿರಲಿದೆ. ಈ ಎಲ್ಲ ಕಾರ್ಯಕ್ರಮಗಳಿಗೆ ಉಚಿತ ಪ್ರವೇಶವಿರುತ್ತದೆ' ಎಂದು ತಿಳಿಸಿದರು.

'ಅಧಿವೇಶನದ ಬಳಿಕ ಎಸ್‌.ಪಿ ಕಚೇರಿಗೆ, ಶಾಸಕರ ಮನೆಗೆ ಮುತ್ತಿಗೆ'

ಮಡಿಕೇರಿ: 'ವಿಧಾನಸಭೆ ಅಧಿವೇಶನದ ಬಳಿಕ ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಹಾಗೂ ಇಲ್ಲಿನ ಶಾಸಕರ ಮನೆಗೆ ಮುತ್ತಿಗೆ ಹಾಕಲಾಗುವುದು' ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ತಿಳಿಸಿದರು.

'ಸಿದ್ದರಾಮಯ್ಯ ಅವರನ್ನು ಕಂಡರೆ ಬಿಜೆಪಿಗೆ ಭಯವಿರುವುದರಿಂದಲೇ ಅವರ ಮೇಲೆ ಕೋಳಿಮೊಟ್ಟೆ ಎಸೆಯಲಾಯಿತು. ಅವರನ್ನು ಟೀಕಿಸುವುದಕ್ಕೆ 'ಜನಸ್ಪಂದನ'ವನ್ನು ಮೀಸಲಿಡಲಾಯಿತು. ಕೊಡಗಿನ ಶಾಸಕರು ಮುಂಬರುವ ಚುನಾವಣೆಯಲ್ಲಿ ಟಿಕೆಟ್ ಗಳಿಸಲು ಸಿದ್ದರಾಮಯ್ಯ ವಿರುದ್ಧ ಪ್ರತಿಭಟನೆಗೆ ಕುಮ್ಮಕ್ಕು ನೀಡಿದರು' ಎಂದು ಇಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

'ಕೊಡಗೇನೂ ಶಾಸಕ ಕೆ.ಜಿ. ಬೋಪಯ್ಯ ಹಾಗೂ ಎಂ.ಪಿ.ಅಪ್ಪಚ್ಚು ರಂಜನ್ ಅವರ ಆಸ್ತಿಯೇ?' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಪಾಯಮಟ್ಟ ಮೀರಿ ಹರಿಯುತ್ತಿರುವ ಘಟಪ್ರಭಾ

ಗ್ರಾಮಗಳಿಗೆ ನುಗ್ಗಿದ ಪ್ರವಾಹ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಘಟಪ್ರಭಾ ನದಿಯು ಅಪಾಯ ಮಟ್ಟ ಮೀರಿ ಹರಿಯುತ್ತಿದ್ದು, ಮುಧೋಳ ತಾಲ್ಲೂಕಿನ ಮಿರ್ಜಿ ಹಾಗೂ ಮಳಲಿ ಗ್ರಾಮಗಳಿಗೆ ನೀರು ನುಗ್ಗಿದೆ. ಮಿರ್ಜಿ ಗ್ರಾಮದ ಆಯುರ್ವೇದ ಆಸ್ಪತ್ರೆಯಲ್ಲಿ ಬುಧವಾರ ಕಾಳಜಿ ಕೇಂದ್ರ ಆರಂಭಿಸಿದ್ದು, 16 ಕುಟುಂಬಗಳ ಸದಸ್ಯರಿಗೆ ಆಶ್ರಯ ನೀಡಲಾಗಿದೆ.

ಯಾದವಾಡ ಸೇತುವೆ ಮುಳುಗಡೆಯಾಗಿದೆ. ಈಗಾಗಲೇ ಮುಧೋಳ ತಾಲ್ಲೂಕಿನ 10 ಹಾಗೂ ರಬಕವಿ ಬನಹಟ್ಟಿ ತಾಲ್ಲೂಕಿನ ಒಂದು ಬ್ಯಾರೇಜ್ ಮುಳುಗಡೆಯಾಗಿವೆ. ರೂಗಿ, ಮೆಟಗುಡ್ಡ, ಉತ್ತೂರ, ಒಂಟಗೋಡಿ, ಚನ್ನಾಳ, ರಂಜನಗಿ, ಮಲ್ಲಾಪೂರ ಯಾದವಾಡ ಕಡೆ ಹೋಗುವ ರಸ್ತೆ ಮಾರ್ಗ ಕಡಿತಗೊಂಡಿದೆ.

ಮಿರ್ಜಿ, ಒಂಟಗೋಡಿ, ಅಕ್ಕಿಮರಡಿ, ನಾಗರಾಳ, ಮಳಲಿ, ಚನ್ನಾಳ, ಜಾಲಿಬೆರಿ, ಉತ್ತೂರು, ಜಿರಗಾಳ, ಇಂಗಳಗಿ, ಯಡಹಳ್ಳಿ, ಅಂತಾಪುರ, ಬುದ್ನಿ ಬಿ.ಕೆ, ಬಿದರಿ, ಮಾಚಕನೂರ ಸೇರಿದಂತೆ ಹಲವು ಗ್ರಾಮಗಳ ಸಾವಿರಾರು ಎಕರೆಯಲ್ಲಿನ ಬೆಳೆ ಜಲಾವೃತಗೊಂಡಿವೆ.

ಬಾಗಲಕೋಟೆಯ ಘಟಪ್ರಭಾ ನದಿಯು ಅಪಾಯ ಮಟ್ಟ ಮೀರಿ ಹರಿಯುತ್ತಿದ್ದು, ಯಾದವಾಡ ಸೇತುವೆ ಮುಳುಗಡೆಯಾಗಿರುವುದು

ತಗ್ಗಿದ ಮಳೆ- ನದಿ ನೀರಿನ ಮಟ್ಟ ಯಥಾಸ್ಥಿತಿ: ಬೆಳಗಾವಿ ನಗರದಲ್ಲಿ ಮಧ್ಯಾಹ್ನ ತುಂತುರು ಮಳೆ ಸುರಿಯಿತು. ಎರಡು ದಿನಗಳ ಹಿಂದೆ ಮಹಾರಾಷ್ಟ್ರ ಹಾಗೂ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಸುರಿದ ಮಳೆಯಿಂದಾಗಿ ಕೃಷ್ಣಾ ಹಾಗೂ ಅದರ ಉಪನದಿಗಳ ನೀರಿನ ಮಟ್ಟ ಯಥಾಸ್ಥಿತಿಯಲ್ಲಿದೆ.

ಬೆಟ್ಟದಹಳ್ಳಿ: 20 ಸೆಂ.ಮೀ ಮಳೆ

ಮಡಿಕೇರಿ: ಕೊಡಗು ಜಿಲ್ಲೆಯ ಕೆಲವೆಡೆ ಮಳೆ ಬುಧವಾರವೂ ಮುಂದುವರಿದಿದೆ. ಸೋಮವಾರಪೇಟೆ ತಾಲ್ಲೂಕಿನ ಬೆಟ್ಟದಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 20 ಸೆಂಟಿ ಮೀಟರ್‌ನಷ್ಟು ನಷ್ಟು ಭಾರಿ ಮಳೆ ಸುರಿದಿದೆ. ಮಡಿಕೇರಿ ನಗರದಲ್ಲೂ ಸಾಧಾರಣ ಮಳೆಯಾಗಿದೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಕಾಲುವೆಗೆ ಬಿದ್ದ ಆಟೊ: ಮೂವರ ಸಾವು

ಬಳ್ಳಾರಿ: ಕೃಷಿ ಕಾರ್ಮಿಕರನ್ನು ಕರೆದೊಯ್ಯುತ್ತಿದ್ದ ಆಟೊ ತಾಲ್ಲೂಕಿನ ಕೃಷ್ಣಾನಗರ ಕ್ಯಾಂಪ್ ಸಮೀಪ ಬುಧವಾರ ಬೆಳಿಗ್ಗೆ ಉರುಳಿ ಬಿದ್ದು ಮೂವರು ಮೃತಪಟ್ಟಿದ್ದು, ಇನ್ನೂ ಮೂವರು ತುಂಗಭದ್ರಾ ಮೇಲ್ಮಟ್ಟದ ಕಾಲುವೆಯಲ್ಲಿ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ.

ಮೃತರನ್ನು ಲಿಂಗಮ್ಮ (35), ದುರ್ಗಮ್ಮ (35). ಪುಷ್ಪಾವತಿ (17) ಎಂದು ಗುರುತಿಸಲಾಗಿದೆ. ನೀರು ಕುಡಿದು ಅಸ್ವಸ್ಥರಾಗಿದ್ದ ಪುಷ್ಪಾವತಿ ವಿಮ್ಸ್ ಆಸ್ಪತ್ರೆ ದಾರಿಯಲ್ಲಿ ಮೃತ ಪಟ್ಟಿದ್ದಾರೆ. ನಾಗರತ್ನ (18), ಕುಡತಿನಿ ಮಲ್ಲಮ್ಮ (29) ಮತ್ತು ಹುಲಿಗೆಮ್ಮ (28) ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ. ನಾಪತ್ತೆಯಾದವರ ಶೋಧ ಕಾರ್ಯಾಚರಣೆ ನಡೆಯುತ್ತಿದೆ.

ಆಟೊ ನಿಯಂತ್ರಣ ತಪ್ಪಿ ಕಾಲುವೆಗೆ ಉರುಳುತ್ತಿದ್ದಂತೆ ಬಾಲಕ ಮಹೇಶ ಹಾಗೂ ಚಾಲಕ ಭೀಮೇಶ ಆಟೊದಿಂದ ಜಿಗಿದು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಕೃಷಿಕರು ಕೆಲವರನ್ನು ಕಾಲುವೆಯಿಂದ ಹೊರಗೆಳೆದು ರಕ್ಷಣೆ ಮಾಡಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೈದುಲು ಅಡಾವತ್ ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದರು. ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ನ್ಯಾಷನಲ್ ಕಂಪನಿ ಲಾ ಟ್ರಿಬ್ಯುನಲ್ (NCLT) ಬೆಂಗಳೂರು,
I.A. NO. 390 / 2021 INCP (IB)
NO. 31/BB/2021

ಇವರ ನಡುವೆ :
ಶ್ರೀ ರವೀಂದ್ರ ಬೆಳೆಯೂರು
ಇ–ಇನ್‌ಫ್ರಾಸ್ಟ್ರಕ್ಚರ್ & ಎಂಟರ್‌ಟೇನ್‌ಮೆಂಟ್ (ಇಂಡಿಯಾ) ಪ್ರೈ. ಲಿಮಿಟೆಡ್ (ಕಾರ್ಪೊರೇಟ್ ಸಾಲಗಾರ ಕಂಪನಿ) ಯ ಲಿಕ್ವಿಡೇಟರ್
...ಅರ್ಜಿದಾರರು
ಮತ್ತು
ಶ್ರೀ ಗಿರೀಶ್ ಅನಂತ್ ಜೋಗ್ ಮತ್ತು ಇತರರು
....ಪ್ರತಿವಾದಿಗಳು
ಗೆ,
1. ಶ್ರೀ ಗಿರೀಶ್ ಅನಂತ ಜೋಗ್
ಕಾರ್ಪೊರೇಟ್ ಸಾಲಗಾರ ಕಂಪನಿಯ ನಿರ್ದೇಶಕರು
DIN: 01121023.
ವಿಳಾಸ : ಮಧುರಾಕುಂಜ ಅಪಾರ್ಟ್‌ಮೆಂಟ್, ಬ್ಲಾಕ್ ನಂ. 10, ಕ್ರಮ ಸಂಖ್ಯೆ 126, ಪೌಡ್ ರಸ್ತೆ, ಕೊತ್ರೂಡ್, ಪುಣೆ, ಮಹಾರಾಷ್ಟ್ರ–411 038
2. ಶ್ರೀ ಅಣ್ಣಯ್ಯಪ್ಪ ಸೋಮಶೇಖರ
ಕಾರ್ಪೊರೇಟ್ ಸಾಲಗಾರ ಕಂಪನಿಯ ನಿರ್ದೇಶಕರು
DIN: 02836088.
ವಿಳಾಸ : ನಂ. 22–24, ಮಂಜುನಾಥ ಕೃಪಾ, ಜಕ್ಕೂರು ಮುಖ್ಯ ರಸ್ತೆ, ಅಮೃತಹಳ್ಳಿ, ಬೆಂಗಳೂರು–560 092
3. ಶ್ರೀ ವೆಂಕಟೇಗೌಡ ಚಂದ್ರಪ್ಪ
ಕಾರ್ಪೊರೇಟ್ ಸಾಲಗಾರ ಕಂಪನಿಯ ನಿರ್ದೇಶಕರು
DIN: 08666769.
ವಿಳಾಸ : ಮಾಚೇನಹಳ್ಳಿ, ಹೊಲದಮನೆ, ತರೀಕೆರೆ, ಚಿಕ್ಕಮಗಳೂರು, ಚಿಕ್ಕಮಗಳೂರು, ಕರ್ನಾಟಕ–577 228
NCLT ನಿಯಮಗಳು 2016ರ ನಿಯಮ 38(4)ರ ಅಡಿಯಲ್ಲಿ ಸಮನ್ಸ್ ಪತ್ರಿಕಾ ಪ್ರಕಟಣೆಗಾಗಿ
ಮೇಲೆ ಹೆಸರಿಸಿದ ಅರ್ಜಿದಾರರು, ದಿವಾಳಿತನ ಮತ್ತು ದಿವಾಳಿ ಸಂಹಿತೆಯ ಸೆಕ್ಷನ್ 19(2)ರ ಅಡಿಯಲ್ಲಿ NCLT ನಿಯಮಗಳು, r/w ರೂಲ್ 11 ರಂತೆ ಪ್ರತಿವಾದಿಗಳ ವಿರುದ್ಧ ಎಲ್ಲಾ ಆಸ್ತಿಗಳನ್ನು ಹಸ್ತಾಂತರಿಸುವಂತೆ, ನೋಂದಾಯಿತ ಕಛೇರಿಯ ವಿವರಗಳನ್ನು ಒದಗಿಸುವಂತೆ ಮತ್ತು ಲಿಕ್ವಿಡೇಟರ್‌ರೊಡನೆ ಸಹಕರಿಸುವಂತೆ ನಿರ್ದೇಶನ ಕೋರಿ I.A. No. 390 / 2021 ಅನ್ನು ಸಲ್ಲಿಸಿದ್ದಾರೆ. ಮಾನ್ಯ ಟ್ರಿಬ್ಯುನಲ್‌ನ ಮುಂದೆ ತಾವು ಖುದ್ದಾಗಿ ಅಥವಾ ನಿಮ್ಮನ್ನು ಪ್ರತಿನಿಧಿಸುವ ಸಕ್ರಮವಾಗಿ ನೇಮಿಸಲ್ಪಟ್ಟ ವಕೀಲರ ಮೂಲಕ ಅಥವಾ ಅಧಿಕೃತವಾಗಿ ಕಾನೂನಾತ್ಮಕವಾಗಿ ನೇಮಿಸಲ್ಪಟ್ಟ ಬೇರೆ ಯಾರ ಮೂಲಕವಾದರೂ ದಿನಾಂಕ 11.10.2022 ರಂದು ಬೆಳಿಗ್ಗೆ 11.00 ಗಂಟೆಗೆ ಹಾಜರಾಗುವುದು. ತಪ್ಪಿದಲ್ಲಿ, ತಮ್ಮ ಅನುಪಸ್ಥಿತಿಯಲ್ಲಿ ವಿಚಾರಣೆ ನಡೆದು ತೀರ್ಮಾನಿಸಲಾಗುವುದು.
ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಇದೇ 12ನೇ ಸೆಪ್ಟೆಂಬರ್ 2022 ರಂದು ಕೊಡಲಾಗಿದೆ.
ಕೋರ್ಟ್ ಆಫೀಸರ್
ನ್ಯಾಷನಲ್ ಕಂಪನಿ ಲಾ ಟ್ರಿಬ್ಯುನಲ್ (NCLT) ಬೆಂಗಳೂರು

ಡಾ|| ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
#32, ಲಿಡ್‌ಕರ್ ಭವನ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಏರಿಯಾ, ವಸಂತನಗರ, ಬೆಂಗಳೂರು–560052. ದೂರವಾಣಿ ಸಂಖ್ಯೆ: 080–22288895/22288897
ಇ–ಮೇಲ್: lidkar2018@gmail.com
ಟೆಂಡರ್ ಸಂಖ್ಯೆ : ಲಿಡ್‌ಕರ್/ಆಡಳಿತ/ಅಲ್ಪಾವಧಿಇ–ಟೆಂಡರ್/2022–23/1421 ದಿನಾಂಕ: 13.09.2022
ಅಲ್ಪಾವಧಿ – ಟೆಂಡರ್ ಪ್ರಕಟಣೆ
ನಿಗಮದ ಕೇಂದ್ರ ಕಛೇರಿಗೆ ಲೇಖನಾ ಸಾಮಗ್ರಿಗಳನ್ನು Competent Authority ಯಿಂದ ನೋಂದಾಯಿಸಲ್ಪಟ್ಟ ಸರಬರಾಜುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 20.09.2022 ಮಧ್ಯಾಹ್ನ 2.00 ಗಂಟೆ. ತಾಂತ್ರಿಕ ಬಿಡ್‌ನ್ನು ದಿನಾಂಕ 21.09.2022 ಸಂಜೆ 4.00 ಗಂಟೆಗೆ ತೆರೆಯಲಾಗುವುದು. ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ಕರೆಯಲಾಗಿದ್ದು, ಅವಶ್ಯವಿರುವ ವಿವರಗಳನ್ನು ವೆಬ್‌ಸೈಟ್: https://eproc.karnataka.gov.in ಮೂಲಕ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
ಸಹಿ/–
ಪ್ರಧಾನ ವ್ಯವಸ್ಥಾಪಕರು (ಪ್ರ) ಮತ್ತು ಟೆಂಡರ್ ಪ್ರಕಟಿಸುವ ಪ್ರಾಧಿಕಾರಿ
DIPR/DDU/AAPL/2205/2021-22

ಕರ್ನಾಟಕ ಸರ್ಕಾರ
ಜಲಾನಯನ ಅಭಿವೃದ್ಧಿ ಇಲಾಖೆ
ಆಯುಕ್ತರ ಕಾರ್ಯಾಲಯ, 7ನೇ ಮಹಡಿ, ಕ.ಗೃ.ಮಂ ಸಂಕೀರ್ಣ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009
ಸಂ: ಜಅಇ/ಉಕೃನಿ/ರಿವಾರ್ಡ್/ಸಂ/ಎಫ್‌ಎಂಸಿ/ಆರ್.ಎಫ್.ಪಿ/2022–23 ದಿನಾಂಕ: 14.09.2022
ಟೆಂಡರ್ ಆಹ್ವಾನಿಸುವ ಸೂಚನೆ
ಕರ್ನಾಟಕ ಇ–ಸಂಗ್ರಹಣಾ ವೇದಿಕೆ ಮೂಲಕ ಇಲಾಖೆಗೆ REWARD ಯೋಜನೆಯಡಿ Financial Management Consultancy (FMC) ಸಂಸ್ಥೆಯನ್ನು ಆಯ್ಕೆ ಮಾಡಲು pre qualification ಮತ್ತು Request for Proposal (RFP) ನ್ನು ಆಹ್ವಾನಿಸುತ್ತಿದೆ. ಸಂಬಂಧಪಟ್ಟ ವಿವರವಾದ ಮಾಹಿತಿಯುಳ್ಳ ಟೆಂಡರ್ ದಾಖಲಾತಿಯನ್ನು ಕರ್ನಾಟಕ ಇ–ಸಂಗ್ರಹಣಾ ವೇದಿಕೆ (https://eproc.karnataka.gov.in)ಯಲ್ಲಿ ಅಳವಡಿಸಲಾಗಿರುತ್ತದೆ. ದಾಖಲಾತಿಗಳು ಲಭ್ಯವಾಗುವ ದಿನಾಂಕ: 14.09.2022 ಮತ್ತು ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 15.10.2022 ಸಂಜೆ 5.00 ಗಂಟೆಯವರೆಗೆ. ಇಎಂಡಿ ಮೊತ್ತ ರೂ.3,20,000/– ಗಳಾಗಿದ್ದು pre proposal ಸಭೆಯನ್ನು ದಿನಾಂಕ: 23.09.2022 ರಂದು ಬೆಳಿಗ್ಗೆ 11.00 ಗಂಟೆಗೆ ನಿಗದಿಪಡಿಸಿದೆ.
ಸಹಿ/–
ನಿರ್ದೇಶಕರು
ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು
DIPR/CP/2212/Zenkar/2022-23

ಕರ್ನಾಟಕ ಸರ್ಕಾರ
(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ.
ದೂರವಾಣಿ ಸಂ:(0831)2463850/ಫ್ಯಾಕ್ಸ್ ಸಂ:(0831) 2423008
No.EE/MI&GWDDD/BGM/TND/AE-1/2022-23/3088 Date:13-09-2022
ಅಲ್ಪಾವಧಿ ಟೆಂಡರ ಪ್ರಕಟಣೆ (KW-1&2)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಅಧಿನಿಯಮ–2000ರ ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಅರ್ಹ ಗುತ್ತಿಗೆದಾರರಿಂದ ಐಟಂ ದರದಂತೆ ಗುತ್ತಿಗೆಯನ್ನು "ಇ ಪ್ರೋಕ್ಯೂರಮೆಂಟ್" ಮುಖಾಂತರ ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಬೆಳಗಾವಿ ಇವರಿಂದ ಆಹ್ವಾನಿಸಲಾಗಿದೆ. ಬೆಳಗಾವಿ/ ಗೋಕಾಕ/ ಅಥಣಿ ಉಪ ವಿಭಾಗಗಳ ವ್ಯಾಪ್ತಿಯಲ್ಲಿಯ 4702/ಎಸ್.ಸಿ.ಪಿ. ಲೆಕ್ಕ ಶೀರ್ಷಿಕೆ ಯಡಿಯಲ್ಲಿಯ 08 ಕಾಮಗಾರಿಗಳಿಗಾಗಿ ಟೆಂಡರ ಕರೆಯಲಾಗಿದ್ದು, ಅಂದಾಜು ಮೊತ್ತ ಕನಿಷ್ಠ ರೂ.2.45ಲಕ್ಷಗಳು ಹಾಗೂ ಗರಿಷ್ಠ ರೂ.85.00ಲಕ್ಷಗಳು. ಸದರಿ ಕಾಮಗಾರಿಗಳಿಗೆ ಗುತ್ತಿಗೆದಾರರು ದರಗಳನ್ನು GST ರಹಿತ (ಎ.ನಿ.ಯೋ.ವಿದ್ಯುತ್ತೀಕರಣ ಹೊರತುಪಡಿಸಿ) ನಮೂದಿಸುವುದು ಮತ್ತು ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ GST ಪ್ರತ್ಯೇಕವಾಗಿ ನೀಡಲಾಗುವುದು ಹಾಗೂ ಹೆಚ್ಚುವರಿ ಗುತ್ತಿಗೆ ಅವಧಿಯಲ್ಲಿ GST ದರಗಳಲ್ಲಿ ಹೆಚ್ಚಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವುದು. ಸದರಿ ಕಾಮಗಾರಿಗಳ ವಿವರಗಳನ್ನು "ಇ–ಪ್ರೋಕ್ಯೂರಮೆಂಟ್"ನಲ್ಲಿ ದಿನಾಂಕ:14–09–2022 ರಿಂದ ದಿನಾಂಕ:21–09–2022 ರವರೆಗೆ ಪಡೆಯಬಹುದು.
1.ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ:21–09–2022 ಸಾಯಂಕಾಲ 4.00 ಗಂಟೆಯವರೆಗೆ, 2. ಟೆಂಡರ ತೆರೆಯುವ ದಿನಾಂಕ: 22–09–2022 ಸಾಯಂಕಾಲ 4.30 ಗಂಟೆಯವರೆಗೆ, 3.ಹೆಚ್ಚಿನ ವಿವರಗಳಿಗೆ ಸಂಪರ್ಕಿಸುವ ವಿಳಾಸ:ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ. 4.ಅಂತರಜಾಲ ತಾಣದ ವಿಳಾಸ:www.e-proc.karnataka.gov.in
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಸ.ನೀ ಮತ್ತು ಅಂ.ಅ.ಇ ವಿಭಾಗ, ಬೆಳಗಾವಿ.
DIPR/BGM/RO-NO-841/MCA/2022-23

Karnataka Veterinary, Animal & Fisheries Sciences University
P.B. No. 6, Nandinagar, Bidar-585 226, Karnataka
No.R/UG-Admn/FN/NRI/NRI's-C/NRI-S/2022-23/ Date: 13.09.2022
NOTIFICATION
Sub: Admission to B.V.Sc. & A. H., B.Tech (D.Tech) and B.F.Sc., Undergraduate Degree Programme under Foreign Nationals /Non-Resident Indian /Non-Resident Indian Children /Non-Resident Indian Sponsored Candidates at KVAFSU, Bidar for the Academic Year 2022-2023.
Online applications in the prescribed proforma are invited from the eligible Foreign Nationals (FN), Non-Resident Indian (NRI), Non-Resident Indian Children (NRI's-C) and Non-Resident Indian Sponsored Candidates (NRI-S) for admission to B.V.Sc. & A.H., B.Tech (D.Tech) & B.F.Sc., degree programmes at KVAFSU, Bidar for the academic year 2022-2023.
The Candidates who desirous to apply for multiple degree programmes must submit separate application along with prescribed application fee for each of such applications payable in Indian Rupees of 10,000/- only.
Application Fee to be paid (ONLINE) at the time of submission of the ONLINE application. The submission of ONLINE application will be opened from 15.09.2022 to 20.10.2022 (IST 23:59:59 midnight).
For more details please visit the University website: www.kvafsu.edu.in
By order
Sd/-
(S.SIVASANKAR, IFS)
REGISTRAR
KVAFSU, Bidar

ಉಪನಿರ್ದೇಶಕರು (ಗ್ರಾಕೈ).ರವರ ಕಛೇರಿ
ಗ್ರಾಮೀಣ ಕೈಗಾರಿಕೆಗಳು, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕೈಗಾರಿಕಾ ಕೇಂದ್ರ ಕಟ್ಟಡ ಚಿಕ್ಕಮಗಳೂರು–572102, ದೂರವಾಣಿ : 295788
ಸಂಖ್ಯೆ: ಜಿಪಂಚಿ/ಗ್ರಾಕೈ/ಉನಿ/ಖರೀದಿ/2022–23 ದಿನಾಂಕ : 09.09.2022
ಇ–ಪ್ರೊಕ್ಯುರ್‌ಮೆಂಟ್ ಟೆಂಡರ್ ಪ್ರಕಟಣೆ
2021–22 ನೇ ಸಾಲಿಗೆ ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತ ಸುಧಾರಿತ ಉಪಕರಣ ಯೋಜನೆಯಡಿ: ಮರಗೆಲಸ, ಗಾರೆಕೆಲಸ, ಕ್ಷೌರಿಕ, ದೋಬಿ, ಕಮ್ಮಾರಿಕೆ ಕಸುಬಿನ ಒಟ್ಟು 375 ಫಲಾನುಭವಿಗಳಿಗೆ ಸರಬರಾಜು ಮಾಡಲು ಸುಧಾರಿತ ಉಪಕರಣ ಖರೀದಿಗಾಗಿ ದಿನಾಂಕ : 09/09/2022 ರಂದು. ಇ–ಪ್ರೊಕ್ಯುರ್‌ಮೆಂಟ್ ಮುಖಾಂತರ ಅಹ್ವಾನಿಸಲಾಗಿದ್ದು, ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್ www.eproc.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು, ಟೆಂಡರ್ ಮಾಹಿತಿಯನ್ನು ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದು, ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ 10/10/2022, ಅಪರಾಹ್ನ 4.00 ಗಂಟೆವರೆಗೆ, ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು ಹಾಗೂ ವೆಬ್‌ಸೈಟ್ www.eproc.karnataka.gov.in [IC/2022-23/IND895] ನಲ್ಲಿ ಲಾಗಿನ್ ಆಗಿ ಪಡೆಯಬಹುದು.
ಸಹಿ/–
ಉಪನಿರ್ದೇಶಕರು (ಗ್ರಾಕೈ)
ಗ್ರಾಮೀಣ ಕೈಗಾರಿಕೆಗಳು, ಜಿಪಂ, ಚಿಕ್ಕಮಗಳೂರು

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ
ನಂ.1/14, 2ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟ ಬಿಲ್ಡಿಂಗ್, ಸಿ.ಎಸ್.ಐ.ಕಾಂಪೌಂಡ್, 3ನೇ ಕ್ರಾಸ್, ಮಿಷನ್ ರಸ್ತೆ, ಬೆಂಗಳೂರು–560027.
ಸಂಖ್ಯೆ: ರೇರಾ/ಲೆಕ್ಕಪತ್ರ ಶಾಖೆ/41/2022 ದಿನಾಂಕ: 8/9/2022
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಈ ಕಛೇರಿಯ ಉಪಯೋಗಕ್ಕಾಗಿ ಹೊರ ಸಂಪನ್ಮೂಲದಿಂದ ಬಾಡಿಗೆ ವಾಹನಗಳ ಸೇವೆಯನ್ನು ಪಡೆಯಲು ಕರ್ನಾಟಕ ಪಾರದರ್ಶಕ ಅಧಿನಿಯಮ 1999–2000 ಮೇರೆಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವಿಳಾಸ https://eproc.karnataka.gov.in ರಲ್ಲಿ ಪರಿಶೀಲಿಸಿ ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು. ಇ–ಪೋರ್ಟಲ್‌ನಲ್ಲಿ ಕಾಣಿಸಿದ ನಿಬಂಧನೆಗಳು ಟೆಂಡರ್ ಇ.ಎಂ.ಡಿ ಮೊತ್ತ ಹಾಗೂ ಇತರೆ ವಿವರಗಳನ್ನು ಗಮನಿಸಿ ಕ್ರಮವಹಿಸುವುದು. ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ.ಸ.	ವಿಷಯ	ದಿನಾಂಕ
1	ಟೆಂಡರನ್ನು ಇ–ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭವಾಗುವ ದಿನಾಂಕ	08/09/2022
2	ದ್ವಿ ಲಕೋಟೆ ಪದ್ಧತಿಯಂತೆ ಇ–ಪೋರ್ಟಲ್‌ನಲ್ಲಿ ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ	19/09/2022
3	ದ್ವಿ ಲಕೋಟೆ ಪದ್ಧತಿಯಂತೆ ಇ–ಪೋರ್ಟಲ್‌ನಲ್ಲಿ ಟೆಂಡರನ್ನು ತೆರೆಯುವ ದಿನಾಂಕ	22/09/2022

ಇ–ಪ್ರೋಕ್ಯೂರ್‌ಮೆಂಟ್ ವಿಳಾಸ: https://eproc.karnataka.gov.inರಲ್ಲಿ ಪರಿಶೀಲಿಸಿ ಸೂಕ್ತ ದಾಖಲಾತಿಗಳೊಂದಿಗೆ ಸಲ್ಲಿಸಬಹುದು.
ಸಹಿ/– ಕಾರ್ಯದರ್ಶಿಗಳು
ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/2207/ಶಿರಡಿಸಾಯಿ/2022–23

ಕರ್ನಾಟಕ ಅರಣ್ಯ ಇಲಾಖೆ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬೆಂಗಳೂರು – 560083.
ದೂರವಾಣಿ: 080 29755405.
ಇ ಮೇಲ್ ಐಡಿ: dcfbannerghatta@gmail.com
ಸಂಖ್ಯೆ: ಎ3/ಬರಾಉ/ಸಿಆರ್–6/2022–23 ದಿನಾಂಕ: 13–09–2022
ಸಂಕ್ಷಿಪ್ತ ಟೆಂಡರ್ ಪ್ರಕಟಣೆ
ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಹಾರೋಹಳ್ಳಿ ವನ್ಯಜೀವಿ ವಲಯದ ಮರಳವಾಡಿ ರಾಹುತನಹಳ್ಳಿಯಲ್ಲಿ, 2022–23 ನೇ ಸಾಲಿನಲ್ಲಿ ವಲಯ ಅರಣ್ಯಾಧಿಗಳ ಕಛೇರಿಯನ್ನು ನಿರ್ಮಿಸುವ ಸಲುವಾಗಿ ಕಾಮಗಾರಿ ಕೈಗೊಳ್ಳಲು ಟೆಂಡರ್ ಆಹ್ವಾನಿಸಲಾಗಿದೆ. ಇ–ಟೆಂಡರ್ ಮೂಲಕ ದಿನಾಂಕ: 13–09–2022 ರಂದು ಟೆಂಡರ್ ಕರೆಯಲಾಗಿದೆ. ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಸಮಯ 27–09–2022 ರ ಸಂಜೆ 4.00 ಗಂಟೆಯವರೆಗೆ. ಕೆಲಸದ ಅಂದಾಜು ಮೌಲ್ಯ 30 ಲಕ್ಷ ರೂಪಾಯಿಗಳು. ಹೆಚ್ಚಿನ ವಿವರಗಳನ್ನು www.eproc.karnataka.gov.in ಮೂಲಕ ಪಡೆಯಬಹುದು.
ಸಹಿ/–
ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ವಾ.ಸಾ.ಸಂ.ಇ/ವಾಪ್ರ/2197/ಆಕಾರ್/22–23

❦ ಸುಭಾಷಿತ ❦

ಲೋಕದಲ್ಲಿ ಎಷ್ಟು ಜನರಿದ್ದಾರೋ ಅಷ್ಟು ಅನುಭವಗಳಿವೆ. ಅವುಗಳಲ್ಲಿ ಕೆಲವು ಗ್ರಾಹ್ಯವಾದವು, ಕೆಲವು ತ್ಯಾಜ್ಯ ಎಂದು ನಿರ್ಧಾರ ಮಾಡುವ ಒರೆಗಲ್ಲು ಯಾವುದು? ಅವರವರ ಸ್ವಂತ ಅನುಭವವೇ!

-ಜಿ.ಪಿ.ರಾಜರತ್ನಂ

ಕಪ್ಪನ್: ಜಾಮೀನು ದೊರೆತರೂ ಇಲ್ಲ ಬಿಡುಗಡೆಯ ಭಾಗ್ಯ

ಪತ್ರಕರ್ತ ಸಿದ್ದಿಕ್ ಕಪ್ಪನ್ ಅವರಿಗೆ ಸುಪ್ರೀಂ ಕೋರ್ಟ್ ಈಚೆಗೆ ಜಾಮೀನು ಮಂಜೂರು ಮಾಡಿರುವುದು 'ಜಾಮೀನು ಕೊಡಬೇಕಿರುವುದು ಸಹಜ' ಎಂಬ ಸ್ತುತ್ಯರ್ಹ ತತ್ವವನ್ನು ಪುನರುಚ್ಚರಿಸಿದಂತೆ ಆಗಿದೆ. ಅಷ್ಟೇ ಅಲ್ಲ, ಪೊಲೀಸರನ್ನು, ತನಿಖಾ ಸಂಸ್ಥೆಗಳನ್ನು ಮತ್ತು ನ್ಯಾಯದಾನದ ಪ್ರಕ್ರಿಯೆಯನ್ನೇ ವ್ಯಕ್ತಿಯನ್ನು ಶಿಕ್ಷಿಸಲು ಬಳಸಿಕೊಳ್ಳುವ ಹಟಕ್ಕೆ ಬಿದ್ದಿರುವ ಕಾರ್ಯಾಂಗ ವ್ಯವಸ್ಥೆಯ ಅಡಿಯಲ್ಲಿ ಜಾಮೀನಿಗೆ ಸಂಬಂಧಿಸಿದ ಈ ತತ್ವವು ಕ್ರಿಯೆಯಾಗಿ ಪರಿವರ್ತನೆ ಕಾಣುವಲ್ಲಿ ಎಷ್ಟು ಕಷ್ಟಗಳು ಇವೆ ಎಂಬುದನ್ನೂ ಈ ಪ್ರಕರಣವು ತೋರಿಸಿಕೊಟ್ಟಿದೆ. ಕಪ್ಪನ್ ಅವರು 700ಕ್ಕೂ ಹೆಚ್ಚು ದಿನಗಳನ್ನು ಜೈಲಿನಲ್ಲಿ ಕಳೆದಿದ್ದಾರೆ. ಅವರು ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಗಳನ್ನು ಅಲಹಾಬಾದ್ ಹೈಕೋರ್ಟ್ ಸೇರಿದಂತೆ ಹಲವು ನ್ಯಾಯಾಲಯಗಳು ತಿರಸ್ಕರಿಸಿದವು. ಕಪ್ಪನ್ ಅವರಿಗೆ ಸುಪ್ರೀಂ ಕೋರ್ಟ್ ಜಾಮೀನು ನೀಡಿದೆ. ಅವರಿಗೆ ಕೆಲವು ಷರತ್ತುಗಳನ್ನು ವಿಧಿಸಿದೆ. ಆದರೆ ಈ ಷರತ್ತುಗಳು ಕಠಿಣ ಅಲ್ಲ. ಅವು ಒಬ್ಬ ಪ್ರಜೆಯಾಗಿ ಕಪ್ಪನ್ ಹೊಂದಿರುವ ಹಕ್ಕುಗಳನ್ನು ಗೌರವಿಸುವಂತೆಯೇ ಇವೆ. ಕಪ್ಪನ್ ಅವರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕೂಡ ಅವು ಗೌರವಿಸುತ್ತವೆ. ದಲಿತ ಬಾಲಕಿಯೊಬ್ಬಳ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಹಾಗೂ ನಂತರ ನಡೆದ ಆಕೆಯ ಹತ್ಯೆಯ ಬಗ್ಗೆ ವರದಿ ಮಾಡಲು ಕಪ್ಪನ್ ಅವರು ಉತ್ತರಪ್ರದೇಶದ ಹಾಥರಸ್‌ಗೆ ತೆರಳುತ್ತಿದ್ದಾಗ, 2020ರಲ್ಲಿ ಅವರನ್ನು ಬಂಧಿಸಲಾಯಿತು. ಅವರ ವಿರುದ್ಧ ನಂಬಲಿಕ್ಕೇ ಆಗದಂತಹ ಆರೋಪಗಳನ್ನು ಹೊರಿಸಲಾಯಿತು. ಕರಾಳ ಕಾನೂನು 'ಅಕ್ರಮ ಚಟುವಟಿಕೆಗಳ ತಡೆ ಕಾಯ್ದೆ'ಯ (ಯುಎಪಿಎ) ಅಡಿಯಲ್ಲಿಯೂ ಅವರ ವಿರುದ್ಧ ಪ್ರಕರಣ ದಾಖಲಿಸಲಾಯಿತು. ಇದರಿಂದಾಗಿ ಕಪ್ಪನ್ ಅವರಿಗೆ ಜಾಮೀನು ಪಡೆಯುವುದು ಬಹುತೇಕ ಸಾಧ್ಯವೇ ಇಲ್ಲದಂತಾಗಿತ್ತು. ಅಶಾಂತಿ ಸೃಷ್ಟಿಸಲು ಮತ್ತು ಭಯೋತ್ಪಾದನೆಗೆ ಇವರು ಹಣ ಸಂಗ್ರಹಿಸಿದ್ದಾರೆ, ಪಿತೂರಿ ನಡೆಸುತ್ತಿದ್ದಾರೆ ಎಂಬ ಆರೋಪಗಳನ್ನು ಕೂಡ ಹೊರಿಸಲಾಯಿತು.

ಜಾಮೀನು ಸಹಜ ಹಕ್ಕು. ಅದನ್ನು ಪಡೆಯಲು ಕೂಡ ಸುಪ್ರೀಂ ಕೋರ್ಟ್ ಬಾಗಿಲು ಬಡಿಯಬೇಕಾದ ಪರಿಸ್ಥಿತಿ ಬರಬಾರದು

ಯುಎಪಿಎ ಕಾನೂನಿನ ಕಠಿಣ ನಿಯಮಗಳು ಜಾಮೀನು ಕೊಡುವುದಕ್ಕೆ ವಿರುದ್ಧವಾಗಿವೆ. ಜಾಮೀನಿನ ವಿಚಾರದಲ್ಲಿ ಸಹಜ ಕಾನೂನು ಪ್ರಕ್ರಿಯೆಯನ್ನು ಇವು ತಲೆಕೆಳಗು ಮಾಡುವಂಥವು. ಆದರೆ, ಸುಪ್ರೀಂ ಕೋರ್ಟ್‌ಗೆ ಈ ಕಾನೂನಿನ ಕಠಿಣ ನಿಯಮಗಳ ಅಡಿಯಲ್ಲಿಯೇ ತೀರ್ಮಾನ ತೆಗೆದುಕೊಳ್ಳಬೇಕೆಂಬ ನಿಬಂಧನೆಯೇನೂ ಇರಲಿಲ್ಲ. ಸುಪ್ರೀಂ ಕೋರ್ಟ್ ಕೇಳಿದ ಕೆಲವು ಪ್ರಶ್ನೆಗಳು, ಕಪ್ಪನ್ ಅವರ ಬಂಧನದ ಹಿಂದೆ ಚಿತಾವಣೆ ಇತ್ತು ಎಂಬುದನ್ನು ಬಹಿರಂಗಪಡಿಸುವಂತಿದ್ದವು. ಸಂತ್ರಸ್ತ ಯುವತಿಗೆ ನ್ಯಾಯ ಸಿಗಬೇಕು ಎಂದು ಆಗ್ರಹಿಸುವುದನ್ನು ಅಪರಾಧ ಎಂದು ಕರೆಯಬಹುದೇ ಎಂದು ಕೋರ್ಟ್ ಪ್ರಶ್ನಿಸಿತು. ಅಮೆರಿಕದಲ್ಲಿ ನಡೆದ 'ಬ್ಲ್ಯಾಕ್ ಲೈವ್ಸ್ ಮ್ಯಾಟರ್' ಚಳವಳಿಯ ಕೆಲವು ಕರಪತ್ರಗಳು ಕಪ್ಪನ್ ಅವರ ವಾಹನದಲ್ಲಿ ಇದ್ದವು. ಈ ಕರಪತ್ರಗಳನ್ನು ಬಳಸಿ ಉತ್ತರಪ್ರದೇಶದ ಒಂದು ಹಳ್ಳಿಯಲ್ಲಿ ಅಶಾಂತಿ ಸೃಷ್ಟಿಸಲು ಕಪ್ಪನ್ ಯೋಜಿಸಿದ್ದರೆ ಎಂದೂ ಕೋರ್ಟ್ ಕೇಳಿತು. ಪ್ರತಿಭಟನೆಯ ಮೌಲ್ಯ ಏನು ಎಂಬುದನ್ನು ಸರ್ಕಾರ ಗುರುತಿಸಬೇಕಿತ್ತು ಎಂದು ಕೂಡ ಕೋರ್ಟ್ ಹೇಳಿತು. 2012ರಲ್ಲಿ ದೆಹಲಿಯಲ್ಲಿ ನಡೆದ ನಿರ್ಭಯಾ ಪ್ರಕರಣದ ನಂತರದಲ್ಲಿ ಪ್ರತಿಭಟನೆಗಳ ಕಾರಣದಿಂದಾಗಿ ಅತ್ಯಾಚಾರ ಪ್ರಕರಣಗಳಿಗೆ ಸಂಬಂಧಿಸಿದ ಕಾನೂನಿನಲ್ಲಿ ಬದಲಾವಣೆ ಬಂತು ಎಂಬುದನ್ನು ಕೋರ್ಟ್ ನೆನಪಿಸಿಕೊಂಡಿತು.

ಈ ಹಂತದಲ್ಲಿ ಪ್ರಕರಣದ ತನಿಖೆಯ ಪ್ರಗತಿಯ ಬಗ್ಗೆ ಹಾಗೂ ಪ್ರಾಸಿಕ್ಯೂಷನ್ ಕಲೆಹಾಕಿರುವ ದಾಖಲೆಗಳ ಬಗ್ಗೆ ತಾನು ಅಭಿಪ್ರಾಯ ವ್ಯಕ್ತಪಡಿಸಲಾರೆ ಎಂದು ಕೋರ್ಟ್ ಹೇಳಿದೆ. ಆದರೂ, ಇತರ ವಿಚಾರಗಳ ಕುರಿತಾಗಿ ಕೋರ್ಟ್ ಹೇಳಿರುವ ಮಾತುಗಳು ಹಾಗೂ ಅದು ಕೇಳಿರುವ ಪ್ರಶ್ನೆಗಳನ್ನು ಗಮನಿಸಿದರೆ, ಕಪ್ಪನ್ ವಿರುದ್ಧದ ಪ್ರಕರಣಗಳು ಗಂಭೀರವಾದವು ಎಂಬುದು ಕೋರ್ಟ್‌ಗೆ [illegible] ಭಾಸವಾಗುತ್ತದೆ. ಆದರೆ, ಕೆಳ ಹಂತದ ನ್ಯಾಯಾಲಯಗಳು ಈ ಪ್ರಕರಣದಲ್ಲಿ ಹುರುಳಿದೆ ಎಂದು ಭಾವಿಸಿದ್ದು ಹಾಗೂ ಪತ್ರಕರ್ತನಿಗೆ ಜಾಮೀನು ನಿರಾಕರಿಸಿದ್ದು [illegible] ಜಾಮೀನು ಸಹಜ ಹಕ್ಕು. ಅದನ್ನು ಪಡೆಯಲು ಪ್ರಜೆಗಳು ಜೈಲಿನಲ್ಲಿ 700 ದಿನ ಕಾಯಬೇಕಾದ ಸ್ಥಿತಿ ಇರಬಾರದು. ಜಾಮೀನು ಪಡೆಯಲು ಕೂಡ ಸುಪ್ರೀಂ ಕೋರ್ಟ್ ಬಾಗಿಲು ಬಡಿಯಬೇಕಾದ ಪರಿಸ್ಥಿತಿ ಬರಬಾರದು. ಜಾಮೀನು ಸಿಕ್ಕ ನಂತರವೂ ಕಪ್ಪನ್ ಅವರು ಜೈಲಿನಿಂದ ಬಿಡುಗಡೆ ಆಗಿಲ್ಲ. ಅವರ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ.) ದಾಖಲಿಸಿರುವ ಪ್ರಕರಣವೊಂದರ ವಿಚಾರಣೆ ನಡೆಯುತ್ತಿದೆ. ಸುಪ್ರೀಂ ಕೋರ್ಟ್ ನೀಡಿರುವ ಆದೇಶ ಸ್ವಾಗತಾರ್ಹ. ಆದರೆ, ಜಾಮೀನು ಸಿಗದೆ ಜೈಲಿನಲ್ಲಿ ಕೊಳೆಯುತ್ತಿರುವ ಸಹಸ್ರಾರು ಮಂದಿ ಇದ್ದಾರೆ ಎಂಬುದನ್ನು ಕೂಡ ಈ ಪ್ರಕರಣವು ನೆನಪಿಸಿಕೊಡುವಂತೆ ಇದೆ.

ದಿನದ ಟ್ವೀಟ್

ವದಂತಿಗಳಿಗೆ ಕಿವಿಗೊಡದಿರಿ

ಅಂಗಾಂಗಗಳ ಸಲುವಾಗಿ ಮಕ್ಕಳನ್ನು ಅಪಹರಿಸಲಾಗುತ್ತದೆ ಎಂಬ ವದಂತಿಗಳು ಈಗ ಟ್ರೆಂಡ್ ಆಗಿವೆ. ಪ್ರತಿವರ್ಷ ಇಂತಹ ವದಂತಿಗಳು ಭಾರತದಾದ್ಯಂತ ಪಟ್ಟಣಗಳು ಮತ್ತು ಹಳ್ಳಿಗಳಲ್ಲೆಲ್ಲಾ ಹರಡುತ್ತವೆ ಮತ್ತು ಅಮಾಯಕರನ್ನು ಥಳಿಸಲಾಗುತ್ತದೆ. ಇದು, ಆಡಳಿತದಲ್ಲಿನ ಜಾಗೃತಿಯ ಕೊರತೆಯ ಫಲ. ಇದೀಗ, ಇಂತಹ ವದಂತಿಗಳಿಂದಾಗಿಯೇ ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ನಾಲ್ವರು ಸಾಧುಗಳನ್ನು ಥಳಿಸಲಾಗಿದೆ.

ಅನ್ಷುಲ್ ಸಕ್ಸೇನಾ, ವಿಶ್ಲೇಷಕ

ಕಿಡಿನುಡಿ

ಭಾರತದಲ್ಲಿ ನೀವು ಯಾವ ಪಕ್ಷಕ್ಕೆ ಮತ ಹಾಕಿದರೂ, ತಾನು ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸಬಹುದಾದ ಮತ್ತು ಮಾರಾಟ ಮಾಡಬಹುದಾದ ಸರಕಾಗುವುದಕ್ಕೆ ಯಾವ ತಕರಾರನ್ನೂ ಹೊಂದಿಲ್ಲದ ವ್ಯಕ್ತಿಯ ಆಯ್ಕೆಗಾಗಿ ಮತದಾನ ಮಾಡುತ್ತಿದ್ದೀರಿ ಎಂದರ್ಥ. ಇಷ್ಟೊಂದು ದುರ್ಬಲವಲ್ಲದ ಚುನಾವಣಾ ವ್ಯವಸ್ಥೆಯನ್ನು ಭಾರತೀಯರು ಬಯಸುತ್ತಾರಾದರೆ, ಅದಕ್ಕಾಗಿ ನಾವು ಹೋರಾಟ ಮಾಡಬೇಕಾಗುತ್ತದೆ.

ಪ್ರತೀಕ್ ಸಿಂಹ, ಸಹ ಸಂಸ್ಥಾಪಕ, ಆಲ್ಟ್‌ನ್ಯೂಸ್

25 ವರ್ಷಗಳ ಹಿಂದೆ
ಸೋಮವಾರ, 15-9-1997

- **ಮಧ್ಯಪ್ರದೇಶ: ರೈಲು ದುರಂತ- 36 ಸಾವು**

ಭೋಪಾಲ್, ಸೆಪ್ಟೆಂಬರ್ 14 (ಪಿಟಿಐ, ಯುಎನ್‌ಐ)- ಅಹ್ಮದಾಬಾದ್- ಹೌರಾ ಎಕ್ಸ್‌ಪ್ರೆಸ್ ರೈಲಿನ ಐದು ಬೋಗಿಗಳು ಇಂದು ಸಂಜೆ ಮಧ್ಯಪ್ರದೇಶದ ಬಿಲಾಸ್‌ಪುರದ ಚಂಪಾ ಸಮೀಪ ಹಳಿ ತಪ್ಪಿ ಸೇತುವೆಯಿಂದ ನದಿಗೆ ಬಿದ್ದು, ಕನಿಷ್ಠ 36 ಮಂದಿ ಪ್ರಯಾಣಿಕರು ಸತ್ತಿದ್ದಾರೆ. ಇತರೆ 200ಕ್ಕೂ ಹೆಚ್ಚು ಮಂದಿ ಪ್ರಯಾಣಿಕರು ಗಾಯಗೊಂಡಿದ್ದಾರೆ.

- **ಪ್ರಸಾರ ಭಾರತಿ ಜಾರಿಗೆ**

ನವದೆಹಲಿ, ಸೆಪ್ಟೆಂಬರ್ 14 (ಪಿಟಿಐ)- ಆಕಾಶವಾಣಿ ಹಾಗೂ ದೂರದರ್ಶನಗಳಿಗೆ ಸ್ವಾಯತ್ತತೆ ನೀಡುವ ಪ್ರಸಾರ ಭಾರತಿ ಕಾಯ್ದೆ ನಾಳೆಯಿಂದ ಜಾರಿಗೆ ಬರಲಿದೆ. ಈ ಕಾಯ್ದೆಯಲ್ಲಿರುವ ಒಂದು ವಿಧಿ, ಕಾರ್ಯಕ್ರಮವೊಂದರ ಪ್ರಸಾರವನ್ನು ಕೆಲವು ಕಾರಣಗಳಿಂದ ತಡೆಹಿಡಿಯುವ ಅಧಿಕಾರವನ್ನು ಇನ್ನೂ ಸರ್ಕಾರಕ್ಕೆ ಉಳಿಸುತ್ತದೆ. ಈ ಹಿನ್ನೆಲೆಯಲ್ಲಿ ಈ ಕಾಯ್ದೆಯು ನಿಜವಾಗಿಯೂ ಆಕಾಶವಾಣಿ- ದೂರದರ್ಶನಗಳಿಗೆ ಸ್ವಾತಂತ್ರ್ಯ ನೀಡುವುದೇ ಎಂಬ ಬಗ್ಗೆ ಈ ಎರಡೂ ಮಾಧ್ಯಮಗಳ ಸಿಬ್ಬಂದಿಗೆ ಅನುಮಾನವಿದೆ.

- **ವಿಶಾಖಪಟ್ಟಣ ತೈಲಾಗಾರದಲ್ಲಿ ಭೀಕರ ಅಗ್ನಿ ಆಕಸ್ಮಿಕಕ್ಕೆ 20 ಬಲಿ**

ಹೈದರಾಬಾದ್, ಸೆಪ್ಟೆಂಬರ್ 14 (ಪಿಟಿಐ)- ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ನ ವಿಶಾಖಪಟ್ಟಣದ ತೈಲಾಗಾರದಲ್ಲಿ ಇಂದು ಸಂಭವಿಸಿದ ಭೀಕರ ಬೆಂಕಿ ದುರಂತದಲ್ಲಿ 20 ಜನರು ಮೃತಪಟ್ಟಿದ್ದು, ಇತರ 12 ಮಂದಿ ಗಾಯಗೊಂಡಿದ್ದಾರೆ.

50 ವರ್ಷಗಳ ಹಿಂದೆ
ಶುಕ್ರವಾರ, 15-9-1972

- **ಜಾಡಮಾಲಿ ಅಲ್ಲ; ಪೌರಕಾರ್ಮಿಕ**

ಬೆಂಗಳೂರು, ಸೆಪ್ಟೆಂಬರ್ 14- ಇನ್ನು ಮುಂದೆ ಜಾಡಮಾಲಿಗಳನ್ನು 'ಪೌರಕಾರ್ಮಿಕರು' ಎಂದು ಕರೆಯಲಾಗುವುದು. ಇದಕ್ಕಾಗಿ ರಾಜ್ಯ ಸರ್ಕಾರ ಸದ್ಯದಲ್ಲಿಯೇ ಆಜ್ಞೆ ಹೊರಡಿಸಲಿದೆಯೆಂದು ಪೌರಾಡಳಿತ ಸಚಿವ ಬಿ. ಬಸವಲಿಂಗಪ್ಪನವರು ಇಂದು ವರದಿಗಾರರಿಗೆ ತಿಳಿಸಿದರು.

- **ರಾಜ್ಯದ ನಾಲ್ಕು ಬೃಹತ್ ನೀರಾವರಿ ಯೋಜನೆಗಳಿಗೆ ಕೇಂದ್ರ ನೆರವು ಖಚಿತ**

ಬೆಂಗಳೂರು, ಸೆಪ್ಟೆಂಬರ್ 14- ಮಲಪ್ರಭಾ, ಘಟಪ್ರಭಾ, ಕೃಷ್ಣಾ ಮೇಲ್ದಂಡೆ ಮತ್ತು ಹೇಮಾವತಿ ಯೋಜನೆಗಳನ್ನು ಹತ್ತಾರು ವರ್ಷಗಳಿಗೆ ಲಂಬಿಸುವ ಬದಲು ಐದಾರು ವರ್ಷಗಳಲ್ಲಿಯೇ ಮುಗಿಸಲು ಬೇಕಾದ 165 ಕೋಟಿ ರೂ.ಗಳನ್ನು ಕೇಂದ್ರವು ರಾಜ್ಯಕ್ಕೆ ಕೊಡುವ ಸಾಧ್ಯತೆ ಇದೀಗ ಉಜ್ವಲವಾಗಿದೆ.

ಆಹಾರ ಉತ್ಪಾದನೆ ದಿಸೆಯಲ್ಲಿ ಕೇಂದ್ರ ಹಾಗೂ ರಾಜ್ಯಗಳ ದೃಷ್ಟಿಯಲ್ಲಿ ಮಹತ್ವ ಪಡೆದಿರುವ ಈ ನಾಲ್ಕು ಯೋಜನೆಗಳಿಗೆ ಪರಿಶೀಲನೆ ಹಾಗೂ ಭಾವೀ ಕ್ರಮಗಳ ನಿರ್ಧಾರಕ್ಕಾಗಿ ಡಾ. ಎಂ.ಎಸ್. ಸ್ವಾಮಿನಾಥನ್‌ರ ನೇತೃತ್ವದಲ್ಲಿ ತಜ್ಞರ ತಂಡವೊಂದು ಇನ್ನೊಂದು ವಾರದಲ್ಲಿ ರಾಜ್ಯಕ್ಕೆ ಬರಲಿದೆ ಎಂದು ಮುಖ್ಯಮಂತ್ರಿ ದೇವರಾಜ ಅರಸು ಅವರು ತಿಳಿಸಿದರು.

'ಭಾರತ್ ಜೋಡೊ' ಮಾದರಿಯ ಆಂದೋಲನ ಕನ್ನಡ ಸಾಹಿತ್ಯಲೋಕಕ್ಕೂ ಅಗತ್ಯ

ಕನ್ನಡ ಮನಸ್ಸುಗಳ ಜೋಡಣೆ ಯಾರ ಹೊಣೆ?

ಪಡಸಾಲೆ

ರಘುನಾಥ ಚ.ಹ.

ಕನ್ನಡದ ಓದುಗರು ಸಾಹಿತ್ಯ ಕೃತಿಯೊಂದನ್ನು ಒಕ್ಕೊರಲಿನಿಂದ ಸಂಭ್ರಮಿಸಿದ್ದು ಕೊನೆಯದಾಗಿ ಯಾವಾಗ? ಕನ್ನಡ ಲೇಖಕರೊಬ್ಬರ ಬದುಕು ಅಥವಾ ಸಾಧನೆಯನ್ನು ಕನ್ನಡಿಗರೆಲ್ಲ ಸಂಭ್ರಮಿಸಿದ್ದು ಯಾವಾಗ? ಈ ಪ್ರಶ್ನೆಗಳಿಗೆ ಉತ್ತರ ಹೇಳುವುದಿರಲಿ, ಇಂಥ ಪ್ರಶ್ನೆಗಳ ಬಗ್ಗೆ ಯೋಚಿಸುವುದೇ ಸದ್ಯದ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅಸಂಗತವಾಗಿ ಕಾಣಿಸಬಹುದು. ಜಾತಿ, ಸಿದ್ಧಾಂತ, ಪಕ್ಷ ರಾಜಕಾರಣಗಳಲ್ಲಿ ಕನ್ನಡ ಸಾಹಿತಿಗಳೊಂದಿಗೆ ಓದುಗರೂ ಒಡೆದುಹೋಗಿರುವ ಸನ್ನಿವೇಶದಲ್ಲಿ, 'ಕನ್ನಡ ಲೇಖಕ' ಅಥವಾ 'ಕನ್ನಡ ಓದುಗ' ಎನ್ನುವ ಮಾತುಗಳೇ ಕ್ಲೀಷೆಯಾಗಿಬಿಟ್ಟಿವೆ. ಈಗ ಚಾಲ್ತಿಯಲ್ಲಿರುವುದು ಲೇಖಕನಿಷ್ಠ, ಸಿದ್ಧಾಂತನಿಷ್ಠ ಹಾಗೂ ಪಕ್ಷನಿಷ್ಠ ಲೇಖಕರು, ಓದುಗರು ಹಾಗೂ ಪ್ರಕಾಶಕರು. ಈ ಹಣೆಪಟ್ಟಿಗಳನ್ನು ಯಾರಾದರೂ ಲೇಖಕ-ಓದುಗ ನಿರಾಕರಿಸಿದರೆ, 'ಎಡಬಿಡಂಗಿ' ಎನ್ನುವ ಹಣೆಪಟ್ಟಿ ಖಚಿತ.

ದೇವನೂರ ಮಹಾದೇವ ಅವರ 'ಒಡಲಾಳ', ಮೊಗಳ್ಳಿ ಗಣೇಶರ 'ಬುಗುರಿ'ಯಂಥ ಕಥನಗಳು ಪ್ರಕಟಗೊಂಡಾಗ ಅವು ದಲಿತಲೋಕದ ಸ್ಪಂದನಕ್ಕಷ್ಟೇ ಸೀಮಿತವಾಗದೆ, ಎಲ್ಲ ವರ್ಗದ ಓದುಗರ ಪುಳಕಕ್ಕೂ ಕಾರಣವಾಗಿದ್ದವು. 'ಪ್ರಜಾವಾಣಿ' ದೀಪಾವಳಿ ಕಥಾ ಸ್ಪರ್ಧೆಯಲ್ಲಿ ಕುಗ್ರಾಮದ ತರುಣನೊಬ್ಬ ಬಹುಮಾನ ಪಡೆದರೆ, ಹೊಸ ಕಥೆಗಾರನ ಉದಯವನ್ನು ಸಾಹಿತ್ಯಲೋಕ ಸಂಭ್ರಮಿಸುತ್ತಿತ್ತು. ಆ ಕಥೆ ಮತ್ತು ಕಥೆಗಾರನ ಬಗ್ಗೆ ಚರ್ಚೆಗಳು ನಡೆಯುತ್ತಿದ್ದವು. ಈಗ ಸಹೃದಯರ ಚರ್ಚೆಗಳ ಕೇಂದ್ರದಲ್ಲಿರುವುದು ಕಥೆಗಳಲ್ಲ; ಕಥೆಗಳಿಗೆ ದೊರೆಯುತ್ತಿರುವ ಬಹುಮಾನದ ಮೊತ್ತ.

ಕುವೆಂಪು ಅವರ ಕಾದಂಬರಿಗಳು ಹಾಗೂ ಕಾವ್ಯ, ಕಾರಂತರ ಕಾದಂಬರಿಗಳು, ಬೇಂದ್ರೆಯವರ ಕಾವ್ಯ- ಇವು ಒಂದು ವರ್ಗದ ಓದುಗರಿಗೆ ಸೀಮಿತವಾಗಿರಲಿಲ್ಲ. ಲಂಕೇಶ್, ಅನಂತಮೂರ್ತಿ, ತೇಜಸ್ವಿ, ಬೆಸಗರಹಳ್ಳಿ ಅವರನ್ನು ಜಾತಿಯ ಹಣೆಪಟ್ಟಿಯಲ್ಲಿ ನಮ್ಮ ಪೂರ್ವಸೂರಿಗಳು ಕೂರಿಸಿರಲಿಲ್ಲ. ಕೆಲವು ಲೇಖಕರ ಜಾತಿಪ್ರೀತಿ ಹಾಗೂ ಬಹಿರಂಗದ ಚಹರೆಗಳು ಲೇವಡಿಗೆ ಒಳಗಾಗಿರುವ ಉದಾಹರಣೆಗಳು ಸಾಕಷ್ಟಿವೆಯಾದರೂ, ಅವರ ಬರವಣಿಗೆಯ ಸ್ಪಂದನಕ್ಕೆ ಸಂಬಂಧಿಸಿದಂತೆ ಮುಖ್ಯವಾಗುತ್ತಿದ್ದುದು ಸಾಹಿತ್ಯಪ್ರಜ್ಞೆಯೇ ಹೊರತು ಜಾತಿ ಪ್ರಜ್ಞೆಯಾಗಿರಲಿಲ್ಲ. ಲೇಖಕರು ಕೂಡ ತಮ್ಮ ವೈಯಕ್ತಿಕ ಮಿತಿಗಳ ನಡುವೆಯೂ ಬರವಣಿಗೆಗೆ ಸಂಬಂಧಿಸಿದಂತೆ ತಮ್ಮನ್ನು ಅಖಂಡ ಕರ್ನಾಟಕಕ್ಕೆ ಸಂಬಂಧಿಸಿದವರು ಎಂದುಕೊಂಡಿದ್ದರು. ಅವರ ನಂಬಿಕೆಗೆ ಗಾಸಿಯಾಗುವ ಘಟನೆಗಳೂ ನಡೆದಿರಲಿಲ್ಲ. ಈಗ ಬದಲಾದ ಕಾಲಘಟ್ಟದಲ್ಲಿ, ಲೇಖಕನನ್ನು ಜಾತಿ-ಸಿದ್ಧಾಂತಗಳ ಚೌಕಟ್ಟಿನಲ್ಲಿ ಗುರ್ತಿಸಲಾಗುತ್ತಿದೆ. ಆ ಕಾರಣದಿಂದಲೇ ದೇವನೂರ ಮಹಾದೇವ, ಬರಗೂರು, ಭೈರಪ್ಪ, ಕಂಬಾರರು ಸೇರಿದಂತೆ ಎಲ್ಲ ಲೇಖಕರನ್ನೂ ಅವರಿಗೆ ಇಷ್ಟವಿರಲಿ ಇಲ್ಲದಿರಲಿ ವಿವಿಧ ಅಚ್ಚು-ಚೌಕಟ್ಟುಗಳಲ್ಲಿ ಇರಿಸಲಾಗಿದೆ.

ಇಂದಿನ ಸಂದರ್ಭ ನೋಡಿ: ಕನ್ನಡದ ಹೆಮ್ಮೆಗೆ ಕಾರಣವಾಗಬೇಕಾದ 'ಓದೋ ರಂಗ'ದಂಥ ಕಾದಂಬರಿ ದಲಿತ ಕೃತಿಯಾಗಿಯಷ್ಟೆ ಉಳಿಯುತ್ತದೆ. ವೈಚಾರಿಕ ಚರ್ಚೆಯನ್ನು ಹುಟ್ಟುಹಾಕಬೇಕಾಗಿದ್ದ ಹಾಗೂ ಸಮಕಾಲೀನ ತವಕತಲ್ಲಣಗಳಿಗೆ ಕನ್ನಡಸಾಹಿತ್ಯದ ಸೃಜನಶೀಲ ಪ್ರತಿಕ್ರಿಯೆಯ ರೂಪದಲ್ಲಿ ನೋಡಬೇಕಾದ 'ಬೇಟೆಯಲ್ಲ ಆಟವೆಲ್ಲ', 'ಸಕೀನಾಳ ಮುತ್ತು' ಕಾದಂಬರಿಗಳು ಚರ್ಚೆಯೇ ಆಗುವುದಿಲ್ಲ. 'ಅವ್ಯಯ ಕಾವ್ಯ', 'ಅಕ್ಷಯಕಾವ್ಯ', 'ಎದೆ ಹಾಲಿನ ಪಾಳಿ', 'ನಿಷೇಧ ಕ್ಕೊಳಪಟ್ಟ ಒಂದು ನೋಟು' ಕೃತಿಗಳ ಪ್ರಕಟಣೆ ದೊಡ್ಡ ಸುದ್ದಿಯಾಗುವುದಿಲ್ಲ. ಯಾವುದೇ ಭಾಷೆಯ ಹೆಮ್ಮೆಗೆ ಕಾರಣವಾಗಬೇಕಿದ್ದ ಕೃತಿಗಳು ಕನ್ನಡಿಗರ ಪ್ರೀತಿಯನ್ನೇ 'ಇಡಿ'ಯಾಗಿ ಪಡೆಯಲು ಸೋಲುತ್ತವೆ. ಈ ಸೋಲಿಗೆ, ಒಂದು ಗುಂಪಿನ ಬರಹಗಾರನ ಕೃತಿಯನ್ನು ಮತ್ತೊಂದು ಗುಂಪಿನ ಓದುಗರು ಓದುವುದು ಅಗತ್ಯವಿಲ್ಲ ಎನ್ನುವ ಮನೋಭಾವ ಬೆಳೆಯುತ್ತಿರುವುದೇ ಕಾರಣವಾಗಿದೆ. ಗಂಭೀರ ಸಾಹಿತ್ಯ ಕೃತಿಗಳು ಸಹೃದಯರನ್ನು ಮುಟ್ಟುವಲ್ಲಿ ಅಡೆತಡೆ ಎದುರಿಸುತ್ತಿರುವ ಸಂದರ್ಭದಲ್ಲೇ, ಸಾಹಿತ್ಯದ ಹೆಸರಿನ ಸರಕುಗಳು ಹೆಚ್ಚಿನ ಓದುಗರನ್ನು ಮುಟ್ಟುತ್ತಿರುವ ವಿಚಿತ್ರ ಸಂದರ್ಭವನ್ನೂ ಕಾಣುತ್ತಿದ್ದೇವೆ.

ಕನ್ನಡ ಸಾಹಿತ್ಯಲೋಕದಲ್ಲಿನ ಬಿರುಕುಗಳ ಹಿನ್ನೆಲೆಯಲ್ಲಿ- ಜಾತಿ, ಧರ್ಮ, ಸಿದ್ಧಾಂತ, ರಾಜಕಾರಣಗಳಿಂದ ಬರಹ ಹಾಗೂ ಬರಹಗಾರರು ದೂರವಿರಬೇಕೆಂದು ಭಾವಿಸಬೇಕಿಲ್ಲ. ಸಮಸ್ಯೆ ಇರುವುದು, ಗ್ರಹಿಕೆ ಮತ್ತು ಸ್ವೀಕಾರದ ಹಿನ್ನೆಲೆಯಲ್ಲಿ ಸಾಹಿತ್ಯದ ಮಾನವೀಯ ಸೆಲೆಗಳಿಗಿಂತಲೂ ಸಾಮಾಜಿಕ-ರಾಜಕೀಯ ಸಂಗತಿಗಳೇ ಮುನ್ನೆಲೆಗೆ ಬರುತ್ತಿರುವುದರಲ್ಲಿ. ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ನಡುವೆಯೂ ಲಂಕೇಶ್ ಮತ್ತು ಅಡಿಗರು ಒಟ್ಟಿಗೆ ಕೆಲಸ ಮಾಡುವುದು ಸಾಧ್ಯವಾದುದು ಹಾಗೂ ತಾತ್ವಿಕ ಭಿನ್ನಾಭಿಪ್ರಾಯಗಳ ನಡುವೆಯೂ ಕುವೆಂಪು ಹಾಗೂ ಮಾಸ್ತಿ ಪರಸ್ಪರ ಗೌರವ ಉಳಿಸಿಕೊಂಡಿದ್ದನ್ನು ಗಮನಿಸಬೇಕು.

ತಕರಾರುಗಳ ನಡುವೆಯೂ ಸ್ವೀಕಾರದ ಮನೋಭಾವ ಉಳಿಸಿಕೊಳ್ಳುವುದು ನಮ್ಮ ಹಿಂದಿನ ತಲೆಮಾರುಗಳ ಬರಹಗಾರರು ಮತ್ತು ಓದುಗರಿಗೆ ಸಾಧ್ಯವಾಗಿತ್ತು. ಆ ಮನೋಭಾವ ಕ್ಷೀಣಿಸಿರುವುದೇ ಇಂದಿನ ಬಿಕ್ಕಟ್ಟು ಬಿರುಕುಗಳಿಗೆ ಮುಖ್ಯ ಕಾರಣವಾಗಿದೆ. ಸಾಹಿತ್ಯಕ್ಕೆ ಮನಸ್ಸುಗಳನ್ನು ಆರ್ದ್ರಗೊಳಿಸುವ ಹಾಗೂ ಬೆಸೆಯುವ ಶಕ್ತಿಯಿದೆ ಎನ್ನುವುದು ಸಾಹಿತ್ಯಲೋಕದಲ್ಲಿ ಪುನರಾವರ್ತನೆಗೊಳ್ಳುವ ಮಾತು. ಇಂದು, ಸಾಹಿತ್ಯ ತನ್ನ ಜೀವಪರ ಶಕ್ತಿಯನ್ನು ಕಳೆದುಕೊಂಡು ಜಡವಾದಂತೆ ಕಾಣಿಸುತ್ತಿದೆ; ದಲ್ಲಾಳಿಗಳ ರಂಜನೆಯ ಸರಕೇ ಸಾಹಿತ್ಯದ ವೇಷ ತೊಟ್ಟಿದೆ. ಕಲಾವಿದರ ಸಿದ್ಧಾಂತ ಹಾಗೂ ಧರ್ಮದ ಹಿನ್ನೆಲೆಯಲ್ಲಿ ಅವರ ನಟನೆಯ ಸಿನಿಮಾಗಳನ್ನು ಬಹಿಷ್ಕರಿಸುವ ಕೊಳಕು ಪರಿಪಾಠ ಸದ್ಯಕ್ಕೆ ಚಾಲ್ತಿಯಲ್ಲಿದೆಯಷ್ಟೆ. ಆ ಕೊಳಕುತನ ಸಾಹಿತ್ಯಕ್ಷೇತ್ರದಲ್ಲಿ ಒಡೆದು ಕಾಣಿಸದಿದ್ದರೂ, ಗುಂಪುಗಾರಿಕೆ ಬಲಿಯುತ್ತಿರುವುದಂತೂ ಸ್ಪಷ್ಟವಾಗಿದೆ.

ಆರ್ಥಿಕ ಅಸಮಾನತೆ, ಸಾಮಾಜಿಕ ಧ್ರುವೀಕರಣ ಮತ್ತು ರಾಜಕೀಯ ವಿಭಜನೆಗಳಂತಹ ಸಮಸ್ಯೆಗಳ ವಿರುದ್ಧ ಹೋರಾಡಿ ರಾಷ್ಟ್ರವನ್ನು ಒಗ್ಗೂಡಿಸುವ ಉದ್ದೇಶದಿಂದ ಕಾಂಗ್ರೆಸ್ ಪಕ್ಷ 'ಭಾರತ್ ಜೋಡೊ' ಹೆಸರಿನಲ್ಲಿ ಪಾದಯಾತ್ರೆ ನಡೆಸುತ್ತಿದೆಯಷ್ಟೇ; ಆ ಮಾದರಿಯಲ್ಲಿ 'ಕನ್ನಡ ಮನಸ್ಸುಗಳ ಜೋಡಣೆ'ಯ ಆಂದೋಲನ ನಡೆಯಬೇಕಾದುದು ಇಂದಿನ ಅಗತ್ಯ. ಆದರೆ, ಕನ್ನಡದ ಓದುಗರನ್ನು ಒಗ್ಗೂಡಿಸಬೇಕಾದವರು ಯಾರು? ಸದ್ಯದ ಸ್ಥಿತಿಯಲ್ಲಿ ಲೇಖಕರಂತೂ ತಂತಮ್ಮ 'ಸಿದ್ಧಾಂತ ಗೋಪುರ'ಗಳಿಂದ ಹೊರಬರುವುದು ಕಷ್ಟ. ಅವರನ್ನು ಆ ಗೋಪುರಗಳಲ್ಲಿಯೇ ಉಳಿಸುವ ಕೆಲಸವನ್ನು ಓದುಗರೂ ಮಾಡುತ್ತಿದ್ದಾರೆ. ಇಂಥ ಸಂದರ್ಭದಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನಂಥ ಸಂಸ್ಥೆ ಕನ್ನಡದ ಮನಸ್ಸುಗಳನ್ನು ಹದಗೊಳಿಸುವ ಕೆಲಸವನ್ನು ಮಾಡಬೇಕು. ಆದರೆ, ಕಸಾಪ ಆಡಳಿತ ಮಂಡಳಿಯ ಮಾರ್ಗವೇ ಬೇರೆ. ದೇಸಿ-ಮಾರ್ಗದ ಸಮನ್ವಯಕಾರನನ್ನು ಮರೆವಿಗೆ ಸರಿಸಿ, ಆ ಸ್ಥಾನದಲ್ಲಿ ತನ್ನನ್ನೇ ಇರಿಸಿಕೊಳ್ಳ ಬಯಸುವ ಲಜ್ಜೆಗೇಡಿತನ ಅದರದ್ದು.

ಕಸಾಪವನ್ನು ಜನಸಾಮಾನ್ಯರ ಪರಿಷತ್ತಾಗಿಸುವ ಪ್ರಯತ್ನ ಸಾಗಿದೆ ಎಂದು ಮತ್ತೆ ಮತ್ತೆ ಹೇಳಲಾಗುತ್ತಿದೆ. ಆದರೆ, ಪರಿಷತ್ತಿನ ಈವರೆಗಿನ ನಡೆಗಳನ್ನು ನೋಡಿದರೆ ಅದು ಹತ್ತಿರವಾಗುತ್ತಿರುವುದು ರಾಜಕಾರಣದ ಅಧಿಕಾರ ಕೇಂದ್ರಕ್ಕೇ ಹೊರತು ಜನಸಾಮಾನ್ಯರ ಮನಸ್ಸುಗಳಿಗಲ್ಲ. ಕೋಟ್ಯಂತರ ಜನರನ್ನು ಸದಸ್ಯರನ್ನಾಗಿಸುವುದರಿಂದ ಪರಿಷತ್ತಿನ ವರ್ಚಸ್ಸು ಹೆಚ್ಚುವುದಿಲ್ಲ. ಯಾವ ಯಾವ ಕಾರಣದಿಂದಲೋ ದೂರ ಉಳಿದ ಕನ್ನಡದ ಸೃಜನಶೀಲ ಮನಸ್ಸುಗಳನ್ನು ಒಳಗೊಳ್ಳುವುದು ಹೆಚ್ಚುಗಾರಿಕೆ ಅನ್ನಿಸಬೇಕು. ಕನ್ನಡ ಸಾಹಿತ್ಯದ ಹೊಸ ದನಿಗಳಿಗೆ ಅದು ಪ್ರಯೋಗಶಾಲೆಯಾಗಿ ಪರಿಣಮಿಸಬೇಕು. ಕ್ರಿಯಾಶೀಲತೆಯ ಮೂಲಕ ಗಮನ ಸೆಳೆಯಬೇಕಾದ ಸಂಸ್ಥೆ, ಕಟ್ಟಡದ ನವೀಕರಣ, ರಸ್ತೆಯ ಸಿಂಗಾರ ಹಾಗೂ ಸದಸ್ಯರನ್ನು ಗುಡ್ಡೆಹಾಕುವುದೇ ಸಾಧನೆಯೆಂದು ಭಾವಿಸಿದರೆ ಅದರಿಂದ ಕನ್ನಡಕ್ಕೆ ಯಾವ ಲಾಭವೂ ಇಲ್ಲ.

ಪರಿಷತ್ತು ನಾಡುನುಡಿಗೆ ಸಂಬಂಧಿಸಿದ ವಾಗ್ವಾದಗಳ ಕೇಂದ್ರವಾಗಬೇಕು. ಆದರೆ, ಕಸಾಪದ ಇಂದಿನ ಅಧ್ಯಕ್ಷರಿಗೆ ಸಂವಾದದಲ್ಲಿ ನಂಬಿಕೆ ಇದ್ದಂತಿಲ್ಲ. ಟೀಕೆಗಳನ್ನು ಷಡ್ಯಂತ್ರವೆಂದು ಕರೆಯುವುದು ಈ ಕಾಲದ ರಾಜಕಾರಣಿಗಳ ಭಾಷೆಯೇ ಹೊರತು ಸಾಹಿತಿಗಳು ಅಥವಾ ಸಾಹಿತ್ಯ ಪರಿಚಾರಕರಿಗೆ ತಕ್ಕುದಾದ ಭಾಷೆಯಲ್ಲ. ಪರಿಷತ್ತು ಸಾಗುತ್ತಿರುವ ದಾರಿ ನೋಡಿದರೆ, ಅದು 'ಕನ್ನಡ ಮನಸ್ಸುಗಳ ಜೋಡಣೆ' ಮಾಡುವುದಿರಲಿ, ತನ್ನ ಘನತೆಯನ್ನು ಮುಕ್ಕಾಗಿಸಿಕೊಳ್ಳದಿದ್ದರೆ ಅದೇ ದೊಡ್ಡ ಸಾಧನೆ ಎನ್ನುವಂತಾಗಿದೆ. ಕರ್ನಾಟಕದ ಭೌಗೋಳಿಕ ಏಕೀಕರಣದಲ್ಲಿ ಬರಹಗಾರರು ಗಣನೀಯ ಪಾತ್ರ ವಹಿಸಿದ್ದರು. ಈಗ ಸಾಹಿತ್ಯಿಕ ಏಕೀಕರಣಕ್ಕೆ ಜನಸಾಮಾನ್ಯರೇ ಒತ್ತಾಯಿಸಬೇಕಾಗಿದೆ.

ಚುರುಮುರಿ

ತಾಕತ್ತು ಇದ್ದರೇ...!

• ಚಂದ್ರಕಾಂತ ವಡ್ಡು

'ನನಗೆ ನನ್ನ ಮಗನದೇ ದೊಡ್ಡ ಚಿಂತೆಯಾಗಿದೆ...' ಬದ್ರಿ ಶುರು ಹಚ್ಚಿಕೊಂಡ.

'ಎಲ್ಲರ ಮಕ್ಕಳೂ ಅಪ್ಪಂದಿರನ್ನು ಇದ್ದಾಗ ಚಿಂತೆಗೆ, ಮುಗಿದಾಗ ಚಿತೆಗೆ ಈಡು ಮಾಡುವವರೇ, ನಿನ್ನದೇನು ವಿಶೇಷ?' ತಿಂಗಳೇಶ ತಿಳಿಗೊಳಿಸಲು ಯತ್ನಿಸಿದ.

'ಎದ್ದು ಹಾಸಿಗೆ ಮಡಚಲ್ಲ, ಉಂಡ ತಟ್ಟೆ ಎತ್ತಲ್ಲ, ಅಂಗಡಿಯಿಂದ ಸಾಮಾನು ತರಲ್ಲ, ಏನು ಕೆಲಸ ಹೇಳಿದರೂ ಖರ್ಚಿಗೆ ತಾ ಅಂತಾನೆ...'

'ಒಂದಿಷ್ಟು ಕೊಟ್ಟರಾಯಿತು. ಮಳೆ ಬಂದರೆ, ಮಗ ಉಂಡರೆ ಕೇಡಿಲ್ಲ ಅಂತಾರೆ'.

'ಈ ಗಾದೆ ವೇದದಷ್ಟೇ ಸುಳ್ಳು ಎಂದು ಅನುಭವಿಸಿದವರಿಗೆಲ್ಲಾ ಗೊತ್ತು. ಬೆಳೆಯುವ ಹುಡುಗ ಅಂತ ಮೊದಲಿಂದಲೂ ಒಂದಿಷ್ಟು ಕಾಸು ಕೊಡುತ್ತಲೇ ಇದ್ದೆ. ಇತ್ತೀಚೆಗೆ ದುಪ್ಪಟ್ಟು ಕೇಳಲು ಶುರು ಮಾಡಿದ್ದಾನೆ'.

'ಹಾಗಾದರೆ ಈಗ ಹುಡುಗ ಬೆಳೆದಾಗಿದೆ. ಒಂದಿಷ್ಟು ಹೆಚ್ಚು ಮಾಡು'.

'ಅದೂ ಮಾಡಿದೆ. ಹಣ ಸಿಕ್ಕ ಕೂಡಲೇ ಓಟ ಕೀಳುತ್ತಾನೆ. 'ತಾಕತ್ತಿದ್ದರೆ ಹಿಡಿ, ಧಂ ಇದ್ರೆ ಹೊಡಿ ನೋಡೋಣ' ಅಂತ ಸವಾಲು ಬೇರೆ!'

'ಅದಿರಲಿ, ಅವನು ಓದಿನಲ್ಲಿ ಹೇಗೆ?'

'ಅವನೇ ದೊಡ್ಡಬಳ್ಳಾಪುರ ಪರೀಕ್ಷಾ ಕೇಂದ್ರ ಆಯ್ಕೆ ಮಾಡಿಕೊಂಡ, ಹತ್ತನೇ ತರಗತಿ ಮೂರು ಬಾರಿ ಫೇಲಾದ. ಹೆಚ್ಚಿಗೆ ಕೇಳಿದರೆ, 'ನೀನು ಸಣ್ಣವನಿದ್ದಾಗ ಮಾಡಿದ್ದನ್ನೆಲ್ಲಾ ಅಜ್ಜಿ ಹೇಳಿದ್ದಾಳೆ. ನಿನ್ನ ಹಿಂದಿನ ಜಾತಕ ಬಿಚ್ಚಿಡಲೇ...?' ಅಂತ ತಿರುಗೇಟು'.

'ಅವನ ಮೇಷ್ಟ್ರ ಕಡೆಯಿಂದ ಬುದ್ಧಿವಾದ ಹೇಳಿಸಿ ನೋಡು?'

'ಅದೂ ಮಾಡಿಯಾಯ್ತು. 'ನೀವೆಲ್ಲಾ ನಮ್ಮಪ್ಪನ ಬಿ ಟೀಮ್... ಹೇಳಿದ್ದೇ ಹೇಳ್ತೀರಿ' ಅಂತ ಅವರ ಬಾಯಿ ಮುಚ್ಚಿಸಿದ. ನೀನಾದರೂ ಒಂದು ಮಾತು ಹೇಳು ದೋಸ್ತಾ' ಎಂದು ಗೋಗರೆದ ಬದ್ರಿ.

ತಾನೇನೋ ಹೇಳಬಹುದು, 'ಅದನ್ನು ಕೇಳೋಕೆ ನೀನ್ಯಾರು...?' ಅಂತ ತಿರುಗಿಬಿದ್ರೆ ಕಷ್ಟ ಎಂದು ಭಯಬಿದ್ದ ತಿಂಗಳೇಶ, ಅಪ್ಪನಲ್ಲಿ ಹೊಸ ಭರವಸೆ ಹುಟ್ಟಿಸಿದ: 'ನೀನೇನೂ ಚಿಂತಿಸಬೇಡ. ನಿನ್ನ ಮಗ ಯಶಸ್ವಿ ರಾಜಕಾರಣಿ ಆಗೋದು ಗ್ಯಾರಂಟಿ'.

ಸಂಗತ

ಚಿಂತನೆ ಇಲ್ಲ, ಇದು 'ಸುಂದರ ನಗರಿ'!

ಸ್ವಾಭಾವಿಕ ನಿಸರ್ಗ ನೆಲೆಗಳನ್ನು ಧ್ವಂಸ ಮಾಡಿ, ಕಾಂಕ್ರೀಟ್ ಕಾಡು ನಿರ್ಮಿಸುವುದರ ಪರಿಣಾಮವನ್ನು ನಾವೀಗ ಎದುರಿಸುತ್ತಿದ್ದೇವೆ

• ನಾ.ದಿವಾಕರ

ಹಲವು ದಶಕಗಳಲ್ಲೇ ಅತಿಹೆಚ್ಚು ಮಳೆ ಈ ವರ್ಷ ಬೆಂಗಳೂರನ್ನು ಕಂಗೆಡಿಸಿದೆ. ಈ ಪ್ರಮಾಣದ ಮಳೆಯನ್ನು ತಡೆದುಕೊಳ್ಳುವ ಶಕ್ತಿ ಮತ್ತು ಸಾಮರ್ಥ್ಯ ನಮಗೆ ಇದೆಯೋ ಇಲ್ಲವೋ ಎಂದು ಯೋಚಿಸುವ ಮುನ್ನ, ನಾವೇ ಕಟ್ಟಿಕೊಂಡಿರುವ ಸುಂದರ ನಗರದ ವಿನ್ಯಾಸ, ಶೈಲಿ ಮತ್ತು ವಿಸ್ತಾರವನ್ನು ಸೂಕ್ಷ್ಮವಾಗಿ ಗಮನಿಸಬೇಕಿದೆ.

ಬೆಂಗಳೂರು ಈಗಿನ ಐದು ದಶಕಗಳಲ್ಲಿ ಕಂಡಿರುವ ಹೊರ ವರ್ತುಲ ರಸ್ತೆಗಳತ್ತ ಗಮನ ಹರಿಸಿದಾಗ ಇದು ಸ್ಪಷ್ಟವಾಗುತ್ತದೆ. ಕೃಷ್ಣರಾಜಪುರಂನಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್‌ವರೆಗೆ ವಿಸ್ತರಿಸಿರುವ ಪ್ರದೇಶವು ಬೆಂಗಳೂರಿನ ಮತ್ತು ಕರ್ನಾಟಕದ ಆರ್ಥಿಕತೆಯ ಕೇಂದ್ರಬಿಂದು. ಒಂದು ಅಂದಾಜಿನ ಪ್ರಕಾರ, ಈ ವ್ಯಾಪ್ತಿಯಲ್ಲೇ ಹತ್ತು ಲಕ್ಷಕ್ಕೂ ಹೆಚ್ಚು ದುಡಿಮೆಗಾರರಿದ್ದಾರೆ. ಈ ಆಧುನಿಕ 'ನವಿರು ಸಾಮ್ರಾಜ್ಯ'ಕ್ಕೆ ಅನುಕೂಲಗಳನ್ನು ಕಲ್ಪಿಸದೇ ಹೋದರೆ ಹರಿದುಬಂದ ಬಂಡವಾಳ ಹಾಗೆಯೇ ಹೊರಗೆ ಹರಿದುಹೋಗುತ್ತದೆ ಎಂಬ ಭೀತಿ ಸರ್ಕಾರವನ್ನು ಸದಾ ಕಾಡುತ್ತಲೇ ಇರುತ್ತದೆ.

ಈ ವಲಯದಲ್ಲಿ ಭೂಮಿ ಎಂದರೆ ಕೇವಲ ಕಾಂಕ್ರೀಟು, ಸಿಮೆಂಟು, ಗಾರೆ, ನೆಲಹಾಸು ಮತ್ತು ಗ್ರಾನೈಟ್‌ಗಳಿಂದ ಅಲಂಕೃತವಾದ ಒಂದು ಸ್ವತ್ತು ಎನ್ನುವ ಭಾವನೆ ದಟ್ಟವಾಗಿ ಬೇರೂರಿದೆ.

'ಇಡೀ ಬೆಂಗಳೂರು ಮುಳುಗಿಲ್ಲ' ಎಂದು ಸಮಾಧಾನಪಟ್ಟುಕೊಳ್ಳುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಹೇಳಿರುವಂತೆ, ಹಲವು ದಶಕಗಳಲ್ಲೇ ಅತಿಹೆಚ್ಚು ಮಳೆ ಈ ಬಾರಿ ಅಪ್ಪಳಿಸಿದೆ. ಹಿಂದೆ ಈ ರೀತಿಯ ಮಳೆ ಬಂದಿದ್ದರೆ ಬೆಂಗಳೂರಿನ ಯಾವ ಭಾಗವೂ ಜಲಾವೃತ ಆಗುತ್ತಿರಲಿಲ್ಲ. ಏಕೆಂದರೆ ಆಗ ಬೆಂಗಳೂರಿನಲ್ಲಿ ನೂರಾರು ಕೆರೆಗಳು ಜೀವಂತಿಕೆಯಿಂದ ಇದ್ದವು. ಹಸಿರು ಅರಣ್ಯವು ನಗರಕ್ಕೆ ಹೊದಿಕೆಯಂತೆ ಕಾಣುತ್ತಿತ್ತು. ಬಹುತೇಕ ಎಲ್ಲ ಬಡಾವಣೆಗಳಲ್ಲೂ ರಸ್ತೆಯ ಇಕ್ಕೆಲಗಳಲ್ಲಿ ಹಸಿರು ಕಂಗೊಳಿಸುತ್ತಿತ್ತು. ಅತ್ಯಾಧುನಿಕ ಒಳಚರಂಡಿ ವ್ಯವಸ್ಥೆ ಇಲ್ಲದಿದ್ದರೂ ಮಳೆ ನೀರನ್ನು ಸೆಳೆದುಕೊಳ್ಳಲು ಭೂಮಿ ಸಿದ್ಧವಾಗಿತ್ತು. ಈ ಎಲ್ಲ ಸ್ವಾಭಾವಿಕ ನಿಸರ್ಗ ನೆಲೆಗಳನ್ನೂ ಧ್ವಂಸ ಮಾಡಿ, ಶಾಖೋತ್ಪನ್ನ ಮಾಡುವಂತಹ ಕಾಂಕ್ರೀಟ್ ಕಾಡನ್ನು ನಿರ್ಮಿಸುವುದರ ಪರಿಣಾಮವನ್ನು ನಾವು ಈಗ ಎದುರಿಸುತ್ತಿದ್ದೇವೆ.

ಕೆರೆಗಳು ತುಂಬುವುದು ಸಹಜ, ತುಂಬಿ ಹರಿಯುವುದೂ ಸಹಜ. ಆದರೆ ಈ ಹರಿಯುವ ಹೆಚ್ಚುವರಿ ನೀರು ರಸ್ತೆಗಳಿಗೆ, ಮನೆಗಳಿಗೆ ನುಗ್ಗುವುದು ಸಹಜವಲ್ಲ. ಇದು ನಾವು ಮಾಡಿಕೊಂಡಿರುವ ಅವಾಂತರ. 'ರಾಜಕಾಲುವೆ' ಎಂದು ಗೌರವಯುತ ಹೆಸರು ಪಡೆದಿರುವ, ಹೆಚ್ಚುವರಿ ನೀರು, ತ್ಯಾಜ್ಯ ಮತ್ತು ವರ್ಜಿತ ಪದಾರ್ಥಗಳು ಹರಿಯುವ ಈ ಕಾಲುವೆಗಳ ಮೇಲೆ ಎಷ್ಟು ಮನೆಗಳು, ವಿಲ್ಲಾಗಳು, ಅಪಾರ್ಟ್‌ಮೆಂಟ್‌ಗಳು, ವಿದ್ಯಾಸಂಸ್ಥೆಗಳು ನಿರ್ಮಾಣವಾಗಿವೆ ಎಂಬ ಮಾಹಿತಿಯನ್ನು ಸರ್ಕಾರ ನೀಡಬೇಕಿದೆ. ರಾಜಕಾಲುವೆಗಳ ಒತ್ತುವರಿಯ ಕಾರಣದಿಂದಲೇ ಮಳೆನೀರು ಹರಿಯಲು ಜಾಗವಿಲ್ಲದೆ ಮನೆಗಳೊಳಗೆ ನುಗ್ಗುತ್ತಿದೆ. ಕೆರೆ ಪ್ರದೇಶಗಳನ್ನು ನುಣ್ಣಗೆ ಬೋಳಿಸಿ ಕಾಂಕ್ರೀಟ್ ಕಾಡುಗಳನ್ನು ನಿರ್ಮಿಸುವ ಮುನ್ನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬಿಬಿಎಂಪಿ, ಸರ್ಕಾರ, ಎಂಜಿನಿಯರುಗಳು ಸ್ವಲ್ಪಮಟ್ಟಿಗಾದರೂ ವಿವೇಕ ಮತ್ತು ವಿವೇಚನೆಯನ್ನು ಬಳಸಿದ್ದಲ್ಲಿ, ಇಂದು ಬೆಂಗಳೂರಿನ ಬಡಾವಣೆಗಳು ಜೋರು ಮಳೆ ಬಂದಾಗ ಹೊಳೆಗಳಾಗುತ್ತಿರಲಿಲ್ಲ.

ಕೆರೆ, ಅರಣ್ಯ ಮತ್ತು ಸಾರ್ವಜನಿಕ ಭೂ ಒತ್ತುವರಿಯಾಗುತ್ತಿರುವುದು ಅಧಿಕಾರ ರಾಜಕಾರಣದ ಕೃಪಾಕಟಾಕ್ಷ ಇರುವ ರಿಯಲ್ ಎಸ್ಟೇಟ್ ಉದ್ಯಮಿಗಳಿಂದ. ಬೆಳೆಯುತ್ತಿರುವ ಬೃಹತ್ ಬೆಂಗಳೂರಿನ ಆರ್ಥಿಕ ಫಲಾನುಭವಿಗಳು ಆಧುನಿಕತೆಯ- ಐಟಿ ವಲಯದ ಫಲಾನುಭವಿಗಳು. ಆದರೆ ಈ ರೀತಿಯ ಅತಿವೃಷ್ಟಿ ಮತ್ತು ಮಳೆಹಾನಿಯಿಂದ ಇನ್ನೂ ಹಲವು ವರ್ಷಗಳ ಕಾಲ ಸಂಕಷ್ಟ ಎದುರಿಸುವುದು, ಈ 'ಸುಂದರ ನಗರಿ'ಯನ್ನು ನಿರ್ಮಿಸಲು ಬೆವರು ಸುರಿಸುವ ದುಡಿಯುವ ವರ್ಗ.

ಭೂ ಸ್ವಾಧೀನ ಇಲ್ಲದೆ, ಒತ್ತುವರಿ ಇಲ್ಲದೆ, ಅಕ್ರಮ ನಿರ್ಮಾಣ ಇಲ್ಲದೆ ನಗರಗಳು ಬೆಳೆದ ನಿದರ್ಶನಗಳು ಕಡಿಮೆ. ಇದು ಬಂಡವಾಳಶಾಹಿ ವ್ಯವಸ್ಥೆಯ ಒಂದು ಲಕ್ಷಣ. ಅಧಿಕಾರ ರಾಜಕಾರಣಕ್ಕೆ ರಿಯಲ್ ಎಸ್ಟೇಟ್ ಮತ್ತು ಗಣಿ ಉದ್ಯಮ ಮೆಟ್ಟಿಲುಗಳಾಗಿರುವುದರಿಂದಲೇ ಇಂದು ನಗರಾಭಿವೃದ್ಧಿ ಎಂಬ ಪರಿಕಲ್ಪನೆಯೂ ಒತ್ತುವರಿ ಮತ್ತು ಅಕ್ರಮಗಳ ಮೂಲಕವೇ ಸಾಕಾರಗೊಳ್ಳುತ್ತದೆ.

ಗ್ರಾನೈಟ್ ಉದ್ಯಮ, ಕಲ್ಲು ಗಣಿಗಾರಿಕೆ, ಮರಳು ಗಣಿಗಾರಿಕೆ, ರಿಯಲ್ ಎಸ್ಟೇಟ್ ಉದ್ಯಮ ಮತ್ತು ನಗರಾಭಿವೃದ್ಧಿ ಇವೆಲ್ಲದರ ಅನೈತಿಕ ಸಂಬಂಧವನ್ನು ಈ ವರ್ಷದ ಅತಿವೃಷ್ಟಿ ಬಯಲು ಮಾಡಿದೆ.

ಬಹಳ ವರ್ಷಗಳ ಬಳಿಕ ಅತಿ ಹೆಚ್ಚು ಮಳೆಯಾಗಿರುವುದು ನಿಸರ್ಗದತ್ತ ವಿದ್ಯಮಾನ. ಈ ಮಳೆಯನ್ನು ಎದುರಿಸಲಾಗದೆ ತಿಣುಕಾಡುತ್ತಿರುವುದು ನಮ್ಮ ಆಡಳಿತ ವ್ಯವಸ್ಥೆಯ ದೌರ್ಬಲ್ಯ ಮತ್ತು ನ್ಯೂನತೆ. ಇದು ಅನಿರೀಕ್ಷಿತ ಎಂದು ಹೇಳುವುದು ಈ ವ್ಯವಸ್ಥೆಯಲ್ಲಿನ ದೂರದೃಷ್ಟಿಯ ಕೊರತೆ.

ನೈಸರ್ಗಿಕ ವಿಕೋಪಗಳಿಂದ ರಕ್ಷಿಸಿಕೊಳ್ಳುವ ವಿಧಾನಗಳನ್ನು ವಿಜ್ಞಾನ ನಮಗೆ ಕಲ್ಪಿಸುತ್ತದೆ. ಆದರೆ ಅಭಿವೃದ್ಧಿಯ ಹಾದಿಯಲ್ಲಿ ವೈಜ್ಞಾನಿಕ ಚಿಂತನೆ ಇಲ್ಲದೇ ಹೋದಾಗ ಮತ್ತಷ್ಟು 'ಸುಂದರ ನಗರಿಗಳು' ಸೃಷ್ಟಿಯಾಗುತ್ತವೆ.

ವಾಚಕರ ವಾಣಿ

ಮಾನವೀಯತೆ ಮರೆತ ಸ್ಥಿತಿ

ಹೊಸಪೇಟೆಯಲ್ಲಿ ವ್ಯಕ್ತಿಯೊಬ್ಬ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ವಿಡಿಯೊ ಮಾಡಿ ವಿಕೃತಿ ಮೆರೆದಿದ್ದಾರೆ ಜನ ಎಂದು ವರದಿಯಾಗಿದೆ. ಇತ್ತೀಚಿನ ದಿನಗಳಲ್ಲಿ ಅಪಘಾತ ಆದಾಗ ಕೂಡ ಮಾನವೀಯತೆ ಮರೆತು ವಿಡಿಯೊ ಮಾಡುವ ಕೆಟ್ಟ ಮನಸ್ಸುಗಳು ಹೆಚ್ಚಿವೆ. ಇನ್ನೂ ಮುಂದೆ ಹೋಗಿ, ರಸ್ತೆಗಳಲ್ಲಿ ದರೋಡೆ ಇಲ್ಲವೆ ಅಪಘಾತಗಳಾದಾಗ 'ನಮಗೇಕಪ್ಪ ಉಸಾಬರಿ' ಎಂದು ನೋಡಿದರೂ ನೋಡದಂತೆ ಹೋಗುವ ಮನಃಸ್ಥಿತಿ ಬಹುತೇಕ ಎಲ್ಲರಲ್ಲೂ ಮೂಡಿದಂತಿದೆ. 'ಒಬ್ಬರಿಗೊಬ್ಬರು ನಾವಿದ್ದೇವೆ' ಎಂಬ ಪರಿಕಲ್ಪನೆ ಅಳಿಯುತ್ತಿದೆ ಎಂದೆನಿಸುತ್ತಿದೆ. ಮಾನವೀಯತೆ ಮರೆತೆವಾ ನಾವು? ಆ ಪರಿಸ್ಥಿತಿಯಲ್ಲಿ ನಾವೋ ನಮಗೆ ಬೇಕಾದವರೋ ಇದ್ದಾರೆ ಎಂದು ನಾವು ಅಂದುಕೊಳ್ಳುತ್ತಿಲ್ಲವೇಕೆ ಎಂಬ ನೋವು ಸಹಜವಾಗಿ ಕಾಡುತ್ತಿದೆ. ಎತ್ತ ಕಡೆ ಸಾಗುತ್ತಿದ್ದೇವೆ ನಾವು?

ಮಲ್ಲತ್ತಹಳ್ಳಿ ಡಾ. ಎಚ್. ತುಕಾರಾಂ, ಬೆಂಗಳೂರು

ಸ್ವಾಮೀಜಿ ಹೇಳಿಕೆಯಲ್ಲಿ ವಾಸ್ತವದ ಅರಿವು

'ಸ್ವಾಮೀಜಿಗಳು ಮದುವೆ ಆಗಿಯೇ ಮಠ ನಡೆಸಲಿ' ಎಂದು ಚಿತ್ತಾಪುರ ತಾಲ್ಲೂಕಿನ ಕರದಾಳ್ ಬ್ರಹ್ಮರ್ಷಿ ನಾರಾಯಣ ಗುರುಗಳ ಶಕ್ತಿಪೀಠದ ಪ್ರಣವಾನಂದ ಸ್ವಾಮೀಜಿ ಅಭಿಪ್ರಾಯಪಟ್ಟಿರುವುದು (ಪ್ರ.ವಾ., ಸೆ. 12) ಸರಿಯಾಗಿಯೇ ಇದೆ! ಈ ಹಿಂದೆ ಋಷಿಮುನಿಗಳು, ವೇದವ್ಯಾಸರು, ಬಸವಣ್ಣನವರು ಸೇರಿದಂತೆ ಅನೇಕರು ಮದುವೆಯಾಗಿ ಆಶ್ರಮ ನಡೆಸಿದ್ದಾರೆ. ವಿವಾಹದ ನಂತರವೂ ಅಂದರೆ ಬ್ರಹ್ಮಚರ್ಯದ ನಂತರದ ಆಶ್ರಮವಾಗಿರುವ ಗೃಹಸ್ಥಾಶ್ರಮವನ್ನು ಪ್ರವೇಶಿಸಿದ ನಂತರವೂ ತಪಸ್ಸು ಕೈಗೊಳ್ಳುತ್ತಿದ್ದರು. ಅಲ್ಲದೆ ಮದುವೆಯಾದ ನಂತರವೂ ನಮ್ಮ ಅನೇಕ ಋಷಿಮುನಿಗಳು ಬ್ರಹ್ಮಚರ್ಯವನ್ನು ಪಾಲಿಸುತ್ತಿದ್ದರು. ಮಹರ್ಷಿ ಯಾಜ್ಞ್ಯವಲ್ಕ್ಯರಂತೂ ಎರಡೆರಡು ಮದುವೆಯಾಗಿದ್ದರು. ಈ ಹಿನ್ನೆಲೆಯಲ್ಲಿ ನೋಡುವುದಾದರೆ, ಪ್ರಣವಾನಂದ ಸ್ವಾಮೀಜಿಯ ಹೇಳಿಕೆಯಲ್ಲಿ ಅರ್ಥವಿದೆ!

ಇಂದ್ರಿಯ ನಿಗ್ರಹ ಮಾಡುವುದನ್ನು ಮಾತ್ರ ಬ್ರಹ್ಮಚರ್ಯವೆಂದು ತಿಳಿದವರೇ ಹೆಚ್ಚು ಮಂದಿ. ಆದರೆ ಬಸವಣ್ಣನವರು, ಮನಸ್ಸಿನಲ್ಲಿ ವಿಷಯ ಸುಖದ ಕಾಮನೆಗಳನ್ನು ಇಟ್ಟುಕೊಂಡು ಇಂದ್ರಿಯಗಳನ್ನು ಕೃತಕವಾಗಿ ನಿಗ್ರಹಿಸುವುದು ಅಪಾಯಕಾರಿ ಎನ್ನುತ್ತಾರೆ. ಸಾಮಾನ್ಯವಾಗಿ ಲೋಕ ಕಲ್ಯಾಣಕ್ಕಾಗಿ ತಮ್ಮ ಜೀವನ ಮುಡುಪಿಟ್ಟು ಲೋಕವೇ ತಮ್ಮ ಕುಟುಂಬವೆಂದು ಭಾವಿಸುವವರು, ದೇವರನ್ನು ಸಾಕ್ಷಾತ್ಕರಿಸಿಕೊಳ್ಳಲು ಹೊರಟವರು ಸ್ವಾಮೀಜಿಗಳು ಎಂಬುದು ಎಲ್ಲರ ಭಾವನೆ. ಆದರೆ ಈಗ ಏನಾಗಿದೆ? ಸಾವಿರಾರು ರೂಪಾಯಿಗಳ ಮೊಬೈಲ್ ಫೋನನ್ನು ಕೈಯಲ್ಲಿ ಇಟ್ಟುಕೊಂಡು, ಲಕ್ಷಗಟ್ಟಲೆ ಬೆಲೆಬಾಳುವ ಕಾರಿನಲ್ಲಿ ಸಂಚರಿಸುವ ಸ್ವಾಮೀಜಿಗಳು ಕಠಿಣ ಬ್ರಹ್ಮಚರ್ಯವನ್ನು ಪಾಲಿಸುವುದಾದರೂ ಹೇಗೆ ಎಂಬ ಪ್ರಶ್ನೆ ಪ್ರತಿಯೊಬ್ಬರನ್ನೂ ಕಾಡುತ್ತಿದೆ! ಹೀಗಾಗಿ ಬ್ರಹ್ಮಚರ್ಯೆ ಹಾಗೂ ಸ್ವಾಮೀಜಿ ಸ್ಥಾನ ಇವೆರಡನ್ನೂ ಒಟ್ಟೊಟ್ಟಿಗೆ ನಿಭಾಯಿಸುವುದು ಕಷ್ಟಕರ ಎಂಬ ಸತ್ಯವನ್ನು ಅರಿತುಕೊಂಡೇ ಪ್ರಣವಾನಂದ ಸ್ವಾಮೀಜಿ ಹೇಳಿಕೆ ನೀಡಿರುವುದರಲ್ಲಿ ವಾಸ್ತವದ ಅರಿವಿದೆ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಬೆಲೆ ಏರಿಕೆಯ ಆಘಾತ ತರವೇ?

ಕೆಲ ದಿನಗಳ ಹಿಂದಷ್ಟೇ ಕರ್ನಾಟಕ ಹಾಲು ಮಹಾಮಂಡಳ (ಕೆಎಂಎಫ್) ಅಧೀನದ ಹಾಲು ಒಕ್ಕೂಟಗಳು ಹೈನೋತ್ಪನ್ನಗಳಾದ ಪೇಡಾ, ಮೈಸೂರು ಪಾಕ್, ತುಪ್ಪ ಮತ್ತಿತರ ಪದಾರ್ಥಗಳ ದರವನ್ನು ಏರಿಸಿದ್ದವು. ಇದೀಗ ಮಂಡಳಿಯು ಮತ್ತೊಮ್ಮೆ ಹಾಲಿನ ಗ್ರಾಹಕರಿಗೆ ಬೆಲೆ ಏರಿಕೆಯ ಆಘಾತ ನೀಡಲು ಮುಂದಾಗಿದೆ. ಹಾಲು ಉತ್ಪಾದಕರ ಹಿತವನ್ನೇ ಮುಂದಿಟ್ಟುಕೊಂಡು, ಗ್ರಾಹಕರಿಗೆ ಹೊರೆಯಾಗದಂತೆ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳುವ ಮಂಡಳಿ, ಬೆಲೆ ಏರಿಕೆಯಲ್ಲಿ ಯಾವುದೇ ವ್ಯತ್ಯಯವಾದರೂ ಅದರಿಂದ ಗ್ರಾಹಕನಿಗೆ ಹೊರೆ ಎಂಬುದನ್ನೇ ಮರೆತಿದೆ.

ಹಾಲಿನ ಬೆಲೆ ಲೀಟರಿಗೆ ಮೂರು ಅಥವಾ ನಾಲ್ಕು ರೂಪಾಯಿ ಜಾಸ್ತಿಯಾದರೂ ಮತ್ತೊಮ್ಮೆ ಹಾಲಿನ ಉಪ ಉತ್ಪನ್ನಗಳ ಬೆಲೆ ಜಾಸ್ತಿಯಾಗುವುದಿಲ್ಲವೇ? ಈಗಾಗಲೇ ಒಂದು ಕಪ್ ಕಾಫಿ, ಟೀಗೆ ₹ 15- 20 ಇದ್ದು, ಹಾಲನ್ನು ಆಧರಿಸಿ ಮಾಡುವ ಸಿಹಿ ಖಾದ್ಯಗಳು, ತಿಂಡಿಗಳ ಬೆಲೆಯನ್ನು ಹೋಟೆಲ್‌ನವರು ಮತ್ತೆ ಜಾಸ್ತಿ ಮಾಡುವುದಿಲ್ಲವೇ? ಹೀಗೆ ಒಂದರ ಹಿಂದೆ ಮಗದೊಂದರ ಬೆಲೆ ಏರಿಕೆಯಾಗುತ್ತಿದ್ದರೆ, ಗ್ರಾಹಕರಿಗೆ ಹೊರೆಯಾಗುವುದಿಲ್ಲವೇ?

ವಿಜಯ್ ಹೆಮ್ಮಿಗೆ, ಮೈಸೂರು

ದರಪಟ್ಟಿ: ಎದ್ದು ಕಾಣುವ ದೋಷವೆಂದರೆ...

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಲಂಚದ ದರಪಟ್ಟಿಯನ್ನು ಕಾಂಗ್ರೆಸ್ ಪಕ್ಷದ ರಾಜ್ಯ ಘಟಕ ಬಿಡುಗಡೆ ಮಾಡಿದೆ (ಪ್ರ.ವಾ., ಸೆ. 14). ಸರ್ಕಾರದಲ್ಲಿ ಲಂಚದ ತಾಂಡವನೃತ್ಯ ನಡೆಯುತ್ತಿದೆ, ಇದನ್ನು ಮುಂದಿಟ್ಟುಕೊಂಡು ಜನರ ಬಳಿಗೆ ತಾನು ಹೋಗುವೆನೆಂದು ಪಕ್ಷ ಹೇಳಿದೆ. ಲಂಚದ ನೃತ್ಯವೈಭವ ಯಾವ ಕಾಲದಲ್ಲಿ ಇರಲಿಲ್ಲ ಎಂದು ಕಾಂಗ್ರೆಸ್ ಹೇಳಬೇಕು. ಈಗ್ಗೆ ಸುಮಾರು 900 ವರ್ಷಗಳ ಹಿಂದೆ ಇದ್ದ ಪುಲಿಗೆರೆ ಸೋಮನಾಥನ ಸೋಮೇಶ್ವರ ಶತಕದಲ್ಲೇ ಲಂಚದ ಪ್ರಸ್ತಾಪವಿದೆ! 'ಕೈಯಾಸೆಯಂ ಮಾಡದಂ ನಿಜ ಮಂತ್ರೀಶ್ವರಂ' ಎಂದಿದ್ದ ಕವಿ. ಲಂಚಕ್ಕೆ ಸಾರ್ವಕಾಲಿಕ ಕುಖ್ಯಾತಿಯಿದೆ.

ಕಾಂಗ್ರೆಸ್ ಬಿಡುಗಡೆ ಮಾಡಿರುವ ದರಪಟ್ಟಿಯಲ್ಲಿ ಏನಿದೆ ವಿಶೇಷ? ಎದ್ದು ಕಾಣುವ ದೋಷವೆಂದರೆ ಆ ದರಪಟ್ಟಿಯು ಬೇರೆ ಬೇರೆ ಇಲಾಖೆಗಳಲ್ಲಿ ಲಂಚವನ್ನು ಪಡೆದಿರುವ ವ್ಯಕ್ತಿ, ಆಯಾ ಇಲಾಖೆಗೆ ಸಂಬಂಧಿಸಿದ ಮಂತ್ರಿ, ಲಂಚದ ನಿಖರ ಮೊತ್ತ, ಯಾವಾಗ ಮತ್ತು ಯಾವ ರೂಪದಲ್ಲಿ ಲಂಚವನ್ನು ಕೊಟ್ಟಿದ್ದು, ಲಂಚ ನೀಡಿದ ನಿರ್ದಿಷ್ಟ ವ್ಯಕ್ತಿ ಯಾರು, ಸಂಘ, ಸಂಸ್ಥೆ ಯಾವುದು ಎಂಬಂತಹ ಸ್ಪಷ್ಟ ಹಾಗೂ ಖಚಿತ ವಿವರಗಳು ಇಲ್ಲದಿರುವುದು. ಲಂಚದ್ದು ಸಾರ್ವಕಾಲಿಕ ಕುಖ್ಯಾತಿ ಎಂದಾಗ ಅದು ಕಾಂಗ್ರೆಸ್ ಆಡಳಿತದ ಕಾಲವನ್ನು ಸಹ ಒಳಗೊಳ್ಳುತ್ತದೆ ಅಥವಾ ಕಾಂಗ್ರೆಸ್ ಪ್ರಕಾರ ಆ ಕಾಲದಲ್ಲಿ ಲಂಚ ಇರಲಿಲ್ಲವೇ? ಲಂಚವನ್ನು ಆದಷ್ಟೂ ಇಲ್ಲದಂತೆ ಮಾಡಲು ಆ ಪಕ್ಷದ ನೇತೃತ್ವದ ಸರ್ಕಾರ ತೆಗೆದುಕೊಂಡ ಕ್ರಮಗಳೇನು? ಶಿಕ್ಷೆಗೆ ಒಳಪಡಿಸಿದ ಅಧಿಕಾರಿವರ್ಗ ಯಾವುದು? ಕಾಂಗ್ರೆಸ್ ಈಗ ಮಾಡುವ ಆಪಾದನೆಗಳನ್ನು ಸಮರ್ಥಿಸಿಕೊಳ್ಳಲು ಈ ವಿವರಗಳನ್ನೂ ಜನರ ಮುಂದೆ ಇಡಬೇಕಿತ್ತು.

ಪಾಪಕೃತ್ಯಕ್ಕಾಗಿ ಮೇರಿ ಮ್ಯಾಗ್ಡಲಿನ್‌ಗೆ ಕಲ್ಲಿನಿಂದ ಹೊಡೆಯಬೇಕೆಂದಾಗ, ಜೀಸಸ್ ಅಲ್ಲಿ ನೆರೆದವರನ್ನು ಉದ್ದೇಶಿಸಿ ಹೇಳಿದ್ದು ಇದು: 'ನಿಮ್ಮಲ್ಲಿ ಯಾರು ಏನೊಂದೂ ಪಾಪವನ್ನು ಮಾಡಿಲ್ಲವೋ ಆತ ಮೊದಲು ಕಲ್ಲನ್ನು ಆಕೆಯತ್ತ ಬೀರಬೇಕು' ಎಂದು.

ಸಾಮಗ ದತ್ತಾತ್ರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದಿನಕ್ಕೆ 90 ಮಕ್ಕಳು ಅತ್ಯಾಚಾರಕ್ಕೆ ಬಲಿ

• ಜಯಸಿಂಹ ಆರ್., ಅಮೃತ ಕಿರಣ್ ಬಿ.ಎಂ.

ದೇಶದಲ್ಲಿ ಮಕ್ಕಳ ಮೇಲಿನ ಅತ್ಯಾಚಾರ ಪ್ರಕರಣಗಳಲ್ಲಿ ಭಾರಿ ಪ್ರಮಾಣದ ಏರಿಕೆಯಾಗಿದೆ. 2021ರಲ್ಲಿ ದೇಶದಾದ್ಯಂತ 'ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ-ಪೋಕ್ಸೊ' ಅಡಿ 33,186 ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ. 2021ರಲ್ಲಿ ಪ್ರತಿದಿನ 90 ಮಕ್ಕಳು ಅತ್ಯಾಚಾರಕ್ಕೆ ಬಲಿಯಾಗಿದ್ದಾರೆ ಎನ್ನುತ್ತದೆ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊವಿನ ವರದಿ.

2017ಕ್ಕೆ ಹೋಲಿಸಿದರೆ 2021ರಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆಯಲ್ಲಿ ಶೇ 86ರಷ್ಟು ಏರಿಕೆಯಾಗಿದೆ. ದೇಶದಾದ್ಯಂತ ಮಕ್ಕಳ ಮೇಲಿನ ಅತ್ಯಾಚಾರ ಪ್ರಕರಣಗಳು ಹೆಚ್ಚಾಗುತ್ತಿರುವುದನ್ನು ಇದು ಸೂಚಿಸುತ್ತದೆ.

2016ರಲ್ಲಿ ದೇಶದಾದ್ಯಂತ ಇಂತಹ ಒಟ್ಟು 19,920 ಪ್ರಕರಣಗಳು ದಾಖಲಾಗಿದ್ದವು. 2017ರಲ್ಲಿ ಇಂತಹ ಪ್ರಕರಣಗಳ ಸಂಖ್ಯೆಯಲ್ಲಿ ಸ್ವಲ್ಪ ಇಳಿಕೆಯಾಗಿತ್ತು. ಆದರೆ, ನಂತರದ ವರ್ಷಗಳಲ್ಲಿ ಪ್ರಕರಣಗಳ ಸಂಖ್ಯೆಯಲ್ಲಿ ಸತತ ಏರಿಕೆಯಾಗಿದೆ. 2016ರಿಂದ 2021ರ ನಡುವೆ, 2017ರಲ್ಲೇ ಅತ್ಯಂತ ಕಡಿಮೆ ಸಂಖ್ಯೆಯ ಪ್ರಕರಣಗಳು ದಾಖಲಾಗಿವೆ.

ಮಕ್ಕಳ ಮೇಲೆ ನಡೆಯುವ ಅತ್ಯಾಚಾರ ಪ್ರಕರಣಗಳನ್ನು ಪೋಕ್ಸೊ ಕಾಯ್ದೆಯ 4 ಮತ್ತು 6ನೇ ಸೆಕ್ಷನ್ ಅಡಿ ದಾಖಲಿಸಲಾಗುತ್ತದೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ ಈ ಪ್ರಕರಣಗಳನ್ನು 'ವಿಶೇಷ ಕಾಯ್ದೆಗಳು ಮತ್ತು ಸ್ಥಳೀಯ ಕಾನೂನುಗಳು-ಎಸ್‌ಎಲ್‌ಎಲ್' ವರ್ಗೀಕರಣದ ಅಡಿ, ಪಟ್ಟಿ ಮಾಡುತ್ತದೆ.

ಪೋಕ್ಸೊ ಅಡಿ ದಾಖಲಾದ ಅತ್ಯಾಚಾರ ಪ್ರಕರಣಗಳು



1,27,867
2017ರಿಂದ 2021ರವರೆಗೆ ದೇಶದಾದ್ಯಂತ ಪೋಕ್ಸೊ ಕಾಯ್ದೆ ಅಡಿ ದಾಖಲಾದ ಅತ್ಯಾಚಾರ ಪ್ರಕರಣಗಳ ಸಂಖ್ಯೆ

8,179
ಇದೇ ಅವಧಿಯಲ್ಲಿ ಕರ್ನಾಟಕದಲ್ಲಿ ಪೋಕ್ಸೊ ಕಾಯ್ದೆ ಅಡಿ ದಾಖಲಾದ ಅತ್ಯಾಚಾರ ಪ್ರಕರಣಗಳ ಸಂಖ್ಯೆ

- 2017ರಲ್ಲಿ ದೇಶದಾದ್ಯಂತ ದಾಖಲಾದ ಮಕ್ಕಳ ಮೇಲಿನ ಅತ್ಯಾಚಾರ ಪ್ರಕರಣಗಳ ಸಂಖ್ಯೆ 17,780. 2018ರಲ್ಲಿ 22,077 ಪ್ರಕರಣಗಳು ದಾಖಲಾಗಿದ್ದು, ವರ್ಷವೊಂದರಲ್ಲಿ 4,897 ಹೆಚ್ಚುವರಿ ಪ್ರಕರಣಗಳು ದಾಖಲಾಗಿದ್ದವು
- 2018ರ ನಂತರವೂ ಮಕ್ಕಳ ಮೇಲಿನ ಅತ್ಯಾಚಾರ ಪ್ರಕರಣಗಳ ಸಂಖ್ಯೆ ಸತತ ಏರಿಕೆಯಾಗಿದೆ. ಆದರೆ, 2020ರಲ್ಲಿ ಏರಿಕೆ ಪ್ರಮಾಣ (ಶೇ 6.9) ಕನಿಷ್ಠ ಮಟ್ಟದಲ್ಲಿತ್ತು
- 2021ರಲ್ಲಿ ಈವರೆಗಿನ ಗರಿಷ್ಠ ಸಂಖ್ಯೆಯ ಪ್ರಕರಣಗಳು ದಾಖಲಾಗಿವೆ. ಜತೆಗೆ ವಾರ್ಷಿಕ ಏರಿಕೆ ಪ್ರಮಾಣವೂ ಗರಿಷ್ಠ ಮಟ್ಟದಲ್ಲಿದೆ. 2020ಕ್ಕೆ ಹೋಲಿಸಿದರೆ, 2021ರಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆಯಲ್ಲಿ ಶೇ 17.15ರಷ್ಟು ಏರಿಕೆಯಾಗಿದೆ. 2021ರಲ್ಲಿ ಹೆಚ್ಚುವರಿಯಾಗಿ 4,859 ಪ್ರಕರಣಗಳು ದಾಖಲಾಗಿವೆ

ಮಧ್ಯಪ್ರದೇಶ, ಮಹಾರಾಷ್ಟ್ರದಲ್ಲಿ ಗರಿಷ್ಠ ಪ್ರಕರಣ

ದೇಶದಾದ್ಯಂತ ಪೋಕ್ಸೊ ಕಾಯ್ದೆಯ 4 ಮತ್ತು 6ನೇ ಸೆಕ್ಷನ್ ಅಡಿ ದಾಖಲಾದ ಪ್ರಕರಣಗಳಲ್ಲಿ ಹೆಚ್ಚಿನ ಪ್ರಕರಣಗಳು ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರದಲ್ಲೇ ವರದಿಯಾಗಿವೆ. ದೇಶದಾದ್ಯಂತ ದಾಖಲಾದ ಒಟ್ಟು ಪ್ರಕರಣಗಳಲ್ಲಿ ಶೇ 21ರಷ್ಟು ಪ್ರಕರಣಗಳು ಈ ಎರಡು ರಾಜ್ಯಗಳಲ್ಲೇ ವರದಿಯಾಗಿವೆ



- ತಮಿಳುನಾಡು, ಉತ್ತರ ಪ್ರದೇಶ, ಕರ್ನಾಟಕ, ಗುಜರಾತ್ ರಾಜ್ಯಗಳಲ್ಲೂ ಹೆಚ್ಚಿನ ಸಂಖ್ಯೆಯ ಪ್ರಕರಣಗಳು ದಾಖಲಾಗಿವೆ
- ದೇಶದಾದ್ಯಂತ ದಾಖಲಾದ ಪ್ರಕರಣಗಳಲ್ಲಿ ಕರ್ನಾಟಕದ ಪ್ರಕರಣಗಳ ಪಾಲು ಶೇ 6.30ರಷ್ಟಿದೆ
- ರಾಜಸ್ಥಾನದಲ್ಲಿ ಪೋಕ್ಸೊ ಕಾಯ್ದೆಯ 4 ಮತ್ತು 6ನೇ ಸೆಕ್ಷನ್ ಅಡಿ, ಎಸ್‌ಎಲ್‌ಎಲ್ ವರ್ಗೀಕರಣದ ಅಡಿ ಒಂದೂ ಪ್ರಕರಣವನ್ನು ದಾಖಲಿಸಿಲ್ಲ. ಹಿಮಾಚಲ ಪ್ರದೇಶ, ಗೋವಾ, ಲಡಾಖ್ ಮತ್ತು ಚಂಡೀಗಡದಲ್ಲೂ ಇದೇ ಸ್ಥಿತಿ ಇದೆ

ಶೇ 21ರಷ್ಟು ಪ್ರಕರಣಗಳು ವಿಚಾರಣೆಗೆ ಬಾಕಿ

2021ರ ಅಂತ್ಯದ ವೇಳೆಗೆ, ಪೋಕ್ಸೊ ಕಾಯ್ದೆಯ ಅತ್ಯಾಚಾರ ಆರೋಪದ ಅಡಿ (ಸೆಕ್ಷನ್ 4 ಮತ್ತು 6) ದೇಶದಾದ್ಯಂತ 33,186 ಪ್ರಕರಣಗಳು ದಾಖಲಾಗಿವೆ. ಈ ಪೈಕಿ ಶೇ 2ರಷ್ಟು ಪ್ರಕರಣಗಳನ್ನು ವಿವಿಧ ಕಾರಣ ನೀಡಿ ವಜಾ ಮಾಡಲಾಗಿದೆ. ಸುಳ್ಳು ಪ್ರಕರಣ ಎಂಬುದಾಗಿಯೂ, ತಪ್ಪಾಗಿ ವರದಿ ಮಾಡಲಾಗಿದೆ ಎಂಬುದಾಗಿಯೂ ವಿವಿಧ ಕಾರಣಗಳನ್ನು ನೀಡಿ 676 ಪ್ರಕರಣಗಳಿಗೆ ಮುಕ್ತಾಯ ಹಾಡಲಾಗಿದೆ.

ಇದಲ್ಲದೇ, ಒಟ್ಟು ಪ್ರಕರಣಗಳ ಪೈಕಿ 478 ಪ್ರಕರಣಗಳಲ್ಲಿ ಸತ್ಯಾಂಶವಿರುವುದು ಗೊತ್ತಾಗಿದ್ದರೂ, ಅದನ್ನು ದೃಢಪಡಿಸುವ ಸಾಕ್ಷ್ಯಾಧಾರಗಳ ಕೊರತೆ ಕಂಡುಬಂದಿದೆ. ಅಂದರೆ, ಸಾಕ್ಷ್ಯಾಧಾರಗಳ ಕೊರತೆಯಿಂದ ಆರೋಪಿಗಳು ಖುಲಾಸೆಯಾಗಿದ್ದು, ಈ ಪ್ರಕರಣಗಳನ್ನು ಕೈಬಿಡಲಾಗಿದೆ ಎಂದು ಎನ್‌ಸಿಆರ್‌ಬಿ ವರದಿ ಹೇಳುತ್ತದೆ. ಹೀಗಾಗಿಯೇ, 2021ರ ಅಂತ್ಯದ ವೇಳೆಗೆ ದಾಖಲಾದ ಒಟ್ಟು ಪ್ರಕರಣಗಳ ಪೈಕಿ 24,840 ಪ್ರಕರಣಗಳಲ್ಲಷ್ಟೇ ಪೊಲೀಸರು ದೋಷಾರೋಪ ಪಟ್ಟಿಯನ್ನು ಕೋರ್ಟ್‌ಗೆ ಸಲ್ಲಿಸಲು ಸಾಧ್ಯವಾಗಿದೆ.

ಹಿಂದಿನ ವರ್ಷದ 22 ಪ್ರಕರಣಗಳನ್ನು ಪೊಲೀಸರು 2021ರಲ್ಲಿ ಮರು ತನಿಖೆಗೆ ಎತ್ತಿಕೊಂಡಿದ್ದಾರೆ. ಬೇರೆ ರಾಜ್ಯಗಳಿಗೆ ಸಂಬಂಧಿಸಿದ 104 ಪ್ರಕರಣಗಳನ್ನು ತನಿಖೆಗಾಗಿ ಆಯಾ ರಾಜ್ಯಗಳಿಗೆ ವರ್ಗಾವಣೆ ಮಾಡಲಾಗಿದೆ. ಪೊಲೀಸ್ ತನಿಖೆಯ ವೇಳೆ ಆರೋಪಿಗಳು ಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದರಿಂದ 62 ಪ್ರಕರಣಗಳ ವಿಚಾರಣೆ ಸ್ಥಗಿತಗೊಂಡಿದೆ. ಒಟ್ಟಾರೆಯಾಗಿ, ಪೋಕ್ಸೊ ಕಾಯ್ದೆಯ ಅತ್ಯಾಚಾರ ಆರೋಪದ ಅಡಿಯಲ್ಲಿ ಶೇ 21ರಷ್ಟು (7,251) ಪ್ರಕರಣಗಳು ಸದ್ಯ ವಿಚಾರಣೆಗೆ ಬಾಕಿಯಿವೆ ಎಂದು ದತ್ತಾಂಶಗಳು ಹೇಳುತ್ತವೆ. ಈ ಪ್ರಕರಣಗಳ ವಿಚಾರಣೆ ತಡವಾಗುತ್ತಿರುವುದರಿಂದ, ಅತ್ಯಾಚಾರಕ್ಕೆ ಒಳಗಾದ ಸಂತ್ರಸ್ತ ಬಾಲಕಿಯರಿಗೆ ಸಿಗಬೇಕಾದ ನ್ಯಾಯದಾನವೂ ವಿಳಂಬವಾಗುತ್ತಿದೆ.



ಕರ್ನಾಟದಲ್ಲೂ ಏರಿಕೆ

ಪೋಕ್ಸೊ ಕಾಯ್ದೆಯ 4 ಮತ್ತು 6ನೇ ಸೆಕ್ಷನ್ ಅಡಿ ದಾಖಲಾದ ಅತ್ಯಾಚಾರ ಪ್ರಕರಣಗಳ ಸಂಖ್ಯೆ ರಾಜ್ಯದಲ್ಲೂ ಸತತ ಏರಿಕೆ ಕಂಡಿದೆ. 2017ರಲ್ಲಿ ರಾಜ್ಯದಲ್ಲಿ ಇಂತಹ 1,357 ಪ್ರಕರಣಗಳು ದಾಖಲಾಗಿದ್ದವು. 2021ರಲ್ಲಿ ಇಂತಹ 2,093 ಪ್ರಕರಣಗಳು ದಾಖಲಾಗಿವೆ. 2017ಕ್ಕೆ ಹೋಲಿಸಿದರೆ 2021ರಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆಯಲ್ಲಿ ಶೇ 54ರಷ್ಟು ಏರಿಕೆಯಾಗಿದೆ. 2020ಕ್ಕೆ ಹೋಲಿಸಿದರೆ 2021ರಲ್ಲಿ ಇಂತಹ ಪ್ರಕರಣಗಳ ಸಂಖ್ಯೆಯಲ್ಲಿ ಶೇ 26ರಷ್ಟು ಏರಿಕೆಯಾಗಿದೆ.



ಆಧಾರ: ಎನ್‌ಸಿಆರ್‌ಬಿಯ ಭಾರತದಲ್ಲಿ ಅಪರಾಧ ವರದಿ–2021, 2020, 2019, 2018, 2017, 2016

ಪ್ರಜಾವಾಣಿ ಗ್ರಾಫಿಕ್ಸ್



ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಬಿಬಿಎಂಪಿ ಮತ್ತು ನಗರಪಾಲಿಕೆಗಳ ವ್ಯಾಪ್ತಿಯನ್ನು ಹೊರತುಪಡಿಸಿ ಉಳಿದ ಒತ್ತುವರಿಗೆ ವಿನಾಯಿತಿ ನೀಡಲು ಕಾಯ್ದೆಗೆ ತಿದ್ದುಪಡಿ ತರುವ ಸರ್ಕಾರದ ಕ್ರಮ ಸಮರ್ಥನೀಯವೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 225

ಪಾರ್ವತಿಯ ಕಠಿಣ ತಪಸ್ಸು

ಪಾರ್ವತಿ ನಾರುಬಟ್ಟೆಗಳನ್ನುಟ್ಟಳು. ಒಡ್ಯಾಣಕ್ಕೆ ಬದಲಾಗಿ ಮೌಂಜೀ ಎಂಬ ಹುಲ್ಲಿನ ದಾರವನ್ನು ಕಟ್ಟಿ ಬಿಗಿದಳು. ಹಾಗೆಯೇ, ಅನರ್ಘವಾದ ಹಾರವನ್ನು ಬಿಟ್ಟು, ಪವಿತ್ರವಾದ ಮೃಗಚರ್ಮವನ್ನು ಧರಿಸಿದಳು. ಗಂಗಾವತರಣವೆಂಬ ತಪ್ಪಲಿಗೆ ತಪಸ್ಸಿಗಾಗಿ ಹೊರಟಳು.

ಹಿಮವತ್ಪರ್ವತದ ತಪ್ಪಲಲ್ಲಿರುವ ಗಂಗಾವತರಣದಲ್ಲೇ, ಈ ಹಿಂದೆ ಶಂಕರ ತಪಸ್ಸು ಮಾಡುತ್ತಿದ್ದ. ಅಲ್ಲಿಗೆ ನಿತ್ಯ ಪಾರ್ವತಿ ಬಂದು ಶಿವನ ಸೇವೆ ಮಾಡುತ್ತಿದ್ದಳು. ತನ್ನ ಸೌಂದರ್ಯದಿಂದ ಶಿವನನ್ನು ಒಲಿಸಿಕೊಳ್ಳುವೆ ಎಂಬ ಬಲವಾದ ನಂಬಿಕೆಯಲ್ಲಿದ್ದಳು. ಆದರೆ, ಮಹಾಹಠಯೋಗಿಯಾದ ಶಿವ, ಮನ್ಮಥನ ಹೂಬಾಣದಿಂದ ಕ್ಷಣ ಕಾಲ ವಿಚಲಿತನಾದರೂ, ಮತ್ತೆ ಎಚ್ಚೆತ್ತು ತಪೋಭಂಗ ಮಾಡಿದ ಮನ್ಮಥನನ್ನು ಭಸ್ಮಮಾಡಿದ್ದ. ಈ ಘಟನೆ ನಂತರ ಹರ ಅಲ್ಲಿ ನಿಲ್ಲದೆ ಬೇರೆಡೆ ಹೊರಟು ಹೋಗಿದ್ದ. ತಾನು ಕಳೆದುಕೊಂಡ ಭಾಗ್ಯವನ್ನು, ಅಲ್ಲೇ ಪಡೆಯಬೇಕೆಂದು ನಿರ್ಧರಿಸಿದ ಜಗನ್ಮಾತೆಯಾದ ಉಮೆ, ಘೋರ ತಪಸ್ಸು ಮಾಡಲು ಗಂಗಾವತರಣಕ್ಕೆ ಬಂದಳು. ಶಿವನನ್ನು ನೋಡಿದ ಪಾರ್ವತಿ ತನ್ನ ತಪ್ಪನ್ನು ನೆನೆದು ಕ್ಷಮಿಸುವಂತೆ ಶಿವನನ್ನು ವಿಲಾಪಿಸಿದಳು. ಸಖಿಯರು ಸಮಾಧಾನಿಸಿದ ಮೇಲೆ ಧೈರ್ಯ ತಂದುಕೊಂಡಳು. ಅನತಿ ದೂರದಲ್ಲಿರುವ ಶೃಂಗೀತೀರ್ಥವೆಂಬ ಪವಿತ್ರ ತೀರ್ಥಕ್ಷೇತ್ರದಲ್ಲಿ ತಪವನ್ನಾಚರಿಸಲು ಕುಳಿತಳು. ಅಲ್ಲಿ ಗೌರಿ ತಪವನ್ನ ಆಚರಿಸಿದ್ದರಿಂದ ಆ ಶಿಖರಕ್ಕೆ ಮುಂದೆ 'ಗೌರೀಶಿಖರ' ಎಂಬ ಹೆಸರು ಬಂತು.

ಗಿರಿಜೆಯು ಅಲ್ಲಿ ಸುಂದರವಾದ ಮರಗಳನ್ನು ಬೆಳೆಸಿದಳು. ಅವು ಪಾರ್ವತಿಯ ತಪಃಪ್ರಭಾವದಿಂದ ಮಹಾಪವಿತ್ರ ವೃಕ್ಷಗಳಾದವು. ತಪಸ್ಸಿಗೆ ಕುಳಿತುಕೊಳ್ಳುವ ಮೊದಲು, ಭೂಶುದ್ಧಿಯನ್ನು ಮಾಡಿ, ಅಲ್ಲಿ ವೇದಿಕೆಯೊಂದನ್ನು ನಿರ್ಮಿಸಿದಳು. ಅದರಲ್ಲಿ ಕುಳಿತು ತಪವನ್ನ ಆರಂಭಿಸಿದಳು. ಇಂದ್ರಿಯಗಳನ್ನು ಮತ್ತು ಮನಸ್ಸನ್ನು ನಿಗ್ರಹಿಸಿ, ಘನಘೋರ ತಪವನ್ನ ಆಚರಿಸತೊಡಗಿದಳು. ಬೇಸಿಗೆ ಕಾಲದ ಉರಿಯುವ ಬೇಗೆಯನ್ನೂ ಲೆಕ್ಕಿಸದೆ, ತನ್ನ ಸುತ್ತಲ ವಾತಾವರಣವನ್ನು ಮತ್ತಷ್ಟು ಬಿಸಿಯಾಗುವಂತೆ ಮಾಡಿಕೊಳ್ಳುತ್ತಿದ್ದಳು. ಇದಕ್ಕಾಗಿ ತನ್ನ ಸುತ್ತಲೂ ಉರಿಯುವ ಅಗ್ನಿಯನ್ನು ಹಾಕಿಕೊಂಡಳು. ಅಗ್ನಿಜ್ವಾಜಲಿಸುವ ವರ್ತುಲದ ಮಧ್ಯದಲ್ಲಿ ಕುಳಿತು ಶಿವಪಂಚಾಕ್ಷರಮಂತ್ರವನ್ನು ಜಪಿಸಿದಳು.

ಮಳೆಗಾಲದಲ್ಲಿ ಕಲ್ಲಿನ ಮೇಲೆ ಸ್ಥಂಡಿಲವನ್ನು ಹಾಕಿಕೊಂಡು ಕುಳಿತು ತಪವನ್ನ ಆಚರಿಸಿದಳು. ಆಗ ಅವಳ ಮೇಲೆ ಜಲಧಾರೆ ಎಷ್ಟೇ ಸುರಿದರೂ, ಒಂದಿಷ್ಟು ಅಲುಕದೆ ಶಿವಪಂಚಾಕ್ಷರಮಂತ್ರವನ್ನು ಬಿಡದೆ ಉಚ್ಚರಿಸುತ್ತಿದ್ದಳು. ಹೇಮಂತ ಋತುವಿನಲ್ಲಂತೂ ಪಾರ್ವತಿ ಹಿಮವತ್ಪರ್ವತ ಮಂಜಿನಿಂದ ಆವೃತವಾಗುತ್ತಿತ್ತು. ಅಂಥ ಮೈಕೊರೆಯುವ ಚಳಿಯಲ್ಲೂ, ಮಂಜುಗಡ್ಡೆಯಂತಿರುವ ನೀರಿನಲ್ಲಿ ನಿಂತು ಭಕ್ತಿಯಿಂದ ಶಿವಪಂಚಾಕ್ಷರಮಂತ್ರವನ್ನು ಜಪಿಸುತ್ತಾ, ಶಿವನನ್ನು ಕುರಿತು ತಪವನ್ನಾಚರಿಸಿದಳು. ಶಿಶಿರಋತುವಿನ ರಾತ್ರಿಯಲ್ಲಿ ಆಹಾರವನ್ನ ಸೇವಿಸದೆ ತಪವನ್ನ ಆಚರಿಸಿದಳು. ಅಸಾಧ್ಯವಾದ ಶೀತಗಾಳಿ, ಬಿರುಗಾಳಿ ಬೀಸಿದರೂ, ಎಡೆಬಿಡದೆ ಮಳೆ ಸುರಿದರೂ, ಮೈಮೂಳೆಗಳನ್ನು ಕೊರೆಯುವಂಥ ಶೀತಮಾರುತ ಅಪ್ಪಳಿಸಿದರೂ, ಧೃತಿಗೆಡದೆ ಸ್ಥಿರಮನಸ್ಸಿನಿಂದ ಕಠೋರ ತಪವನ್ನ ಆಚರಿಸಿದಳು.

ಹೀಗೆ ಕಠಿಣವಾದ ತಪವನ್ನಾಚರಿಸುತ್ತಾ, ಪಂಚಾಕ್ಷರಮಂತ್ರವನ್ನು ಜಪಿಸುತ್ತಾ, ಗಿರಿಜೆಯು ಸಕಲೇಷ್ಟಾರ್ಥಗಳನ್ನು ಕೊಡುವಂತಹ ಶಿವನನ್ನು ಧ್ಯಾನಿಸುತ್ತಿದ್ದಳು. ಹೀಗಿದ್ದರೂ, ತಪಸ್ಸಿನ ಮಧ್ಯೆ ಬಿಡುವಿನ ಕಾಲದಲ್ಲಿ ಪ್ರತಿದಿನವೂ ಆಕೆ, ತಾನು ಬೆಳೆಸಿದ ಮರಗಳಿಗೆ ಸಖಿಯರೊಡನೆ ನೀರೆರೆಯುತ್ತಿದ್ದಳು. ಶೃಂಗೀತೀರ್ಥಕ್ಷೇತ್ರಕ್ಕೆ ಬರುವ ಯಾತ್ರಾರ್ಥಿಗಳಿಗೆ ಫಲಾಹಾರಗಳನ್ನು ನೀಡಿ ಅತಿಥಿಸೇವೆ ಮಾಡುತ್ತಿದ್ದಳು.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ

ನಾಲ್ಕು ತಪಗಳು

ಕ್ಷಮೆ ದೋಷಿಗಳಲಿ, ಕೆಚ್ಚಿದೆ ವಿಧಿಯ ಬಿರುಬಿನಲಿ |
ಸಮತೆ ನಿರ್ಮತ್ಸರತೆ ಸೋಲ್ಗೆಲವುಗಳಲಿ ||
ಶಮವ ನೀಂ ಗಳಿಸಲೀ ನಾಲ್ಕು ತಪಗಳೆ ಸಾಕು |
ಭ್ರಮೆಯೊ ಮಿಕ್ಕೆಲ್ಲ ತಪ – ಮಂಕುತಿಮ್ಮ || 715 ||

ಪದ-ಅರ್ಥ: ಬಿರುಬು = ತೀವ್ರವಾದ ಹೊಡೆತ, ಸಮತೆ = ಸಮಾನತೆ, ನಿರ್ಮತ್ಸರತೆ = ಅಸೂಯೆಯಿಲ್ಲದ್ದು, ಸೋಲ್ಗೆಲವುಗಳಲಿ = ಸೋಲು + ಗೆಲವುಗಳಲಿ, ಶಮ = ಅಂತರಂಗದ ಶಾಂತಿ.

ವಾಚ್ಯಾರ್ಥ: ಬದುಕಿನಲ್ಲಿ ಸದಾಕಾಲದ ಶಾಂತಿಯನ್ನು ಪಡೆಯಲು ನಾಲ್ಕು ತಪಸ್ಸುಗಳು ಸಾಕು. ಅವು, ದೋಷಿಗಳಲ್ಲಿ ಕ್ಷಮೆ, ವಿಧಿಯ ಪರೀಕ್ಷಾ ಕಾಲದಲ್ಲಿ ಧೈರ್ಯ, ಸೋಲು ಗೆಲುವುಗಳಲ್ಲಿ ಸಮಾನತೆ ಮತ್ತು ಅನಸೂಯಗುಣ. ಉಳಿದ ತಪಸ್ಸುಗಳೆಲ್ಲ ಭ್ರಮೆಗಳು.

ವಿವರಣೆ: ಜಗತ್ತಿನಲ್ಲಿ ಎಲ್ಲ ಜನ ಒದ್ದಾಡುವುದು ಕೇವಲ ಒಂದು ಅಪೇಕ್ಷೆಗೆ. ಅದು ಅಂತರಂಗದ ಶಾಂತಿ. ಹಣ ನಿಮಗೆ ವಸ್ತುಗಳನ್ನು ಕೊಟ್ಟೀತು. ಆದರೆ ಶಾಂತಿಯನ್ನು ಕಿತ್ತುಕೊಂಡೀತು. ಅಧಿಕಾರ, ದೇಹಬಲ, ಖ್ಯಾತಿ ಇವೆಲ್ಲ ಬೇರೆ ಬೇರೆ ಸಾಧನೆಗಳನ್ನು ಮಾಡಲು ನೆರವಾಗಬಹುದು. ಆದರೆ ಶಾಂತಿಯನ್ನು ನೀಡಲಾರವು. ಯಯಾತಿಯಂತಹ ಭೋಗಿ ಕೂಡ ಶಾಂತಿಗಾಗಿ ಒದ್ದಾಡಿದ. ಬುದ್ಧ, ಮಹಾವೀರ, ಶಂಕರಾಚಾರ್ಯರು, ಮತ್ತೆಲ್ಲ ಮಹನೀಯರು ತಮ್ಮ ಬದುಕಿನುದ್ದಕ್ಕೂ ಪ್ರಯತ್ನಿಸಿದ್ದು ಈ ಅಂತರಂಗದ ಶಾಂತಿಗಾಗಿ. ಅದು ಬರುವುದೆಲ್ಲಿಂದ? ಅಕ್ಕ ಮಹಾದೇವಿ ಕೇಳುತ್ತಾಳೆ, "ಉಸುರಿನ ಪರಿಮಳವಿರಲು ಕುಸುಮದ ಹಂಗೇಕಯ್ಯಾ?" ಉಸುರಿಗೆ ಪರಿಮಳ ಬಂದದ್ದು ಅಂತರಂಗದ ಶುದ್ಧಿಯಿಂದ, ಶಾಂತಿಯಿಂದ. ಅದೇ ಶಮ. ಅದನ್ನು ಗಳಿಸಲು ನಾಲ್ಕು ತಪಸ್ಸನ್ನು ಮಾಡಲು ಕಗ್ಗ ಸೂಚಿಸುತ್ತದೆ. ಉಳಿದ ಯಾವ ತಪಗಳೂ ಬೇಕಿಲ್ಲ ಎಂದು ಖಚಿತವಾಗಿ ಹೇಳುತ್ತದೆ.

ಮೊದಲನೆಯ ತಪ, ದೋಷಿಗಳಲ್ಲಿ ಕ್ಷಮೆ. ಕ್ಷಮೆಯನ್ನು ನೀಡುವುದು ಹೇಡಿಗಳಿಂದ ಅಸಾಧ್ಯ. ಅದಕ್ಕೆ ಧೈರ್ಯಬೇಕು, ಮನದ ವಿಸ್ತಾರಬೇಕು. ದೋಷಿ ತನ್ನ ತಪ್ಪಿಗೆ ಪ್ರಾಯಶ್ಚಿತ್ತ ಪಟ್ಟಿದ್ದರೆ ಅದನ್ನು ಕ್ಷಮಿಸುವ ದೊಡ್ಡತನವನ್ನು ತೋರಬೇಕು. ಕ್ಷಮೆ ಒಂದು ದೇವತ್ವದ ಗುಣ. ತನ್ನ ಐದು ಮಕ್ಕಳನ್ನು ಹೇಯವಾದ ರೀತಿಯಿಂದ ಕೊಂದ ಅಶ್ವತ್ಥಾಮನನ್ನು ಕ್ಷಮಿಸಿದ ದ್ರೌಪದಿ ಒಂದು ಅದ್ಭುತ ಮಾದರಿ. ಎರಡನೆಯದು, ವಿಧಿ ಮುನಿದಾಗ, ನಮ್ಮನ್ನು ತನ್ನ ಹರಿತವಾದ ಅಲಗಿಗೆ ಹಾಕಿ ಉಜ್ಜಿದಾಗ, ಧೈರ್ಯ ಕಳೆದುಕೊಳ್ಳದೆ ಹೋರಾಡುವುದು. ಹರಿಶ್ಚಂದ್ರ, ಪಾಂಡವರು, ನಳ ಮಹಾರಾಜ, ಶ್ರೀರಾಮ, ಸೀತೆ, ಸಾವಿತ್ರಿ ಫುಲೆ ಇವರೆಲ್ಲ ಆದರ್ಶ ವ್ಯಕ್ತಿಗಳಾದದ್ದು ವಿಧಿಯ ಬಿರುಮಳೆಯಲ್ಲಿ ಶಕ್ತಿಮೀರಿ ಹೋರಾಡಿದ್ದಕ್ಕೆ. ಮೂರನೆಯದು, ಸೋಲು-ಗೆಲುವುಗಳಲ್ಲಿ ಸಮತೆ. ಜೀವನದಲ್ಲಿ ಯಾವಾಗಲೂ ಸೋಲಾಗಲಿ, ಗೆಲುವಾಗಲೀ ಇರುವುದು ಅಸಾಧ್ಯ. ಸೋಲು ಬಂದಾಗ ಕುಗ್ಗಿ ಹೋಗದೆ, ಗೆಲುವು ದೊರೆತಾಗ ಮೈಮರೆತು ಹಾರಾಡದೆ, ಎಲ್ಲವನ್ನೂ ಒಂದೇ ರೀತಿಯಲ್ಲಿ ಭಗವಂತನ ಪ್ರಸಾದವೆಂದು ಭಾವಿಸುವುದು ಬಹುದೊಡ್ಡ ತಪಸ್ಸು. ನಾಲ್ಕನೆಯದು, ನಿರ್ಮತ್ಸರತೆ. ಅದೊಂದು ಬಹುಶ್ರೇಷ್ಠವಾದ ಅನಸೂಯಗುಣ. ಪಕ್ಕದ ಮನೆಯವರು ಉದ್ದವಾದ ಕಾರು ತರುವವರೆಗೂ ನಮ್ಮ ಕಾರಿನ ಬಗ್ಗೆ ತಕರಾರು ಇರುವುದಿಲ್ಲ. ನಮ್ಮ ಕಾರು ಒಂದು ಗೇಣು ಗಿಡ್ಡವಾಗಿದ್ದು ಹೊಟ್ಟೆ ಉರಿಸುತ್ತದೆ. ಮತ್ತೊಬ್ಬರ ಸೋಲಿಗೆ ಸಂತೋಷಪಡದೆ, ಅವರ ಗೆಲುವಿಗೆ ಹೊಟ್ಟೆಕಿಚ್ಚು ಪಡದೆ ಇರುವುದು ಬಹಳ ಶ್ರೇಷ್ಠ ತಪಸ್ಸು. ಅದಕ್ಕೇ ಕಗ್ಗ, ಈ ನಾಲ್ಕು ತಪಸ್ಸುಗಳು ಬದುಕಿನ ನೆಮ್ಮದಿಗೆ, ಶಾಂತಿಗೆ ಸಾಕು, ಉಳಿದ ತಪಸ್ಸುಗಳು ಕೇವಲ ಭ್ರಮೆ ಎನ್ನುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಸೆಪ್ಟೆಂಬರ್ 15, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ಪಂಚಮಿ ಗಂ. 11-11 ನಕ್ಷತ್ರ: ಭರಣಿ ಗಂ. 08-05, ಯೋಗ: ಹರ್ಷಣ ಗಂ. 29-27, ಕರಣ: ತೈತಿಲ ಗಂ. 11-01, ಸಿಂಹ ಮಾಸದ 29 ನೇ ದಿನ.
ರಾಹುಕಾಲ: ಮಧ್ಯಾಹ್ನ 01:30-03:00
ಸೂರ್ಯೋದಯ: 06-23 **ಸೂರ್ಯಾಸ್ತ:** 06-28
ದಿನ ವಿಶೇಷ: ಮಹಾಭರಣೀ, ಮುಸ್ಲಿಂ ದಿನಾಂಕ: 18 ಸಫರ್‌ಅ
ದೃಷ್ಟ ಸಂಖ್ಯೆ: 5, 7

ಮೇಷ: ಹಿರಿಯರ ಆಶೀರ್ವಾದವು ಎಲ್ಲಾ ಕಾರ್ಯಗಳಲ್ಲೂ ಜಯ ತಂದು ಕೊಡಲಿದೆ. ನಿತ್ಯದ ಜೀವನಕ್ರಮವನ್ನು ಬದಲಿಸದೆ ಮುಂದುವರಿಸಿರಿ. ನಿಮ್ಮ ಈಗಿರುವ ಉದ್ಯೋಗದಲ್ಲಿ ಸ್ಥಿರತೆ ಮತ್ತು ಧನಾನುಕೂಲತೆ ಪ್ರಾಪ್ತಿಯಾಗುತ್ತದೆ.

ವೃಷಭ: ನಿಮ್ಮನ್ನು ಅವಮಾನಿಸುತ್ತಿದ್ದವರೇ ಇಂದು ನಿಮ್ಮ ಸಹಾಯ ಕೋರಿ ಬರಲಿದ್ದಾರೆ. ನಿಮ್ಮ ಬಯಕೆಗಳು ಸ್ವಪ್ರಯತ್ನದಿಂದ ಸುಲಭವಾಗಿ ಈಡೇರುವುದು. ಮನರಂಜನೆಗಾಗಿ ಅಧಿಕ ಮಟ್ಟದಲ್ಲಿ ಖರ್ಚು ಮಾಡುವಿರಿ.

ಮಿಥುನ: ಸಾಮಾಜಿಕವಾದ ನಿಮ್ಮ ಕೆಲಸಗಳಿಂದ ಕೌಟುಂಬಿಕವಾಗಿ ಸಮಯದ ಅಭಾವ ಉಂಟಾಗುವುದು. ಸ್ವಾಭಿಮಾನಕ್ಕೆ ಗಾಯ ಮಾಡುವವರಿಂದ ದೂರ ಉಳಿಯುವ ಪ್ರಯತ್ನ ಮಾಡಿ.

ಕರ್ಕಾಟಕ: ಮಾನಸಿಕ ವೇದನೆಯಿಂದಾಗಿ ಆರೋಗ್ಯದಲ್ಲಿ ವ್ಯತ್ಯಾಸವಾಗಬಹುದು. ನಾಲ್ಕಾರು ದಿನದಿಂದ ಉದ್ಯೋಗದಲ್ಲಿ ಉಂಟಾದ ಸಮಸ್ಯೆಗೆ ಈ ದಿನ ಬಹಳ ಸುಲಭವಾಗಿ ಉತ್ತರ ಸಿಗಲಿದೆ. ಹಣದ ವಿಷಯದಲ್ಲಿ ಜಾಗೃತರಾಗಿರಿ.

ಸಿಂಹ: ಈ ದಿನ ನೀವು ಮಾಡುವ ಕೆಲಸಗಳಲ್ಲಿ ನಿಮ್ಮ ಅದೃಷ್ಟವನ್ನು ಪರೀಕ್ಷಿಸಿಕೊಳ್ಳುವಂತಾಗುವುದು. ಉದ್ಯೋಗದ ವಿಸ್ತರಣೆ ವಿಷಯವಾಗಿ ಉತ್ತಮ ಆಲೋಚನೆಗಳು ಗರಿಗೆದರಲಿವೆ.

ಕನ್ಯಾ: ಸರ್ಕಾರಿ ಮಟ್ಟದ ಉದ್ಯೋಗ, ವ್ಯವಹಾರ ಟೆಂಡರ್‌ಗಳಲ್ಲಿ ಯಶಸ್ಸು ಪಡೆಯುವಿರಿ. ಒಂದು ವಿಚಾರವನ್ನು ಭಿನ್ನ ದೃಷ್ಟಿಯಿಂದ ನೋಡುವ ನಿಮ್ಮ ಅಭ್ಯಾಸದಿಂದ ನಷ್ಟವಾಗುವ ವಿಚಾರದಲ್ಲಿ ಮುಂಜಾಗ್ರತೆ ವಹಿಸಬಹುದು.

ತುಲಾ: ನಿಮ್ಮ ಸಮಯವನ್ನು ಇನ್ನೊಬ್ಬರಿಗಾಗಿ ಬಳಸಬೇಕಾದ ಪರಿಸ್ಥಿತಿ ಎದುರಾಗುವ ಕಾರಣದಿಂದ ನಿಮ್ಮ ದೈನಂದಿನ ರೀತಿ ರಿವಾಜುಗಳನ್ನು ಉಳಿಸಿಕೊಳ್ಳುವುದಕ್ಕಾಗಿ ವೇಗವಾಗಿ ಕೆಲಸ ಮಾಡಬೇಕಾಗುತ್ತದೆ.

ವೃಶ್ಚಿಕ: ಕಾರ್ಯಕ್ಷೇತ್ರದಲ್ಲಿ ನೀವು ನಡೆಸಬೇಕೆಂದಿದ್ದ ಕೆಲಸಕಾರ್ಯಗಳು ಸುಸೂತ್ರವಾಗಿ ನಿಮ್ಮ ಯೋಚನೆಯಂತೆ ಸಾಗುತ್ತವೆ. ಸಾಮಾಜಿಕವಾಗಿ ನಿಮ್ಮ ವರ್ಚಸ್ಸು ಹೆಚ್ಚುವುದು. ಸಕಾಲದಲ್ಲಿ ಸಲಹೆ ಪಡೆಯುವುದು ಹಿತಕರ.

ಧನು: ಕಾರ್ಯರಂಗದಲ್ಲಿ ನಿಮ್ಮ ಧೈರ್ಯ, ಪ್ರಯತ್ನಬಲ, ಆತ್ಮವಿಶ್ವಾಸದ ಪ್ರವೃತ್ತಿಯಿಂದಾಗಿ ಅಭಿವೃದ್ಧಿ ಹೊಂದಿದರೂ ಜನರ ಕೆಟ್ಟ ದೃಷ್ಟಿಗೆ ಸಿಕ್ಕಿಕೊಳ್ಳಬೇಕಾಗುತ್ತದೆ. ವಿದ್ಯಾರ್ಥಿಗಳ ಅಭ್ಯಾಸಬಲಕ್ಕೆ ಸೌಲಭ್ಯಗಳು ದೊರೆಯಲಿವೆ.

ಮಕರ: ಸ್ವತಂತ್ರ ವೃತ್ತಿಯವರಿಗೆ ನಿರಂತರ ಆದಾಯ ತೋರಿಬಂದರೂ ಖರ್ಚು-ವೆಚ್ಚಗಳಲ್ಲಿ ಜಾಗ್ರತೆ ಇರಲಿ. ನ್ಯಾಯಾಲಯದ ಕೆಲಸ ಕಾರ್ಯಗಳಲ್ಲಿ ಮುನ್ನಡೆಯನ್ನು ಸಾಧಿಸುವಿರಿ. ಬಂಧು-ಮಿತ್ರರ ಆಗಮನ ಸಂತಸ ತರುವುದು.

ಕುಂಭ: ಧರ್ಮ ಕಾರ್ಯದಲ್ಲಿ ಆಸಕ್ತಿ ಮೂಡುವುದು. ಗೌಪ್ಯತೆಯ ವಿಚಾರ ನಿಮ್ಮಿಂದ ಇನ್ನೊಬ್ಬರಿಗೆ ತಿಳಿಯದಂತೆ ಜಾಗ್ರತೆವಹಿಸಿ. ನಿರುದ್ಯೋಗಿಗಳಿಗೆ ಪ್ರಯತ್ನಬಲದಿಂದ ಉತ್ತಮ ಅವಕಾಶಗಳುತೋರಿ ಬರಲಿವೆ,

ಮೀನ: ವಿದೇಶಿ ವ್ಯವಹಾರಗಳು ಲಾಭದಾಯಕವಾಗಿರುತ್ತವೆ. ವ್ಯವಹಾರಕ್ಕಾಗಿ ವಿದೇಶ ಯಾನ ಮಾಡುವ ಪರಿಸ್ಥಿತಿ ಬರಬಹುದು. ಸಾಂಕ್ರಾಮಿಕ ರೋಗದಂತಹ ಅನಾರೋಗ್ಯ ನಿಮ್ಮನ್ನು ಬಾಧಿಸುವುದು.

ಪದಬಂಧ 5080

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಪ್ರೇಮಿಗಳ ಹುಸಿಜಗಳವಿದು (6)
4. ದ್ರವದಿಂದ ತುಂಬಿದುದು (4)
5. ಕವಚ ಧರಿಸಿ ಕುಳಿತಿರುವ ಓದುಗ (3)
7. ಇದು ಸ್ಥಿರವಾದುದು (3)
10. ಭಾಗಲಬ್ಧ ಕಲಿಯುತ್ತಿರುವ ಜಿಪುಣ! (3)
12. ಬಳ್ಳಿ ಇಲ್ಲಿ ಹಬ್ಬಿದೆ (3)
13. ಅದೇ ತಾನೆ ಮೂಡುತ್ತಿರುವ ಸೂರ್ಯ (4)
15. ಕಣ್ಣಿಗೆ ಕಾಣುವ ಸಾಕ್ಷಿ (6))

ಮೇಲಿಂದ ಕೆಳಕ್ಕೆ
1. ಎದುರಾಳಿ ಇಲ್ಲಿದಾನೆ (4)
2. ಹಮ್ಮೀರನಿಗೊಲಿದಿಹ ಶಿವ! (2)
3. ಆಯಾ ಮಾಡಿದ ಕ್ಷೌರ (4)
6. ಬೈರಾಗಿಗಳು ಬಳಸುವ ನೀರಿನ ಪಾತ್ರೆ (4)
7. ಈತ ಪ್ರತಿಷ್ಠಾಪಿಸುವವನು (4)
8. ನೆತ್ತರು ಸುರಿಯುವಿಕೆ (4)
9. ಹೂವಿನ ಶರವಿದು (4)
11. ವಿಷ್ಣುವಿನ ಮುಂದಿರಿಸಿದ ಅಗಲವಾದ ತಟ್ಟೆ (4)
14. ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ! (2)



5079ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸ್ಥಾನಪಲ್ಲಟ 4.ಗರ್ಜನೆ 5.ಗಯ್ಯಾಳಿ 6.ಪುಕಾರು 7.ಕೆಸರು 9.ಮಂಠ 10.ನಾಕ 12.ಸೆರಗು 14.ಪದಕ 15.ಜಠರ 16.ಆಳ್ವೇರಿ 17.ಮರಣಕಾಲ

ಮೇಲಿಂದ ಕೆಳಕ್ಕೆ: 1.ಸ್ಥಾನಭ್ರಷ್ಟ 2.ಪಠ್ಯಪುಸ್ತಕ 3.ಟಗರು 4.ಗಳಿಕೆ 8.ಸಭಿಕ 9.ಮಂದಿರ 10.ನಾಮಕರಣ 11.ಇಳಿಗಾಲ 13.ಗುಜರಿ 14.ಪರಮ

ಸುಡೊಕು 5466

	2			6	7	4		
3								
	7	1		4	8		6	
	4						8	
8		9		7	1			6
	5		8		4		9	
2				9			3	
4		3		5	2			8
	1		4			5	2	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5465 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪೌಷ್ಟಿಕ ಆಹಾರ ಸೇವಿಸಿ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಶ್ರೀಮತಿ ಸುಂದರಮ್ಮ 15–09–2017

ಶ್ರೀ ಕೆ. ಚಿಕ್ಕಣ್ಣ 15–05–1982

ಚಿರಸ್ಮರಣೆ

ಇಂದ
ಸುಂದರ್ ಕುಮಾರ್ (ಬಿಳಿಯಣ್ಣ) ಮತ್ತು ಕುಟುಂಬ

FOND REMEMBRANCE

JAYAMMA C
15.09.2017
It is five years since you left us. "The light you lit will guide us all along our path"

FOND REMEMBRANCES
JJ FAMILY
Javare Gowda C D DCF (Retd.)
#60 Karishma Hills, Bangalore - 560061
Asha, Prakash, Ramya, Satish, Kala, Biju, Aakaash, Gargayee, Harshul, Sara
Relatives & Friends

JJ WALLS FLOORS AND MORE PVT. LTD.
01, Mithun Complex, Raghuvanahalli village, Kanakapura Main Road, Bangalore-560062

ಎರಡನೇ ವರ್ಷದ ಪುಣ್ಯಸ್ಮರಣೆ
ದಿನಾಂಕ: 15.09.2022



ಶ್ರೀ ಕೆ. ರಾಮಚಂದ್ರ (ಚಲ್ಲಘಟ್ಟ)
(ನಿಧನ: 15.09.2020)

ನೀವು ನಮ್ಮನ್ನಗಲಿ ಎರಡು ವರ್ಷವಾಯಿತು. ನಿಮ್ಮ ಆದರ್ಶಮಯ ಜೀವನ ನಮಗೆ ದಾರಿದೀಪ, ನಿಮ್ಮ ನೆನಪು ಅವಿಸ್ಮರಣೀಯ.

ಇಂತಿ: ನಿಮ್ಮ ಸದಾ ನೆನಪಿನಲ್ಲಿರುವ ಮಕ್ಕಳು ಮತ್ತು ಕುಟುಂಬವರ್ಗದವರು

LOOKING FOR JOB OPPORTUNITY

Refer Classifieds on Wednesday

'ಆಪರೇಷನ್ ಕೆಸರು' ಎಂದ ಕಾಂಗ್ರೆಸ್



ನವದೆಹಲಿ (ಪಿಟಿಐ): ಗೋವಾದಲ್ಲಿ ಪಕ್ಷದ ಎಂಟು ಶಾಸಕರು ಬಿಜೆಪಿಗೆ ಸೇರ್ಪಡೆಯಾದ ವಿದ್ಯಮಾನವನ್ನು 'ಅಪರೇಷನ್ ಕೆಸರು' ಎಂದು ಕಾಂಗ್ರೆಸ್ ಕರೆದಿದೆ. ಪಕ್ಷ ಹಮ್ಮಿಕೊಂಡಿರುವ 'ಭಾರತ ಒಗ್ಗೂಡಿಸಿ' ಯಾತ್ರೆಯು ಭಾರಿ ಯಶಸ್ಸು ಕಾಣುತ್ತಿರುವುದರಿಂದ ಗೊಂದಲಕ್ಕೆ ಒಳಗಾಗಿರುವ ಬಿಜೆಪಿ, ಶಾಸಕರ ಖರೀದಿ ಪ್ರಕ್ರಿಯೆಯನ್ನು ತುರ್ತಾಗಿ ಮಾಡಿ ಮುಗಿಸಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

'ಯಾತ್ರೆಯನ್ನು ಸ್ಥಗಿತಗೊಳಿಸಲು ನಿತ್ಯವೂ ಒಂದಲ್ಲಾ ಒಂದು ಅಡೆತಡೆಗಳನ್ನು ಬಿಜೆಪಿ ಒಡ್ಡುತ್ತಿದೆ. ಆದರೆ ಬಿಜೆಪಿಯ ಇಂತಹ ಕ್ಷುಲ್ಲಕ ತಂತ್ರಗಳಿಗೆ ಪಕ್ಷ ಬಗ್ಗುವುದಿಲ್ಲ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಬುಧವಾರ ಹೇಳಿದ್ದಾರೆ. ಜೈರಾಮ್ ಮಾತಿಗೆ ದನಿಗೂಡಿಸಿರುವ ಪಕ್ಷದ ಮುಖಂಡ ಪವನ್ ಖೇರಾ, ಕರಾವಳಿ ರಾಜ್ಯದಲ್ಲಿ ಬಿಜೆಪಿಯು 'ಆಪರೇಷನ್ ಕೆಸರು' ಯೋಜನೆಯನ್ನು ಸಂಘಟಿಸಿದೆ ಎಂದು ಹೇಳಿದ್ದಾರೆ.

ಈ ಮೂಲಕ ಬಿಜೆಪಿ ಕೇವಲ 'ಒಡೆಯುವ' ಪಕ್ಷ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದೆ ಎಂದು ಆರೋಪಿಸಿರುವ ಖೇರಾ, ದೇಶದ ಜನರು ಇದನ್ನು ನೋಡುತ್ತಿದ್ದಾರೆ ಎಂಬುದು ಬಿಜೆಪಿಯ ಗಮನದಲ್ಲಿರಲಿ ಎಂದಿದ್ದಾರೆ.

'ಕಾಂಗ್ರೆಸ್‌ನಲ್ಲಿಯೇ ಉಳಿಯುತ್ತೇವೆ': ಗೋವಾ ಕಾಂಗ್ರೆಸ್‌ನ ಉಳಿದ ಮೂವರು ಶಾಸಕರು ಪಕ್ಷದಲ್ಲಿಯೇ ಉಳಿಯುತ್ತೇವೆ ಎಂದು ಘೋಷಿಸಿದ್ದಾರೆ.

ಈ ಬಾರಿಯ ವಿಧಾನಸಭಾ ಚುನಾವಣೆಗೂ ಮುನ್ನ ಎಲ್ಲಾ ಅಭ್ಯರ್ಥಿಗಳಿಂದ, 'ಯಾವುದೇ ಕಾರಣಕ್ಕೂ ಪಕ್ಷ ತೊರೆಯುವುದಿಲ್ಲ' ಎಂದು ಕಾಂಗ್ರೆಸ್ ಪ್ರತಿಜ್ಞೆ ಮಾಡಿಸಿಕೊಂಡಿತ್ತು. ಪ್ರತಿಜ್ಞೆಯ ಹೊರತಾಗಿಯೂ 11ರಲ್ಲಿ ಎಂಟು ಶಾಸಕರು ಈಗ ಪಕ್ಷ ತೊರೆದು, ಬಿಜೆಪಿ ಸೇರಿದ್ದಾರೆ.

ಈಗ ಕಾಂಗ್ರೆಸ್‌ನಲ್ಲಿಯೇ ಉಳಿದಿರುವ ಯೂರಿ ಅಲೆಮಾಯೋ, ಆಲ್ಟೋನ್ ಡಿಕೋಸ್ಟಾ ಮತ್ತು ಕಾರ್ಲೋಸ್ ಫೆರೇರಾ, 'ಇಂತಹ ಶಾಸಕರನ್ನು ಪಕ್ಷವು ಅವಲಂಬಿಸಿಲ್ಲ. ಇಂತಹವರು ಪಕ್ಷವನ್ನು ತೊರೆದರೂ ಕಾಂಗ್ರೆಸ್ ದೃಢವಾಗಿ ಇರಲಿದೆ. ನಾವು ಖರೀದಿಸಬಹುದಾದ ಸರಕಲ್ಲ. ನಾವು ಪಕ್ಷದಲ್ಲಿಯೇ ಉಳಿಯುತ್ತೇವೆ' ಎಂದು ಹೇಳಿದ್ದಾರೆ.

ಕ್ರಮ ಜರುಗಿಸದ ಸಿಬಿಐ: ಪಂಜಾಬ್‌ನಲ್ಲಿ ತಮ್ಮ ಪಕ್ಷದ 10 ಶಾಸಕರಿಗೆ ತಲಾ ₹25 ಕೋಟಿ ನೀಡುವ ಆಮಿಷ ಒಡ್ಡಲಾಗಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಆರೋಪಿಸಿದ್ದಾರೆ.

ಪಂಜಾಬ್‌ನಲ್ಲಿ ಸರ್ಕಾರ ಉರುಳಿಸಲು ಮುಂದಾಗಿರುವ ಬಿಜೆಪಿ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಎಎಪಿ ಮುಖಂಡರು ಆ.31ರಂದು ಸಿಬಿಐ ಕಚೇರಿ ಎದುರು ಪ್ರತಿಭಟನೆ ನಡೆಸಿದ್ದರು. ಆದರೆ ಸಿಬಿಐ ಇನ್ನೂ ಕ್ರಮ ತೆಗೆದುಕೊಂಡಿಲ್ಲ ಎಂದು ಎಎಪಿ ಮುಖಂಡರು ಆರೋಪಿಸಿದ್ದಾರೆ.

ಡಿಜಿಪಿಗೆ ಎಎಪಿ ದೂರು

ಚಂಡೀಗಡ ವರದಿ: ಶಾಸಕರನ್ನು ಖರೀದಿಸಲು ಯತ್ನಿಸುವ ಮೂಲಕ ಪಂಜಾಬ್‌ನಲ್ಲಿ ಎಎಪಿ ನೇತೃತ್ವದ ಸರ್ಕಾರವನ್ನು ಉರುಳಿಸಲು ಬಿಜೆಪಿ ಯತ್ನಿಸುತ್ತಿದೆ ಎಂದು ಆರೋಪಿಸಿರುವ ಆಡಳಿತಾರೂಢ ಪಕ್ಷ, ಈ ಸಂಬಂಧ ತನಿಖೆ ನಡೆಸುವಂತೆ ಡಿಜಿಪಿಗೆ ದೂರು ನೀಡಿದೆ. ಆದರೆ, ಈ ಆರೋಪವನ್ನು ಬಿಜೆಪಿ ಅಲ್ಲಗಳೆದಿದೆ.

ಪಕ್ಷದ ಮುಖಂಡ ಚೀಮಾ ನೇತೃತ್ವದ ನಿಯೋಗವು ಡಿಜಿಪಿ ಗೌರವ್ ಯಾದವ್ ಅವರನ್ನು ಭೇಟಿಯಾಗಿ, ದೂರು ಸಲ್ಲಿಸಿತು. ಡಿಜಿಪಿ ಅವರಿಗೆ ಎಲ್ಲ ಸಾಕ್ಷ್ಯಾಧಾರಗಳನ್ನು ಸಲ್ಲಿಸಲಾಗಿದೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು. ಜಲಂಧರ್ ಪಶ್ಚಿಮ ಕ್ಷೇತ್ರದ ಶಾಸಕ ಶೀತಲ್ ಅಂಗುರಾಳ್ ಅವರಿಗೆ ಜೀವ ಬೆದರಿಕೆ ಒಡ್ಡಲಾಗಿದೆ ಎಂದು ಎಎಪಿ ಆರೋಪಿಸಿದೆ.

ಶಸ್ತ್ರಸಜ್ಜಿತ ಗೂಂಡಾಗಳ ಕರೆಸಿದ್ದ ಬಿಜೆಪಿ: ಮಮತಾ ಆರೋಪ

ಕೋಲ್ಕತ್ತ (ಪಿಟಿಐ): 'ಪ್ರತಿಭಟನೆ ವೇಳೆ ಹಿಂಸಾತ್ಮಕ ಪ್ರವೃತ್ತಿ ತೋರಿದ್ದ ಬಿಜೆಪಿ ಕಾರ್ಯಕರ್ತರ ಮೇಲೆ ಪೊಲೀಸರು ಗುಂಡು ಹಾರಿಸಬಹುದಿತ್ತು. ಆದರೆ ಸರ್ಕಾರ ಇದಕ್ಕೆ ಆಸ್ಪದ ನೀಡದೆ, ಅತಿ ಹೆಚ್ಚು ಸಂಯಮ ತೋರಿತು' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಬುಧವಾರ ಹೇಳಿದ್ದಾರೆ.

ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ಭ್ರಷ್ಟಾಚಾರವನ್ನು ಖಂಡಿಸಿ ಬಿಜೆಪಿಯು ಮಂಗಳವಾರ 'ನಬನ್ನ ಅಭಿಯಾನ' (ರಾಜ್ಯ ಸಚಿವಾಲಯಕ್ಕೆ ಕಾಲ್ನಡಿಗೆ ಜಾಥಾ) ಹಮ್ಮಿಕೊಂಡಿತ್ತು. ಇದು ಹಿಂಸೆಗೆ ತಿರುಗಿತ್ತು.

ಈ ಕುರಿತು ಪ್ರತಿಕ್ರಿಯಿಸಿರುವ ಮಮತಾ, 'ಬಿಜೆಪಿಯು ರೈಲುಗಳ ಮೂಲಕ ರಾಜ್ಯದ ಹೊರಭಾಗದಿಂದ ಶಸ್ತ್ರಸಜ್ಜಿತ ಗೂಂಡಾಗಳನ್ನು ಕರೆಸಿತ್ತು. ಅವರ ಬಳಿ ಬಾಂಬ್‌ಗಳೂ ಇದ್ದವು. ರಾಜ್ಯದಲ್ಲಿ ಶಾಂತಿ ಕದಡುವುದು ಆ ಪಕ್ಷದ ಉದ್ದೇಶವಾಗಿತ್ತು' ಎಂದು ಆರೋಪಿಸಿದ್ದಾರೆ.

'ರ‍್ಯಾಲಿಯಲ್ಲಿ ಭಾಗವಹಿಸಿದ್ದವರು ಪೊಲೀಸರ ಮೇಲೆ ಅಮಾನುಷವಾಗಿ ಹಲ್ಲೆ ನಡೆಸಿದ್ದಾರೆ. ಈ ವೇಳೆ ಪೊಲೀಸರು ಪ್ರತಿಭಟನಾಕಾರರ ಮೇಲೆ ಗುಂಡಿನ ದಾಳಿ ನಡೆಸಬಹುದಿತ್ತು. ಆದರೆ ಸರ್ಕಾರ ಈ ವಿಚಾರದಲ್ಲಿ ತಾಳ್ಮೆವಹಿಸಿತು' ಎಂದಿದ್ದಾರೆ.

'ದುರ್ಗಾ ಪೂಜೆಗೆ ಇನ್ನು ಕೆಲ ವಾರಗಳಷ್ಟೇ ಇದೆ. ಇಂತಹ ಸಮಯದಲ್ಲಿ ಬಿಜೆಪಿಯು ಹಿಂಸಾತ್ಮಕ ಪ್ರತಿಭಟನೆ ಕೈಗೊಂಡಿದ್ದರಿಂದ ವ್ಯಾಪಾರಿಗಳು ಹಾಗೂ ಜನಸಾಮಾನ್ಯರಿಗೆ ಹೆಚ್ಚಿನ ತೊಂದರೆಯಾಗಿದೆ' ಎಂದು ದೂರಿದ್ದಾರೆ.

'ಪ್ರಜಾಸತ್ತಾತ್ಮಕ ಹಾಗೂ ಶಾಂತಿಯುತ ನೆಲೆಗಟ್ಟಿನಲ್ಲಿ ಪ್ರತಿಭಟನೆ ನಡೆಸುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಬಿಜೆಪಿ ಮತ್ತು ಆ ಪಕ್ಷದ ಕಾರ್ಯಕರ್ತರು ಹಿಂಸೆ ಹಾಗೂ ವಿಧ್ವಂಸಕ ಕೃತ್ಯ ನಡೆಸಿದ್ದಾರೆ' ಎಂದಿದ್ದಾರೆ.

ಸಾರ್ವಜನಿಕ ಆಸ್ತಿಪಾಸ್ತಿಗೆ ಹಾನಿ ಮಾಡಿದ್ದಲ್ಲದೆ ನಾಗರಿಕರಲ್ಲಿ ಭಯದ ವಾತಾವರಣ ಸೃಷ್ಟಿಸುವ ಪ್ರಯತ್ನ ನಡೆಸಿದ್ದಾರೆ. ಇದನ್ನು ನಾವು ಸಹಿಸುವುದಿಲ್ಲ. ಶಾಂತಿ ಕದಡುವುದಕ್ಕೆ ಆಸ್ಪದ ನೀಡುವುದಿಲ್ಲ. ಹಿಂಸಾಕೃತ್ಯ ನಡೆಸಿದ್ದವರನ್ನು ಬಂಧಿಸಲಾಗುತ್ತದೆ. ಕಾನೂನಿನಡಿ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

'ಮಮತಾ ಸರ್ಕಾರದ ಕ್ರೂರತೆ ಮಿತಿ ಮೀರಿದೆ'

ಕೋಲ್ಕತ್ತ: 'ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಸರ್ಕಾರದ ಕ್ರೂರತೆ ಹಾಗೂ ಪೊಲೀಸರ ದಬ್ಬಾಳಿಕೆ ಮಿತಿ ಮೀರಿದೆ' ಎಂದು ಬಿಜೆಪಿ ಮುಖಂಡ ರವಿಶಂಕರ್ ಪ್ರಸಾದ್ ಕಿಡಿಕಾರಿದ್ದಾರೆ.

'ರಾಜ್ಯವು ಹೊತ್ತಿ ಉರಿಯುತ್ತಲೇ ಇದೆ. ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಪಶ್ಚಿಮ ಬಂಗಾಳದಲ್ಲಿ ಪ್ರಜಾಪ್ರಭುತ್ವ ಕಾಪಾಡಲು ಮಮತಾ ವಿಫಲರಾಗಿದ್ದಾರೆ' ಎಂದು ದೆಹಲಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ದೂರಿದ್ದಾರೆ.

'ಹಿಜಾಬ್ ಆದೇಶ ವಿದ್ಯಾರ್ಥಿಗಳಿಗೆ ಮರಣ ಶಾಸನ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಶಾಲಾ ಕಾಲೇಜುಗಳಲ್ಲಿ ಹಿಜಾಬ್ ಧರಿಸಲು ವಿದ್ಯಾರ್ಥಿನಿಯರಿಗೆ ಅನುಮತಿ ನೀಡದಿರುವ ಕರ್ನಾಟಕ ಸರ್ಕಾರದ ಆದೇಶವು ಜಾತ್ಯತೀತ ಶಿಕ್ಷಣ ಪಡೆಯಲು ಬಯಸುವ ವಿದ್ಯಾರ್ಥಿಗಳಿಗೆ ಕೊನೆಯ ಮೊಳೆಯಾಗಿದೆ' ಎಂದು ವಿದ್ಯಾರ್ಥಿನಿಯರ ಪರ ವಕೀಲರು ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಂಡಿಸಿದರು.

ಕರ್ನಾಟಕದ ಪದವಿಪೂರ್ವ ಕಾಲೇಜುಗಳಲ್ಲಿ ಹಿಜಾಬ್ ನಿಷೇಧಿಸಿರುವ ಹೈಕೋರ್ಟ್ ಆದೇಶ ಪ್ರಶ್ನಿಸಿ ಸಲ್ಲಿಕೆಯಾಗಿರುವ ಮೇಲ್ಮನವಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್‌ನ ನ್ಯಾಯಪೀಠವು ಬುಧವಾರ ಮುಂದುವರಿಸಿತು.

ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತ ಹಾಗೂ ಸುಧಾಂಶು ಧುಲಿಯಾ ಅವರನ್ನು ಒಳಗೊಂಡ ಪೀಠದ ಎದುರು ವಾದ ಮಂಡಿಸಿದ ಹಿರಿಯ ವಕೀಲರಾದ ಹುಜೆಫಾ ಅಹ್ಮದಿ, 'ಈ ನಿರ್ಬಂಧ ಹೇರುವ ವೇಳೆ ರಾಜ್ಯ ಸರ್ಕಾರಕ್ಕೆ ಯಾವುದೇ ಕಾನೂನುಬದ್ಧ ಹಿತಾಸಕ್ತಿ ಇರಲಿಲ್ಲ' ಎಂದರು.

ಸರ್ಕಾರದ ಆದೇಶ ತಟಸ್ಥವಾದಂತೆ ತೋರಿದರೂ, ಅದು ಒಂದು ಸಮುದಾಯವನ್ನು ಗುರಿಯಾಗಿಸಿದೆ. ಅದು ಸಂವಿಧಾನದ ಪರಿಚ್ಛೇದ 14ರ ಉಲ್ಲಂಘನೆಯಾಗಿದೆ. ಈ ಸಮುದಾಯದ ಹಲವು ವಿದ್ಯಾರ್ಥಿಗಳು ತಲೆ ಮೇಲೆ ಸ್ಕಾರ್ಫ್ ಧರಿಸಿ ಶಾಲೆಗೆ ಹೋಗುವ ಮೂಲಕ ಪೂರ್ವಾಗ್ರಹಗಳನ್ನು ಬೇಧಿಸಲು ಸಾಧ್ಯವಾಗಿದೆ. ಆದರೆ, ಈ ಸರ್ಕಾರಿ ಆದೇಶ ಇಂತಹ ವಿದ್ಯಾರ್ಥಿಗಳಿಗೆ ಮರಣಶಾಸನವಾಗಿದೆ. ಹಿಜಾಬ್‌ಗೆ ಅನುಮತಿ ನಿರಾಕರಿಸಿ ಶಿಕ್ಷಣಕ್ಕೆ ತಡೆ ಹಾಕಲಾಗುತ್ತಿದೆ ಎಂದರು.

ಇದಕ್ಕೂ ಮುನ್ನ ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ರಾಜೀವ್ ಧವನ್, ಹಿಜಾಬ್ ಧರಿಸುವುದರಿಂದ ಯಾರಿಗೂ ತೊಂದರೆ ಆಗುವುದಿಲ್ಲ ಎಂದಾದಲ್ಲಿ ಅದಕ್ಕೆ ಅನುಮತಿ ನೀಡಬಹುದು. ಇದಕ್ಕಾಗಿ ಧಾರ್ಮಿಕ ಪಠ್ಯಗಳನ್ನು ಪರಿಗಣಿಸುವ ಅಗತ್ಯ ಇಲ್ಲ ಎಂದು ಅಭಿಪ್ರಾಯಪಟ್ಟರು.

ವಾಸ್ತವದಲ್ಲಿ ವೇದಗಳಲ್ಲಿ ನಿಸರ್ಗವನ್ನು ಪೂಜಿಸುತ್ತಿದ್ದರು. ಆಗ ಯಾವುದೇ ದೇಗುಲಗಳು ಇರಲಿಲ್ಲ. ಅದೇ ರೀತಿ, ಕರ್ನಾಟಕದಲ್ಲಿ ಹಿಜಾಬ್ ಬಳಸಲಾಗುತ್ತಿದೆ ಎಂದಾದಲ್ಲಿ ಅದು ಅಗತ್ಯ ಪದ್ಧತಿ ಎಂದು ಸಾಬೀತಾಗಿದೆ. ಅಗತ್ಯ ಪದ್ಧತಿ ಅಲ್ಲ ಎಂದು ಹೇಳಲು ಯಾವುದೇ ಹೊರಗಿನ ಜಾತ್ಯತೀತ ಶಕ್ತಿಗಳಿಗೆ ಅಧಿಕಾರ ಇಲ್ಲ ಎಂದರು.

ವಿಶ್ವದಾದ್ಯಂತ ಲಕ್ಷಾಂತರ ಜನರು ಹಿಜಾಬ್ ಧರಿಸುತ್ತಿದ್ದಾರೆ. ಹಾಗಿರುವಾಗ, ಅದನ್ನು ತರಗತಿಯೊಳಗೆ ಧರಿಸಲು ಅನುಮತಿ ನೀಡುವುದಿಲ್ಲ ಎಂಬುವುದಕ್ಕೆ ಸ್ಪಷ್ಟೀಕರಣ ಏನಿದೆ. ಹೈಕೋರ್ಟ್ ಕೂಡಾ ಇದಕ್ಕೆ ಯಾವುದೇ ಸ್ಪಷ್ಟೀಕರಣ ನೀಡಿಲ್ಲ ಎಂದು ಅವರು ವಾದಿಸಿದರು.

'ಈ ಸರ್ಕಾರಿ ಆದೇಶ ಬಹುಶಃ ಮುಸ್ಲಿಮ್ ಮಹಿಳೆಯರನ್ನು ಗುರಿಯಾಗಿಸಿ ಹೊರಡಿಸಲಾಗಿದೆ. ಇದು ಸಂವಿಧಾನದ 14 ಹಾಗೂ 15 ಪರಿಚ್ಛೇದಗಳನ್ನು ಉಲ್ಲಂಘಿಸಿದೆ. ಹಾಗಾಗಿ, ಅದು ಅಸಂವಿಧಾನಿಕ' ಎಂದರು.



ಜಮ್ಮು–ಕಾಶ್ಮೀರದ ಪೂಂಚ್ ಜಿಲ್ಲೆಯಲ್ಲಿ ಬುಧವಾರ ಮಿನಿ ಬಸ್ಸೊಂದು ಆಳವಾದ ಕಂದಕಕ್ಕೆ ಬಿದ್ದಿದ್ದು, ಸ್ಥಳೀಯರು ರಕ್ಷಣಾ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಕಂದಕಕ್ಕೆ ಬಿದ್ದ ಮಿನಿ ಬಸ್, 11 ಸಾವು

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯಲ್ಲಿ ಬುಧವಾರ ಆಳವಾದ ಕಂದಕಕ್ಕೆ ಮಿನಿ ಬಸ್ಸೊಂದು ಉರುಳಿಬಿದ್ದ ಪರಿಣಾಮ ನಾಲ್ವರು ಮಹಿಳೆಯರು ಸೇರಿದಂತೆ 11 ಮಂದಿ ಸಾವಿಗೀಡಾಗಿದ್ದು, 29ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಪಘಾತದಲ್ಲಿ 9 ಮಂದಿ ಸ್ಥಳದಲ್ಲೇ ಸಾವಿಗೀಡಾಗಿದ್ದರೆ, ಗಾಯಗೊಂಡಿದ್ದ ಇಬ್ಬರು ಆಸ್ಪತ್ರೆಯಲ್ಲಿ ಸಾವಿಗೀಡಾಗಿದ್ದಾರೆ. 29 ಗಾಯಾಳುಗಳ ಪೈಕಿ 9 ಮಂದಿಯ ಸ್ಥಿತಿ ಗಂಭೀರವಾಗಿದ್ದು, ಆರು ಮಂದಿಯನ್ನು ಹೆಲಿಕಾಪ್ಟರ್ ಮೂಲಕ ಹೆಚ್ಚಿನ ಚಿಕಿತ್ಸೆಗಾಗಿ ಜಮ್ಮುವಿನ ಸರ್ಕಾರಿ ವೈದ್ಯಕೀಯ ಕಾಲೇಜಿಗೆ ದಾಖಲಿಸಲಾಗಿದೆ.

'ಮಾಂಸಾಹಾರ ನಿಷೇಧ ಅಗತ್ಯವಿಲ್ಲ'

ನವದೆಹಲಿ (ಪಿಟಿಐ): 'ಮಾಂಸಾಹಾರವು ನಿಷೇಧಿತ ಆಹಾರ ಪದ್ಧತಿಯಲ್ಲ. ಅದನ್ನು ನಿಷೇಧಿಸಬಾರದು. ಆದರೆ, ಗೋಮಾಂಸ ಸೇವನೆಯನ್ನು ಮಾತ್ರ ನಿಷೇಧಿಸಬೇಕು' ಎಂದು ಆರ್‌ಎಸ್‌ಎಸ್‌ನ ಬೌದ್ಧಿಕ ವಿಭಾಗ 'ಪ್ರಗ್ಯಾ ಪ್ರವಾಹ್'ನ ಮುಖ್ಯಸ್ಥ ಜೆ. ನಂದ ಕುಮಾರ್ ಬುಧವಾರ ಅಭಿಪ್ರಾಯಪಟ್ಟರು.

'ಇದು ನನ್ನ ವೈಯಕ್ತಿಕ ಅಭಿಪ್ರಾಯ' ಎಂದು ಸ್ಪಷ್ಟಪಡಿಸಿದರು.

'ಭೌಗೋಳಿಕ ಸಂರಚನೆಯ ಹಿನ್ನೆಲೆಯಲ್ಲಿ ಜನರು ಆಹಾರ ಸೇವಿಸುತ್ತಾರೆ. ಕರಾವಳಿ ಪ್ರದೇಶದ ಹಾಗೂ ಈಶಾನ್ಯ ಭಾಗದ ಜನರು ಮಾಂಸಾಹಾರವನ್ನೇ ಸೇವಿಸುತ್ತಾರೆ. ಇದು ಅವರ 'ಪ್ರಧಾನ ಆಹಾರ'ವಾಗಿದೆ' ಎಂದರು.

'ಜನಪ್ರಾತಿನಿಧ್ಯ ಕಾಯ್ದೆಯಡಿ ದ್ವೇಷ ಭಾಷಣಕ್ಕೆ ಕಡಿವಾಣ'

ನವದೆಹಲಿ: 'ಜನಪ್ರಾತಿನಿಧ್ಯ ಕಾಯ್ದೆ ಹಾಗೂ ಭಾರತೀಯ ದಂಡ ಸಂಹಿತೆಯ (ಐಪಿಸಿ) ನಿಬಂಧನೆಗಳ ಮೂಲಕ ರಾಜಕೀಯ ಮುಖಂಡರ ದ್ವೇಷ ಭಾಷಣಕ್ಕೆ ಕಡಿವಾಣ ಹಾಕಲಾಗುತ್ತಿದೆ' ಎಂದು ಚುನಾವಣಾ ಆಯೋಗವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ದ್ವೇಷ ಭಾಷಣ ನಿಯಂತ್ರಿಸಲು ಕೇಂದ್ರವು ಶಾಸನಾತ್ಮಕ ಕ್ರಮಗಳನ್ನು ಜಾರಿಗೊಳಿಸಬೇಕೆಂದು ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ, ಪಿಐಎಲ್ ಸಲ್ಲಿಸಿದ್ದರು. ಇದಕ್ಕೆ ಆಯೋಗವು ಬುಧವಾರ ಲಿಖಿತ ಪ್ರತಿಕ್ರಿಯೆ ನೀಡಿದೆ.

ಲಿಫ್ಟ್ ಕುಸಿದು 7 ಕಾರ್ಮಿಕರ ಸಾವು

ಅಹಮದಾಬಾದ್ (ಪಿಟಿಐ): ನಿರ್ಮಾಣ ಹಂತದಲ್ಲಿರುವ ಕಟ್ಟಡವೊಂದರಲ್ಲಿ ಲಿಫ್ಟ್ ಕುಸಿದುಬಿದ್ದ ಪರಿಣಾಮ ಏಳು ಕಾರ್ಮಿಕರು ಸ್ಥಳದಲ್ಲೇ ಸಾವಿಗೀಡಾಗಿ, ಒಬ್ಬ ಕಾರ್ಮಿಕ ಗಂಭೀರವಾಗಿ ಗಾಯಗೊಂಡ ಘಟನೆ ಅಹಮದಾಬಾದ್‌ನಲ್ಲಿ ಬುಧವಾರ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗುಜರಾತ್ ವಿಶ್ವವಿದ್ಯಾಲಯದ ಸಮೀಪ ಬುಧವಾರ ಬೆಳಿಗ್ಗೆ 9.30 ಸುಮಾರಿಗೆ ಈ ದುರ್ಘಟನೆ ನಡೆದಿದ್ದು, ಆರಂಭದಲ್ಲಿ ಪೊಲೀಸರು 8 ಕಾರ್ಮಿಕರು ಸಾವಿಗೀಡಾಗಿದ್ದಾರೆ ಎಂದು ಸಹಾಯಕ ಪೊಲೀಸ್ ಆಯುಕ್ತ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಇಂದಿನಿಂದ ಎಸ್‌ಸಿಒ ಶೃಂಗಸಭೆ ಆರಂಭ

ಮಾಸ್ಕೊ/ಬೀಜಿಂಗ್: ಕೋವಿಡ್–19 ಕಾರಣದಿಂದಾಗಿ ಎರಡು ವರ್ಷಗಳ ಬಳಿಕ ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) 22ನೇ ಶೃಂಗಸಭೆಯು ಭೌತಿಕವಾಗಿ ಉಜ್ಬೇಕಿಸ್ತಾನದಲ್ಲಿ ಇಂದಿನಿಂದ ಎರಡು ದಿನಗಳ ಕಾಲ ನಡೆಯಲಿದೆ.

ಎರಡು ವರ್ಷಗಳ ಬಳಿಕ ಎಸ್‌ಸಿಒನ ಎಂಟು ಸದಸ್ಯ ರಾಷ್ಟ್ರಗಳ ನಾಯಕರು ಇದೇ ಮೊದಲ ಬಾರಿಗೆ ಸ್ಥಳೀಯ ಹಾಗೂ ಜಾಗತಿಕ ವಿಷಯಗಳಿಗೆ ಸಂಬಂಧಿಸಿದಂತೆ ಭೌತಿಕವಾಗಿ ಚರ್ಚೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಭೇಟಿಯಾಗಲಿದ್ದಾರೆ. ಈ ವೇಳೆ ಉಭಯ ನಾಯಕರು ಏಷ್ಯಾ ಪೆಸಿಫಿಕ್ ಪ್ರದೇಶದ ಪರಿಸ್ಥಿತಿ, ಜಿ–20 ಮತ್ತು ವಿಶ್ವಸಂಸ್ಥೆಯೊಳಗಿನ ದ್ವಿಪಕ್ಷೀಯ ಸಹಕಾರ ಕುರಿತು ಚರ್ಚಿಸಲಿದ್ದಾರೆ ಎಂದು ಕ್ರೆಮ್ಲಿನ್ ಹೇಳಿದೆ.

ಆದರೆ, ಮೋದಿ ಮತ್ತು ಪುಟಿನ್ ಭೇಟಿಯ ಕುರಿತು ಭಾರತದ ವಿದೇಶಾಂಗ ಸಚಿವಾಲಯವು ಇನ್ನೂ ಖಚಿತ ಪಡಿಸಿಲ್ಲ.

'ಕೋವಿಡ್ ಸಾಂಕ್ರಾಮಿಕ ಅಂತ್ಯ ಸನಿಹ'

ಜಿನೀವಾ (ಎಎಫ್‌ಪಿ/ರಾಯಿಟರ್ಸ್): ಕೋವಿಡ್-19 ಸಾಂಕ್ರಾಮಿಕ ರೋಗ ಅಂತ್ಯದ ಸನಿಹದಲ್ಲಿದೆ. 60 ಲಕ್ಷಕ್ಕೂ ಹೆಚ್ಚು ಜನರನ್ನು ಬಲಿತೆಗೆದುಕೊಂಡ ಕೊರೊನಾ ವೈರಸ್ ಅನ್ನು ಸಂಪೂರ್ಣ ಕೊನೆಗಾಣಿಸಲು ಜಗತ್ತು ಎಲ್ಲ ಅವಕಾಶಗಳನ್ನು ಬಳಸಿಕೊಳ್ಳಬೇಕು ಎಂದು ವಿಶ್ವ ಆರೋಗ್ಯ ಸಂಸ್ಥೆಯ ಮಹಾನಿರ್ದೇಶಕ ಟೆಡ್ರೊಸ್ ಅಧಾನೊಮ್ ಘೆಬ್ರೆಯೆಸಸ್ ಒತ್ತಾಯಿಸಿದ್ದಾರೆ.

ಬುಧವಾರ ವರ್ಚುವಲ್ ಮೂಲಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೋವಿಡ್ ಸಾಂಕ್ರಾಮಿಕ ಅಂತ್ಯಗೊಳಿಸುವಂತಹ ಈಗಿನಂತಹ ಉತ್ತಮ ಸ್ಥಿತಿಯಲ್ಲಿ ನಾವು ಈ ಹಿಂದೆಂದೂ ಇರಲಿಲ್ಲ. ಆದರೆ, ಈಗ ಕೊನೆಗಾಣಿಸುವ ಸನಿಹದಲ್ಲಿದ್ದೇವೆ. ನಮ್ಮ ಮುಂದಿರುವ ಅವಕಾಶಗಳನ್ನು ಈಗ ಸರಿಯಾಗಿ ಬಳಸಿಕೊಳ್ಳದಿದ್ದರೆ, ಹೆಚ್ಚಿನ ರೂಪಾಂತರಿಗಳು, ಹೆಚ್ಚು ಸಾವುಗಳು ಹಾಗೂ ಹೆಚ್ಚಿನ ಅನಿಶ್ಚಿತತೆಯನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ರಾಣಿ ಅಂತ್ಯಸಂಸ್ಕಾರ: 17ರಂದು ಲಂಡನ್‌ಗೆ ಮುರ್ಮು

ಲಂಡನ್ (ಪಿಟಿಐ): ಬ್ರಿಟನ್ ರಾಣಿ ಎರಡನೇ ಎಲಿಜಬೆತ್ ಅವರ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಳ್ಳಲಿರುವ ಜಗತ್ತಿನ 500 ಸಂಭವನೀಯ ಗಣ್ಯರಲ್ಲಿ ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೇರಿದ್ದಾರೆ.

500 ಜಾಗತಿಕ ನಾಯಕರು ಮತ್ತು ವಿದೇಶಿ ಗಣ್ಯರು ರಾಣಿ ಅಂತಿಮಸಂಸ್ಕಾರದಲ್ಲಿ ಪಾಲ್ಗೊಳ್ಳಲಿದ್ದಾರೆ. ಸೆಪ್ಟೆಂಬರ್ 19ರಂದು ಸೋಮವಾರ ಬೆಳಿಗ್ಗೆ 11 ಗಂಟೆಗೆ ಲಂಡನ್‌ನ ವೆಸ್ಟ್‌ಮಿನ್‌ಸ್ಟರ್‌ನ ಅಬೆಯಲ್ಲಿ ರಾಣಿ ಅಂತ್ಯಸಂಸ್ಕಾರ ನೆರವೇರಲಿದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೆಪ್ಟೆಂಬರ್ 17ರಿಂದ 19ರ ವರೆಗೆ ಲಂಡನ್ ಪ್ರವಾಸದಲ್ಲಿ ಇರಲಿದ್ದಾರೆ.

2ನೇ ಎಲಿಜಬೆತ್ ಅವರ ಪಾರ್ಥಿವ ಶರೀರವನ್ನು ಬುಧವಾರ ಇಲ್ಲಿನ ಬಕ್ಕಿಂಗ್‌ಹ್ಯಾಂ ಅರಮನೆಯಿಂದ ಸಂಸತ್ತಿನ ವೆಸ್ಟ್‌ಮಿನ್‌ಸ್ಟರ್ ಹಾಲ್‌ಗೆ ತರಲಾಯಿತು. ಮೆರವಣಿಗೆ ವೇಳೆ ರಾಜ 3ನೇ ಚಾರ್ಲ್ಸ್, ರಾಜಕುಮಾರ ವಿಲಿಯಂ ಮತ್ತು ಹ್ಯಾರಿ ಭಾಗಿಯಾಗಿದ್ದರು.

₹200 ಕೋಟಿ ಮೌಲ್ಯದ ಹೆರಾಯಿನ್ ವಶ

ಅಹಮದಾಬಾದ್ (ಪಿಟಿಐ): ಗುಜರಾತ್‌ನ ಕರಾವಳಿ ಬಳಿ ಜಂಟಿ ಕಾರ್ಯಾಚರಣೆ ನಡೆಸಿದ ಗುಜರಾತ್ ಭಯೋತ್ಪಾದನೆ ನಿಗ್ರಹ ಪಡೆ ಮತ್ತು ಭಾರತೀಯ ಕರಾವಳಿ ಪಡೆಗಳು ಪಾಕಿಸ್ತಾನದ ಮೀನುಗಾರ ದೋಣಿಯೊಂದರಿಂದ ₹200 ಕೋಟಿ ಮೌಲ್ಯದ 40 ಕೆ.ಜಿ. ಹೆರಾಯಿನ್ ವಶಕ್ಕೆ ಪಡೆದುಕೊಂಡಿವೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಖಚಿತ ಮಾಹಿತಿ ಮೇರೆಗೆ ನಾವು ಕಾರ್ಯಾಚರಣೆ ಆರಂಭಿಸಿದೆವು. ಪಾಕಿಸ್ತಾನದಿಂದ ಹೊರಟಿದ್ದ ದೋಣಿಯನ್ನು ಕಛ್ ಜಿಲ್ಲೆಯ ಜಖೌ ಬಂದರಿನ ಬಳಿ ಮಧ್ಯಸಮುದ್ರದಲ್ಲಿ ತಡೆಹಿಡಿದೆವು. ದೋಣಿಯಲ್ಲಿದ್ದ ಪಾಕಿಸ್ತಾನದ ಆರು ಮಂದಿಯನ್ನು ವಶಕ್ಕೆ ಪಡೆಯಲಾಗಿದೆ. ಗುಜರಾತ್‌ನ ಕರಾವಳಿಯಲ್ಲಿ ದಾಸ್ತಾನು ಇಳಿಸಿಕೊಂಡ ಬಳಿಕ ಅದನ್ನು ರಸ್ತೆ ಮೂಲಕ ಪಂಜಾಬ್‌ಗೆ ಸಾಗಿಸುವ ಯೋಜನೆಯನ್ನು ಅವರು ಹಾಕಿಕೊಂಡಿದ್ದರು' ಎಂದು ಅಧಿಕಾರಿ ತಿಳಿಸಿದ್ದಾರೆ.

ಈ ಹಿಂದೆಯೂ ಇದೇ ರೀತಿಯ ಕಾರ್ಯಾಚರಣೆಗಳನ್ನು ನಡೆಸಿ ಮಾದಕ ವಸ್ತುಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಅವರು ಹೇಳಿದರು.

'ಲಡಾಖ್ ಗಡಿಯಲ್ಲಿ ಸಂಘರ್ಷ ಶಮನ; ಒಂದು ಸಮಸ್ಯೆ ಇತ್ಯರ್ಥ'

ನವದೆಹಲಿ (ಪಿಟಿಐ): ಪೂರ್ವ ಲಡಾಖ್‌ನ ಗಡಿ ನಿಯಂತ್ರಣ ರೇಖೆಯ 15ನೇ ಗಸ್ತು ಕೇಂದ್ರದಲ್ಲಿ ಭಾರತ ಮತ್ತು ಚೀನಾ ಸೇನಾ ಪಡೆಗಳನ್ನು ಹಿಂಪಡೆಯುವ ಮೂಲಕ ತಾರಕಕ್ಕೇರಿದ್ದ ಸಂಘರ್ಷ ಶಮನವಾಗಿದ್ದು, ಒಂದು ಸಮಸ್ಯೆ ಕಡಿಮೆಯಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಬುಧವಾರ ಹೇಳಿದ್ದಾರೆ.

ಫ್ರಾನ್ಸ್ ವಿದೇಶಾಂಗ ಸಚಿವೆ ಕ್ಯಾಥರೀನ್ ಕೊಲೊನಾ ಅವರ ಜತೆಗೆ ಮಾತುಕತೆ ನಡೆಸಿದ ನಂತರ ಮಾಧ್ಯಮಗೋಷ್ಠಿ ನಡೆಸಿದ ಜೈಶಂಕರ್, ಪಾಕಿಸ್ತಾನ ಮೂಲದ ಭಯೋತ್ಪಾದಕರನ್ನು ಜಾಗತಿಕ ಭಯೋತ್ಪಾದಕರ ಪಟ್ಟಿಗೆ ಸೇರಿಸುವ ಪ್ರಸ್ತಾವಕ್ಕೆ ರಾಷ್ಟ್ರವೊಂದು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ತಡೆಯೊಡ್ಡುತ್ತಿರುವ ಬಗ್ಗೆ ಎದುರಾದ ಪ್ರಶ್ನೆಗೆ ಪರೋಕ್ಷವಾಗಿ ಚೀನಾವನ್ನು ದೂಷಿಸಿದರು.

'ಗಸ್ತು ಕೇಂದ್ರ 15ರಿಂದ ಸೇನಾ ವಾಪಸಾತಿ ಪೂರ್ಣವಾಗಿದೆ. ಗಡಿಯಲ್ಲಿನ ಒಂದು ಸಮಸ್ಯೆಯೂ ಕಡಿಮೆಯಾದಂತಾಗಿದೆ' ಎಂದರು.

ಪೂರ್ವ ಲಡಾಖ್‌ನಲ್ಲಿ ಯಾವುದೇ ಬಗೆಯ ಹೋರಾಟ ನಡೆಸದೆಯೇ ಪ್ರಧಾನಿ ನರೇಂದ್ರ ಮೋದಿಯವರು ಭಾರತಕ್ಕೆ ಸೇರಿದ ಒಂದು ಸಾವಿರ ಚದರ ಕಿಲೋಮೀಟರ್ ಭೂಪ್ರದೇಶವನ್ನು ಚೀನಾಕ್ಕೆ ಬಿಟ್ಟುಕೊಟ್ಟಿದ್ದಾರೆ. ಈ ಭೂಪ್ರದೇಶವನ್ನು ತಾನು ಹೇಗೆ ಮರಳಿ ಪಡೆಯುತ್ತದೆ ಎಂಬುದನ್ನು ಕೇಂದ್ರ ಸರ್ಕಾರ ವಿವರಿಸಲಿದೆಯೇ?

ರಾಹುಲ್ ಗಾಂಧಿ, ಕಾಂಗ್ರೆಸ್ ಮುಖಂಡ

ಪಾಕ್‌ನ ಎಫ್–16ಗೆ ಅಮೆರಿಕ ನೆರವು: ಭಾರತ ಕಳವಳ

ನವದೆಹಲಿ (ಪಿಟಿಐ): ಪಾಕಿಸ್ತಾನದ ಎಫ್–16 ಯುದ್ಧ ವಿಮಾನಗಳಿಗೆ ಅಗತ್ಯ ಹಾರ್ಡ್‌ವೇರ್, ಸಾಫ್ಟ್‌ವೇರ್ ಹಾಗೂ ಬಿಡಿಭಾಗ ಪೂರೈಸಲು ಅಮೆರಿಕ ಇತ್ತೀಚೆಗೆ ತೆಗೆದುಕೊಂಡ ನಿರ್ಧಾರಕ್ಕೆ ಭಾರತ ಬುಧವಾರ ಕಳವಳ ವ್ಯಕ್ತಪಡಿಸಿದೆ.

'ಲಾಯ್ಡ್ ಆಸ್ಟಿನ್ ಅವರ ಜತೆಗೆ ನಡೆಸಿದ ಆಪ್ತ ಮತ್ತು ಫಲಪ್ರದ ದೂರವಾಣಿ ಸಂಭಾಷಣೆಯಲ್ಲಿ ಕಳವಳವನ್ನು ತಿಳಿಸಲಾಗಿದೆ. ನಮ್ಮ ವ್ಯೂಹಾತ್ಮಕ ಕಾರ್ಯತಂತ್ರದ ಹಿತಾಸಕ್ತಿ, ರಕ್ಷಣಾ ಮತ್ತು ಭದ್ರತಾ ಸಹಕಾರ ವಿಸ್ತರಣೆ ಬಗ್ಗೆ ಚರ್ಚಿಸಿದ್ದೇವೆ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಟ್ವೀಟ್ ಮಾಡಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

ಬೆಂಗಳೂರಿನಲ್ಲಿ ವಯಸ್ಸಾದವರನ್ನು ರೋಗಿಗಳನ್ನು ನೋಡಿಕೊಳ್ಳಲು, ಹೋಂನರ್ಸ್‌ಗಳು ಯುವಕ/ಯುವತಿಯರು ಮಹಿಳೆಯರು ಬೇಕಾಗಿದ್ದಾರೆ. ಉಚಿತ ಊಟವಸತಿ 13,000/- 17,500/- ಸಂಪರ್ಕಿಸಿ: 8050679429, 8123699421.

Accounts & Finance

REQUIRED SENIOR accountant aged 40 for manufacturing facility. Should reside around Yeshwanthpur/ Peenya.Email - cofplanter@gmail.com. 9480237094

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000-20000 ಗಳಿಸಿ. ಕರೆಮಾಡಿ: 9611225266/ 9611225388

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಇತರೆ

For Sale

ಬಸ್ಸು ಮಾರಾಟಕ್ಕಿದೆ
ಕೆಳಕಂಡ 50 ಸೀಟುಗಳುಳ್ಳ ಬಸ್ಸುಗಳನ್ನು ಯಥಾಸ್ಥಿತಿಯಲ್ಲಿ ಮಾರಾಟ ಮಾಡಲಾಗುವುದು.
ಅಶೋಕ್ ಲೈಲಾಂಡ್ - Stage Carriage - 3 Model : 2009
ಅಶೋಕ್ ಲೈಲಾಂಡ್ - AL PSV 4/88 - 1 Model : 2009
ಖರೀದಿಸಲು ಆಸಕ್ತಿಯುಳ್ಳವರು ಸಂಪರ್ಕಿಸಿರಿ : ವಿಜಯಾ ಮೋಟಾರ್ಸ್, ಶಿವಮೊಗ್ಗ
M : 70901 88886

ಪ್ರವಾಸ

Travel

29-9-2022,ವಿಮಾನ ಮತ್ತು ಬಸ್ಸಿನಲ್ಲಿ ಚೆನ್ನೈ, ಮಹಾಬಲೇಶ್ವರಂ, ಕಂಚಿ 2ದಿನಗಳ ಪ್ರವಾಸ. 6,750/-. 25-9-2022, ಸಿಗಂದೂರು. ಅನುಗ್ರಹಯಾತ್ರ. 9880079351

★ಶ್ರೇಯಸ್ ಟೂರ್ಸ್★ 08.10.2022 12ದಿನಗಳು ಅಖಂಡ ಗುಜರಾತ್‌ರಾಜ್ಯ ಪ್ರವಾಸ.12.10.2022 10ದಿನಗಳು ಅಖಂಡ ರಾಜಸ್ಥಾನ ರಾಜ್ಯ ಪ್ರವಾಸ. 01.11.2022 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ.04.11.2022 10ದಿನಗಳು ಅಖಂಡ ನೇಪಾಳರಾಷ್ಟ್ರ(ಮುಕ್ತಿನಾಥ) 25.10.2022 8ದಿನಗಳು ಅಖಂಡ ಕೇರಳರಾಜ್ಯ ಪ್ರವಾಸ.8073824856 9206979202 6366322639

★ಶ್ರೇಯಸ್ ಟೂರ್ಸ್★ ಹಾರ್ನೋಬಿಲ್ ಫೆಸ್ಟಿವಲ್ ವಿಶೇಷ ಈಶಾನ್ಯರಾಜ್ಯಗಳ(ಸೆವೆನ್ ಸಿಸ್ಟರ್ಸ್)ಪ್ರವಾಸ 28.11.2022 12/15/21ದಿನಗಳು ಅಸ್ಸಾಂ ಮೇಘಾಲಯ,ಅರುಣಾಚಲ ನಾಗಲ್ಯಾಂಡ್,ಮಣಿಪುರ ಮಿಝೋರಾಂ,ತ್ರಿಪುರ. 24.11.2022,16.12.2022 10/21ದಿನಗಳು ತ್ರಿಪುರ ಮಿಝೋರಾಂ,ಮಣಿಪುರ ನಾಗಲ್ಯಾಂಡ್,ಅಸ್ಸಾಂ ಅರುಣಾಚಲ,ಮೇಘಾಲಯ. 8073824856 9206979202 6366322639

3.11.2022ರಿಂದ ಎಸಿ.ಬಸ್ಸು ಎಸಿ.ರೂಂನೊಂದಿಗೆ ಪಂಚರಾಮ ಕ್ಷೇತ್ರ ಸಮೇತ ಭದ್ರಾಚಲಂ, ಅನ್ನಾವರಂ,ಹೈದರಾಬಾದ್, ವಾಸವಿಪೆನ್ನಗೊಂಡ,ಅಹೋಬಲಂ. 39000/ ಹಾಗೂ 9ದಿನಗಳ ನವಗ್ರಹ ಸಮೇತ ಗುರುವಾಯೂರು,ಮದುರೈ, ರಾಮೇಶ್ವರ, ತ್ರಿವೇಂಡ್ರಮ್, ಕನ್ಯಾಕುಮಾರಿ 27000/ ಏಷ್ಯನ್ ಟ್ರಾವೆಲ್ ಲೈನ್ಸ್,164/3 ಅರ್.ವಿ.ರಸ್ತೆ.ಬೆಂಗಳೂರು. ಸಂಪರ್ಕಿಸಿ: ಷಣ್ಮುಗಾನಂದ. 8105657052/ 26565085

27-9-2022, 3ದಿನಗಳು, ಸಿಗಂದೂರು, ಕೊಲ್ಲೂರು, ಜೋಗಜಲಪಾತ, ಬಂಗಾರಮಕ್ಕಿ ವೀರಾಂಜನೇಯ, ಕಮಲಶಿಲೆ, ಹೊಂಬುಜಪದ್ಮಾವತಿ, ಉಡುತಡಿ ಅಕ್ಕಮಹಾದೇವಿ ಜನ್ಮಸ್ಥಳ, ಶ್ರೀಧರಾಶ್ರಮ, ವಡನಬೈಲುಪದ್ಮಾವತಿ ಇತ್ಯಾದಿ.9481433157

ಭವಿಷ್ಯ

Astrology

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

Book Your Classifieds Ads
Online
Log in to
dhclassifieds.com

DH DECCAN HERALD
ಪ್ರಜಾವಾಣಿ

Contact :
Jerry Louis : 9731810277
Vishal GM : 9845114560
Ravichandra : 9901641752
Tanveer : 9886213331

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,070
ಇಂದಿನ ಅಂತ್ಯ	18,004
▼	66
ದಿನದ ಗರಿಷ್ಠ	17,771

ವಿನಿಮಯ ದರ

$ ಡಾಲರ್	79.52
£ ಪೌಂಡ್	91.57
€ ಯುರೊ	79.27
¥ ಯೆನ್ (100ಕ್ಕೆ)	56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹435
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹435

ತಗ್ಗಿದ ಸಗಟು ಹಣದುಬ್ಬರ

ತಯಾರಿಕೆ, ಇಂಧನ ಉತ್ಪನ್ನಗಳ ಬೆಲೆ ಆಗಸ್ಟ್‌ನಲ್ಲಿ ಇಳಿಕೆ

ನವದೆಹಲಿ (ಪಿಟಿಐ): ಸಗಟು ಬೆಲೆ ಸೂಚ್ಯಂಕ ಆಧಾರಿತ ಹಣದುಬ್ಬರ ಪ್ರಮಾಣವು ಆಗಸ್ಟ್ ತಿಂಗಳಿನಲ್ಲಿ 11 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡಿದೆ. ತಯಾರಿಕಾ ಉತ್ಪನ್ನಗಳು ಮತ್ತು ಇಂಧನ ಉತ್ಪನ್ನಗಳ ಬೆಲೆ ಇಳಿಕೆಯಾದ ಪರಿಣಾಮವಾಗಿ ಸಗಟು ಹಣದುಬ್ಬರ ಪ್ರಮಾಣ ತಗ್ಗಿದೆ. ಆದರೆ, ಆಹಾರ ವಸ್ತುಗಳ ಬೆಲೆ ಹೆಚ್ಚಿನ ಮಟ್ಟದಲ್ಲಿ ಉಳಿದಿದೆ.

ಆಗಸ್ಟ್‌ನಲ್ಲಿ ಸಗಟು ಹಣದುಬ್ಬರ ಪ್ರಮಾಣವು ಶೇಕಡ 12.41ರಷ್ಟು ಆಗಿದೆ. ಸಗಟು ಹಣದುಬ್ಬರ ಪ್ರಮಾಣ ಮೂರು ತಿಂಗಳುಗಳಿಂದ ಇಳಿಕೆ ಆಗುತ್ತಿದ್ದರೂ, 17 ತಿಂಗಳುಗಳಿಂದ ಎರಡಂಕಿ ಮಟ್ಟದಲ್ಲಿ ಉಳಿದಂತಾಗಿದೆ. ಈ ವರ್ಷದ ಜುಲೈನಲ್ಲಿ ಸಗಟು ಹಣದುಬ್ಬರ ಪ್ರಮಾಣವು ಶೇ 13.93 ಆಗಿತ್ತು.

ಸಗಟು ಹಣದುಬ್ಬರ ಪ್ರಮಾಣ ಒಟ್ಟಾರೆಯಾಗಿ ಇಳಿಕೆಯಾಗಿದ್ದರೂ, ಆಹಾರ ವಸ್ತುಗಳ ಸಗಟು ಹಣದುಬ್ಬರ ಹೆಚ್ಚಾಗಿದೆ. ತರಕಾರಿ, ಹಣ್ಣುಗಳು, ಮೊಟ್ಟೆ, ಮಾಂಸ, ಮೀನು, ಧಾನ್ಯಗಳ ಬೆಲೆಯಲ್ಲಿ ಏರಿಕೆ ಆಗಿದೆ. ಮುಂಗಾರು ಮಳೆ ಹದವಾಗಿ ಇಲ್ಲದಿದ್ದುದು ಇದಕ್ಕೆ ಒಂದು ಕಾರಣ. ಗೋಧಿ ಬೆಲೆಯೂ ಹೆಚ್ಚಿನ ಮಟ್ಟದಲ್ಲಿ ಉಳಿದಿದೆ.

ಇಂಧನ ಮತ್ತು ವಿದ್ಯುತ್ ಹಣದುಬ್ಬರ ಪ್ರಮಾಣ ಇಳಿಕೆಯಾಗಿರುವುದು ಸಗಟು ಹಣದುಬ್ಬರ ಇಳಿಕೆಗೆ ನೆರವಾಗಿವೆ.

ಸಗಟು ಹಣದುಬ್ಬರ

(ಬೆಲೆ ಏರಿಕೆಯನ್ನು ಶೇಕಡಾವಾರು ಪ್ರಮಾಣದಲ್ಲಿ ನೀಡಲಾಗಿದೆ)



ಮೂನ್‌ಲೈಟಿಂಗ್ ಅನೈತಿಕ: ಐಬಿಎಂ

ಮುಂಬೈ (ಪಿಟಿಐ): ದೇಶದಲ್ಲಿ ಒಂದು ಲಕ್ಷಕ್ಕೂ ಹೆಚ್ಚಿನ ನೌಕರರನ್ನು ಹೊಂದಿರುವ ತಂತ್ರಜ್ಞಾನ ಕಂಪನಿ ಐಬಿಎಂ, 'ಮೂನ್‌ಲೈಟಿಂಗ್ ಅನೈತಿಕ ಕೆಲಸ' ಎಂದು ಹೇಳಿದೆ.

ಮಾಮೂಲಿ ಕೆಲಸದ ಅವಧಿಯ ನಂತರದಲ್ಲಿ ಇನ್ನೊಂದು ಕೆಲಸವನ್ನು ಕೈಗೆತ್ತಿಕೊಳ್ಳುವ ಪ್ರವೃತ್ತಿಯನ್ನು ಮೂನ್ ಲೈಟಿಂಗ್ ಎಂದು ಕರೆಯಲಾಗುತ್ತಿದೆ.

ಕಂಪನಿಗೆ ನೌಕರಿಗೆ ಸೇರುವ ಸಂದರ್ಭದಲ್ಲಿ ಅಭ್ಯರ್ಥಿಗಳು ಐಬಿಎಂಗೆ ಮಾತ್ರ ಕೆಲಸ ಮಾಡುವ ಒಪ್ಪಂದಕ್ಕೆ ಸಹಿ ಹಾಕಿರುತ್ತಾರೆ ಎಂದು ಕಂಪನಿಯ ಭಾರತ ಮತ್ತು ದಕ್ಷಿಣ ಏಷ್ಯಾ ವ್ಯವಸ್ಥಾಪಕ ನಿರ್ದೇಶಕ ಸಂದೀಪ್ ಪಟೇಲ್ ಹೇಳಿದ್ದಾರೆ.

'ಕೆಲಸದ ಅವಧಿಯ ನಂತರದಲ್ಲಿ ನೌಕರರು ಮೂನ್‌ಲೈಟಿಂಗ್‌ನಲ್ಲಿ ತೊಡಗುವುದು ನೈತಿಕವಾಗಿ ಸರಿಯಲ್ಲ' ಎಂದು ಪಟೇಲ್ ಅವರು ಸುದ್ದಿಗಾರರ ಬಳಿ ಹೇಳಿದ್ದಾರೆ.

ಮೂನ್‌ಲೈಟಿಂಗ್ ಎಂಬುದು 'ಮೋಸ'ಕ್ಕೆ ಸಮ ಎಂದು ವಿಪ್ರೊ ಅಧ್ಯಕ್ಷ ರಿಷದ್ ಪ್ರೇಮ್‌ಜಿ ಈಚೆಗೆ ಹೇಳಿದ್ದಾರೆ. 'ನಾನು ಕೂಡ ರಿಷದ್ ಅವರ ಅಭಿಪ್ರಾಯವನ್ನೇ ಹೊಂದಿದ್ದೇನೆ' ಎಂದು ಪಟೇಲ್ ಹೇಳಿದ್ದಾರೆ.

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹148
ಆರ್‌ಎಸ್‌ಎಸ್-5	₹138
ಗುಡ್ ಲಾಟ್	₹132

ಖಾದ್ಯ ತೈಲ ಮುಂಬೈ

(10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1680 (1680)
ಸೋಯಾ (ರಿಫೈನ್ಡ್)	₹1190 (1195)

ಆಗಸ್ಟ್‌ನಲ್ಲಿ ಕಚ್ಚಾ ತೈಲ ಆಮದು ಶೇ 87ರಷ್ಟು ಹೆಚ್ಚಳ

ರಫ್ತು ಶೇಕಡ 1.62ರಷ್ಟು ಏರಿಕೆ

ನವದೆಹಲಿ (ಪಿಟಿಐ): ದೇಶದ ರಫ್ತು ವಹಿವಾಟು ಆಗಸ್ಟ್‌ನಲ್ಲಿ ಶೇಕಡ 1.62ರಷ್ಟು ಅಲ್ಪ ಏರಿಕೆ ಕಂಡಿದ್ದು, ₹ 2.69 ಲಕ್ಷ ಕೋಟಿಗೆ ತಲುಪಿದೆ.

ಕಚ್ಚಾ ತೈಲ ಆಮದು ಹೆಚ್ಚಾಗಿರುವುದರಿಂದ ಕಳೆದ ವರ್ಷದ ಆಗಸ್ಟ್‌ಗೆ ಹೋಲಿಸಿದರೆ ಈ ವರ್ಷದ ಆಗಸ್ಟ್‌ನಲ್ಲಿ ವ್ಯಾಪಾರ ಕೊರತೆ ಅಂತರವು ಎರಡು ಪಟ್ಟು ಏರಿಕೆ ಕಂಡಿದೆ. ಕೇಂದ್ರ ವಾಣಿಜ್ಯ ಸಚಿವಾಲಯ ಬಿಡುಗಡೆ ಮಾಡಿರುವ ಅಂಕಿ–ಅಂಶಗಳಲ್ಲಿ ಈ ಮಾಹಿತಿ ಇದೆ.

ಸಚಿವಾಲಯವು ಸೆಪ್ಟೆಂಬರ್ 3ರಂದು ಬಿಡುಗಡೆ ಮಾಡಿದ್ದ ಪ್ರಾಥಮಿಕ ಮಾಹಿತಿಯು, ಆಗಸ್ಟ್‌ನಲ್ಲಿ ರಫ್ತು ಶೇ 1.15ರಷ್ಟು ಇಳಿಕೆ ಕಂಡಿದೆ ಎಂದು ಹೇಳಿತ್ತು.

2021ರ ಆಗಸ್ಟ್‌ನಲ್ಲಿ ವ್ಯಾಪಾರ ಕೊರತೆಯು ₹ 92,977 ಕೋಟಿ ಇತ್ತು. ಇದು ಈ ವರ್ಷದ ಆಗಸ್ಟ್‌ನಲ್ಲಿ ₹ 2.22 ಲಕ್ಷ ಕೋಟಿಗೆ ಏರಿಕೆ ಆಗಿದೆ ಎಂದು ಸಚಿವಾಲಯ ತಿಳಿಸಿದೆ.

ಆಗಸ್ಟ್‌ನಲ್ಲಿ ಆಮದು ವಹಿವಾಟು ಶೇ 37ರಷ್ಟು ಹೆಚ್ಚಾಗಿ ₹ 4.91 ಲಕ್ಷ ಕೋಟಿಗೆ ಏರಿಕೆ ಆಗಿದೆ. ಕಚ್ಚಾ ತೈಲ ಆಮದು ಆಗಸ್ಟ್‌ನಲ್ಲಿ ಶೇ 87ರಷ್ಟು ಏರಿಕೆ ಕಂಡಿದೆ. ಆದರೆ, ಚಿನ್ನ ಆಮದು ಶೇ 47ರಷ್ಟು ಇಳಿಕೆ ಆಗಿದೆ.

ಪೆಟ್ರೋಲಿಯಂ ಉತ್ಪನ್ನಗಳ ರಫ್ತು ಶೇ 23ರಷ್ಟು, ರಾಸಾಯನಿಕ ಶೇ 13 ಮತ್ತು ಔಷಧ ಉತ್ಪನ್ನಗಳ ರಫ್ತು ಶೇ 7ರಷ್ಟು ಹೆಚ್ಚಾಗಿದೆ.

2022–23ರ ಏಪ್ರಿಲ್–ಆಗಸ್ಟ್ ಅವಧಿಯಲ್ಲಿ ರಫ್ತು ವಹಿವಾಟು ಶೇ 17.68ರಷ್ಟು ಬೆಳವಣಿಗೆ ಕಂಡಿದ್ದರೆ ಆಮದು ವಹಿವಾಟು ಶೇ 45.74ರಷ್ಟು ಏರಿಕೆ ಆಗಿದೆ. ಈ ಅವಧಿಯಲ್ಲಿ ವ್ಯಾಪಾರ ಕೊರತೆ ಅಂತರವು ₹ 4.27 ಲಕ್ಷ ಕೋಟಿಯಿಂದ ₹ 9.88 ಲಕ್ಷ ಕೋಟಿಗೆ ಏರಿಕೆ ಕಂಡಿದೆ.

ಕರಗಿತು ₹ 76,196 ಕೋಟಿ

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆಯಲ್ಲಿ ಮಾರಾಟದ ಒತ್ತಡ ಕಂಡುಬಂದಿದ್ದರಿಂದ ಬುಧವಾರ ಹೂಡಿಕೆದಾರರ ಸಂಪತ್ತು ಮೌಲ್ಯ ₹ 76,196 ಕೋಟಿಯಷ್ಟು ಕರಗಿದೆ. ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯವು ₹ 285.94 ಲಕ್ಷ ಕೋಟಿಗೆ ಇಳಿಕೆಯಾಗಿದೆ.

ಹಣದುಬ್ಬರ ಪ್ರಮಾಣವು ಏರುಮುಖವಾಗಿರುವುದರಿಂದ ಬಡ್ಡಿ ದರವು ಹೆಚ್ಚಿನ ಪ್ರಮಾಣದಲ್ಲಿ ಏರಿಕೆ ಆಗುವ ಆತಂಕ ಎದುರಾಗಿದೆ. ಇದು ನಕಾರಾತ್ಮಕ ವಹಿವಾಟಿಗೆ ಪ್ರಮುಖ ಕಾರಣವಾಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ವಹಿವಾಟಿನ ಒಂದು ಹಂತದಲ್ಲಿ 1,150 ಅಂಶ ಕುಸಿತ ಕಂಡು 59,417 ಅಂಶಗಳಿಗೆ ತಲುಪಿತ್ತು. ಆ ಬಳಿಕ 1,200 ಅಂಶಗಳಷ್ಟು ಚೇತರಿಕೆ ಕಂಡಿತು. ದಿನದ ವಹಿವಾಟಿನ ಅಂತ್ಯದ ವೇಳೆಗೆ ಸೂಚ್ಯಂಕದ ಇಳಿಕೆಯು 224 ಅಂಶಗಳಿಗೆ ಸೀಮಿತವಾಯಿತು.

ಜಾಗತಿಕ ಮಾರುಕಟ್ಟೆಯಲ್ಲಿ ನಕಾರಾತ್ಮಕ ವಹಿವಾಟು ನಡೆಯುತ್ತಿದ್ದರೂ ಭಾರತದ ಷೇರುಪೇಟೆಗಳು ಉತ್ತಮ ಚೇತರಿಕೆ ಕಂಡಿವೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವೀಸಸ್‌ನ ರಿಟೇಲ್ ವಿಭಾಗದ ಸಂಶೋಧನಾ ಮುಖ್ಯಸ್ಥ ಸಿದ್ಧಾರ್ಥ್ ಖೇಮ್ಕಾ ಹೇಳಿದ್ದಾರೆ.

ಅಮೆರಿಕದಲ್ಲಿ ಆಗಸ್ಟ್ ತಿಂಗಳ ಹಣದುಬ್ಬರವು ನಿರೀಕ್ಷೆಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ದಾಖಲಾಗಿದೆ. ಹೀಗಾಗಿ ಅಲ್ಲಿನ ಕೇಂದ್ರೀಯ ಬ್ಯಾಂಕ್ ಹೆಚ್ಚಿನ ಪ್ರಮಾಣದಲ್ಲಿ ಬಡ್ಡಿದರ ಏರಿಕೆ ಮಾಡುವ ಆತಂಕ ಎದುರಾಗಿದೆ. ಇದರಿಂದಾಗಿ ಜಾಗತಿಕ ಮಾರುಕಟ್ಟೆಗಳಲ್ಲಿ ಸೂಚ್ಯಂಕಗಳು ಇಳಿಕೆ ಕಾಣುವಂತಾಯಿತು.

ರೂಪಾಯಿ 35 ಪೈಸೆ ಇಳಿಕೆ

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಬುಧವಾರ 35 ಪೈಸೆ ಇಳಿಕೆ ಕಂಡು ಒಂದು ಡಾಲರ್‌ಗೆ ₹79.52ರಂತೆ ವಿನಿಮಯಗೊಂಡಿತು.

ವಿದೇಶಿ ಬಂಡವಾಳ ಹೊರಹರಿವು ಹಾಗೂ ದೇಶಿ ಷೇರುಪೇಟೆಗಳ ವಹಿವಾಟು ಇಳಿಕೆಯಿಂದಾಗಿ ರೂಪಾಯಿ ಮೌಲ್ಯ ಕುಸಿತ ಕಂಡಿತು ಎಂದು ವರ್ತಕರು ಹೇಳಿದ್ದಾರೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹380-691
ದ್ವಿತಳಿ (ಬಿ.ವಿ)	₹222-863

ಮುಂಬೈ ಧಾರಣೆ

ಶೇಂಗಾ

14–9–2022

ಜಾವಾ 70/80(ಹೊಸ)	11850-11900
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	10400-10500
ದಪ್ಪ ಗುಜರಾತ್(ಹೊಸ)	11000-11100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1690 (1690)
ಒಂದು ವಾರದ ಡೆಲಿವರಿ	1685 (1685)
ಸೋಯಾ ಕಚ್ಚಾ	1127 (1117)
ಪಾಮ್ ವಾರದ ಡೆಲಿವರಿ	943 (958)
ಸೂರ್ಯಕಾಂತಿ ಎಣ್ಣೆ ಕಚ್ಚಾ	1280 (1280)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,050 (50,500)
ಬೆಳ್ಳಿ ಕೆ.ಜಿ 56,300 (57,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಬೈಜುಸ್ ನಷ್ಟ 19 ಪಟ್ಟು ಹೆಚ್ಚಳ

ನವದೆಹಲಿ (ಪಿಟಿಐ): 2021ರ ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಬೈಜುಸ್ ಕಂಪನಿಯು ಒಟ್ಟು ₹ 4,588 ಕೋಟಿ ನಷ್ಟ ಅನುಭವಿಸಿದೆ. ಇದು ಹಿಂದಿನ ಆರ್ಥಿಕ ವರ್ಷದಲ್ಲಿ ಆದ ನಷ್ಟಕ್ಕಿಂತ 19 ಪಟ್ಟು ಹೆಚ್ಚು.

ಕಂಪನಿಯು ತನ್ನ ಹಣಕಾಸಿನ ವಿವರಗಳನ್ನು ಬುಧವಾರ ಬಿಡುಗಡೆ ಮಾಡಿದೆ. 2022ರ ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ತನ್ನ ವರಮಾನವು ನಾಲ್ಕು ಪಟ್ಟು, ಅಂದರೆ ₹ 10 ಸಾವಿರ ಕೋಟಿಗೆ, ಹೆಚ್ಚಳ ಕಂಡಿದೆ ಎಂದು ಕಂಪನಿ ಹೇಳಿದೆ. ಆದರೆ, ನಷ್ಟ ಆಗಿದೆಯೇ ಅಥವಾ ಲಾಭ ಆಗಿದೆಯೇ ಎಂಬುದನ್ನು ತಿಳಿಸಿಲ್ಲ.

'ಕಂಪನಿಯು ಐಪಿಒ ಪ್ರಕ್ರಿಯೆ ನಡೆಸುವುದನ್ನು ಗರಿಷ್ಠ 12 ತಿಂಗಳವರೆಗೆ ಮುಂದೂಡಲಿದೆ. 2023ರ ಕ್ಯಾಲೆಂಡರ್ ವರ್ಷದಲ್ಲಿ ಅದರ ಬಗ್ಗೆ ಪರಿಶೀಲಿಸಲಾಗುವುದು' ಎಂದು ಕಂಪನಿಯ ಸಿಇಒ ಬೈಜು ರವೀಂದ್ರನ್ ಹೇಳಿದ್ದಾರೆ.

18ಕ್ಕೆ ಎಫ್‌ಕೆಸಿಸಿಐ 'ಮಂಥನ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) 14ನೇ ಆವೃತ್ತಿಯ 'ಮಂಥನ್-2022' ಸ್ಪರ್ಧೆಯ ಅಂತಿಮ ಸುತ್ತು ಇದೇ ಭಾನುವಾರ ನಡೆಯಲಿದೆ.

ಈ ಕುರಿತು ಮಾಹಿತಿ ನೀಡಿದ ಎಫ್‌ಕೆಸಿಸಿಐ ಅಧ್ಯಕ್ಷ ಅಧ್ಯಕ್ಷ ಡಾ.ಐ.ಎಸ್. ಪ್ರಸಾದ್, 'ದೇಶದ ಯುವಪೀಳಿಗೆಯಲ್ಲಿ ಉದ್ಯಮಶೀಲತೆಯ ಮನೋಭಾವ ಬೆಳೆಸುವ ಉದ್ದೇಶದಿಂದ ಈ ಸ್ಪರ್ಧೆ ಆಯೋಜಿಸಲಾಗುತ್ತಿದೆ. ಉತ್ತಮ ವಾಣಿಜ್ಯ ಯೋಜನೆ ರೂಪಿಸುವ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರಶಸ್ತಿ ವಿತರಣೆ ಮಾಡಲಾಗುವುದು. ಈ ಬಾರಿಯ 'ಮಂಥನ್' ಕಾರ್ಯಕ್ರಮವು ರಾಷ್ಟ್ರೀಯ ಶಿಕ್ಷಣ ನೀತಿಗೆ (ಎನ್‌ಇಪಿ) ಅನುಗುಣವಾಗಿದ್ದು, ಎಫ್‌ಕೆಸಿಸಿಐನ ಇತಿಹಾಸದಲ್ಲಿಯೇ ವಿಶಿಷ್ಟವಾಗಿದೆ' ಎಂದರು.

'ಈ ಬಾರಿಯ 'ಮಂಥನ್' ಕಾರ್ಯಕ್ರಮದಲ್ಲಿ ದಕ್ಷಿಣ ಭಾರತದ ವಿವಿಧ ಸಂಸ್ಥೆಗಳಿಂದ 625 ತಂಡಗಳು ಭಾಗವಹಿಸಿದ್ದವು. ಪ್ರಶಸ್ತಿ ಸುತ್ತಿನಲ್ಲಿ 212 ತಂಡಗಳ ಮೌಲ್ಯಮಾಪನ ಮಾಡಲಾಯಿತು. ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಣೆಯ ನೆನಪಿಗಾಗಿ ಸೆಮಿಫೈನಲ್‌ಗೆ 75 ತಂಡಗಳನ್ನು ಅಂತಿಮಗೊಳಿಸಲಾಯಿತು. ಅಂತಿಮ ಸುತ್ತಿಗೆ 32 ತಂಡಗಳನ್ನು ಆಯ್ಕೆ ಮಾಡಲಾಗಿದ್ದು, ಇದೇ ಭಾನುವಾರ ವಿಜೇತರನ್ನು ಘೋಷಿಸಲಾಗುವುದು. ಅತ್ಯುತ್ತಮ, ನವೀನ, ತಾಂತ್ರಿಕ ಮತ್ತು ವಾಣಿಜ್ಯಕವಾಗಿ ಕಾರ್ಯಸಾಧ್ಯವಾಗಿರುವ ವ್ಯಾಪಾರ ಯೋಜನೆಗಳಿಗೆ ಒಟ್ಟು ₹ 26 ಲಕ್ಷ ನಗದು ಬಹುಮಾನ ನೀಡಲಾಗುವುದು' ಎಂದು ಪ್ರಸಾದ್ ತಿಳಿಸಿದರು.

ರಫ್ತು ಶ್ರೇಷ್ಠತಾ ಪ್ರಶಸ್ತಿ: ರಾಜ್ಯದ ರಫ್ತುದಾರರನ್ನು ಬೆಂಬಲಿಸುವ ಸಲುವಾಗಿ ಎಫ್‌ಕೆಸಿಸಿಐ ರಫ್ತು ಶ್ರೇಷ್ಠತಾ ಪ್ರಶಸ್ತಿ ನೀಡುತ್ತಿದ್ದು, 17ನೇ ಆವೃತ್ತಿಯ ಕಾರ್ಯಕ್ರಮವು ನಗರದ ಅರಮನೆ ರಸ್ತೆಯ ರ್‍ಯಾಡಿಸನ್ ಬ್ಲು ಹೋಟೆಲ್‌ನಲ್ಲಿ ಇದೇ 21ರಂದು ನಡೆಯಲಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-47500
ಹಳತು	46000-56000
ಕುಮಟ	
ಚಿಪ್ಪು	30199-34089
ಕೋಕ	21089-33999
ಫ್ಯಾಕ್ಟರಿ	12569-23611
ಹಳೆಚಾಲಿ	43019-44509
ಹೊಸಚಾಲಿ	38689-44009
ಪುತ್ತೂರು	
ಹೊಸತು	34500-47500
ಶಿವಮೊಗ್ಗ	
ಬೆಟ್ಟೆ	50769-55400
ಗೊಬರಲು	18009-39099
ರಾಶಿ	47669-52599
ಸರಕು	58100-75899
ಸಿದ್ದಾಪುರ	
ಬಿಳಿಗೋಟು	28999-35899
ಚಾಲಿ	39899-44099
ಕೋಕ	27789-35100
ಕೆಂಪುಗೋಟು	33799-36099
ರಾಶಿ	50399-52299
ತಟ್ಟಿಬೆಟ್ಟೆ	40089-50699
ಶಿರಸಿ	
ಬೆಟ್ಟೆ	41299-48669
ಬಿಳಿಗೋಟು	25699-38499
ಚಾಲಿ	38899-44899
ಕೆಂಪುಗೋಟು	28912-38731
ರಾಶಿ	51600-51600

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16250	15800	16100	220.70 ಸೆಂಟ್ಸ್
ಎಸಿ	9100	8400	8825	
ಆರ್‌ಪಿ	9900	9800	9800	ಲಂಡನ್
ಆರ್‌ಸಿ	4550	4500	4725	2239 ಡಾಲರ್ಸ್

ಭರ್ಜರಿ ಕುಸ್ತಿ...

ಬಾಗಲಕೋಟೆಯ ರಬಕವಿ ಬನಹಟ್ಟಿಯ ಕುಸ್ತಿ ಮೈದಾನದಲ್ಲಿ ಕಾಡಸಿದ್ಧೇಶ್ವರ ಜಾತ್ರೆಯ ಅಂಗವಾಗಿ ಬುಧವಾರ ರಾಷ್ಟ್ರ ಮಟ್ಟದ ಕುಸ್ತಿ ನಡೆಯಿತು. ಕುಸ್ತಿ ವೀಕ್ಷಿಸಲು ಅಧಿಕ ಸಂಖ್ಯೆಯಲ್ಲಿ ಜನರು ಸೇರಿದ್ದರು –ಪ್ರಜಾವಾಣಿ ಚಿತ್ರ

ಡುರಾಂಡ್ ಕಪ್ ಫುಟ್‌ಬಾಲ್: ಇಂದು ಸೆಮಿಫೈನಲ್

ಫೈನಲ್ ಮೇಲೆ ಬಿಎಫ್‌ಸಿ ಕಣ್ಣು

ಕೋಲ್ಕತ್ತ (ಪಿಟಿಐ): ಮೊದಲ ಬಾರಿ ಫೈನಲ್ ತಲುಪುವ ಕನಸಿನೊಂದಿಗೆ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಗುರುವಾರ ಡುರಾಂಡ್ ಕಪ್ ಟೂರ್ನಿಯ ನಾಲ್ಕರ ಘಟ್ಟದಲ್ಲಿ ಹೈದರಾಬಾದ್ ಎಫ್‌ಸಿ ವಿರುದ್ಧ ಇಲ್ಲಿ ಕಣಕ್ಕಿಳಿಯಲಿದೆ.

ಕಳೆದ ವರ್ಷ ಟೂರ್ನಿಯ ನಾಲ್ಕರ ಘಟ್ಟದ ಪಂದ್ಯದಲ್ಲಿ ಬಿಎಫ್‌ಸಿ 6–7ರಿಂದ ಎಫ್‌ಸಿ ಗೋವಾ ಎದುರು ಎಡವಿತ್ತು. ಆ ನಿರಾಸೆಯನ್ನು ಮರೆಯುವ ತವಕದಲ್ಲಿ ಸುನಿಲ್ ಚೆಟ್ರಿ ನಾಯಕತ್ವದ ಬಳಗವಿದೆ.

ಬಿಎಫ್‌ಸಿ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಒಡಿಶಾ ಎಫ್‌ಸಿ ತಂಡವನ್ನು ಪರಾಭವಗೊಳಿಸಿತ್ತು. ಪಂದ್ಯದ ಕೊನೆಯ ಹಂತದಲ್ಲಿ ಗೋಲು ಗಳಿಸಿದ್ದ ರಾಯ್‌ಕೃಷ್ಣ ಗೆಲುವಿನ ರೂವಾರಿ ಎನಿಸಿದ್ದರು. ಎಂಟರಘಟ್ಟದಲ್ಲಿ ಹೈದರಾಬಾದ್ ತಂಡ ರಾಜಸ್ಥಾನ ಯುನೈಟೆಡ್ ಸವಾಲು ಮೀರಿತ್ತು.

ಸುನಿಲ್ ಚೆಟ್ರಿ– ಪ್ರಜಾವಾಣಿ ಚಿತ್ರ

ಬಿಎಫ್‌ಸಿಗೆ ಚೆಟ್ರಿ, ರಾಯ್‌ಕೃಷ್ಣ ಅವರೊಂದಿಗೆ ಶಿವಶಕ್ತಿ ನಾರಾಯಣನ್ ಕೂಡ ಭರವಸೆ ಎನಿಸಿದ್ದಾರೆ.

ಟೂರ್ನಿಯಲ್ಲಿ ಉಭಯ ತಂಡಗಳು ಇದುವರೆಗೆ ಐದು ಪಂದ್ಯಗಳನ್ನು ಆಡಿದ್ದು, ತಲಾ 11 ಗೋಲುಗಳನ್ನು ಗಳಿಸಿವೆ. ಹೈದರಾಬಾದ್ ಎದುರಾಳಿಗೆ ಮೂರು ಗೋಲುಗಳನ್ನು ಬಿಟ್ಟುಕೊಟ್ಟರೆ, ಬೆಂಗಳೂರು ಐದು ಗೋಲುಗಳನ್ನು ಕೊಟ್ಟಿದೆ. ಹೀಗಾಗಿ ಉಭಯ ತಂಡಗಳ ಮಧ್ಯೆ ಜಿದ್ದಾಜಿದ್ದಿನ ಪೈಪೋಟಿ ನಡೆಯುವ ಸಾಧ್ಯತೆಯಿದೆ.

ಹೈದರಾಬಾದ್ ಪರ ಬಾರ್ತೊಲೊಮಿವ್ ಒಗ್ಬೆಚೆ ಒಬ್ಬರೇ ಟೂರ್ನಿಯಲ್ಲಿ ಐದು ಬಾರಿ ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿದ್ದು, ಇಲ್ಲಿಯೂ ಮಿಂಚುವ ವಿಶ್ವಾಸದಲ್ಲಿದ್ದಾರೆ.

ಪಂದ್ಯ ಆರಂಭ: ಸಂಜೆ 6
ನೇರ ಪ್ರಸಾರ: ಸ್ಪೋರ್ಟ್ಸ್ 18

ಚೆನ್ನೈ ಓಪನ್: ಕರ್ಮನ್‌ಕೌರ್‌ಗೆ ಸೋಲು

ಕರ್ಮನ್ ಕೌರ್

ಚೆನ್ನೈ: ಭಾರತದ ಕರ್ಮನ್ ಕೌರ್ ಥಂಡಿ ಅವರು ಚೆನ್ನೈ ಓಪನ್ ಟೆನಿಸ್ ಟೂರ್ನಿಯಲ್ಲಿ ಸೋಲು ಅನುಭವಿಸಿದ್ದಾರೆ. ಇದರೊಂದಿಗೆ ಸಿಂಗಲ್ಸ್‌ನಲ್ಲಿ ಭಾರತದ ಸವಾಲು ಅಂತ್ಯವಾಯಿತು.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಪ್ರೀಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಬುಧವಾರ ಕರ್ಮನ್ ಕೌರ್ 2–6, 6–7ರಿಂದ ಕೆನಡಾದ ಯೂಜಿನ್ ಬೊಶಾಡ್ ಎದುರು ಎಡವಿದರು.

16ರ ಘಟ್ಟದ ಇನ್ನೊಂದು ಪಂದ್ಯದಲ್ಲಿ ಜಪಾನ್‌ನ ನೊವ್ ಹಿಬಿನೊ 6–2, 6–3ರಿಂದ ಚೀನಾದ ವಾಂಗ್ ಕಿಯಾಂಗ್ ಎದುರು ಗೆಲುವು ಸಾಧಿಸಿದರು. ಮತ್ತೊಂದು ಪಂದ್ಯದಲ್ಲಿ ಸ್ವೀಡನ್‌ನ ರೆಬೆಕ್ಕಾ ಪೀಟರ್‌ಸನ್ 4–6, 2–6ರಿಂದ ಜೆಕ್ ಗಣರಾಜ್ಯದ ಲಿಂಡಾ ಫ್ರುವಿರ್ಟೊವಾ ಎದುರು ಆಘಾತ ಅನುಭವಿಸಿದರು.

ಮಂದಾನ ಬ್ಯಾಟಿಂಗ್; ಒಲಿದ ಜಯ

ಟಿ20 ಕ್ರಿಕೆಟ್: ಇಂಗ್ಲೆಂಡ್‌ಗೆ ಸೋಲುಣಿಸಿದ ಭಾರತ ತಂಡ

ಡರ್ಬಿ (ಪಿಟಿಐ): ಆರಂಭಿಕ ಬ್ಯಾಟರ್ ಸ್ಮೃತಿ ಮಂದಾನ ಗಳಿಸಿದ ಅಬ್ಬರದ ಅರ್ಧಶತಕದ ಬಲದಿಂದ ಭಾರತ ತಂಡವು ಇಂಗ್ಲೆಂಡ್ ಎದುರಿನ ಮಹಿಳಾ ಟಿ20 ಕ್ರಿಕೆಟ್ ಟೂರ್ನಿಯ ಎರಡನೇ ಪಂದ್ಯದಲ್ಲಿ ಜಯಿಸಿತು.

ಇದರೊಂದಿಗೆ ಮೂರು ಪಂದ್ಯಗಳ ಸರಣಿಯಲ್ಲಿ 1–1ರ ಸಮಬಲ ಸಾಧಿಸಿತು.

ಮಂಗಳವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಭಾರತ ತಂಡವು ಎಂಟು ವಿಕೆಟ್‌ಗಳ ಜಯ ಸಾಧಿಸಿತು. ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ ತಂಡವು ಸ್ನೇಹಾ ರಾಣಾ (24ಕ್ಕೆ3) ದಾಳಿಯ ಮುಂದೆ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 142 ರನ್‌ಗಳ ಸಾಧಾರಣ ಮೊತ್ತ ಗಳಿಸಿತು.

ಗುರಿ ಬೆನ್ನಟ್ಟಿದ್ದ ಭಾರತ ತಂಡವು ಇನಿಂಗ್ಸ್‌ನಲ್ಲಿ ಇನ್ನೂ 20 ಎಸೆತಗಳು ಬಾಕಿ ಇರುವಂತೆಯೇ 2 ವಿಕೆಟ್‌ಗಳನ್ನು ಕಳೆದುಕೊಂಡು146 ರನ್ ಗಳಿಸಿತು. ಸ್ಮೃತಿ (ಔಟಾಗದೆ 79; 53; 4X13) ಹಾಗೂ ಶಫಾಲಿ ವರ್ಮಾ (20; 17ಎ, 4X4) ಮೊದಲ ವಿಕೆಟ್ ಜೊತೆಯಾಟದಲ್ಲಿ 55 ರನ್ ಗಳಿಸಿ ಉತ್ತಮ ಆರಂಭ ನೀಡಿದರು. ಸ್ಮೃತಿ ಆಕರ್ಷಕವಾದ ಬ್ಯಾಟಿಂಗ್ ಮಾಡಿದರು. ಎದುರಾಳಿ ಬೌಲರ್‌ಗಳು ಅವರ ಚೆಂದದ ಡ್ರೈವ್‌ಗಳ ಮುಂದೆ ನಿರುತ್ತರರಾದರು.

ಶಫಾಲಿ ಹಾಗೂ ಹೇಮಲತಾ (9 ರನ್) ಔಟಾದ ನಂತರ ಸ್ಮೃತಿ ಜೊತೆ ಸೇರಿದ ನಾಯಕಿ ಹರ್ಮನ್‌ಪ್ರೀತ್ ಕೌರ್ (ಔಟಾಗದೆ 29; 22ಎ, 4X4) ತಂಡವನ್ನು ಗೆಲುವಿನ ದಡ ಸೇರಿಸಿದರು.

ಸ್ಮೃತಿ ಮಂದಾನ

ಸರಣಿಯ ಕೊನೆಯ ಹಾಗೂ ಮೂರನೇ ಪಂದ್ಯವು ಗುರುವಾರ ಬ್ರಿಸ್ಟಲ್‌ನಲ್ಲಿ ನಡೆಯಲಿದೆ.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 20 ಓವರ್‌ಗಳಲ್ಲಿ 6ಕ್ಕೆ 142 (ಫ್ರೆಯಾ ಕೆಂಪ್ ಔಟಾಗದೆ 51, ಮೈಯಾ ಬೌಷೇರ್ 34, ಸ್ನೇಹಾ ರಾಣಾ 24ಕ್ಕೆ3) ಭಾರತ: 16.4 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 146 (ಸ್ಮೃತಿ ಮಂದಾನಾ ಔಟಾಗದೆ 79, ಹರ್ಮನ್‌ಪ್ರೀತ್ ಕೌರ್ ಔಟಾಗದೆ 29, ಸೋಫಿ ಎಕ್ಸೆಲ್‌ಸ್ಟೋನ್ 22ಕ್ಕೆ1) ಫಲಿತಾಂಶ: ಭಾರತಕ್ಕೆ 8 ವಿಕೆಟ್‌ಗಳಿಂದ ಜಯ. ಸರಣಿಯಲ್ಲಿ 1–1

ಎನ್‌ಟಿಪಿಸಿ, ಆರ್‌ಇಸಿ– ಕ್ರೀಡಾ ಸಚಿವಾಲಯ ಒಪ್ಪಂದ

ನವದೆಹಲಿ (ಪಿಟಿಐ): ರಾಷ್ಟ್ರೀಯ ಕ್ರೀಡಾ ಅಭಿವೃದ್ಧಿ ನಿಧಿಗೆ (ಎನ್‌ಎಸ್‌ಡಿಎಫ್) ₹ 215 ಕೋಟಿ ನೆರವು ನೀಡಲು ಕೇಂದ್ರ ಸರ್ಕಾರಿ ಸ್ವಾಮ್ಯದ ಕಂಪನಿಗಳಾದ ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮ (ಎನ್‌ಟಿಪಿಸಿ) ಮತ್ತು ಗ್ರಾಮೀಣ ವಿದ್ಯುತ್ ನಿಗಮಗಳೊಂದಿಗೆ (ಆರ್‌ಇಸಿ) ಕೇಂದ್ರ ಕ್ರೀಡಾ ಸಚಿವಾಲಯವು ಬುಧವಾರ ಒಪ್ಪಂದ ಮಾಡಿಕೊಂಡಿದೆ.

ಆರ್ಚರಿ ಕ್ರೀಡೆಯ ಬೆಳವಣಿಗೆಗೆ ಎನ್‌ಟಿಪಿಸಿ ₹ 115 ಕೋಟಿ ಮತ್ತು ಮಹಿಳಾ ಹಾಕಿ ಹಾಗೂ ಬಾಕ್ಸಿಂಗ್‌ಗಾಗಿ ಆರ್‌ಇಸಿ ₹ 100 ಕೋಟಿ ನೆರವು ನೀಡಲಿದೆ.

ಒಪ್ಪಂದದ ಸಂದರ್ಭದಲ್ಲಿ ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್, ಎನ್‌ಟಿಪಿಸಿ, ಆರ್‌ಇಸಿ ಪ್ರಮುಖ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಬಿಸಿಸಿಐ ನಿಯಮಾವಳಿ ಪರಿಷ್ಕರಣೆಗೆ ಅವಕಾಶ ನೀಡಿದ ಸುಪ್ರೀಂ ಕೋರ್ಟ್

ಗಂಗೂಲಿ, ಶಾ ದಾರಿ ಸುಗಮ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ನಿಯಮಾವಳಿಗಳಿಗೆ ತಿದ್ದುಪಡಿ ಮಾಡಲು ಸುಪ್ರೀಂ ಕೋರ್ಟ್ ಅವಕಾಶ ಕಲ್ಪಿಸಿದ್ದು, ಇದರಿಂದ ಅಧ್ಯಕ್ಷ ಸೌರವ್ ಗಂಗೂಲಿ ಹಾಗೂ ಕಾರ್ಯದರ್ಶಿ ಜಯ್ ಶಾ ಅವರು ತಮ್ಮ ಅಧಿಕಾರದಲ್ಲಿ ಮುಂದುವರಿಯಲು ದಾರಿ ಸರಾಗವಾದಂತಾಗಿದೆ.

ಈ ಸಂಬಂಧದ ಮೇಲ್ಮನವಿಯನ್ನು ವಿಲೇವಾರಿ ಮಾಡಿರುವ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ಹಿಮಾ ಕೊಹ್ಲಿ ಅವರಿದ್ದ ವಿಭಾಗೀಯ ನ್ಯಾಯಪೀಠವು ಬುಧವಾರ ತೀರ್ಪು ಪ್ರಕಟಿಸಿದೆ.

ಪದಾಧಿಕಾರಿಗಳು 12 ವರ್ಷ (ರಾಜ್ಯ ಸಂಸ್ಥೆಯಲ್ಲಿ ಆರು ವರ್ಷ ಹಾಗೂ ಬಿಸಿಸಿಐನಲ್ಲಿ ಆರು ವರ್ಷಗಳು) ಅಧಿಕಾರ ನಿರ್ವಹಿಸಬಹುದು. ಈ ಮೊದಲಿನಂತೆ ಎರಡು ಅವಧಿಗಳ (ಒಂದು ಅವಧಿಗೆ ಮೂರುವರ್ಷ) ನಡುವೆ ಒಂದು ಅವಧಿ ಕೂಲಿಂಗ್ ಆಫ್ ನಿಯಮ ಕಡ್ಡಾಯವಲ್ಲ ಎಂದು ಹೇಳಿರುವ ನ್ಯಾಯಪೀಠ, 'ಕೂಲಿಂಗ್ ಆಫ್ ನಿಯಮವು ಅಧಿಕಾರದ ಏಕಸ್ವಾಮ್ಯವನ್ನು ತಡೆಯುವುದಕ್ಕಾಗಿ ಮಾತ್ರವೇ ಇರುವಂಥಾದ್ದು' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

'ಒಬ್ಬ ಪದಾಧಿಕಾರಿಯು ಬಿಸಿಸಿಐ ಮತ್ತು ರಾಜ್ಯ ಅಸೋಸಿಯೇಷನ್ ಮಟ್ಟದಲ್ಲಿ ಸತತ ಎರಡು ಅವಧಿಗೆ ನಿರ್ದಿಷ್ಟ ಹುದ್ದೆಯಲ್ಲಿ ಸೇವೆ ಸಲ್ಲಿಸಬಹುದು. ನಂತರ ಅವರು ಮೂರು ವರ್ಷಗಳ ಕೂಲಿಂಗ್-ಆಫ್ ಅವಧಿಯನ್ನು ಪೂರೈಸಬೇಕಾಗುತ್ತದೆ' ಎಂದೂ ಪೀಠ ಹೇಳಿದೆ.


ಸೌರವ್ ಗಂಗೂಲಿ

ಜಯ್ ಶಾ

ಗಂಗೂಲಿ ಹಾಗೂ ಶಾ ಅವರು ತಮ್ಮ ರಾಜ್ಯ ಹಾಗೂ ಬಿಸಿಸಿಐ ಸಂಸ್ಥೆಗಳಲ್ಲಿ ಪದಾಧಿಕಾರಿಗಳಾಗಿ ಒಟ್ಟು ಆರು ವರ್ಷ ಪೂರೈಸಿದ್ದರು. ಆದ್ದರಿಂದ, ಅವರು ಕೂಲಿಂಗ್ ಆಫ್ ನಿಯಮಕ್ಕೆ ಒಳಪಡಬೇಕಿತ್ತು. ಇದನ್ನು ಪ್ರಶ್ನಿಸಿ ಹಾಗೂ ನಿಯಮವನ್ನು ತೆಗೆದುಹಾಕಬೇಕು ಎಂದು ಕೋರಿ ಇಬ್ಬರೂ 2020ರಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ಈ ತೀರ್ಪಿನಿಂದಾಗಿ ಇವರಿಬ್ಬರೂ 2025ರವರೆಗೆ ತಮ್ಮ ಹುದ್ದೆಗಳಲ್ಲಿ ಮುಂದುವರಿಯಲು ಅವಕಾಶ ಸಿಕ್ಕಂತಾಗಿದೆ.

2015ರಲ್ಲಿ ಬಿಸಿಸಿಐನಲ್ಲಿ ಆಡಳಿತ ಸುಧಾರಣೆಗೆ ಸುಪ್ರೀಂ ಕೋರ್ಟ್ ನೇಮಕ ಮಾಡಿದ್ದ ನಿವೃತ್ತ ನ್ಯಾಯಮೂರ್ತಿ ಆರ್.ಎಂ. ಲೋಧಾ ಕಮಿಟಿಯು ಶಿಫಾರಸುಗಳನ್ನು ನೀಡಿತ್ತು. ಅದರನ್ವಯ ರಚಿಸಲಾಗಿದ್ದ ನೂತನ ನಿಯಮಾವಳಿಯನ್ನು ಜಾರಿಗೆ ತರಲಾಗಿತ್ತು. ಆ ಸಂದರ್ಭದಲ್ಲಿ ಗಂಗೂಲಿ ಹಾಗೂ ಜಯ್ ಶಾ ಅವರನ್ನು ಪದಾಧಿಕಾರಿಗಳನ್ನಾಗಿ ಆಯ್ಕೆ ಮಾಡಲಾಗಿತ್ತು. ಇದಕ್ಕೂ ಮುನ್ನ ಗಂಗೂಲಿ ಬಂಗಾಳ ಕ್ರಿಕೆಟ್ ಸಂಸ್ಥೆ ಹಾಗೂ ಜಯ್ ಶಾ ಗುಜರಾತ್ ಕ್ರಿಕೆಟ್ ಸಂಸ್ಥೆಗಳಲ್ಲಿ ಪದಾಧಿಕಾರಿಗಳಾಗಿ ನಾಲ್ಕು ವರ್ಷಗಳಿಗೂ ಹೆಚ್ಚು ಅವಧಿ ಕಾರ್ಯನಿರ್ವಹಿಸಿದ್ದರು.

ಮುಖ್ಯಾಂಶಗಳು

- 12 ವರ್ಷ ಪದಾಧಿಕಾರಿಯಾಗಲು ಅವಕಾಶ
- 2025ರವರೆಗೆ ಹುದ್ದೆಗಳಲ್ಲಿ ಮುಂದುವರಿಯಲು ಅವಕಾಶ
- ಗಂಗೂಲಿ, ಶಾ ತಮ್ಮ ರಾಜ್ಯ ಹಾಗೂ ಬಿಸಿಸಿಐ ಸಂಸ್ಥೆಗಳಲ್ಲಿ ಪದಾಧಿಕಾರಿಗಳಾಗಿ 6 ವರ್ಷ ಪೂರೈಸಿದ್ದರು

ಕ್ರಿಕೆಟ್: ರಾಬಿನ್ ಉತ್ತಪ್ಪ ವಿದಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊಡಗಿನ ಕುವರ' ರಾಬಿನ್ ಉತ್ತಪ್ಪ ಎಲ್ಲ ಮಾದರಿಗಳ ಕ್ರಿಕೆಟ್‌ಗೆ ಬುಧವಾರ ನಿವೃತ್ತಿ ಘೋಷಿಸಿದರು.

'ಡ್ಯಾಷಿಂಗ್ ಬ್ಯಾಟರ್' ಎಂದೇ ಗುರುತಿಸಿಕೊಂಡ ರಾಬಿನ್ 2 ದಶಕಗಳ ಕಾಲ ರಾಜ್ಯ ಹಾಗೂ ದೇಶದ ಕ್ರಿಕೆಟ್‌ನಲ್ಲಿ ಮಿಂಚಿದರು.

'ವೃತ್ತಿಪರ ಕ್ರಿಕೆಟ್‌ನಲ್ಲಿ 20 ವರ್ಷ ಆಡಿದೆ. ನನ್ನ ತವರು ರಾಜ್ಯ ಕರ್ನಾಟಕ ಹಾಗೂ ದೇಶವನ್ನು ಪ್ರತಿನಿಧಿಸಿದ್ದು ನನಗೆ ಸಂದ ದೊಡ್ಡ ಗೌರವ. ಇದೊಂದು ಸುಂದರವಾದ ಪ್ರಯಾಣವಾಗಿದೆ. ಇದರಲ್ಲಿ ಹಲವು ಏರಿಳಿತಗಳನ್ನು ಕಂಡಿದ್ದೇನೆ. ಆದೆಲ್ಲವನ್ನೂ ಮೀರಿ ಈ ವೃತ್ತಿಜೀವನದ ಅವಧಿಯನ್ನು ಮನಪೂರ್ವಕವಾಗಿ ಆಸ್ವಾದಿಸಿದ್ದೇನೆ. ಗೌರವ ಗಳಿಸಿದ್ದೇನೆ. ಈ ಎಲ್ಲ ಅನುಭವಗಳೂ ನನ್ನನ್ನು ಉತ್ತಮ ವ್ಯಕ್ತಿಯನ್ನಾಗಿ ರೂಪಿಸಿವೆ' ಎಂದು ತಮ್ಮ ಸಾಮಾಜಿಕ ಜಾಲತಾಣದಲ್ಲಿ ಬರೆದಿದ್ದಾರೆ.

ರಾಬಿನ್ ಉತ್ತಪ್ಪ

'ಎಲ್ಲ ಒಳ್ಳೆಯ ವಿಷಯಗಳಿಗೂ ಮುಕ್ತಾಯವಿರುತ್ತದೆ. ನಿವೃತ್ತಿಯ ನಿರ್ಧಾರವನ್ನು ಮನಪೂರ್ವಕವಾಗಿ ತೆಗೆದುಕೊಂಡಿದ್ದೇನೆ. ಎಲ್ಲ ಮಾದರಿಗಳಿಗೂ ವಿದಾಯ ಹೇಳುತ್ತಿರುವೆ. ಕುಟುಂಬದೊಂದಿಗೆ ಹೆಚ್ಚು ಸಮಯ ಕಳೆಯುತ್ತೇನೆ. ಜೀವನದಲ್ಲಿ ಹೊಸ ಅಧ್ಯಾಯ ಆರಂಭಿಸುವೆ' ಎಂದೂ ಬರೆದಿದ್ದಾರೆ. ಅಗ್ರಕ್ರಮಾಂಕದ ಆಕ್ರಮಣಶೈಲಿಯ ರಾಬಿನ್ ಕರ್ನಾಟಕ ತಂಡದ ಪ್ರಮುಖ ಬ್ಯಾಟರ್ ಆಗಿದ್ದರು.

ಆದರೂ ಅವರಿಗೆ ಟೆಸ್ಟ್ ಕ್ರಿಕೆಟ್‌ನಲ್ಲಿ ಆಡುವ ಅವಕಾಶ ದೊರೆಯಲಿಲ್ಲ.

2002ರಲ್ಲಿ ರಾಜ್ಯ ತಂಡಕ್ಕೆ ಪದಾರ್ಪಣೆ ಮಾಡಿದ್ದ ಅವರು 4 ವರ್ಷಗಳ ನಂತರ ಭಾರತ ತಂಡದಲ್ಲಿಯೂ ಸ್ಥಾನ ಗಿಟ್ಟಿಸಿದರು. ಇಂದೋರ್‌ನಲ್ಲಿ ನಡೆದಿದ್ದ ಇಂಗ್ಲೆಂಡ್ ವಿರುದ್ಧದ ಏಕದಿನ ಪಂದ್ಯದಲ್ಲಿ ಪದಾರ್ಪಣೆ ಮಾಡಿದರು. ಆ ಪಂದ್ಯದಲ್ಲಿ 86 ಎಸೆತಗಳಲ್ಲಿ 96 ರನ್ ಗಳಿಸಿದರು. ಆದರೆ ನಂತರದ ವರ್ಷಗಳಲ್ಲಿ ಅವರಿಗೆ ಹೆಚ್ಚಿನ ಅವಕಾಶಗಳು ತಂಡದಲ್ಲಿ ಲಭಿಸಲಿಲ್ಲ. 2007ರಲ್ಲಿ ಟಿ20 ವಿಶ್ವಕಪ್ ಜಯಿಸಿದ ಭಾರತ ತಂಡದಲ್ಲಿ ಆಡಿದರು.

ಮಾದರಿ	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ	ಕ್ಯಾಚ್	ಸ್ಟಂಪ್
ಏಕದಿನ	46	934	86	--	6	19	2
ಟಿ20	13	249	50	--	1	2	-
ಪ್ರಥಮದರ್ಜೆ	142	9,446	162	22	52	134	2
ಲಿಸ್ಟ್ ಎ	203	6,534	169	16	33	110	9

ವಯಸ್ಸು	36
ಶೈಲಿ	ಬಲಗೈ ಬ್ಯಾಟರ್–ವಿಕೆಟ್‌ಕೀಪರ್
ಊರು	ಕೊಡಗು
ಆಡಿದ ತಂಡಗಳು	ಭಾರತ, ಕರ್ನಾಟಕ, ಕೇರಳ, ಸೌರಾಷ್ಟ್ರ, ಮುಂಬೈ ಇಂಡಿಯನ್ಸ್, ರಾಯಲ್ ಚಾಲೆಂಜರ್ಸ್ ಬೆಂಗಳೂರು, ಪುಣೆ ವಾರಿಯರ್ಸ್, ಕೋಲ್ಕತ್ತ ನೈಟ್ ರೈಡರ್ಸ್, ರಾಜಸ್ಥಾನ ರಾಯಲ್ಸ್, ಚೆನ್ನೈ ಸೂಪರ್ ಕಿಂಗ್ಸ್, ಬಿಜಾಪುರ ಬುಲ್ಸ್, ಇಂಡಿಯಾ ಗ್ರೀನ್, ಇಂಡಿಯಾ ಎ, ದಕ್ಷಿಣ ವಲಯ, ಈಸ್ಟ್ ಜೋನ್, ಇಂಡಿಯಾ ರೆಡ್.

ವಿಶ್ವ ಕುಸ್ತಿ: ವಿನೇಶಾ ಫೋಗಾಟ್‌ಗೆ ಕಂಚು

ಬೆಲ್‌ಗ್ರೇಡ್, ಸರ್ಬಿಯ (ಪಿಟಿಐ): ಭಾರತದ ವಿನೇಶಾ ಫೋಗಾಟ್ ಇಲ್ಲಿ ನಡೆಯುತ್ತಿರುವ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾರೆ. ಇದರೊಂದಿಗೆ ಅವರು ಚಾಂಪಿಯನ್‌ಷಿಪ್‌ನಲ್ಲಿ ಎರಡು ಬಾರಿ ಪದಕ ಸಾಧನೆ ಮಾಡಿದ ಭಾರತದ ಮೊದಲ ಮಹಿಳಾ ಕುಸ್ತಿಪಟು ಎಂಬ ಶ್ರೇಯ ಸಂಪಾದಿಸಿದರು.

53 ಕೆಜಿ ವಿಭಾಗದಲ್ಲಿ ಅಂಗಣಕ್ಕಿಳಿದಿದ್ದ ವಿನೇಶಾ ಕಂಚಿನ ಪದಕದ ಬೌಟ್‌ನಲ್ಲಿ 8–0ಯಿಂದ ಸ್ವೀಡನ್‌ನ ಜೊನ್ನಾ ಮಾಲ್‌ಮರ್ಗನ್ ಅವರನ್ನು ಪರಾಭವಗೊಳಿಸಿದರು.

28 ವರ್ಷದ ವಿನೇಶಾ ಅವರಿಗೆ 2019ರಲ್ಲಿ ಕಜಕಸ್ತಾನದ ನೂರ್ ಸುಲ್ತಾನ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲೂ ಕಂಚು ಒಲಿದಿತ್ತು.

ವಿನೇಶಾ ಫೋಗಾಟ್– ಪಿಟಿಐ ಚಿತ್ರ

ಈ ಚಾಂಪಿಯನ್‌ಷಿಪ್‌ನ ಮೊದಲ ಸುತ್ತಿನಲ್ಲಿ ವಿನೇಶಾ ಮಂಗೋಲಿಯಾದ ಭಟ್ಕುಯಗ್ ಖುಲಾನ್ ಎದುರು ಸೋತಿದ್ದರು. ಆದರೆ ಖುಲಾನ್ ಫೈನಲ್ ತಲುಪಿದ್ದರಿಂದ ವಿನೇಶಾ ಅವರಿಗೆ ರಿಪೆಚ್ ಸುತ್ತಿನಲ್ಲಿ ಆಡುವ ಅವಕಾಶ ಲಭಿಸಿತ್ತು.

ರಿಪೆಚ್‌ನ ಮೊದಲ ಸುತ್ತಿನಲ್ಲಿ ಕಜಕಸ್ತಾನದ ಜುಲ್‌ದಿಜ್ ಎಶಿಮೊವಾ ಅವರನ್ನು ಸೋಲಿಸಿದ ವಿನೇಶಾ, ಬಳಿಕ ಅಜರ್‌ಬೈಜಾನ್‌ನ ಲೇಲಾ ಗುರ್ಬನೊವಾ (ಗಾಯಗೊಂಡು ನಿವೃತ್ತಿ) ಎದುರು ಗೆದ್ದು ಕಂಚಿನ ಪದಕದ ಸುತ್ತು ಪ್ರವೇಶಿಸಿದ್ದರು.

68 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿರುವ ನಿಶಾ ದಹಿಯಾ ಸೆಮಿಫೈನಲ್‌ನಲ್ಲಿ ಸೋತಿದ್ದು ಕಂಚಿನ ಪದಕ ಸುತ್ತಿನಲ್ಲಿ ಗುರುವಾರ ಕಣಕ್ಕಿಳಿಯಲಿದ್ದಾರೆ.

ಮಹಿಳಾ ಫುಟ್‌ಬಾಲ್: ನ್ಯಾನ್ಸಿ ಆರು ಗೋಲು

ಬೆಂಗಳೂರು: ನ್ಯಾನ್ಸಿ ಗಳಿಸಿದ ಆರು ಗೋಲುಗಳ ಬಲದಿಂದ ಮಾತೃ ಪ್ರತಿಷ್ಠಾನ ಎಫ್‌ಸಿ ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಮಹಿಳಾ ಲೀಗ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಮಾತೃ ಪ್ರತಿಷ್ಠಾನ 11–3ರಿಂದ ರೆಬೆಲ್ಸ್ ವಿಮೆನ್ಸ್ ಎಫ್‌ಸಿ ಎದುರು ಗೆದ್ದಿತು. ನ್ಯಾನ್ಸಿ 1,16, 20, 50, 54 ಮತ್ತು 87ನೇ ನಿಮಿಷಗಳಲ್ಲಿ ಅವರು ಚೆಂಡನ್ನು ಗುರಿ ಸೇರಿಸಿದರು. ಲೇಖಶ್ರೀ ವಿ.ಜಿ. (21, 31ನೇ ನಿ.), ಕವಿತಾ (3ನೇ ನಿ.), ಸೀಮಾ (48ನೇ ನಿ.) ಮತ್ತು ಕೀರ್ತನಾ (79ನೇ ನಿ.) ವಿಜೇತ ತಂಡಕ್ಕಾಗಿ ಗೋಲು ಹೊಡೆದರು.

ರೆಬೆಲ್ಸ್ ಪರ ಕಾಜಲ್ (6, 47ನೇ ನಿ.) ಮತ್ತು ಪೂರ್ಜಿತಾ (90+2ನೇ ನಿ.) ಗೋಲು ದಾಖಲಿಸಿದರು.

ಇನ್ನೊಂದು ಹಣಾಹಣಿಯಲ್ಲಿ ಕಿಕ್‌ಸ್ಟಾರ್ಟ್ ಎಫ್‌ಸಿ 10–0ಯಿಂದ ಪಿಂಕ್ ಪ್ಯಾಂಥರ್ಸ್ ಎದುರು ಜಯಿಸಿತು.

ಇಂಡಿಪೆಂಡೆಂಟ್ಸ್‌ಗೆ ಜಯ: ಬೆಂಗಳೂರು ಇಂಡಿಪೆಂಡೆಂಟ್ಸ್ ತಂಡದವರು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಪುರುಷರ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿದರು. ಇಂಡಿಪೆಂಡೆಂಟ್ಸ್ ತಂಡವು 2-0ಯಿಂದ ಬೆಂಗಳೂರು ಯುನೈಟೆಡ್ ಎಫ್‌ಸಿ ಎದುರು ಗೆದ್ದಿತು.

ವಿಶ್ವ ಇವೆಂಟಿಂಗ್ ಟೂರ್ನಿ: ಫವಾದ್‌ಗೆ ಪ್ರಶಸ್ತಿ ನಿರೀಕ್ಷೆ

ನವದೆಹಲಿ (ಪಿಟಿಐ): ಭಾರತದ ಫವಾದ್ ಮಿರ್ಜಾ ಗುರುವಾರ ಇಟಲಿಯಲ್ಲಿ ಆರಂಭವಾಗಲಿರುವ ಎಫ್‌ಇಐ ವಿಶ್ವ ಈಕ್ವೆಸ್ಟ್ರಿಯನ್ ಇವೆಂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿಯಲಿದ್ದು, ಪ್ರಶಸ್ತಿ ಮೇಲೆ ಕಣ್ಣಿಟ್ಟಿದ್ದಾರೆ.

ಏಷ್ಯನ್ ಗೇಮ್ಸ್‌ನಲ್ಲಿ ಎರಡು ಬೆಳ್ಳಿ ಪದಕ ಜಯಿಸಿರುವ ಬೆಂಗಳೂರಿನ ಫವಾದ್, ಇವೆಂಟಿಂಗ್ ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹತೆ ಗಳಿಸಿರುವ ಭಾರತದ ಏಕೈಕ ಸ್ಪರ್ಧಿಯಾಗಿದ್ದಾರೆ. ಇಟಲಿಯ ಐತಿಹಾಸಿಕ ತಾಣ ಪ್ರಟೋನಿ ಡೆಲ್ ವಿವಾರೊನಲ್ಲಿ ಚಾಂಪಿಯನ್‌ಷಿಪ್ ಆಯೋಜನೆಯಾಗಿದೆ. 1960ರ ರೋಮ್ ಒಲಿಂಪಿಕ್ಸ್ ಇವೆಂಟಿಗ್ ಸ್ಪರ್ಧೆಗಳು ಇಲ್ಲಿ ನಡೆದಿದ್ದವು.

ಫವಾದ್

'ವಿಶ್ವದ ಪ್ರಮುಖರು ಸ್ಪರ್ಧಿಸುವ ಚಾಂಪಿಯನ್‌ಷಿಪ್‌ಗೆ ಉತ್ಸುಕನಾಗಿದ್ದೇನೆ' ಎಂದು ಫವಾದ್ ಹೇಳಿದ್ದಾರೆ.

ಫವಾದ್ ಅವರು ತಮ್ಮ ನೆಚ್ಚಿನ ಅಶ್ವಗಳಾದ ಸಿನೊರ್ ಮೆಡಿಕಾಟ್ ಮತ್ತು ಡಜಾರ ಫೋರ್‌ನೊಂದಿಗೆ ಸ್ಪರ್ಧೆಗೆ ತೆರಳಿದ್ದಾರೆ. ಸೆ. 25ರವರೆಗೆ ಈ ಚಾಂಪಿಯನ್‌ಷಿಪ್ ನಡೆಯಲಿದೆ.

ಪ್ರಿಯಾಂಕ್ ಪಡೆಗೆ ಜಯದ ತವಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ 'ಎ' ಮತ್ತು ನ್ಯೂಜಿಲೆಂಡ್ 'ಎ' ತಂಡಗಳ ನಡುವಣ ನಾಲ್ಕು ದಿನಗಳ ಕ್ರಿಕೆಟ್ 'ಟೆಸ್ಟ್' ಇಲ್ಲಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ ಆರಂಭವಾಗಲಿದೆ.

ಉಭಯ ತಂಡಗಳ ಮಧ್ಯೆ ನಡೆಯಲಿರುವ ಸರಣಿಯ ಮೂರನೇ ಪಂದ್ಯ ಇದಾಗಿದೆ. ಮೊದಲೆರಡು ಪಂದ್ಯಗಳು ಕ್ರಮವಾಗಿ ಬೆಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ನಡೆದಿದ್ದು, ಡ್ರಾ ಆಗಿದ್ದವು.

ಪ್ರಿಯಾಂಕ್ ಪಾಂಚಾಲ್ ನಾಯಕತ್ವದ ಭಾರತ ಮತ್ತು ಟ್ರಾಮ್ ಬ್ರೂಸ್ ಸಾರಥ್ಯದ ನ್ಯೂಜಿಲೆಂಡ್ 'ಎ' ತಂಡಗಳು ಮೊದಲ ಗೆಲುವಿನ ಹಂಬಲದಲ್ಲಿವೆ. ಹೀಗಾಗಿ ಜಿದ್ದಾಜಿದ್ದಿನ ಪೈಪೋಟಿ ನಿರೀಕ್ಷಿಸಲಾಗಿದೆ.

ಪಂದ್ಯ ಆರಂಭ: ಬೆಳಿಗ್ಗೆ 9.30

ಡೇವಿಸ್ ಕಪ್ ತಂಡದ ಮಾಜಿ ನಾಯಕ ನರೇಶ್ ಕುಮಾರ್ ಇನ್ನಿಲ್ಲ

ಕೋಲ್ಕತ್ತ (ಪಿಟಿಐ): ದಿಗ್ಗಜ ಟೆನಿಸ್ ಆಟಗಾರ, ಭಾರತ ಡೇವಿಸ್ ಕಪ್ ತಂಡದ ಮಾಜಿ ನಾಯಕ ನರೇಶ್ ಕುಮಾರ್ (93) ಬುಧವಾರ ನಿಧನರಾದರು.

ಲಿಯಾಂಡರ್ ಪೇಸ್ ಅವರಿಗೆ ಮಾರ್ಗದರ್ಶನ ಮಾಡಿದ್ದ ನರೇಶ್ ಅವರಿಗೆ ಪತ್ನಿ ಸುನಿತಾ, ಮಗ ಅರ್ಜುನ್ ಮತ್ತು ಇಬ್ಬರು ಪುತ್ರಿಯರಾದ ಗೀತಾ ಮತ್ತು ಪ್ರಿಯಾ ಇದ್ದಾರೆ.

'ಕಳೆದ ವಾರ ಕೆಲವು ವಾರಗಳಿಂದ ನರೇಶ್ ಕುಮಾರ್ ವಯೋ ಸಹಜ ಕಾಯಿಲೆಗಳಿಂದ ಬಳಲುತ್ತಿದ್ದರು. ದಿಗ್ಗಜ ಮಾರ್ಗದರ್ಶಕರೊಬ್ಬರನ್ನು ಕಳೆದುಕೊಂಡಿದ್ದೇನೆ' ಎಂದು ಟೆನಿಸ್ ಆಟಗಾರ ಜೈದೀಪ್ ಮುಖರ್ಜಿ ಹೇಳಿದ್ದಾರೆ.

ನರೇಶ್ ಕುಮಾರ್ ಅವರ ನಾಯಕತ್ವದಲ್ಲಿ ಜೈದೀಪ್ ಡೇವಿಸ್ ಕಪ್ ಟೂರ್ನಿಗೆ ಪದಾರ್ಪಣೆ ಮಾಡಿದ್ದರು.

1922ರ ಡಿಸೆಂಬರ್ 22ರಂದು ಲಾಹೋರ್‌ನಲ್ಲಿ (ಅವಿಭಜಿತ ಭಾರತ) ಜನಿಸಿದ್ದ ನರೇಶ್ ಕುಮಾರ್, 1949ರ ಏಷ್ಯನ್ ಚಾಂಪಿಯನ್‌ಷಿಪ್ ಮೂಲಕ ಟೆನಿಸ್ ಪಯಣ ಆರಂಭಿಸಿದ್ದರು. 1952ರಲ್ಲಿ ಡೇವಿಸ್ ಕಪ್ ತಂಡಕ್ಕೆ ಮೊದಲ ಬಾರಿ ನಾಯಕರಾಗಿ ಆಯ್ಕೆಯಾದರು. 1955ರ ವಿಂಬಲ್ಡನ್ ಟೂರ್ನಿಯ ಸಿಂಗಲ್ಸ್‌ನಲ್ಲಿ ನಾಲ್ಕನೇ ಸುತ್ತು ತಲುಪಿದ್ದು ಅವರ ವೃತ್ತಿಜೀವನದ ಪ್ರಮುಖ ಸಾಧನೆಯಾಗಿದೆ. ಈ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದ ಅಮೆರಿಕದ ಟೋನಿ ಟ್ರಾಬರ್ಟ್ ಎದುರು ಅವರು ಸೋತಿದ್ದರು.

ನರೇಶ್ ಕುಮಾರ್– ಟ್ವಿಟರ್ ಚಿತ್ರ

ಅಮೆಚೂರ್ ಆಟಗಾರನಾಗಿ ನರೇಶ್ ದಾಖಲೆಯ 101 ವಿಂಬಲ್ಡನ್ ಪಂದ್ಯಗಳಲ್ಲಿ ಆಡಿದ್ದರು. ಐರಿಷ್ ಚಾಂಪಿಯನ್‌ಷಿಪ್ (1952 ಮತ್ತು 1953), ವೆಲ್ಶ್ ಚಾಂಪಿಯನ್‌ಷಿಪ್ (1952), ಎಸೆಕ್ಸ್ ಚಾಂಪಿಯನ್‌ಷಿಪ್ (1957) ಮತ್ತು 1958ರಲ್ಲಿ ಸ್ವಿಟ್ಜರ್ಲೆಂಡ್‌ನಲ್ಲಿ ನಡೆದ ವೆನ್‌ಜೆನ್ ಟೂರ್ನಿಯ ಸಿಂಗಲ್ಸ್ ವಿಭಾಗಗಳಲ್ಲಿ ಪ್ರಶಸ್ತಿ ಜಯಿಸಿದ್ದರು.

1990ರಲ್ಲಿ ಭಾರತ ತಂಡದ ಆಟವಾಡದ ನಾಯಕರಾಗಿ, ಆಗ 16 ವರ್ಷದವರಿದ್ದ ಲಿಯಾಂಡರ್ ಪೇಸ್ ಅವರನ್ನು ತಂಡಕ್ಕೆ ಸೇರಿಸಿಕೊಳ್ಳುವಲ್ಲಿ ಅವರ ಪಾತ್ರ ಪ್ರಮುಖವಾಗಿತ್ತು. ಆಗ ಭಾರತ ತಂಡವು ಜಪಾನ್ ವಿರುದ್ಧ ಆಡಿತ್ತು.

ಅರ್ಜುನ ಪ್ರಶಸ್ತಿ ಪುರಸ್ಕೃತರಾಗಿದ್ದ ನರೇಶ್ ಕುಮಾರ್ ಅವರು, ಜೀವಮಾನ ಸಾಧನೆಗಾಗಿ ದ್ರೋಣಾಚಾರ್ಯ ಪ್ರಶಸ್ತಿಗೆ (2000ನೇ ಇಸ್ವಿಯಲ್ಲಿ) ಭಾಜನರಾದ ಮೊದಲ ಟೆನಿಸ್ ಕೋಚ್ ಎಂಬ ಶ್ರೇಯ ಗಳಿಸಿದ್ದರು.